ಸೋಮವಾರ, ಮೇ 31, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 151 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಶಿಕ್ಷಣ
ಮಕ್ಕಳಿಗೆ ಅಕ್ಷರ ಕಲಿಸುವ ಮುನ್ನ ಕೆಲವು ಸುಲಭವಾದ ಚಟುವಟಿಕೆಗಳನ್ನು ರೂಢಿಸಬೇಕು. ಇದರಿಂದ ಅವರಲ್ಲಿ ಚಲನಾ ಕೌಶಲ ಸುಧಾರಿಸಿ ಅಕ್ಷರಗಳನ್ನು ಕಲಿಯಲು ಸಿದ್ಧವಾಗುತ್ತಾರೆ.

ತುರ್ತು ಸಾಲ ಖಾತರಿ ಯೋಜನೆಯಡಿ ₹ 2 ಕೋಟಿಯವರೆಗೂ ನೆರವು

ಆಮ್ಲಜನಕ ಘಟಕಕ್ಕೆ ಸುಲಭ ಸಾಲ

ನವದೆಹಲಿ (ಪಿಟಿಐ): ದೇಶದಲ್ಲಿ ಆಮ್ಲಜನಕ ಲಭ್ಯತೆಯನ್ನು ಹೆಚ್ಚಿಸುವ ದಿಸೆಯಲ್ಲಿ ಕೇಂದ್ರ ಸರ್ಕಾರವು ಚಿಂತನೆ ನಡೆಸಿದೆ. ಆಮ್ಲಜನಕ ಉತ್ಪಾದನೆ ಘಟಕ ಸ್ಥಾಪನೆಗೆ ರಿಯಾಯಿತಿ ಬಡ್ಡಿದರದಲ್ಲಿ ₹ 2 ಕೋಟಿಯವರೆಗೂ ಸಾಲ ನೀಡಲು ಸಾಧ್ಯವಾಗುವಂತೆ 'ತುರ್ತು ಸಾಲ ಖಾತರಿ ಯೋಜನೆ'ಯನ್ನು (ಇಸಿಎಲ್‌ಜಿಎಸ್) ವಿಸ್ತರಿಸಲಾಗಿದೆ.

ಆಸ್ಪತ್ರೆಗಳು, ನರ್ಸಿಂಗ್ ಹೋಮ್‌ಗಳು, ವೈದ್ಯಕೀಯ ಕಾಲೇಜುಗಳು ಆಮ್ಲಜನಕ ಉತ್ಪಾದನೆ ಘಟಕ ಸ್ಥಾಪಿಸುವುದಾದರೆ ಇಸಿಎಲ್‌ಜಿಎಸ್ ಅಡಿಯಲ್ಲಿ ಶೇಕಡ 100ರಷ್ಟು ಖಾತರಿಯಲ್ಲಿ ಸಾಲ ಪಡೆಯಬಹುದಾಗಿದೆ. ಈ ಸಾಲಗಳಿಗೆ ಶೇ 7.5ರ ಗರಿಷ್ಠ ಬಡ್ಡಿದರವನ್ನು ಕೇಂದ್ರ ಹಣಕಾಸು ಸಚಿವಾಲಯ ನಿಗದಿಪಡಿಸಿದೆ.

ಕೋವಿಡ್–19 ಸಾಂಕ್ರಾಮಿಕದ ಎರಡನೇ ಅಲೆಯು ಆರ್ಥಿಕತೆಯ ಎಲ್ಲಾ ವಲಯಗಳ ಮೇಲೆಯೂ ಹೆಚ್ಚಿನ ಪರಿಣಾಮ ಬೀರಿದೆ. ಇದರಿಂದಾಗಿ ಸರ್ಕಾರವು ಯೋಜನೆಯ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಿದೆ ಎಂದು ಸಚಿವಾಲಯ ಹೇಳಿದೆ.

ಇಸಿಎಲ್‌ಜಿಎಸ್ 1.0 ಅಡಿಯಲ್ಲಿ, ಬಡ್ಡಿ ಪಾವತಿಯನ್ನೂ ಒಳಗೊಂಡು ನಾಲ್ಕು ವರ್ಷಗಳಲ್ಲಿ ಸಾಲ ಮರುಪಾವತಿಗೆ ಅವಕಾಶ ನೀಡಲಾಗಿತ್ತು. ಮೊದಲ 12 ತಿಂಗಳಿನಲ್ಲಿ ಕೇವಲ ಬಡ್ಡಿಯನ್ನು ಮತ್ತು 36 ತಿಂಗಳಿನಲ್ಲಿ ಅಸಲು ಮತ್ತು ಬಡ್ಡಿಯನ್ನು ಪಾವತಿಸಬೇಕಿತ್ತು. ಆದರೆ, ಆರ್‌ಬಿಐ ಮೇ 5ರಂದು ಹೊರಡಿಸಿರುವ ಸಾಲ ಮರು ಹೊಂದಾಣಿಕೆ ಮಾರ್ಗಸೂಚಿಯ ಅನ್ವಯ ಸಾಲ ಮರುಪಾವತಿಗೆ ಒಟ್ಟಾರೆ ಐದು ವರ್ಷ ಅವಕಾಶ ಸಿಗಲಿದೆ. ಮೊದಲ 24 ತಿಂಗಳಿನಲ್ಲಿ ಬಡ್ಡಿ ಮಾತ್ರ ಪಾವತಿಸಿ ನಂತರ 36 ತಿಂಗಳಿನಲ್ಲಿ ಅಸಲು ಮತ್ತು ಬಡ್ಡಿಯನ್ನು ಮರುಪಾವತಿಸುವ ಅವಕಾಶ ನೀಡಲಾಗಿದೆ.

ಯೋಜನೆಯಲ್ಲಿ ತಂದಿರುವ ಬದಲಾವಣೆಯಿಂದ ಎಂಎಸ್‌ಎಂಇಗಳಿಗೆ ಹೆಚ್ಚುವರಿ ಬೆಂಬಲ ಸಿಗಲಿದೆ. ತಡೆರಹಿತವಾಗಿ ವ್ಯಾಪಾರ ವಹಿವಾಟು ನಡೆಸಲು ಮತ್ತು ಜೀವನೋಪಾಯಕ್ಕೆ ನೆರವಾಗಲಿದೆ ಎಂದು ಸಚಿವಾಲಯ ತಿಳಿಸಿದೆ.

ಮುಖ್ಯಾಂಶಗಳು
- ಇಸಿಎಲ್‌ಜಿಎಸ್ ಸೆಪ್ಟೆಂಬರ್ 30ರವರೆಗೆ ವಿಸ್ತರಣೆ
- ಸಾಲ ವಿತರಣೆಯ ಕಡೆಯ ದಿನಾಂಕ ಡಿಸೆಂಬರ್ 31ರವರೆಗೆ ವಿಸ್ತರಣೆ
- ಯೋಜನೆ ವ್ಯಾಪ್ತಿಗೆ ನಾಗರಿಕ ವಿಮಾನಯಾನ ವಲಯ



'₹ 46 ಸಾವಿರ ಕೋಟಿ ವಿತರಣೆಗಷ್ಟೇ ಅವಕಾಶ'

ಮುಂಬೈ: ₹ 3 ಲಕ್ಷ ಕೋಟಿ ಮೊತ್ತದ ಇಸಿಎಲ್‌ಜಿಸಿ ಯೋಜನೆಯಡಿ ಈಗಾಗಲೇ ₹ 2.54 ಲಕ್ಷ ಕೋಟಿ ಮೊತ್ತವನ್ನು ಮಂಜೂರು ಮಾಡಲಾಗಿದೆ. ಹೀಗಾಗಿ ಇನ್ನು ₹ 46 ಸಾವಿರ ಕೋಟಿಯನ್ನಷ್ಟೇ ವಿತರಿಸಲು ಅವಕಾಶ ಇದೆ ಎಂದು ಭಾರತೀಯ ಬ್ಯಾಂಕ್‌ಗಳ ಒಕ್ಕೂಟ (ಐಬಿಎ) ಹೇಳಿದೆ.

ಕೇಂದ್ರ ಸರ್ಕಾರವು ಯೋಜನೆಯ ವ್ಯಾಪ್ತಿಯನ್ನು ವಿಸ್ತರಣೆ ಮಾಡಿರುವ ಕುರಿತು ಐಬಿಎನ ಸಿಇಒ ಸುನಿಲ್ ಮೆಹ್ತಾ ಅವರು ಪ್ರತಿಕ್ರಿಯೆ ನೀಡಿದ್ದಾರೆ.

'ಯೋಜನೆಯ ಒಟ್ಟು ಮೊತ್ತದಲ್ಲಿ ₹ 2.54 ಲಕ್ಷ ಕೋಟಿ ಮಂಜೂರು ಮಾಡಿದ್ದು ಅದರಲ್ಲಿ ₹ 2.40 ಲಕ್ಷ ಕೋಟಿಯನ್ನು ಈಗಾಗಲೇ ವಿತರಣೆ ಮಾಡಲಾಗಿದೆ. ಇನ್ನುಳಿದಿರುವುದು ಕೇವಲ ₹ 46 ಸಾವಿರ ಕೋಟಿಗಳಷ್ಟೇ' ಎಂದು ಅವರು ಮಾಹಿತಿ ನೀಡಿದರು.

ಕೋವಿಡ್ ಚಿಕಿತ್ಸೆಗೆ ₹ 5 ಲಕ್ಷದವರೆಗೆ ವೈಯಕ್ತಿಕ ಸಾಲ

ಬೆಂಗಳೂರು: ಕೋವಿಡ್ ಚಿಕಿತ್ಸೆಗಾಗಿ ಯಾವುದೇ ಮೇಲಾಧಾರ ಇಲ್ಲದೆ ₹ 25 ಸಾವಿರದಿಂದ ₹ 5 ಲಕ್ಷದವರೆಗೆ ವೈಯಕ್ತಿಕ ಸಾಲ ನೀಡಲು ಸರ್ಕಾರಿ ವಲಯದ ಬ್ಯಾಂಕ್‌ಗಳು ನಿರ್ಧರಿಸಿವೆ. ವೇತನ ವರ್ಗ, ವೇತನ ವರ್ಗಕ್ಕೆ ಸೇರದವರು ಮತ್ತು ಪಿಂಚಣಿದಾರರು ಇದರ ಪ್ರಯೋಜನ ಪಡೆಯಬಹುದಾಗಿದೆ. ಕೋವಿಡ್ ಸಾಂಕ್ರಾಮಿಕದಿಂದ ಸಂಕಷ್ಟಕ್ಕೆ ಒಳಗಾಗಿರುವ ಎಲ್ಲಾ ವಲಯಗಳಿಗೆ ನೆರವಾಗುವ ಉದ್ದೇಶದಿಂದ ಸಾರ್ವಜನಿಕ ವಲಯದ ಬ್ಯಾಂಕುಗಳು ಭಾನುವಾರ ಘೋಷಿಸಿರುವ ಹಲವು ಕ್ರಮಗಳಲ್ಲಿ ಇದು ಸಹ ಒಂದಾಗಿದೆ.


ಭಾನುವಾರ ನಡೆದ ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಅಧ್ಯಕ್ಷ ದಿನೇಶ್ ಕುಮಾರ್ ಖಾರಾ ಮತ್ತು ಭಾರತೀಯ ಬ್ಯಾಂಕ್‌ಗಳ ಒಕ್ಕೂಟದ ಅಧ್ಯಕ್ಷ (ಐಬಿಎ) ರಾಜ್‌ಕಿರಣ್ ರೈ ಅವರು ಈ ಕುರಿತು ಮಾಹಿತಿ ನೀಡಿದರು. ಆರೋಗ್ಯ ಮೂಲಸೌಕರ್ಯ ಸ್ಥಾಪನೆ/ವಿಸ್ತರಣೆ ಮತ್ತು ಆರೋಗ್ಯ ಸೇವೆಗಳಿಗೆ ಸಂಬಂಧಿಸಿದ ಉತ್ಪನ್ನಗಳ ತಯಾರಿಕೆಗೆ ₹ 100 ಕೋಟಿಗಳವರೆಗೆ ಸಾಲ ಸಿಗಲಿದೆ.



ಸಾಂಸ್ಕೃತಿಕ ನಗರಿ ಸ್ತಬ್ಧ

ಮೈಸೂರಿನಲ್ಲಿ ಭಾನುವಾರ ಸಂಪೂರ್ಣ ಲಾಕ್‌ಡೌನ್ ಜಾರಿಯಲ್ಲಿದ್ದ ಕಾರಣ ಜನ, ವಾಹನಗಳಿಲ್ಲದೇ ಬಿಕೋ ಎನ್ನುತ್ತಿದ್ದ ಕೆ.ಆರ್.ವೃತ್ತದ ನೋಟ
ಪ್ರಜಾವಾಣಿ ಚಿತ್ರ/ಬಿ.ಆರ್.ಸವಿತಾ

ಒಳ ಪುಟಗಳು



ಲಾಕ್‌ಡೌನ್ ವಿಸ್ತರಣೆ: ಜೂ.6ಕ್ಕೆ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ಜೂನ್ 7 ರ ನಂತರವೂ ಲಾಕ್‌ಡೌನ್ ವಿಸ್ತರಿಸುವ ಬಗ್ಗೆ ತಜ್ಞರ ಜತೆ ಚರ್ಚಿಸಿ ಜೂನ್ 5 ಅಥವಾ 6 ರಂದು ತೀರ್ಮಾನಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಜೂನ್ 5 ರ ವೇಳೆಗೆ ಕೋವಿಡ್ ಪರಿಸ್ಥಿತಿ ನೋಡಿಕೊಂಡು ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

'ಕೆಲವು ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಿದೆ. ಆದರೆ, ಲಾಕ್‌ಡೌನ್ ವಿಸ್ತರಿಸುವಂತೆ ತಜ್ಞರು ಯಾವುದೇ ವರದಿ ನೀಡಿಲ್ಲ. ಕೇಂದ್ರ ಸರ್ಕಾರ ಆಯಾ ರಾಜ್ಯಗಳಿಗೆ ಅನುಗುಣವಾಗಿ ನಿರ್ಧಾರ ಕೈಗೊಳ್ಳುವಂತೆ ಈಗಾಗಲೇ ಸೂಚಿಸಿದೆ' ಎಂದರು.

ಮೈ ಮರೆಯಬೇಡಿ: 'ಕೋವಿಡ್ ಸಂಪೂರ್ಣವಾಗಿ ನಿಯಂತ್ರಣಕ್ಕೆ ಬರುವವರೆಗೆ ಜನರು ಮೈ ಮರೆಯಬಾರದು' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಮನವಿ ಮಾಡಿದರು.

ಇನ್ನೆರಡು ದಿನಗಳಲ್ಲಿ 2 ನೇ ಪ್ಯಾಕೇಜ್: ಬಿಎಸ್‌ವೈ



'ರಾಜ್ಯದಲ್ಲಿ ಕೋವಿಡ್‌ನಿಂದ ಸಂಕಷ್ಟದಲ್ಲಿರುವವರಿಗೆ ನೆರವಿನ ಆಸರೆಯಾಗಿ ಇನ್ನೆರಡು ದಿನಗಳಲ್ಲಿ ಎರಡನೇ ಹಂತದ ಪರಿಹಾರ ಪ್ಯಾಕೇಜ್ ಘೋಷಣೆ ಮಾಡಲಾಗುವುದು. ಎರಡನೇ ಹಂತದ ಕೋವಿಡ್ ಪ್ಯಾಕೇಜ್ ಸಿದ್ಧವಾಗುತ್ತಿದೆ' ಎಂದು ಯಡಿಯೂರಪ್ಪ ತಿಳಿಸಿದರು.

ಅಸಂಘಟಿತ ವಲಯವೂ ಸೇರಿದಂತೆ ವಿವಿಧ ವರ್ಗಗಳಿಗೆ ಈಗಾಗಲೇ ₹ 1,250 ಕೋಟಿ ಮೊತ್ತದ ಆರ್ಥಿಕ ಪ್ಯಾಕೇಜ್‌ನ್ನು ಮುಖ್ಯಮಂತ್ರಿ ಘೋಷಿಸಿದ್ದಾರೆ. ಆದರೆ, ಪ್ಯಾಕೇಜ್‌ನಲ್ಲಿ ಪಾಲು ಪಡೆಯದ ಹಲವು ಸಣ್ಣಪುಟ್ಟ ಸಮುದಾಯಗಳೂ ತಮಗೂ ನೆರವು ನೀಡುವಂತೆ ಮನವಿ ಮಾಡಿವೆ. ಹೀಗಾಗಿ, ಮುಖ್ಯಮಂತ್ರಿ ಘೋಷಿಸಲು ಉದ್ದೇಶಿಸಿರುವ ಎರಡನೇ ಹಂತದ ಪ್ಯಾಕೇಜ್ ಬಗ್ಗೆ ಕುತೂಹಲ ಮೂಡಿದೆ.

'ರಾಜ್ಯದಲ್ಲಿ ಕೋವಿಡ್ ದೃಢಪಡುವ ಪ್ರಮಾಣ ಕಡಿಮೆ ಆಗಬೇಕಾಗಿದೆ. ಸೋಂಕಿತರ ಸಂಖ್ಯೆ ಕಡಿಮೆಯಾಗಿ ಸಂಪೂರ್ಣ ಹತೋಟಿಗೆ ಬರಬೇಕು. ಸೋಂಕು ಉಲ್ಬಣ ಆಗದಂತೆ ನಮ್ಮ ಕಾರ್ಯ ಚಟುವಟಿಕೆಗಳ ಮೇಲೂ ನಿರ್ಬಂಧ ಹಾಕಿಕೊಳ್ಳಬೇಕು' ಎಂದರು.

'ನಿಯಮಗಳನ್ನು ಪಾಲಿಸಿದರೆ ಮುಂದಿನ ದಿನಗಳಲ್ಲಿ ಕೊರೊನಾ ನಿಯಂತ್ರಣಕ್ಕೆ ಬರುತ್ತದೆ. ಅದಕ್ಕೆ ಜನರು ಸಹಕಾರ ನೀಡಬೇಕು' ಎಂದೂ ಕಿವಿಮಾತು ಹೇಳಿದರು.

ಮುಖ್ಯಮಂತ್ರಿಯಿಂದ ತೀರ್ಮಾನ: 'ಲಾಕ್‌ಡೌನ್‌ನಿಂದ ಏನೆಲ್ಲ ಒಳ್ಳೆಯದಾಗಿದೆ ಎಂಬುದನ್ನು ಜನರೇ ನೋಡಿದ್ದಾರೆ. ರಾಜ್ಯದಲ್ಲಿ ಕೆಲವೆಡೆ ಕೋವಿಡ್ ದೃಢ ಪ್ರಮಾಣ ಶೇ 47ರಷ್ಟು ಇದ್ದುದು, ಕಳೆದ 15 ದಿನಗಳಲ್ಲಿ ಶೇ 14–15ಕ್ಕೆ ಇಳಿದಿದೆ. ಅನೇಕ ರಾಜ್ಯಗಳಲ್ಲಿ ಶೇ 8 ರಿಂದ 9ರಷ್ಟಿದೆ. ಅದೆಲ್ಲವನ್ನೂ ನೋಡಿಕೊಂಡು, ತಾಂತ್ರಿಕ ಸಲಹಾ ಸಮಿತಿಯ ಸಲಹೆ ಪಡೆದು ಲಾಕ್‌ಡೌನ್ ವಿಸ್ತರಣೆ ಬಗ್ಗೆ ಮುಖ್ಯಮಂತ್ರಿ ತೀರ್ಮಾನಿಸಲಿದ್ದಾರೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಬಾನುಲಿ ಕಾರ್ಯಕ್ರಮದಲ್ಲಿ ನರೇಂದ್ರ ಮೋದಿ

'7 ವರ್ಷಗಳಲ್ಲಿ ಹಲವು ಹೆಮ್ಮೆ'

ನವದೆಹಲಿ (ಪಿಟಿಐ): 'ನಮ್ಮ ಸರ್ಕಾರದ ಏಳು ವರ್ಷಗಳ ಅವಧಿಯಲ್ಲಿ ದೇಶ ಹಲವಾರು ಹೆಮ್ಮೆಯ ಕ್ಷಣಗಳನ್ನು ಅನುಭವಿಸಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.



ಬಿಜೆಪಿನೇತೃತ್ವದ ಸರ್ಕಾರದ ಏಳನೇ ವಾರ್ಷಿಕೋತ್ಸವ ಸಂದರ್ಭದಲ್ಲಿ, ತಮ್ಮ ಮಾಸಿಕ ಬಾನುಲಿ ಕಾರ್ಯಕ್ರಮ 'ಮನದ ಮಾತು' ಮೂಲಕ ರಾಷ್ಟ್ರೀಯ ಭದ್ರತೆ ಸೇರಿದಂತೆ ಸರ್ಕಾರದ ಹಲವು ಅಭಿವೃದ್ಧಿ ಕಾರ್ಯಗಳನ್ನು ಅವರು ಮೆಲುಕು ಹಾಕಿದರು.

'ನಮ್ಮ ಸರ್ಕಾರದ ಅವಧಿಯಲ್ಲಿ ದೇಶದಲ್ಲಿ ಯಶಸ್ವಿನ ಹಲವು ಪ್ರಯೋಗಗಳು ನಡೆದಿವೆ. ಯಶಸ್ಸಿನ ಜತೆಗೆ ಕೆಲವು ಹಿನ್ನಡೆಗಳೂ ಆಗಿವೆ. ಕೋವಿಡ್ ಪಿಡುಗು ಜನರ ಜೀವನಕ್ಕೆ ತೀವ್ರ ಹಾನಿ ಮಾಡಿ, ದೇಶದ ಆರ್ಥಿಕತೆಗೆ ದೊಡ್ಡ ಪೆಟ್ಟು ನೀಡಿದೆ' ಎಂದರು. ಭಾರತವು ಈ ಪಿಡುಗಿನ ವಿರುದ್ಧ ಮೇಲುಗೈ ಸಾಧಿಸುತ್ತದೆ ಎಂಬ ವಿಶ್ವಾಸವನ್ನೂ ಅವರು ವ್ಯಕ್ತಪಡಿಸಿದರು.

ಮಾತುಕತೆಯ ಮಧ್ಯದಲ್ಲಿ ಅವರು ಆಮ್ಲಜನಕದ ಟ್ಯಾಂಕರ್‌ನ ಚಾಲಕ ದಿನೇಶ್ ಉಪಾಧ್ಯಾಯ, ಸರಕು ಸಾಗಾಟ ವಿಮಾನ ಚಾಲಕಿ ಶಿರಿಶಾ ಗಜನಿ, ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ಪಟ್ನಾಯಕ್ ಹಾಗೂ ಕೊರೊನಾ ಪರೀಕ್ಷೆ ನಡೆಸುವ ಪ್ರಯೋಗಾಲಯದ ತಂತ್ರಜ್ಞ ಪ್ರಕಾಶ್ ಕಂದಪಾಲ್ ಜತೆ ದೂರವಾಣಿ ಮೂಲಕ ಸಂಭಾಷಣೆ ನಡೆಸಿ, ಅವರ ಸೇವೆಯನ್ನು ಶ್ಲಾಘಿಸಿದರು.

'ಈಗಿನ ಕೇಂದ್ರ ಸರ್ಕಾರ ದೇಶಕ್ಕೆ ಮಾರಕ'

ಏಳನೇ ವಾರ್ಷಿಕೋತ್ಸವ ಆಚರಿಸಿಕೊಂಡ ಬೆನ್ನಲ್ಲೇ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವನ್ನು ಕಾಂಗ್ರೆಸ್ ಕಟುವಾಗಿ ಟೀಕಿಸಿದೆ. ಜನರು ಪ್ರಧಾನಿ ಮೇಲೆ ಇಟ್ಟಿದ್ದ ಭರವಸೆಗೆ ದ್ರೋಹ ಬಗೆದಿರುವ ಈ ಸರ್ಕಾರ ದೇಶಕ್ಕೇ ಮಾರಕವಾಗಿದೆ ಎಂದಿದೆ.

'ಮೋದಿ ನೇತೃತ್ವದ ಸರ್ಕಾರದ ಏಳು ವರ್ಷಗಳ ಆಡಳಿತದಲ್ಲಿ ದೇಶವು ಹಿಂದೆಂದೂ ಕಂಡಿಲ್ಲದ ವಿನಾಶಕ್ಕೆ ಸಾಕ್ಷಿಯಾಗಿದೆ. ಈ ಸರ್ಕಾರವು ಜವಾಬ್ದಾರಿಯಿಂದ ನುಣುಚಿಕೊಂಡಿದೆ ಮತ್ತು ಜನರು ತೋರಿದ ಪ್ರೀತಿಗೆ ದ್ರೋಹ ಬಗೆದಿದೆ' ಎಂದು ಕಾಂಗ್ರೆಸ್ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ಟೀಕಿಸಿದ್ದಾರೆ. ಅಸಂಖ್ಯ ಭರವಸೆಗಳ ಆಧಾರದ ಮೇಲೆ ಸರ್ಕಾರವನ್ನು ಚುನಾಯಿಸಿದ ದೇಶದ 140 ಕೋಟಿ ಜನರನ್ನು ಈ ಸರ್ಕಾರವು ಅತ್ಯಂತ ಕೆಟ್ಟ ರೀತಿಯಲ್ಲಿ ವಂಚಿಸಿದೆ. ಏಳು ವರ್ಷಗಳ ಬಳಿಕ ದೇಶ ಏಕೆ ಇಷ್ಟೊಂದು ಸಂಕಷ್ಟ ಅನುಭವಿಸುತ್ತಿದೆ ಎಂದು ಕೇಳುವ ಸಮಯ ಬಂದಿದೆ ಎಂದಿದ್ದಾರೆ.

8ನೇ ಪುಟ ನೋಡಿ

ಮನದ ಮಾತು

ಮೋದಿ ಹೇಳಿದ್ದು...
- ಭಾರತ ಈಗ ಬೇರೆ ದೇಶಗಳ ಒತ್ತಡದಲ್ಲಿ ಮುನ್ನಡೆಯುತ್ತಿಲ್ಲ. ಬದಲಿಗೆ ತನ್ನದೇ ನಂಬಿಕೆ–ವಿಶ್ವಾಸಗಳೊಂದಿಗೆ ಮುನ್ನಡೆಯುತ್ತಿದೆ. ಇದರಿಂದ ಪ್ರತಿಯೊಬ್ಬರೂ ಹೆಮ್ಮೆ ಪಡುವಂತಾಗಿದೆ
- ತನ್ನ ವಿರುದ್ಧ ಪಿತೂರಿ ಮಾಡುವವರಿಗೆ ಭಾರತ ಸೂಕ್ತ ಉತ್ತರ ನೀಡುತ್ತಿದೆ. ನಮ್ಮ ವಿಶ್ವಾಸ ಹೆಚ್ಚುತ್ತದೆ. ಹಾಗೆಯೇ ರಾಷ್ಟ್ರೀಯ ಭದ್ರತೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳದಿದ್ದಾಗ, ನಮ್ಮ ಸಶಸ್ತ್ರ ಪಡೆಗಳ ಬಲ ಹೆಚ್ಚಾಗುತ್ತದೆ

8ನೇ ಪುಟ ನೋಡಿ

ರಾಜ್ಯ ಕೋವಿಡ್ ಅಂಕಿ–ಅಂಶ

25,87,827 ▲	ಒಟ್ಟು ಸೋಂಕಿತರು (25,67,449 ನಿನ್ನೆಯ ವಿವರ)
3,42,010 ▼	ಸಕ್ರಿಯ ಪ್ರಕರಣಗಳು
22,17,117 ▲	ಗುಣಮುಖರಾದವರು
28,679 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	20,378 ▼
ಗುಣಮುಖ	28,053 ▼
ಸಾವು	382 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ-5

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಕಾಮಗಾರಿಗೆ ನೀಡಿದ್ದ ಮುಂಗಡ ಹಣ ಅನ್ಯ ಉದ್ದೇಶಕ್ಕೆ ಬಳಸಿರುವ ಶಂಕೆ

ಕೆಶಿಪ್: ₹100 ಕೋಟಿ ವರ್ಗಾವಣೆ ನಿಗೂಢ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣಾ ಯೋಜನೆ (ಕೆ-ಶಿಪ್)-3 ರ ಅಡಿಯಲ್ಲಿ ಗದಗ- ಹೊನ್ನಾಳಿ ದ್ವಿಪಥ ಹೆದ್ದಾರಿ ನಿರ್ಮಾಣಕ್ಕೆ ಮುಂಗಡವಾಗಿ ನೀಡಿದ್ದ ₹ 99.95 ಕೋಟಿಯನ್ನು ಗುತ್ತಿಗೆದಾರ ಕಂಪನಿ 'ಎಸ್ಕ್ರೊ' ಖಾತೆಯಿಂದ ನಿಗೂಢವಾಗಿ ವರ್ಗಾವಣೆ ಮಾಡಿದೆ. ದಾಖಲೆಗಳ ಪರಿಶೀಲನೆಗೆ ಕಂಪನಿ ಅಸಹಕಾರ ತೋರುತ್ತಿದ್ದು, ವಂಚನೆಯ ಸಂಶಯ ಮೂಡಿದೆ.

ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಸಾಲದ ನೆರವಿನಲ್ಲಿ ಕೈಗೆತ್ತಿಕೊಂಡಿರುವ ಕೆ-ಶಿಪ್-3ರ ಅಡಿಯಲ್ಲಿ 138.16 ಕಿ.ಮೀ. ಉದ್ದದ ಗದಗ- ಹೊನ್ನಾಳಿ ಪೇವ್ ಶೋಲ್ಡರ್ ಸಹಿತ ಕಾಮಗಾರಿಯನ್ನು ₹ 998 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈ ಕಾಮಗಾರಿಯ ಗುತ್ತಿಗೆಯನ್ನು ಅಹಮದಾಬಾದ್‌ನ ಸದ್ಭವ್ ಎಂಜಿನಿಯರಿಂಗ್ ಲಿಮಿಟೆಡ್ ಸಮೂಹದ 'ಸದ್ಭವ್ ಗದಗ್ ಹೈವೆ ಲಿಮಿಟೆಡ್ ಬೆಂಗಳೂರು' ಎಂಬ ಕಂಪನಿಗೆ ನೀಡಲಾಗಿತ್ತು.

2020ರ ಮಾರ್ಚ್ 12ರಂದು ಗುತ್ತಿಗೆ ಅನುಮೋದಿಸಿ, ಕಾರ್ಯಾದೇಶ ನೀಡಲಾಗಿತ್ತು. 2020ರ ಡಿಸೆಂಬರ್‌ವರೆಗೂ ನಾಲ್ಕು ಕಂತುಗಳಲ್ಲಿ ₹ 99.95 ಕೋಟಿಯನ್ನು ಕಂಪನಿಯ ಎಸ್ಕ್ರೊ ಖಾತೆಗೆ ಪಾವತಿ ಮಾಡಲಾಗಿತ್ತು. ಆದರೆ, ಈ ಹಣವನ್ನು ಎಸ್ಕ್ರೊ ಖಾತೆಯಿಂದ ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಿರುವುದು ಬ್ಯಾಂಕ್ ದಾಖಲೆಗಳ ಪರಿಶೀಲನೆ ವೇಳೆ ಕಂಡುಬಂದಿತ್ತು.

ಪರಿಶೀಲನೆಗೆ ಅಸಹಕಾರ: ಗುತ್ತಿಗೆ ಒಪ್ಪಂದದ ಷರತ್ತಿನಂತೆ ಮುಂಗಡ ಹಣದ ಬಳಕೆ ಕುರಿತು ಲೆಕ್ಕಪತ್ರ ಮತ್ತು ದಾಖಲೆಗಳ ಪರಿಶೀಲನೆಗೆ ಕೆ-ಶಿಪ್ ಅಧಿಕಾರಿಗಳು ಮುಂದಾಗಿದ್ದರು. 2021ರ ಮಾರ್ಚ್ 5ರಂದು ದಾಖಲೆ, ಲೆಕ್ಕಪತ್ರ ನಡೆಸಲು ದಿನ ನಿಗದಿಪಡಿಸಲಾಗಿತ್ತು. ಅದೇ ದಿನ ಪತ್ರ ಬರೆದಿದ್ದ ಸದ್ಭವ್ ಗದಗ್ ಹೈವೆ ಕಂಪನಿ ಪ್ರತಿನಿಧಿಗಳು, ಮಾರ್ಚ್ 22ರಂದು ಪರಿಶೀಲಿಸಲು ಕೋರಿದ್ದರು.

'ಮಾರ್ಚ್ 22ರಂದು ಸದ್ಭವ್ ಗದಗ್ ಹೈವೆ ಕಂಪನಿ ಕಚೇರಿಗೆ ಭೇಟಿ ನೀಡಲಾಗಿತ್ತು. ಅಲ್ಲಿ ಕಂಪನಿಯ ಅಧಿಕೃತ ಸಹಿದಾರರಾದ ಸದ್ಭವ್ ಗದಗ್ ಹೈವೆ ಲಿಮಿಟೆಡ್ ಹಿರಿಯ ಉಪಾಧ್ಯಕ್ಷ ಬಿ.ಜಿ.ಹೂಲಿ ಹಾಜರಿರಲಿಲ್ಲ. ಬದಲಿಗೆ ಅಲ್ಲಿ ಉಪ ವ್ಯವಸ್ಥಾಪಕ ಮಾರುತಿ ಮತ್ತು ಸಹಾಯಕ ವ್ಯವಸ್ಥಾಪಕ ಸಂದೀಪ್ ಪೆರುಗು ಹಾಜರಿದ್ದರು. 'ಸ್ಯಾಪ್' ತಂತ್ರಾಂಶದಲ್ಲಿ ಎಲ್ಲ ದಾಖಲೆ, ವಹಿವಾಟಿನ ವಿವರ ಲಾಕ್ ಆಗಿದ್ದು, ಪರಿಶೀಲನೆಗೆ ಒಪ್ಪಿಸಲು ಸಾಧ್ಯವಾಗುತ್ತಿಲ್ಲ' ಎಂದು ಕೈಬರಹದ ಪತ್ರ ನೀಡಿದ್ದಾರೆ.

8ನೇ ಪುಟ ನೋಡಿ

1 ಕಿ.ಮೀ. ಮಾತ್ರ ಪೂರ್ಣ!

ಎಡಿಬಿಯಿಂದ ಸಾಲ ಪಡೆದ ₹ 100 ಕೋಟಿಯನ್ನು ಸದ್ಭವ್ ಕಂಪನಿಗೆ ಪಾವತಿಸಿ ಆರು ತಿಂಗಳು ಕಳೆದಿದೆ. ಒಪ್ಪಂದದ ಪ್ರಕಾರ, ಈಗಾಗಲೇ 40 ಕಿ.ಮೀ. ರಸ್ತೆ ನಿರ್ಮಾಣ ಪೂರ್ಣಗೊಳ್ಳಬೇಕಿತ್ತು. ಆದರೆ, 1 ಕಿ.ಮೀ. ಡಾಂಬರು ರಸ್ತೆ ನಿರ್ಮಾಣ ಮಾತ್ರ ಪೂರ್ಣಗೊಂಡಿದೆ!

'2022ರ ಸೆಪ್ಟೆಂಬರ್ ಅಂತ್ಯದೊಳಗೆ 138.16 ಕಿ.ಮೀ. ಹೆದ್ದಾರಿ ನಿರ್ಮಾಣ ಪೂರ್ಣಗೊಳ್ಳಬೇಕಿದೆ. ಕಾಮಗಾರಿ ವಿಳಂಬ ಕುರಿತು ಕಂಪನಿಗೆ ಹಲವು ಬಾರಿ ನೋಟಿಸ್ ನೀಡಲಾಗಿದೆ. ಗುತ್ತಿಗೆ ರದ್ದುಗೊಳಿಸಿ, ಕಾನೂನು ಕ್ರಮ ಜರುಗಿಸುವ ಸಂಬಂಧ ಎಡಿಬಿ ಅನುಮತಿ ಕೋರಿ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ಕೆ-ಶಿಪ್ ಯೋಜನಾ ನಿರ್ದೇಶಕ ಸುರೇಶ್ ಬಾಬು ತಿಳಿಸಿದರು.

ಪ್ರಜಾವಾಣಿ ವಿಶೇಷ

ಬಾದಾಮಿ ಗುಹಾಂತರ ದೇವಾಲಯ ವರ್ಣಚಿತ್ರಗಳಿಗೆ ಡಿಜಿಟಲ್ ಸ್ಪರ್ಶ

ಪ್ರಜಾವಾಣಿ ವಾರ್ತೆ

ಮುಂಬೈ: ಕರ್ನಾಟಕದ ಬಾದಾಮಿಯ ಗುಹಾಂತರ ದೇವಾಲಯಗಳಲ್ಲಿ ಇರುವ ವರ್ಣಚಿತ್ರಗಳ ಛಾಯಾಚಿತ್ರಗಳನ್ನು ಸೆರೆಹಿಡಿದು, ಅವುಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಲಾಗಿದೆ.

ಇವುಗಳ ಛಾಯಾಚಿತ್ರಗಳ ಪ್ರದರ್ಶನವನ್ನು ಜಾಗತಿಕ ಪ್ರೇಕ್ಷಕರಿಗಾಗಿ ಇತ್ತೀಚೆಗೆ ಇಲ್ಲಿ ಅನಾವರಣಗೊಳಿಸಲಾಯಿತು.

ಪಾರಂಪರಿಕ ಕಲೆಯನ್ನು ಪುನರುಜ್ಜೀವನಗೊಳಿಸುವ ಕಾರ್ಯಕ್ಕೆ ಸಂಬಂಧಿಸಿ ಸರ್ಕಾರಕ್ಕೆ ಸಲಹೆ ನೀಡುವ ಸಂಸ್ಥೆಯಾದ ಸ್ಯಾಪಿಯೊ ಅನಾಲಿಟಿಕ್ಸ್‌ನ 'ಸ್ಯಾಪಿಯೊ ಹೆರಿಟೇಜ್ ರಿಸ್ಟೋರೇಷನ್' ವಿಭಾಗವು ಈ ಪ್ರದರ್ಶನವನ್ನು ವರ್ಚುವಲ್ ಮೂಲಕ ಆಯೋಜಿಸಿತ್ತು.

'ಎ ಲಾಸ್ಟ್ ಟ್ರೆಡಿಷನ್ ಆಫ್ ಆರ್ಟ್ ಆ್ಯಂಡ್ ಅರ್ಲಿಯೆಸ್ಟ್ ಸರ್ವೈವಿಂಗ್ ಪೇಂಟಿಂಗ್ ಇನ್ ಹಿಂದೂ ಟೆಂಪಲ್' ಹೆಸರಿನ ಪ್ರದರ್ಶನಕ್ಕೆ ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿ (ಐಸಿಸಿಆರ್) ಅಧ್ಯಕ್ಷ ಡಾ.ವಿನಯ್ ಸಹಸ್ರಬುದ್ಧೆ ಹಾಗೂ ಜಿ7 ರಾಷ್ಟ್ರಗಳಿಗೆ ಭಾರತದ ಪ್ರತಿನಿಧಿ ಸುರೇಶ್ ಪ್ರಭು ಸಾಕ್ಷಿಯಾದರು.

ಕಲಾ ಇತಿಹಾಸಜ್ಞ, ಛಾಯಾಗ್ರಾಹಕ ಹಾಗೂ ಚಿತ್ರನಿರ್ಮಾಪಕ ವಿನಯ್ ಕೆ.ಬೆಹ್ಲ್ ಅವರು, 'ಲೊ ಲೈಟ್ ಫೋಟೊಗ್ರಾಫಿ' ತಂತ್ರಜ್ಞಾನ ಬಳಸಿ 2001ರಲ್ಲಿ ಈ ವರ್ಣಚಿತ್ರಗಳ ಛಾಯಾಚಿತ್ರಗಳನ್ನು ಸೆರೆಹಿಡಿದು, ಡಿಜಿಟಲ್ ರೂಪದಲ್ಲಿ ಸಂಗ್ರಹಿಸಿದ್ದಾರೆ.



ಛಾಯಾಗ್ರಾಹಕ, ಇತಿಹಾಸಜ್ಞ ವಿನಯ್ ಕೆ.ಬೆಹ್ಲ್ ಅವರು ಚಿತ್ರ ತೆಗೆದು, ಡಿಜಿಟಲ್ ರೂಪದಲ್ಲಿ ಸಂಗ್ರಹಿಸಿರುವ ಬಾದಾಮಿ ಗುಹಾಂತರ ದೇವಾಲಯದಲ್ಲಿನ ವರ್ಣಚಿತ್ರ

'ಇದು ಆರನೇ ಶತಮಾನದ ಮ್ಯೂರಲ್ (ಗೋಡೆ ಮೇಲಿನ ವರ್ಣಚಿತ್ರ). 'ಕ್ವೀನ್ ಆ್ಯಂಡ್ ಹರ್ ಅಟೆಂಡನ್ಸ್' ಎಂಬ ಶೀರ್ಷಿಕೆ ನೀಡಲಾಗಿದೆ. ಅಗಾಧ ತತ್ವಜ್ಞಾನ, ದಯಾಗುಣ ಈ ಚಿತ್ರಗಳಲ್ಲಿ ಅದ್ಭುತವಾಗಿ ವ್ಯಕ್ತವಾಗಿವೆ. ಈ ಕಾರಣಕ್ಕಾಗಿಯೇ ಭಾರತೀಯ ವರ್ಣಚಿತ್ರಗಳು ಮನುಕುಲದ ಕಲಾಭಿವ್ಯಕ್ತಿಯಲ್ಲಿ ಅತ್ಯುತ್ತಮ ಎನಿಸುತ್ತವೆ' ಎಂದು ಬೆಹ್ಲ್ ಹೇಳಿದರು.

'ಈ ವರ್ಣಚಿತ್ರಗಳು ಆರನೇ ಶತಮಾನಕ್ಕೆ ಸೇರಿದವುಗಳಾಗಿವೆ ಎಂಬುದು ವೈಜ್ಞಾನಿಕ ಪರೀಕ್ಷೆಗಳಿಂದ ಸಾಬೀತಾಗಿದೆ' ಎಂದು ಸ್ಯಾಪಿಯೊ ಅನಾಲಿಟಿಕ್ಸ್‌ನ ಸಿಇಒ ಅಶ್ವಿನ್ ಶ್ರೀವಾಸ್ತವ 'ಪ್ರಜಾವಾಣಿ'ಗೆ ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ತಕ್ಷಣದ ಸಹಾಯವೇ ಇಲ್ಲ

ಗ್ರಾಮಗಳಲ್ಲಿ ಶ್ರದ್ಧಾಂಜಲಿ ಫ್ಲೆಕ್ಸ್‌ಗಳ ಸ್ವಾಗತ!

• ಕೆ.ಓಂಕಾರ ಮೂರ್ತಿ

ಮೈಸೂರು: ಗ್ರಾಮಗಳ ಪ್ರವೇಶದ್ವಾರದಲ್ಲೇ ಹಾಕಿರುವ ಸಾಲು ಸಾಲು ಶ್ರದ್ಧಾಂಜಲಿ ಫ್ಲೆಕ್ಸ್‌ಗಳು; ಅಲ್ಲಲ್ಲಿ ಸೀಲ್‌ಡೌನ್ ಆಗಿರುವ ಗ್ರಾಮಗಳು; ರಸ್ತೆಗಳಿಗೆ ಊರಿನವರೇ ಹಾಕಿರುವ ಬೇಲಿಗಳು; ದಿಕ್ಕು ತೋಚದೇ ಅಸಹಾಯಕರಾಗಿ ಅಲೆದಾಡುತ್ತಿರುವ ಬಹುತೇಕ ಗ್ರಾಮಸ್ಥರು–ಇವು ಕೊರೊನಾ ಸೋಂಕಿನ ಹಾವಳಿ ಎದುರಿಸುತ್ತಿರುವ ಮೈಸೂರು ಜಿಲ್ಲೆಯ ವಾಸ್ತವದ ಕತೆ ಹೇಳುತ್ತಿವೆ.

ಚಿಕಿತ್ಸೆಗಾಗಿ ಸೋಂಕಿತ ಇಬ್ಬರು ಅಕ್ಕಂದಿರನ್ನು ಗೊದ್ದನಪುರದಿಂದ ನಂಜನಗೂಡು ತಾಲ್ಲೂಕು ಕೋವಿಡ್ ಆಸ್ಪತ್ರೆಗೆ ಕರೆತಂದಿದ್ದ ನಾಗರಾಜು, ಸಹಾಯಕ್ಕಾಗಿ ಅಂಗಲಾಚುತ್ತ ಅಲೆದಾಡುತ್ತಿದ್ದರು. ಗಂಟೆಗಟ್ಟಲೆ ಕಾದರೂ ಕೇಳುವವರೇ ಇರಲಿಲ್ಲ. ಬಳಲಿದ ಆ ಮಹಿಳೆಯರು ರಸ್ತೆಯಲ್ಲೇ ಕುಳಿತಿದ್ದರು.

'ಯಾರೂ ಮಾಹಿತಿ ನೀಡುತ್ತಿಲ್ಲ. ಬೆಡ್ ಇಲ್ಲವೆಂದು ಮತ್ತೊಂದು ಆಸ್ಪತ್ರೆಗೆ ಕಳುಹಿಸುವುದಾಗಿ ಹೇಳಿದ ನರ್ಸ್ ಈಗ ಕಾಣಿಸುತ್ತಿಲ್ಲ. ಆಂಬುಲೆನ್ಸ್ ವ್ಯವಸ್ಥೆ ಮಾಡುತ್ತಿಲ್ಲ. ಇಷ್ಟೊಂದು ಸಮಸ್ಯೆ ಇದೆ ಎಂಬುದು ಗೊತ್ತಿದ್ದರೆ ಮನೆಯಲ್ಲೇ ಆರೈಕೆ ಮಾಡುತ್ತಿದ್ದೆವು' ಎಂದು ಕಣ್ಣೀರಿಡುತ್ತಿದ್ದ ನಾಗರಾಜು 'ಪ್ರಜಾವಾಣಿ' ಬಳಿ ಸಂಕಟ ತೋಡಿಕೊಂಡರು.

ಸೋಂಕಿನಿಂದ ಮನೆಯಲ್ಲೇ ಐಸೋಲೇಟ್ ಆಗಿರುವ ಮೂಡಹಳ್ಳಿಯ ಮಲ್ಲೇಶ್, ಔಷಧಿ ಚೀಟಿ ಹಿಡಿದು ಆಸ್ಪತ್ರೆಗಳಿಗೆ ಬೈಕಿನಲ್ಲಿ ಅಲೆಯುತ್ತಿದ್ದರು. ಗ್ರಾಮಗಳಲ್ಲಿ ಹೋಂ ಐಸೋಲೇಷನ್‌ನಲ್ಲಿ ಇರುವವರಿಗೆ ಔಷಧ ಸೇರಿದಂತೆ ಸರಿಯಾದ ಸೌಲಭ್ಯ ಕಲ್ಪಿಸದೆ ಇರುವುದಕ್ಕೆ ಈ ಪ್ರಕರಣವೇ ಸಾಕ್ಷಿ.

ಸೋಂಕಿನ ಲಕ್ಷಣ ಕಾಣಿಸಿಕೊಂಡಾಗ ಏನು ಮಾಡಬೇಕೆಂದು ಹೇಳುವವರೂ ಇಲ್ಲ. ಸಹಾಯವಾಣಿಗೆ ಕರೆ ಮಾಡಿದರೆ 'ಸಹಾಯ' ಸಿಗಲ್ಲ. ಆಂಬುಲೆನ್ಸ್ ಸಿಗದೇ ಬೇಸತ್ತು ಬೈಕಿನಲ್ಲೇ ಸೋಂಕಿತರನ್ನು ಪಟ್ಟಣದ ಆಸ್ಪತ್ರೆಗೆ ಕರೆದೊಯ್ದರೆ, ಅಲ್ಲಿ ಮಾತನಾಡಿಸುವವರೇ ಇಲ್ಲ.

ಗ್ರಾಮಾರೋಗ್ಯ ಆಗಲಿ ಇನ್ನಷ್ಟು ಯೋಗ್ಯ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ



ಸೀಲ್‌ಡೌನ್ ಆಗಿರುವ ಮೈಸೂರು ತಾಲ್ಲೂಕಿನ ಕೂರ್ಗಳ್ಳಿ ಗ್ರಾಮ
–ಪ್ರಜಾವಾಣಿ ಚಿತ್ರ/ಬಿ.ಆರ್.ಸವಿತಾ

ಅಲ್ಲಿ ಕೊರೊನಾ, ಇಲ್ಲಿ ಹಸಿವು

ಹಳ್ಳಿಗಳಲ್ಲಿ ಕೊರೊನಾ ಹಾವಳಿ ಇದ್ದರೆ, ಹಾಡಿಗಳಲ್ಲಿ ಊಟಕ್ಕಾಗಿ ಪರದಾಟ. ಲಾಕ್‌ಡೌನ್ ಕಾರಣ ಕೂಲಿಯೂ ಇಲ್ಲ.

ಸರ್ಕಾರದಿಂದ ರೇಷನ್ ಹಾಗೂ ಪೌಷ್ಟಿಕ ಆಹಾರ ಕೊಡಲಾಗುತ್ತದೆ. ಕೆಲವರಿಗೆ ಪಡಿತರ ಚೀಟಿಯೇ ಸಿಕ್ಕಿಲ್ಲ. ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿವೆ. ಈ ಸಮಸ್ಯೆ 'ಪ್ರಜಾವಾಣಿ' ಭೇಟಿ ನೀಡಿದ ಮೇಟಿಕುಪ್ಪೆ ಹಾಗೂ ಜಿ.ಎಂ.ಹಳ್ಳಿ ಹಾಡಿಯಲ್ಲಿ ಕಂಡುಬಂತು.

9ನೇ ಪುಟ ನೋಡಿ
ವಿಶೇಷ ಪುಟ 9

ಕೋವಿಡ್–19 ಲಸಿಕೆ ರಾಜ್ಯಗಳಿಗೆ ಹೆಚ್ಚು ಡೋಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಮೇ ತಿಂಗಳ ಕೊನೆಯ ವಾರದಲ್ಲಿ ದೇಶದಲ್ಲಿ ಲಸಿಕೆ ಹಾಕಿಸುವಿಕೆ ಚಟುವಟಿಕೆ ಚುರುಕುಗೊಂಡಿದೆ. ಜೂನ್‌ನಲ್ಲಿ ರಾಜ್ಯಗಳು ಈ ತಿಂಗಳಿನಲ್ಲಿ ಪಡೆದದ್ದಕ್ಕಿಂತ ಶೇ 50ರಷ್ಟು ಹೆಚ್ಚು ಲಸಿಕೆಯ ಡೋಸ್‌ಗಳನ್ನು ಪಡೆಯುವ ನಿರೀಕ್ಷೆ ಇದೆ.

'ಜೂನ್‌ನಲ್ಲಿ ರಾಜ್ಯಗಳಿಗೆ 6.09 ಕೋಟಿ ಡೋಸ್ ಲಸಿಕೆಗಳನ್ನು ಒದಗಿಸಲಾಗುವುದು. ಇನ್ನೂ 5.86 ಕೋಟಿ ಡೋಸ್‌ಗಳು ರಾಜ್ಯಗಳು ಹಾಗೂ ಖಾಸಗಿ ಆಸ್ಪತ್ರೆಗಳಿಗೆ ನೇರ ಖರೀದಿಗೆ ಲಭ್ಯವಾಗಲಿವೆ. ಒಟ್ಟಿನಲ್ಲಿ, ಮೂರು ಲಸಿಕೆಗಳ 12 ಕೋಟಿ ಡೋಸ್‌ಗಳು ಜೂನ್ ತಿಂಗಳಲ್ಲಿ ಲಭ್ಯವಾಗಲಿವೆ' ಎಂದು ಕೇಂದ್ರದ ಆರೋಗ್ಯ ಸಚಿವಾಲಯ ಭಾನುವಾರ ತಿಳಿಸಿದೆ.

'ಲಸಿಕಾ ಅಭಿಯಾನಕ್ಕೆ ವೇಗ ನೀಡುವುದು ಅಗತ್ಯ. ಇನ್ನಷ್ಟು ಲಸಿಕೆಗಳ ಆಮದಿಗೆ ಅನುಮತಿ ನೀಡಲಾಗುತ್ತಿದ್ದು, ಜುಲೈ ವೇಳೆಗೆ ಉತ್ಪಾದನೆ ಮತ್ತು ಖರೀದಿ ಪ್ರಮಾಣವು ಏರಿಕೆಯಾಗಲಿದೆ. ಅಲ್ಲಿಯವರೆಗೂ ಈಗ ಲಭ್ಯವಿರುವ ಮೂರು ಲಸಿಕೆಗಳನ್ನು ಸಾಧ್ಯವಾದಷ್ಟು ಮಂದಿಗೆ ನೀಡಬೇಕಾಗಿದೆ' ಎಂದು ಭಾರತೀಯ ಸಾರ್ವಜನಿಕ ಆರೋಗ್ಯ ಸಂಸ್ಥೆಯ ಅಧ್ಯಕ್ಷ ಕೆ. ಶ್ರೀನಾಥ ರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

ಜೂನ್‌ನಲ್ಲಿ ಹೆಚ್ಚಿನ ಡೋಸ್‌ಗಳು ಲಭ್ಯವಾಗುವುದರಿಂದ, ಲಸಿಕೆ ನೀಡಿಕೆಯ ಪ್ರಮಾಣವನ್ನು ದ್ವಿಗುಣಗೊಳಿಸಲು ರಾಜ್ಯಗಳಿಗೆ ಸಾಧ್ಯವಾಗಬಹುದು ಎಂದು ಹೇಳಲಾಗಿದೆ.

ಅಭಿಯಾನ ಚುರುಕು

ಮೇ ತಿಂಗಳ ಕೊನೆಯ ವಾರದಲ್ಲಿ ದೇಶದಲ್ಲಿ ಲಸಿಕಾ ಅಭಿಯಾನ ಚುರುಕು ಪಡೆದಿದೆ. ಕಳೆದ ಏಳು ದಿನಗಳಲ್ಲಿ ದೇಶದಲ್ಲಿ 1.72 ಕೋಟಿ ಡೋಸ್ ಲಸಿಕೆ ಹಾಕಲಾಗಿದೆ. ಅದರಲ್ಲಿ 30.35 ಲಕ್ಷ ಡೋಸ್‌ಗಳನ್ನು ಶನಿವಾರ ಒಂದೇ ದಿನ ನೀಡಲಾಗಿದೆ.

ಅದಕ್ಕೂ ಹಿಂದಿನ 10 ದಿನಗಳಲ್ಲಿ (ಮೇ 14ರಿಂದ 23) 1.40 ಕೋಟಿಗೂ ಹೆಚ್ಚು ಡೋಸ್‌ಗಳನ್ನು ನೀಡಲಾಗಿತ್ತು.

ಚಿನಕುರಳಿ
ಪ್ರಕಾಶ್ ಶೆಟ್ಟಿ



ನಗರದಲ್ಲಿ ಇಂದು

ರೈತರಿಗೆ ಮಾವಿನ ಪೆಟ್ಟಿಗೆ ವಿತರಣೆ ಸಮಾರಂಭ: ಉದ್ಘಾಟನೆ– ಕುಲಪತಿ ಎಸ್.ರಾಜೇಂದ್ರ ಪ್ರಸಾದ್, ಅಧ್ಯಕ್ಷತೆ– ಕೆ.ನಾರಾಯಣಗೌಡ, ಅತಿಥಿಗಳು–ವೈ.ಜಿ. ಷಡಕ್ಷರಿ, ಎನ್.ದೇವಕುಮಾರ್, ಟಿ.ಎನ್.ವೆಂಕಟರೆಡ್ಡಿ, ಎಸ್. ಸಿದ್ಧಯ್ಯ, ಆಯೋಜನೆ–ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಅಲುಮ್ನಿ ಅಸೋಸಿಯೇಷನ್, ಸ್ಥಳ–ಅಲುಮ್ನಿ ಅಸೋಸಿಯೇಷನ್ ಆವರಣ, ಪಶುವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಮಧ್ಯಾಹ್ನ 12

ಆನ್‌ಲೈನ್ ವಚನ ಗಾಯನ ಕಲಿಕಾ ಶಿಬಿರ: ಉದ್ಘಾಟನೆ–ಬಲವಂತರಾವ್ ಪಾಟೀಲ, ಪ್ರಾಸ್ತಾವಿಕ ನುಡಿ–ಪ್ರೇಮ ಸಿದ್ಧರಾಜು, ಅಧ್ಯಕ್ಷತೆ–ಗುರುಪ್ರಸಾದ್ ಕುಚ್ಚಂಗಿ, ಅತಿಥಿಗಳು–ಎಸ್.ಪಿನಾಕಪಾಣಿ, ಅನುರಾಗ ಗದ್ದಿ, ವೇದಮೂರ್ತಿ, ಎಸ್. ಆರ್.ವೀರಭದ್ರಯ್ಯ, ಆಯೋಜನೆ–ವಚನ ಜ್ಯೋತಿ ಬಳಗ, ಎಸ್‌ಜೆಆರ್ ಮಹಿಳಾ ಕಾಲೇಜು, ಮಧ್ಯಾಹ್ನ 2 (ಆನ್‌ಲೈನ್ ಕಾರ್ಯಕ್ರಮ)

ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ 'ವಿಚಾರ ಕಲರವ' ಉಪನ್ಯಾಸ ಮಾಲಿಕೆ: ವಿಷಯ– ಪ್ರಜಾಪ್ರಭುತ್ವದಲ್ಲಿ ಉತ್ತಮ ಆಡಳಿತ, ಉದ್ಘಾಟನೆ–ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ಅತಿಥಿ–ಶಾಲಿನಿ ರಜನೀಶ್, ಉಪಸ್ಥಿತಿ– ಕೆ.ಆರ್.ವೇಣುಗೋಪಾಲ್, ಆಯೋಜನೆ– ಎನ್‌ಎಸ್‌ಎಸ್ ಘಟಕ, ಬೆಂಗಳೂರು ವಿಶ್ವವಿದ್ಯಾಲಯ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

ಅಹಲ್ಯಾಬಾಯಿ ಹೋಳ್ಕರ್ ಜಯಂತಿ ಅಂಗವಾಗಿ 'ಸಾಮೂಹಿಕ ಶಿವಧ್ಯಾನ– ಅಹಲ್ಯಾ ಚಿಂತನ' ಕಾರ್ಯಕ್ರಮ: ಅತಿಥಿ–ಸಿದ್ಧರಾಮಾನಂದ ಸ್ವಾಮೀಜಿ, ಆಯೋಜನೆ–ಲೋಕಮಾತಾ ದೇವಿ ಅಹಲ್ಯಾಬಾಯಿ ಹೋಳ್ಕರ್ ಮಹಾಶಕ್ತಿಪೀಠ, ಸಂಜೆ 6 (ಆನ್‌ಲೈನ್ ಕಾರ್ಯಕ್ರಮ)

ಸಹಾಯವಾಣಿಯಲ್ಲಿ ಹಗಲಿರುಳು ಕೆಲಸ • ಕುಟುಂಬ ನಿರ್ವಹಣೆ ಕಷ್ಟ– ಚಾಲಕರ ಅಳಲು

'108' ಸಿಬ್ಬಂದಿಗೆ 3 ತಿಂಗಳಿಂದ ವೇತನವಿಲ್ಲ

• ಗುರು ಪಿ. ಎಸ್.



ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಅಲ್ಲದೆ, ಇತರೆ ತುರ್ತು ಪರಿಸ್ಥಿತಿಯಲ್ಲಿರುವ ರೋಗಿಗಳಿಗೆ ಆಂಬುಲೆನ್ಸ್ ಸೇವೆ ಒದಗಿಸುತ್ತಿರುವ, ಸಹಾಯವಾಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 108 ಸಿಬ್ಬಂದಿಗೆ ಮೂರು ತಿಂಗಳಿನಿಂದ ವೇತನವನ್ನೇ ನೀಡಿಲ್ಲ.

'ತಿಂಗಳಿಗೆ ಕೇವಲ ₹14,500 ಸಂಬಳಕ್ಕೆ ಹಗಲಿರುಳು ಕೆಲಸ ಮಾಡುತ್ತಿದ್ದೇವೆ. ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾದ ನಂತರ ವಿಪರೀತ ಒತ್ತಡದಲ್ಲಿ ಕೆಲಸ ಮಾಡುತ್ತಿದ್ದೇವೆ. ಮೂರು ತಿಂಗಳಿನಿಂದ ವೇತನವಿಲ್ಲದೆ ತೀವ್ರ ಕಷ್ಟವಾಗಿದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಚಾಲಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಫೆಬ್ರುವರಿ ತಿಂಗಳ ವೇತನವನ್ನು ಮೇ 26ಕ್ಕೆ ಪಾವತಿಸಿದ್ದಾರೆ. ಮಾರ್ಚ್, ಏಪ್ರಿಲ್ ತಿಂಗಳ ವೇತನ ಇದುವರೆಗೂ ಬಂದಿಲ್ಲ' ಎಂದು ರಾಜ್ಯ ಆರೋಗ್ಯ ಕವಚ 108 ನೌಕರರ ಸಂಘದ ಬೆಂಗಳೂರು ಘಟಕದ ಅಧ್ಯಕ್ಷ ಚಂದ್ರು ಪುಣ್ಯಕೋಟಿ ಹೇಳಿದರು.

'ಈಗ ಹೆಚ್ಚಾಗಿ ಕೋವಿಡ್ ರೋಗಿಗಳನ್ನೇ ನಾವು ಕರೆದೊಯ್ಯಬೇಕಾಗಿದೆ. ಆದರೆ, ಸಕಾಲಕ್ಕೆ ಮಾಸ್ಕ್, ಗ್ಲೌಸ್, ಸ್ಯಾನಿಟೈಸರ್‌ಗಳನ್ನೂ ನಮಗೆ ಪೂರೈಸುತ್ತಿಲ್ಲ' ಎಂದು ಚಾಲಕರೊಬ್ಬರು ದೂರಿದರು.

'ಆಂಬುಲೆನ್ಸ್‌ನಲ್ಲಿ ರೋಗಿಯನ್ನು ಕರೆದೊಯ್ದು, ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ (ಪಿಎಚ್‌ಸಿ) ಅವರನ್ನು ತೋರಿಸಿದ ನಂತರವೇ ಗ್ಲೌಸ್ ಮತ್ತು ಮಾಸ್ಕ್, ಅಗತ್ಯವಿದ್ದರೆ ಪಿಪಿಇ ಕಿಟ್ ಕೊಡುತ್ತಾರೆ. ಅಲ್ಲಿಂದ ಅವರನ್ನು ಆಸ್ಪತ್ರೆಗೆ ಕರೆದೊಯ್ಯಬೇಕು. ರೋಗಿಯ ಮನೆಯಿಂದ ಪಿಎಚ್‌ಸಿವರೆಗೆ ಕರೆದೊಯ್ಯುವ ಸಂದರ್ಭದಲ್ಲಿಯೇ ಸೋಂಕು ತಗುಲಿದರೆ ಯಾರು ಜವಾಬ್ದಾರಿ' ಎಂದು ಮತ್ತೊಬ್ಬ ಚಾಲಕ ಪ್ರಶ್ನಿಸಿದರು.

'ಕೆಲಸವೇ ಹೆಚ್ಚಾಗಿರುವುದರಿಂದ ಕುಟುಂಬದ ಕಡೆಗೆ ಗಮನ ಹರಿಸಲು ಸಾಧ್ಯವಾಗುತ್ತಿಲ್ಲ. ಸರಿಯಾಗಿ ವೇತನ ನೀಡಿದರೆ ಮನೆಯವರಾದರೂ ಕುಟುಂಬ ನಿರ್ವಹಣೆ ನೋಡಿಕೊಳ್ಳುತ್ತಾರೆ. ಕೈಯಲ್ಲಿ ಹಣವಿಲ್ಲದೆ ಜೀವನ ನಿರ್ವಹಿಸುವುದೂ ಕಷ್ಟವಾಗಿದೆ. ಎರಡು ವರ್ಷದ ಹಿಂಬಾಕಿ ಮೊತ್ತವನ್ನೂ ಇದುವರೆಗೆ ಪಾವತಿಸಿಲ್ಲ' ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಚಾಲಕರೊಬ್ಬರು ಕಣ್ಣೀರು ಹಾಕಿದರು.

'ತೀರಾ ತುರ್ತು ಸಂದರ್ಭದಲ್ಲಿಯೇ ನಮಗೆ ಕರೆ ಬರುತ್ತದೆ. ಹೆಚ್ಚು ಹೊತ್ತು ಪ್ರಯತ್ನಿಸಿದಾಗಲೂ ಸಂಪರ್ಕ ಸಿಗದಿದ್ದಾಗ ಜನ ರೇಗುತ್ತಾರೆ. ಹಾಸಿಗೆ ಸಿಗದಿದ್ದರೂ ನಮ್ಮ ಮೇಲೆಯೇ ಕೋಪ ಪ್ರದರ್ಶಿಸುತ್ತಾರೆ. ಇದಕ್ಕೆಲ್ಲ ಸಮಾಧಾನದಿಂದ ಉತ್ತರಿಸಬೇಕು ಎಂದರೆ ಮಾನಸಿಕವಾಗಿ ನಾವೂ ಗಟ್ಟಿಯಾಗಿರಬೇಕಾಗುತ್ತದೆ. ಆದರೆ, ವೇತನವಿಲ್ಲದಿದ್ದರೆ ಕುಟುಂಬದ ಚಿಂತೆಯೂ ನಮ್ಮನ್ನು ಕಾಡುವುದರಿಂದ ಹೆಚ್ಚು ಒತ್ತಡ ಅನುಭವಿಸುತ್ತಿದ್ದೇವೆ' ಎಂದು 108 ಸಹಾಯವಾಣಿ ಸಿಬ್ಬಂದಿಯೊಬ್ಬರು ಹೇಳಿದರು.

3 ಸಾವಿರಕ್ಕೂ ಹೆಚ್ಚು ಸಿಬ್ಬಂದಿಯು ಜಿವಿಕೆ ಎಮರ್ಜೆನ್ಸಿ ಮ್ಯಾನೇಜ್‌ಮೆಂಟ್ ಮತ್ತು ರಿಸರ್ಚ್ ಇನ್‌ಸ್ಟಿಟ್ಯೂಟ್ ಮೂಲಕ ಹೊರಗುತ್ತಿಗೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ವೇತನ ಪಾವತಿಗೆ ಕ್ರಮ: ಭರವಸೆ

'ಎಲ್ಲ ಸಿಬ್ಬಂದಿಗೆ ಫೆಬ್ರುವರಿಯವರೆಗಿನ ವೇತನ ಪಾವತಿಸಲಾಗಿದೆ. ಮಾರ್ಚ್, ಏಪ್ರಿಲ್ ವೇತನ ಬಾಕಿ ಇದೆ. ಮೇ ಮುಗಿದ ನಂತರ ಮೂರೂ ತಿಂಗಳ ವೇತನವನ್ನು ನೀಡಲಾಗುವುದು' ಎಂದು ಜಿವಿಕೆ ಕಂಪನಿಯ ಹಿರಿಯ ಅಧಿಕಾರಿ ತಿಳಿಸಿದರು.

'ಕೋವಿಡ್ ಸಂದರ್ಭದಲ್ಲಿ ಎಲ್ಲರಿಗೂ ಕೆಲಸ ಹೆಚ್ಚಾಗಿದೆ. ಸರ್ಕಾರದಿಂದ ಹಣ ಬರುವುದು ವಿಳಂಬವಾಗಿದ್ದರಿಂದ ಒಂದೆರಡು ತಿಂಗಳು ತಡವಾಯಿತು' ಎಂದೂ ಹೇಳಿದರು.

'ಗ್ಲೌಸ್, ಮಾಸ್ಕ್, ಸ್ಯಾನಿಟೈಸರ್ ಒದಗಿಸುತ್ತಿಲ್ಲ ಎಂಬುದು ಸುಳ್ಳು. ಆದ್ಯತೆ ಮೇರೆಗೆ ಸುರಕ್ಷತಾ ಪರಿಕರಗಳನ್ನು ಒದಗಿಸುತ್ತಿದ್ದೇವೆ. ಎಲ್ಲರಿಗಿಂತ ಮೊದಲು ಈ ಸಿಬ್ಬಂದಿಗೇ ಲಸಿಕೆ ಹಾಕಿಸಲಾಗಿದೆ' ಎಂದರು.

'ಬ್ರಿಟನ್‌ಗೆ ರಾಜ್ಯದಿಂದ 1,000 ನರ್ಸಿಂಗ್ ಸಿಬ್ಬಂದಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರಿಟನ್‌ನ ರಾಷ್ಟ್ರೀಯ ಆರೋಗ್ಯ ಇಲಾಖೆಯಿಂದ (ಎನ್‌ಎಚ್‌ಎಸ್) 1,000 ಶುಶ್ರೂಷಕರಿಗೆ ಬೇಡಿಕೆ ಬಂದಿದ್ದು, ಕೋವಿಡ್ ಸಂಕಷ್ಟ ಮುಗಿದ ಬಳಿಕ ಅಷ್ಟೂ ಸಿಬ್ಬಂದಿಯನ್ನು ಲಂಡನ್‌ಗೆ ಕಳುಹಿಸಲಾಗುವುದು' ಎಂದು ಕೌಶಲಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ವರ್ಚುಯಲ್ ವೇದಿಕೆ ಮೂಲಕ ಭಾನುವಾರ 'ವಿಶ್ವ ಕನ್ನಡ ಶುಶ್ರೂಷಕರ ಸಂಘ'ದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಈಗಾಗಲೇ ಕೌಶಲಾಭಿವೃದ್ಧಿ ಇಲಾಖೆ ಮತ್ತು ಎನ್‌ಎಚ್‌ಎಸ್ ಜತೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. 1,000 ಶುಶ್ರೂಷಕರನ್ನು ಕಳುಹಿಸುವಂತೆ ಅವರು ಕೋರಿದ್ದಾರೆ. ಅದಕ್ಕೆ ವ್ಯವಸ್ಥೆ ಮಾಡಲಾಗಿದೆ. ಅಲ್ಲಿನ ವ್ಯವಸ್ಥೆಗೆ ಒಗ್ಗಿ ಕೆಲಸ ಮಾಡುವುದಕ್ಕೆ ಅಗತ್ಯವಾದ ಭಾಷೆ, ಸಂವಹನ ಕಲೆ, ಸೇವಾ ಮನೋಭಾವ ಇತ್ಯಾದಿಗಳ ಬಗ್ಗೆ ತರಬೇತಿ ನೀಡಲಾಗುವುದು' ಎಂದರು.

'ಇನ್ನೂ ಹೆಚ್ಚಿನ ನರ್ಸಿಂಗ್ ಸಿಬ್ಬಂದಿ ಅಗತ್ಯವಿದ್ದರೆ ಕಳುಹಿಸಲಾಗುವುದು. ಅಲ್ಲದೆ, ಬ್ರಿಟನ್ ಜತೆಗೆ ಇತರೆ ದೇಶಗಳಿಗೂ ನರ್ಸಿಂಗ್ ಹಾಗೂ ಅರೆವೈದ್ಯಕೀಯ ಸಿಬ್ಬಂದಿ ಒದಗಿಸುವ ಕೆಲಸ ಮಾಡಲಾಗುತ್ತಿದೆ. ಈ ಬಗ್ಗೆ ಕೌಶಲಾಭಿವೃದ್ಧಿ ಇಲಾಖೆ ಕೆಲಸ ಮಾಡುತ್ತಿದೆ' ಎಂದು ಅವರು ಹೇಳಿದರು.

'ನರ್ಸಿಂಗ್ ಸಿಬ್ಬಂದಿಗೆ ಅಧಿಕಾರಿ ಮಟ್ಟದ ಸ್ಥಾನಮಾನ ನೀಡುವ ಬಗ್ಗೆಯೂ ನಿರ್ಧರಿಸಲಾಗಿದೆ. ಮುಖ್ಯಮಂತ್ರಿ ಆದೇಶವನ್ನೂ ಹೊರಡಿಸಿದ್ದಾರೆ. ಅಲ್ಲದೆ, ಅವರ ಎಲ್ಲ ಬೇಡಿಕೆಗಳನ್ನೂ ಈಡೇರಿಸಲಾಗಿದೆ' ಎಂದು ಡಾ. ಅಶ್ವತ್ಥನಾರಾಯಣ ವಿವರಿಸಿದರು.

ಸಾನ್ನಿಧ್ಯ ವಹಿಸಿದ್ದ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ 'ವಿಶ್ವ ಕನ್ನಡ ಶುಶ್ರೂಷಕರ ಸಂಘ' ಉದ್ಘಾಟಿಸಿ, ಆಶೀರ್ವಚನ ನೀಡಿದರು. ಸಂಸದೆ ಶೋಭಾ ಕರಂದ್ಲಾಜೆ, ಶಾಸಕ ಎಂ.ಬಿ. ಪಾಟೀಲ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಘವೇಂದ್ರ ಬೇಲೂರು, ಗೋಪಾಲ ಕುಲಕರ್ಣಿ, ಸಂಘದ ಅಧ್ಯಕ್ಷ ತಮ್ಮಣ್ಣ, ಕಾರ್ಯದರ್ಶಿ ನಾಗರಾಜ್, ಖಜಾಂಚಿ ಹೇಮೇಗೌಡ ಮುಂತಾದವರು ವಿಶ್ವದ ವಿವಿಧ ದೇಶಗಳಿಂದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಸುದ್ದಿ 2 ನಿಮಿಷ

ಕೆಪಿಸಿಸಿ ಮಾಧ್ಯಮ ವಿಭಾಗ ಸಂಯೋಜಕರ ನೇಮಕ

ಬೆಂಗಳೂರು: ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗಕ್ಕೆ ವಿಭಾಗವಾರು ಸಂಯೋಜಕರನ್ನು ನೇಮಿಸಿ, ಅವರಿಗೆ ನಿರ್ದಿಷ್ಟ ಜಿಲ್ಲೆಗಳ ಜವಾಬ್ದಾರಿ ವಹಿಸಲಾಗಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೂಚನೆಯಂತೆ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಈ ನೇಮಕ ಮಾಡಿದ್ದಾರೆ.

ನೇಮಕಗೊಂಡವರು ಎಂ.ರಾಮಚಂದ್ರಪ್ಪ (ಬೆಂಗಳೂರು ನಗರ), ಎಂ.ಎ.ಸಲೀಂ, ಅನಿಲ್ ಕುಮಾರ್ (ಬೆಂಗಳೂರು ವಿಭಾಗ), ಜಿ.ಸಿ. ರಾಜು (ಮೈಸೂರು ವಿಭಾಗ), ಅನಿಲ್ (ಕಲಬುರ್ಗಿ ವಿಭಾಗ), ನಾಗರಾಜ ಯಾದವ್ (ಬೆಳಗಾವಿ ವಿಭಾಗ).

ಮಾಧ್ಯಮ ಸಂಯೋಜಕರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ವಕ್ತಾರರ ಜೊತೆ ನಿರಂತರ ಸಂಪರ್ಕದಲ್ಲಿರಬೇಕು. ಕೇಂದ್ರ ಸ್ಥಾನ, ಜಿಲ್ಲೆ ಮತ್ತು ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ನಡೆಯಬೇಕಾದ ಸುದ್ದಿಗೋಷ್ಠಿ ಮತ್ತಿತರ ವಿಚಾರಗಳ ಬಗ್ಗೆ ಕೆಪಿಸಿಸಿ ಪರವಾಗಿ ಕಾರ್ಯನಿರ್ವಹಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ವೈದ್ಯಕೀಯ ನೆರವಿಗೆ ಐಎನ್‌ಎಸ್ ಹಂಸದಲ್ಲಿ 'ಹಾರುವ ಐಸಿಯು'



ಮುಂಬೈ: ಕಡಲಿನಲ್ಲಿ ಸಂಕಷ್ಟಕ್ಕೆ ಸಿಲುಕಿದವರಿಗೆ ವೈದ್ಯಕೀಯ ನೆರವು ನೀಡಿ, ರಕ್ಷಣಾ ಕಾರ್ಯಕ್ಕೆ ಸಾಥ್ ನೀಡುವ 'ವೈದ್ಯಕೀಯ ತೀವ್ರ ನಿಗಾ ಘಟಕ' (ಎಂಐಸಿಯು) ಹೊಂದಿದ ಹೆಲಿಕಾಪ್ಟರ್‌ವೊಂದನ್ನು ನೌಕಾಪಡೆಯ ಹಡಗು ಐಎನ್‌ಎಸ್ ಹಂಸದಲ್ಲಿ ಸೇವೆಗೆ ಅಣಿಗೊಳಿಸಲಾಗಿದೆ.

'ಎಎಲ್‌ಎಚ್–ಎಂಕೆ–3' ಎಂದು ಕರೆಯಲಾಗುವ ಈ 'ಹಾರುವ ಐಸಿಯು' ಅನ್ನು ಹಿಂದೂಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಅಭಿವೃದ್ಧಿಪಡಿಸಿದೆ. ಐಎನ್‌ಎಸ್ ಹಂಸ ಹಡಗು ಗೋವಾದಲ್ಲಿದೆ.

ನೌಕಾಪಡೆಗೆ ಎಚ್‌ಎಎಲ್ ಇಂಥ ಒಟ್ಟು 8 ಎಂಐಸಿಯುಗಳನ್ನು ನಿರ್ಮಿಸಿಕೊಡಲಿದ್ದು, ಈ ಪೈಕಿ ಮೊದಲ ಎಂಐಸಿಯು ಅನ್ನು ಹಸ್ತಾಂತರಿಸಿದೆ. ಈ ಹೆಲಿಕಾಪ್ಟರ್‌ನಲ್ಲಿ ವೈದ್ಯಕೀಯ ಸಾಧನಗಳನ್ನು ಜೋಡಿಸಿ, ಅದನ್ನು 'ಹಾರುವ ಐಸಿಯು'ಅನ್ನಾಗಿ ಪರಿವರ್ತಿಸಲು 2–3 ಗಂಟೆ ಸಾಕು ಎಂದು ಮೂಲಗಳು ಹೇಳಿವೆ.

ಹವಾಮಾನ ವೈಪರೀತ್ಯದಿಂದಾಗಿ ಸಾಗರದಲ್ಲಿ ಸಿಲುಕಿಕೊಂಡವರ ರಕ್ಷಣೆಗೆ ಈ ಹೆಲಿಕಾಪ್ಟರ್ ಧಾವಿಸಲಿದೆ. ಅದರಲ್ಲೂ, ರಕ್ಷಣಾ ಕಾರ್ಯ ನಡೆಯುವ ಸಂದರ್ಭದಲ್ಲಿಯೇ ವೈದ್ಯಕೀಯ ನೆರವು ನೀಡಲು ಅನುಕೂಲವಾಗುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ.

ಎರಡು ಜೋಡಿ ಡಿಫೈಬ್ರಿಲೇಟರ್‌ಗಳು, ಮಾನಿಟರ್‌ಗಳು, ವೆಂಟಿಲೇಟರ್, ಆಮ್ಲಜನಕ ಪೂರೈಕೆ ವ್ಯವಸ್ಥೆ ಸೇರಿದಂತೆ ತುರ್ತು ಸಂದರ್ಭದಲ್ಲಿ ಅಗತ್ಯವಿರುವ ವೈದ್ಯಕೀಯ ಸಾಧನಗಳನ್ನು 'ಎಂಐಸಿಯು' ಒಳಗೊಂಡಿದೆ.

ವೈದ್ಯಕೀಯ ನೆರವು ನೀಡಲು ಅಗತ್ಯವಿರುವ ವಿದ್ಯುತ್ ಪೂರೈಕೆಗೂ ವ್ಯವಸ್ಥೆ ಕಲ್ಪಿಸಲಾಗಿದೆ. ಹೆಲಿಕಾಪ್ಟರ್‌ನಲ್ಲಿನ ವಿದ್ಯುತ್ ಬಳಕೆಯ ಜೊತೆಗೆ, ನಾಲ್ಕು ಗಂಟೆಗಾಗುವಷ್ಟು ವಿದ್ಯುತ್ ಒದಗಿಸಬಲ್ಲ ಬ್ಯಾಟರಿಗಳನ್ನು ಸಹ ಇದರಲ್ಲಿ ಅಳವಡಿಸಲಾಗಿದೆ ಎಂದು ಮೂಲಗಳು ಹೇಳಿವೆ.

'ಸ್ವಯಂಸೇವಾ ಸಂಸ್ಥೆಗಳ ಸಿಬ್ಬಂದಿಗೆ ಆರ್ಥಿಕ ನೆರವು ನೀಡಿ'

ಬೆಂಗಳೂರು: 'ರಾಜ್ಯದಲ್ಲಿ ಸುಮಾರು 60ರಿಂದ 80 ಸಾವಿರ ನೋಂದಾಯಿತ ಸ್ವಯಂ ಸೇವಾ ಸಂಸ್ಥೆಗಳಿದ್ದು, ಇದರಲ್ಲಿ ಅಂದಾಜು 5 ಲಕ್ಷ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಇವರು ಸುಮಾರು ಏಳು ದಶಕಗಳಿಂದ ನೊಂದವರು ಹಾಗೂ ದಮನಿತ ಸಮುದಾಯಗಳ ಅಭಿವೃದ್ಧಿಗಾಗಿ ಸರ್ಕಾರದ ಪರವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕೊರೊನಾ ಸಮಯದಲ್ಲಿ ಇವರಿಗೆ ವಿಶೇಷ ನೆರವು ಪ್ರಕಟಿಸಿ' ಎಂದು ಕರ್ನಾಟಕ ನಗರ ಮತ್ತು ಗ್ರಾಮಾಭ್ಯುದಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ (ಫೆವಾರ್ಡ್) ಸಂಘಟನಾ ಕಾರ್ಯದರ್ಶಿ ಎಂ.ಎಸ್.ಕೃಷ್ಣಮೂರ್ತಿ ಮನವಿ ಮಾಡಿದ್ದಾರೆ.

'ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳು ಮತ್ತು ಸ್ಥಳೀಯ ಆಡಳಿತ ಸಂಸ್ಥೆಗಳು ರೂಪಿಸುವ ಯೋಜನೆಗಳನ್ನು ಜನ ಸಾಮಾನ್ಯರಿಗೆ ತಲುಪಿಸುವ ನಿಟ್ಟಿನಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಸಿಬ್ಬಂದಿ ಸಂಪರ್ಕ ಸೇತುವೆಯಂತೆ ಕೆಲಸ ಮಾಡುತ್ತಿದ್ದಾರೆ.

ನೆರೆ–ಪ್ರವಾಹದ ಸಂದರ್ಭದಲ್ಲಿ ಜನರಿಗೆ ಊಟ, ವಸತಿ, ಹೊದಿಕೆ ಹಾಗೂ ಔಷಧೋಪಚಾರ ನೀಡಲು ಶ್ರಮಿಸಿದ್ದ ಸಿಬ್ಬಂದಿ ಕೋವಿಡ್ ಎರಡನೇ ಅಲೆಯಲ್ಲಿ ತಮ್ಮ ಕುಟುಂಬ ಸದಸ್ಯರನ್ನು ಕಾಪಾಡಿಕೊಳ್ಳಲು ಪರದಾಡುತ್ತಿದ್ದಾರೆ. ಈಗಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಉದ್ಯೋಗ ಭದ್ರತೆ ಇಲ್ಲದಿದ್ದರೂ ಕೂಡ ಜೀವದ ಹಂಗು ತೊರೆದು ಕೆಲಸ ಮಾಡುತ್ತಿದ್ದಾರೆ' ಎಂದು ತಿಳಿಸಿದ್ದಾರೆ.



ಪಾಲಿಕೆಯ ಮಾಜಿ ಸದಸ್ಯ ಎಸ್‌.ರಾಜು ಅವರು ವಿಜಯನಗರದ ಆರ್‌.ಪಿ.ಸಿ.ಬಡಾವಣೆಯಲ್ಲಿ ಚಿತ್ರರಂಗದ ಕಲಾವಿದರು, ತಂತ್ರಜ್ಞರು ಹಾಗೂ ಆಟೊ ಚಾಲಕರಿಗೆ ಭಾನುವಾರ ದಿನಸಿ ಸಾಮಗ್ರಿ ವಿತರಿಸಿದರು. ನಟ ಡಿ. ಕೃಷ್ಣ ಸುರೇಶ್ ಹಾಗೂ ಆಡುಗೋಡಿ ಶ್ರೀನಿವಾಸ್ ಇದ್ದರು– ಪ್ರಜಾವಾಣಿ ಚಿತ್ರ



ಶ್ರೀನಾಥ್ ವಸಿಷ್ಠ ಅವರು ಹಿರಿಯ ಕಲಾವಿದೆ ಮಾಲತಿಶ್ರೀ ಮೈಸೂರು ಅವರಿಗೆ ದಿನಸಿ ಕಿಟ್ ವಿತರಿಸಿದರು.

ಕಲಾವಿದರಿಗೆ ದಿನಸಿ ಕಿಟ್ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ರಂಗಭೂಮಿ, ಕಿರುತೆರೆ ಹಾಗೂ ಬೆಳ್ಳಿತೆರೆಯ ಕಲಾವಿದರು ಸೇರಿದಂತೆ ಇತರರಿಗೆ ವಿಜಯನಗರದ ಕಲಾ ವೇದಿಕೆ ಟ್ರಸ್ಟ್ ದಿನಸಿ ಕಿಟ್‌ಗಳನ್ನು ವಿತರಿಸಿತು.

ಕಲಾವಿದ ಮತ್ತು ನಿರ್ದೇಶಕ ಶ್ರೀನಾಥ್ ವಸಿಷ್ಠ ಅವರು ಈ ಕಾರ್ಯದ ನೇತೃತ್ವ ವಹಿಸಿದ್ದರು. ಪೋಷಕ ಕಲಾವಿದರು, ನಿರ್ದೇಶಕರು, ಡಬ್ಬಿಂಗ್ ಕಲಾವಿದರು, ನಿರ್ಮಾಣ ನಿರ್ವಾಹಕರು, ಛಾಯಾಗ್ರಾಹಕರು, ಚಾಲಕರು ಸೇರಿದಂತೆ ಕಲಾ ಕ್ಷೇತ್ರದ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುತ್ತಿರುವ 125 ಮಂದಿಗೆ ಕಿಟ್‌ಗಳನ್ನು ವಿತರಿಸಲಾಯಿತು.

ಅಕ್ರಮ ಪಡಿತರ ಚೀಟಿ ವಾಪಸ್ ಜೂನ್ 30 ಕೊನೆಯ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕ್ರಮವಾಗಿ ಅಂತ್ಯೋದಯ ಅನ್ನ ಯೋಜನೆ (ಎಎವೈ) ಅಥವಾ ಬಿಪಿಎಲ್ (ಆದ್ಯತಾ) ಪಡಿತರ ಚೀಟಿ ಪಡೆದವರು ಜೂನ್ 30ರ ಒಳಗಾಗಿ ಸ್ವಯಂಪ್ರೇರಿತವಾಗಿ ಆಯಾ ತಾಲ್ಲೂಕಿನ ತಹಶೀಲ್ದಾರ್‌ಗೆ ಹಿಂತಿರುಗಿಸಬೇಕು' ಎಂದು ಆಹಾರ ಇಲಾಖೆಯ ಆಯುಕ್ತರು ಸೂಚನೆ ನೀಡಿದ್ದಾರೆ.

'ಹಿಂದಿರುಗಿಸದಿದ್ದರೆ ಅಗತ್ಯ ವಸ್ತುಗಳ ಕಾಯ್ದೆ ಮತ್ತು ಕರ್ನಾಟಕ ಅನಧಿಕೃತ ಪಡಿತರ ಚೀಟಿ ಹೊಂದುವುದರ ತಡೆ ಆದೇಶದಡಿ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೆ, ಪಡಿತರ ಚೀಟಿ ಹೊಂದಿದ್ದ ಅವಧಿಯಲ್ಲಿ ನ್ಯಾಯಬೆಲೆ ಅಂಗಡಿಯಿಂದ ಹಂಚಿಕೆ ಪಡೆದ ಆಹಾರ ಧಾನ್ಯಗಳಿಗೆ ಮುಕ್ತ ಮಾರುಕಟ್ಟೆ ದರ ನಿಗದಿಪಡಿಸಿ ವಸೂಲಿ ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

'ಸುಳ್ಳು ಮಾಹಿತಿ ನೀಡಿ ಅನೇಕರು ಪಡಿತರ ಚೀಟಿಗಳನ್ನು ಪಡೆದಿರುವುದು ಕಂಡುಬಂದಿದೆ. ಅಂಥವರಿಗೆ ಹಿಂದಿರುಗಿಸಲು ಮತ್ತೊಮ್ಮೆ ಗಡುವು ನೀಡಲಾಗಿದೆ. ಗಡುವಿನ ಒಳಗೆ ಹಿಂತಿರುಗಿಸುವವರಿಗೆ ಯಾವುದೇ ದಂಡ ವಿಧಿಸುವುದಿಲ್ಲ' ಎಂದೂ ಅವರು ತಿಳಿಸಿದ್ದಾರೆ.

ಎಎವೈ, ಬಿಪಿಎಲ್ ಪಡಿತರ ಚೀಟಿ ಹೊಂದಲು ಯಾರು ಅರ್ಹರಲ್ಲ: ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಸಂಸ್ಥೆಗಳು, ಸರ್ಕಾರಿ ಪ್ರಾಯೋಜಿತ, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು, ಮಂಡಳಿಗಳು, ನಿಗಮಗಳು, ಸ್ವಾಯತ್ತ ಸಂಸ್ಥೆಗಳಲ್ಲಿ ನೌಕರಿಯಲ್ಲಿರುವವರು, ಆದಾಯ ತೆರಿಗೆ, ಸೇವಾತೆರಿಗೆ, ವ್ಯಾಟ್, ವೃತ್ತಿ ತೆರಿಗೆ ಪಾವತಿಸುವ ಕುಟುಂಬಗಳು, ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್‌ಗಿಂತ ಹೆಚ್ಚಿನ ಒಣ ಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವವರು,

ನಗರ ಪ್ರದೇಶದಲ್ಲಿ 1 ಸಾವಿರ ಚದರ ಅಡಿಗಿಂತ ಹೆಚ್ಚು ವಿಸ್ತೀರ್ಣದ ಪಕ್ಕಾ ಮನೆ ಸ್ವಂತವಾಗಿ ಹೊಂದಿರುವ ಮತ್ತು ವಾರ್ಷಿಕ ಆದಾಯ ₹ 1.20 ಲಕ್ಷಕ್ಕಿಂತ ಹೆಚ್ಚು ಆದಾಯ ಹೊಂದಿರುವ ಕುಟುಂಬಗಳು, ಜೀವನೋಪಾಯಕ್ಕೆ ಸ್ವಂತ ಓಡಿಸುವ ಟ್ರ್ಯಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ವಾಹನ ಹೊಂದಿರುವ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನ ಹೊಂದಿರುವವರು.



ಗೃಹಸಚಿವ ಬಸವರಾಜ ಬೊಮ್ಮಾಯಿ ಹಾಗೂ ಶಾಸಕ ಎಸ್‌.ಆರ್‌.ವಿಶ್ವನಾಥ್, ಪೌರಕಾರ್ಮಿಕರಿಗೆ ಆಹಾರದ ಕಿಟ್ ವಿತರಿಸಿದರು

ಪೌರಕಾರ್ಮಿಕರಿಗೆ ಆಹಾರದ ಕಿಟ್ ವಿತರಣೆ

ಯಲಹಂಕ: ಸೇವಾದಿವಸ್ ಕಾರ್ಯಕ್ರಮದ ಅಂಗವಾಗಿ 700 ಪೌರಕಾರ್ಮಿಕರಿಗೆ ಉಪನಗರದ ಹೊಯ್ಸಳ ಕ್ರೀಡಾಂಗಣದಲ್ಲಿ ಆಹಾರದ ಕಿಟ್ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಗೃಹಸಚಿವ ಬಸವರಾಜ ಬೊಮ್ಮಾಯಿ, 'ಸೇವಾದಿವಸ್ ಅಂಗವಾಗಿ ಕೋವಿಡ್ ಕಾರ್ಯಚಟುವಟಿಕೆಗಳಲ್ಲಿ ಕಾರ್ಯಕರ್ತರು ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಕರೆಕೊಟ್ಟಿದ್ದರು. ಹೀಗಾಗಿ, ಪೌರಕಾರ್ಮಿಕರಿಗೆ ಆಹಾರದ ಕಿಟ್ ವಿತರಿಸುವ ಮತ್ತು ಲಸಿಕೆ ಕೊಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ' ಎಂದು ತಿಳಿಸಿದರು.

ವಿವಿಧೆಡೆ 'ಸೇವಾ ಹಿ ಸಂಘಟನ್' ಕಾರ್ಯಕ್ರಮ

ಕಷ್ಟದಲ್ಲಿರುವವರಿಗೆ ಬಿಜೆಪಿ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಏಳು ವರ್ಷಗಳನ್ನು ಪೂರೈಸಿರುವ ಪ್ರಯುಕ್ತ 'ಸೇವಾ ಹಿ ಸಂಘಟನ್' ಕಾರ್ಯಕ್ರಮದ ಅಂಗವಾಗಿ ಬಿಜೆಪಿ ಕಾರ್ಯಕರ್ತರು ಭಾನುವಾರ ನಗರದ ವಿವಿಧೆಡೆ ಸಂಕಷ್ಟದಲ್ಲಿರುವ ಜನರಿಗೆ ನೆರವು ವಿತರಿಸಿದರು.

ಕೋವಿಡ್ ಮತ್ತು ಲಾಕ್‌ಡೌನ್‌ನಿಂದ ತೊಂದರೆಗೆ ಸಿಲುಕಿರುವ ಜನರಿಗೆ ಆರ್ಥಿಕ ನೆರವು ಹಸ್ತಾಂತರಿಸುವ ಕಾರ್ಯಕ್ರಮಗಳನ್ನು ಹಲವು ಕಡೆ ಆಯೋಜಿಸಲಾಗಿತ್ತು. ಚಿತಾಗಾರದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ಮತ್ತು ತೃತೀಯ ಲಿಂಗಿಗಳಿಗೆ ದಿನಸಿ ಕಿಟ್ ವಿತರಣೆ ಮಾಡಲಾಯಿತು.

ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಬಡವರು, ಅರ್ಚಕರು ಮತ್ತು ಕಾರ್ಮಿಕರಿಗೆ ದಿನಸಿ ಹಾಗೂ ತರಕಾರಿ ವಿತರಣೆ ಮಾಡಿ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ, 'ಕೆಲವು ಆಂಬುಲೆನ್ಸ್ ಚಾಲಕರು ಸೋಂಕಿತರನ್ನು ಆಸ್ಪತ್ರೆಗೆ ಕರೆದೊಯ್ಯಲು ಮತ್ತು ಕೋವಿಡ್ ರೋಗಿಗಳ ಮೃತದೇಹ ಸಾಗಿಸಲು ದುಬಾರಿ ಹಣ ಪಡೆಯುತ್ತಿರುವ ದೂರುಗಳಿವೆ. ಅಂತಹವರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು.



ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್‌. ರವಿಕುಮಾರ್ ಅವರು ಚಿತಾಗಾರದ ಸಿಬ್ಬಂದಿಗೆ ಆಹಾರದ ಕಿಟ್ ವಿತರಿಸಿದರು

ದಾಸರಹಳ್ಳಿಯಲ್ಲಿ ಆಸ್ಪತ್ರೆ: ದಾಸರಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಐದು ಆಮ್ಲಜನಕ ಸಾಂದ್ರಕಗಳನ್ನು ಹಸ್ತಾಂತರಿಸಿ ಮಾತನಾಡಿದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, 'ದಾಸರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ 100 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆ ನಿರ್ಮಿಸಲಾಗುವುದು. ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನೂ ಮಂಜೂರು ಮಾಡಲಾಗಿದೆ' ಎಂದು ತಿಳಿಸಿದರು.

ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಅರಮನೆ ನಗರ, ಗುಟ್ಟಹಳ್ಳಿ ಸೇರಿದಂತೆ ಹಲವು ಕಡೆಗಳಲ್ಲಿ ಪೌರ ಕಾರ್ಮಿಕರಿಗೆ ಸಿಹಿ ತಿಂಡಿ, ದಿನಸಿ ಕಿಟ್ ಮತ್ತು ಪ್ರೆಷರ್ ಕುಕ್ಕರ್‌ಗಳನ್ನು ವಿತರಿಸಿದರು. ವರ್ಚ್ಯುಯಲ್ ಆಗಿ ಬಿಜೆಪಿ ಕಾರ್ಯಕರ್ತರ ಜತೆ ಸಂವಾದ ನಡೆಸಿದ ಅಶ್ವತ್ಥನಾರಾಯಣ, 'ಕೋವಿಡ್ ಮೂರನೆ ಅಲೆ ಎದುರಿಸಲು ಸರ್ಕಾರ ಸನ್ನದ್ಧವಾಗಿದೆ' ಎಂದರು.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಜೆ.ಪಿ. ಪಾರ್ಕ್ ವಾರ್ಡ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಎನ್. ಮುನಿರತ್ನ ನೇತೃತ್ವದಲ್ಲಿ ತೃತೀಯ ಲಿಂಗಿಗಳಿಗೆ ಸಹಾಯಧನ, ದಿನಸಿ ಕಿಟ್ ಮತ್ತು ತರಕಾರಿ ವಿತರಿಸಲಾಯಿತು. ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್, ಆರ್‌ಎಸ್‌ಎಸ್ ಪ್ರಚಾರಕ ವಾದಿರಾಜ್, ಬಿಜೆಪಿ ಮುಖಂಡ ಚೇತನ್ ಸೋಮಣ್ಣ, ಪಾಲಿಕೆ ಮಾಜಿ ಸದಸ್ಯರಾದ ವೇಲು ನಾಯಕರ್, ಜಿ.ಎಚ್. ರಾಮಚಂದ್ರ, ಎಚ್.ಎಸ್. ಸಿದ್ದೇಗೌಡ ಪಾಲ್ಗೊಂಡಿದ್ದರು.

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ತಿಂಡ್ಲುವಿನಲ್ಲೂ ಎನ್. ರವಿಕುಮಾರ್ ಮತ್ತು ವಾದಿರಾಜ್ ನೇತೃತ್ವದಲ್ಲಿ ನೆರವು ವಿತರಿಸಲಾಯಿತು.

ಮೋದಿ ಸರ್ಕಾರಕ್ಕೆ ಏಳು ವರ್ಷ ಕಾಂಗ್ರೆಸ್ ಸದಸ್ಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಏಳು ವರ್ಷ ಪೂರೈಸಿದೆ ಎಂದು ದೇಶದಾದ್ಯಂತ ಆಚರಣೆಗಳು ನಡೆಯುತ್ತಿವೆ. ಆದರೆ, ದೇಶದ ಜನತೆಗೆ ಪ್ರಧಾನಿ ಮೋದಿ ಹಾಗೂ ಬಿಜೆಪಿ ಪಕ್ಷ ನೀಡಿದ ಭರವಸೆಗಳೆಲ್ಲ ಸುಳ್ಳಾಗಿವೆ ಎಂಬುದನ್ನು ಒಪ್ಪಿಕೊಳ್ಳಬೇಕು' ಎಂದು ಆಗ್ರಹಿಸಿ ಬೆಂಗಳೂರು ನಗರ ಕಾಂಗ್ರೆಸ್ ಪ್ರಚಾರ ಸಮಿತಿ ಸದಸ್ಯರು ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿ ಬಳಿ ಭಾನುವಾರ ಪ್ರತಿಭಟನೆ ನಡೆಸಿದರು.



ಕಾಂಗ್ರೆಸ್ ಪ್ರಚಾರ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಿದರು.

'ಮೋದಿಯ ಮೊದಲ ಐದು ವರ್ಷಗಳ ಆಡಳಿತ ಪ್ರಚಾರಕ್ಕೆ ಸೀಮಿತವಾಯಿತು. ಅವರ ದುರಾಡಳಿತದಿಂದ ದೇಶದಲ್ಲಿ ಕೊರೊನಾ ಎರಡನೇ ಅಲೆ ವ್ಯಾಪಿಸಿ, ಉದ್ಯೋಗ ಹಾಗೂ ಆಹಾರಕ್ಕಾಗಿ ಯುವ ಸಮುದಾಯ ಕೈಚಾಚುವ ಸ್ಥಿತಿ ನಿರ್ಮಾಣವಾಗಿದೆ. ಐದು ರಾಜ್ಯಗಳ ಚುನಾವಣೆಗಳಿಗೆ ಹೆಚ್ಚು ಆದ್ಯತೆ ನೀಡಿದ ಬಿಜೆಪಿ ಸರ್ಕಾರ, ದೇಶವನ್ನು ಕೊರೊನಾಗೆ ಬಲಿ ನೀಡಿದೆ' ಎಂದು ಕಾಂಗ್ರೆಸ್ ಮುಖಂಡ ಎಸ್.ಮನೋಹರ್ ಆರೋಪಿಸಿದರು.

'ಕಪ್ಪು ಹಣ ವಾಪಸ್ ತರಲಿಲ್ಲ. ತೈಲ ದರ ಇಳಿಕೆ ಮಾಡಲಿಲ್ಲ, ಪ್ರತಿಯೊಬ್ಬರ ಖಾತೆಗೆ ₹15 ಲಕ್ಷ ಜಮಾ ಆಗಲಿಲ್ಲ. ಜನರಿಗೆ ಇಷ್ಟು ಸುಳ್ಳು ಭರವಸೆ ನೀಡಿ ವಂಚಿಸಿದ ಪ್ರಧಾನಿ ಎಂದರೆ ಅದು ನರೇಂದ್ರ ಮೋದಿ. ಜನಪರ ಆಡಳಿತ ನಡೆಸಲು ವಿಫಲವಾಗಿರುವ ಮೋದಿ ರಾಜೀನಾಮೆ ನೀಡಿದರೆ ದೇಶಕ್ಕೆ ಉಳಿಗಾಲ' ಎಂದರು.

'ದಿಟ್ಟ ನಿಲುವಿನ ಶ್ರೇಷ್ಠ ವ್ಯಕ್ತಿ ದೊರೆಸ್ವಾಮಿ'

ಬೆಂಗಳೂರು: 'ಮಹಾತ್ಮ ಗಾಂಧಿ ಬಗ್ಗೆ ಗಾಢ ಭಕ್ತಿ ಹೊಂದಿದ್ದ, ಅವರ ವಿಚಾರಧಾರೆಗೆ ತಮ್ಮನ್ನು ಅರ್ಪಿಸಿಕೊಂಡಿದ್ದ ಸಾತ್ವಿಕ ವ್ಯಕ್ತಿ ಎಚ್.ಎಸ್.ದೊರೆಸ್ವಾಮಿ. ಅವರದ್ದು ಕಳಂಕರಹಿತವಾದ ಹೋರಾಟದ ಬದುಕು. ಅವರು ನಾಡುನುಡಿಯ ಜನಪರ ಚಿಂತಕರಾಗಿದ್ದರು' ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಗೊ.ರು. ಚನ್ನಬಸಪ್ಪ ತಿಳಿಸಿದರು.

ಭಾರತ ಯಾತ್ರಾ ಕೇಂದ್ರ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಹಾಗೂ ಗಾಂಧಿ ಪಾರ್ಕ್ ನಡಿಗೆದಾರರ ಕೂಟ– ಭಾರತ್ ನಗರ ಇವುಗಳ ಸಹಭಾಗಿತ್ವದಲ್ಲಿ ಭಾನುವಾರ ಆನ್‌ಲೈನ್ ಮೂಲಕ ಹಮ್ಮಿಕೊಂಡಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಚಿತ್ರಕಲಾ ಪರಿಷತ್‌ನ ಅಧ್ಯಕ್ಷ ಬಿ.ಎಲ್.ಶಂಕರ್, 'ದೊರೆಸ್ವಾಮಿ ಅವರು ಸ್ವಾರ್ಥ, ಕುಟುಂಬ ಹಾಗೂ ಭ್ರಷ್ಟ ರಾಜಕಾರಣವನ್ನು ಬಲವಾಗಿ ವಿರೋಧಿಸುತ್ತಿದ್ದರು. ನ್ಯಾಯ ಹಾಗೂ ಸತ್ಯದ ಪರವಾಗಿದ್ದರು' ಎಂದರು.

ಜೆಡಿಎಸ್ ಮುಖಂಡ ವೈ.ಎಸ್.ವಿ.ದತ್ತ 'ಎಲ್ಲ ರಾಜಕೀಯ ಪಕ್ಷದಲ್ಲಿರುವವರಿಗೆ ದೊರೆಸ್ವಾಮಿ ಅವರ ಬಗ್ಗೆ ಗೌರವ ಮಿಶ್ರಿತ ಭಯವಿತ್ತು. ಆ ಮಹಾನ್ ಚೇತನರ ಹೋರಾಟವನ್ನು ನಾವು ಮುಂದುವರಿಸಿಕೊಂಡು ಹೋಗಬೇಕು' ಎಂದು ಹೇಳಿದರು.

ಸಾಹಿತಿ ಎಸ್.ಜಿ.ಸಿದ್ದರಾಮಯ್ಯ, 'ನಿಜವಾದ ಅನಿಕೇತನ ಪ್ರಜ್ಞೆಯನ್ನು ದೊರೆಸ್ವಾಮಿ ಅವರಲ್ಲಿ ಕಂಡಿದ್ದೆ. ಬಡತನ ಮತ್ತು ಭ್ರಷ್ಟಾಚಾರ ಈ ದೇಶದ ಎರಡು ಶತ್ರುಗಳು ಎಂದು ಅವರು ಹೇಳುತ್ತಿದ್ದರು. ಅವರು ನೈತಿಕ ಶುದ್ಧತೆಯನ್ನು ಇಟ್ಟುಕೊಂಡು ಹೋರಾಟ ನಡೆಸಿದ ಜೀವ' ಎಂದು ಸ್ಮರಿಸಿದರು.

ನಟ 'ಮುಖ್ಯಮಂತ್ರಿ' ಚಂದ್ರು, 'ದೊರೆಸ್ವಾಮಿ ಅವರು ದಣಿವರಿಯದ ಹೋರಾಟಗಾರ. ಮೇಲ್ವರ್ಗದಲ್ಲಿ ಹುಟ್ಟಿದರೂ ದಮನಿತರ ಪರವಾಗಿ ಧ್ವನಿ ಎತ್ತುತ್ತಿದ್ದರು' ಎಂದರು.

ನಿರ್ದೇಶಕ ಬಿ.ಸುರೇಶ್, 'ಮಂಡೂರಿನಲ್ಲಿ ತ್ಯಾಜ್ಯ ಸುರಿಯುತ್ತಿರುವುದರ ವಿರುದ್ಧ ಸ್ಥಳೀಯರು ಹೋರಾಟಕ್ಕಿಳಿಯುವಂತೆ ಮಾಡಿದವರು ದೊರೆಸ್ವಾಮಿ. ಅವರ ಕುರಿತು 500– 600 ಪುಟದ ಸ್ಮರಣ ಗ್ರಂಥ ಹೊರತರಲು ಸಿದ್ಧತೆ ಆರಂಭವಾಗಿದೆ' ಎಂದು ಹೇಳಿದರು.

ರಂಗಕರ್ಮಿ ಶ್ರೀನಿವಾಸ ಕಪ್ಪಣ್ಣ 'ದೊರೆಸ್ವಾಮಿ ಯಾರ ಎದುರೂ ಕೈಚಾಚಿದವರಲ್ಲ. ತಮ್ಮ ವರ್ಚಸ್ಸು ಉಪಯೋಗಿಸಿ ಮಕ್ಕಳಿಗೆ ಏನೂ ಮಾಡಲಿಲ್ಲ' ಎಂದರು.

ದೊರೆಸ್ವಾಮಿ ಅವರ ಮಗ ರಾಜು ದೊರೆಸ್ವಾಮಿ, 'ಆಯಾ ದಿನ ಏನು ಸಿಗುತ್ತದೆಯೋ ಅದನ್ನು ತಿನ್ನಬೇಕು. ಹಣ ನಿನ್ನ ಪರಿಶ್ರಮದಿಂದ ಮಾತ್ರ ಬರಬೇಕು ಎಂದು ಅಪ್ಪ ಕಿವಿಮಾತು ಹೇಳುತ್ತಿದ್ದರು' ಎಂದು ತಿಳಿಸಿದರು.

ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, 'ದೊರೆಸ್ವಾಮಿ ಅಪರೂಪದ ಚೇತನ. ನಿಜವಾದ ಪ್ರಗತಿಪರ ಚಿಂತಕ. ಯಾರೇ ಒಳ್ಳೆಯ ಕೆಲಸ ಮಾಡಿದರೂ ಮೆಚ್ಚುವಂತಹ ಹೃದಯ ಶ್ರೀಮಂತಿಕೆ ಅವರಿಗಿತ್ತು' ಎಂದು ನುಡಿದರು.

ಗಾಂಧಿಭವನದ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಕೆ.ವಿ.ನಾಗರಾಜಮೂರ್ತಿ, ಕೆ.ಎಸ್.ನಾಗರಾಜ್, ನಾಗೇಶ್ ಬೆಟ್ಟಕೋಟೆ ಇದ್ದರು.

ಬಿಬಿಎಂಪಿ: ಎರಡು ತಿಂಗಳಲ್ಲಿ ₹1,194 ಕೋಟಿ ತೆರಿಗೆ ಸಂಗ್ರಹ

ಆಸ್ತಿ ತೆರಿಗೆ: ರಿಯಾಯಿತಿಗೆ ಇಂದೇ ಕೊನೆಯ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ಮಾಲೀಕರು 2021-22 ನೇ ಸಾಲಿನ ಆಸ್ತಿ ತೆರಿಗೆಯಲ್ಲಿ ಶೇ 5ರಷ್ಟು ರಿಯಾಯಿತಿ ಪಡೆಯಲು ಸೋಮವಾರ ಕೊನೆಯ ದಿನ.

ಸಾಮಾನ್ಯವಾಗಿ ಆರ್ಥಿಕ ವರ್ಷದಲ್ಲಿ ಏಪ್ರಿಲ್ ತಿಂಗಳ ಕೊನೆಯ ದಿನದೊಳಗೆ ಆಸ್ತಿ ತೆರಿಗೆ ಪಾವತಿಸಿದವರಿಗೆ ಮಾತ್ರ ಶೇ 5ರಷ್ಟು ರಿಯಾಯಿತಿ ನೀಡಲಾಗುತ್ತದೆ. ಕೋವಿಡ್ ನಿಯಂತ್ರಣಕ್ಕಾಗಿ ಸರ್ಕಾರ ಲಾಕ್‌ಡೌನ್ ಜಾರಿಗೊಳಿಸಿದ್ದರಿಂದ ಬಿಬಿಎಂಪಿಯು ಆಸ್ತಿ ತೆರಿಗೆಯಲ್ಲಿ ರಿಯಾಯಿತಿ ಪಡೆಯುವ ಅವಧಿಯನ್ನು ಮೇ 31ರವರೆಗೆ ವಿಸ್ತರಿಸಿತ್ತು.

2021-22ನೇ ಸಾಲಿನಲ್ಲಿ ಇದುವರೆಗೆ ₹1,194 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿದೆ. ಇದಲ್ಲದೇ, 12,151 ಮಂದಿ ಚಲನ್ ಪಡೆದುಕೊಂಡಿದ್ದು ಅದರಿಂದ ₹ 89.58 ಕೋಟಿ ತೆರಿಗೆ ಬರಲಿದೆ. 2019-20ರಲ್ಲಿ ಯಾವ ಬಿಕ್ಕಟ್ಟೂ ಇಲ್ಲದ ಸಂದರ್ಭದಲ್ಲಿ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ₹1,530 ಕೋಟಿ ತೆರಿಗೆ ಸಂಗ್ರಹವಾಗಿತ್ತು. ಅದಕ್ಕೆ ಹೋಲಿಸಿದರೆ ಕಳೆದ ವರ್ಷ ಹಾಗೂ ಈ ವರ್ಷ ಆಸ್ತಿ ತೆರಿಗೆ ಪಾವತಿಗೆ ರಿಯಾಯಿತಿ ಸೌಲಭ್ಯ ಇರುವ ಅವಧಿಯಲ್ಲಿ ತೆರಿಗೆ ಸಂಗ್ರಹ ಪ್ರಮಾಣ ತುಸು ಕಡಿಮೆ ಆಗಿದೆ.

ಈ ಬಾರಿಯೂ ಆನ್‌ಲೈನ್ ಮೂಲಕ ತೆರಿಗೆ ಪಾವತಿಸಿದವರ ಸಂಖ್ಯೆಯೇ ಜಾಸ್ತಿ ಇದೆ. ಲಾಕ್‌ಡೌನ್ ಅವಧಿಯಲ್ಲಿ ಚಲನ್ ಪಡೆದು ಬ್ಯಾಂಕ್‌ಗಳ ಮೂಲಕ ತೆರಿಗೆ ಪಾವತಿಸುವುದಕ್ಕೆ ಅವಕಾಶವಿತ್ತು. ಆದರೆ, ಬ್ಯಾಂಕ್ ಚಲನ್ ಮೂಲಕ ತೆರಿಗೆ ಪಾವತಿಯಾಗಿರುವ ಪ್ರಮಾಣ ಕಡಿಮೆ ಇದೆ.

'ಸೋಮವಾರ ರಾತ್ರಿ 12 ಗಂಟೆ ಒಳಗೆ ಆಸ್ತಿ ತೆರಿಗೆ ಪಾವತಿಸಿದ ಎಲ್ಲರಿಗೂ ಶೇ 5ರಷ್ಟು ರಿಯಾಯಿತಿ ಸಿಗಲಿದೆ. ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಕಂದಾಯ) ಎಸ್.ಬಸವರಾಜು 'ಪ್ರಜಾವಾಣಿ'ಗೆ ತಿಳಿಸಿದರು.

ಮತ್ತೆ ಅವಧಿ ವಿಸ್ತರಣೆಗೆ ಒತ್ತಾಯ: ನಗರದಲ್ಲಿ ಲಾಕ್‌ಡೌನ್ ಜಾರಿಯಲ್ಲಿರುವುದರಿಂದ ಬಹಳಷ್ಟು ಮಂದಿಗೆ ಆಸ್ತಿ ತೆರಿಗೆ ಪಾವತಿಸಲು ಸಾಧ್ಯವಾಗಿಲ್ಲ. ಹಾಗಾಗಿ ರಿಯಾಯಿತಿಯ ಅವಧಿಯನ್ನು ಇನ್ನೂ ಒಂದು ತಿಂಗಳ ಕಾಲ ವಿಸ್ತರಿಸಬೇಕು ಎಂಬ ಬೇಡಿಕೆಯೂ ಸಾರ್ವಜನಿಕರಿಂದ ವ್ಯಕ್ತವಾಗಿದೆ. ರಿಯಾಯಿತಿಯ ಅವಧಿಯನ್ನು ಈಗಾಗಲೇ ಒಂದು ತಿಂಗಳು ವಿಸ್ತರಿಸಿರುವ ಬಿಬಿಎಂಪಿ ಮತ್ತೆ ಅವಧಿ ವಿಸ್ತರಣೆ ಮಾಡುವ ಬಗ್ಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ.

'ಲಾಕ್‌ಡೌನ್ ನಡುವೆಯೂ ₹ 1 ಸಾವಿರ ಕೋಟಿಗೂ ಅಧಿಕ ತೆರಿಗೆ ಸಂಗ್ರಹವಾಗಿರುವುದು ಉತ್ತಮ ಬೆಳವಣಿಗೆ ಎಂದೇ ಹೇಳಬಹುದು. ಲಕ್ಷಗಟ್ಟಲೆ ಆಸ್ತಿ ತೆರಿಗೆ ಪಾವತಿಸುವವರು, ತಂತ್ರಜ್ಞಾನ ಬಳಕೆ ಬಗ್ಗೆ ಅರಿವು ಇರುವವರು ಆನ್‌ಲೈನ್ ಮೂಲಕ ಕಟ್ಟಿದ್ದಾರೆ. ಬ್ಯಾಂಕ್‌ಗೆ ಹೋಗಿ ತೆರಿಗೆ ಕಟ್ಟಲು ಅನೇಕ ಮಂದಿಗೆ ಸಾಧ್ಯವಾಗಿಲ್ಲ. ತೆರಿಗೆಯಲ್ಲಿ ರಿಯಾಯಿತಿ ಅವಧಿಯನ್ನು ಇನ್ನೂ ಒಂದು ತಿಂಗಳು ವಿಸ್ತರಿಸಿದರೆ ಅನೇಕ ಮಂದಿಗೆ ಅನುಕೂಲವಾಗಲಿದೆ. ಬಿಬಿಎಂಪಿ ಹೊರತಾಗಿ ರಾಜ್ಯದ ಇತರ ಪೌರಾಡಳಿತ ಸಂಸ್ಥೆಗಳಲ್ಲಿ 2020-21ನೇ ಸಾಲಿನಲ್ಲಿ ಜುಲೈ 31ರವರೆಗೂ ಆಸ್ತಿ ತೆರಿಗೆ ರಿಯಾಯಿತಿಯ ಅವಧಿಯನ್ನು ವಿಸ್ತರಿಸಲಾಗಿತ್ತು. ಈ ಬಗ್ಗೆ ಬಿಬಿಎಂಪಿ ಆಡಳಿತವು ಸರ್ಕಾರದ ಅನುಮತಿ ಪಡೆದು ಈ ಬಗ್ಗೆ ತೀರ್ಮಾನ ಕೈಗೊಳ್ಳಬಹುದು' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

ಹಳೆ ಬಾಕಿ: ಬಡ್ಡಿ ದರ ಇಳಿಕೆ

'ಇದುವರೆಗೆ ಆಸ್ತಿ ತೆರಿಗೆಯ ಹಳೆ ಬಾಕಿಗೆ ತಿಂಗಳಿಗೆ ಶೇ 2ರಂತೆ ವರ್ಷಕ್ಕೆ ಶೇ 24ರಷ್ಟು ಬಡ್ಡಿ ವಿಧಿಸಲಾಗುತ್ತಿತ್ತು. 2020ರ ಬಿಬಿಎಂಪಿ ಕಾಯ್ದೆ ಜಾರಿಯಾದ ಬಳಿಕ ದಂಡನಾ ಬಡ್ಡಿಯ ಪ್ರಮಾಣವನ್ನು ವಾರ್ಷಿಕ ಶೇ 9ಕ್ಕೆ ಇಳಿಕೆ ಮಾಡಲಾಗಿದೆ. ಬಿಬಿಎಂಪಿಯ ತೆರಿಗೆ ಪಾವತಿ ತಂತ್ರಾಂಶದಲ್ಲೂ ಇದಕ್ಕೆ ಪೂರಕವಾಗಿ ಮಾರ್ಪಾಡು ಮಾಡಲಾಗಿದೆ. ಅನೇಕ ವರ್ಷಗಳಿಂದ ತೆರಿಗೆ ಬಾಕಿ ಉಳಿಸಿಕೊಂಡಿರುವವರು ಈ ಸವಲತ್ತನ್ನು ಬಳಸಿಕೊಳ್ಳಬೇಕು' ಎಂದು ವಿಶೇಷ ಆಯುಕ್ತ ಎಸ್.ಬಸವರಾಜು ಅವರು ಕೋರಿದರು.

ಅಂಕಿ-ಅಂಶಗಳು

₹668.87 ಕೋಟಿ ಆನ್‌ಲೈನ್ ಮೂಲಕ ಪಾವತಿಯಾಗಿರುವ ತೆರಿಗೆ

₹525.49 ಕೋಟಿ ಬ್ಯಾಂಕ್ ಚಲನ್ ಮೂಲಕ ಪಾವತಿಯಾಗಿರುವ ತೆರಿಗೆ



ಲಸಿಕೆ 'ಕ್ಲಿನಿಕ್ ಸಂಸ್ಥೆ' ಜಯನಗರದ ಶಾಲಿನಿ ಮೈದಾನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕೋವಿಡ್ ಲಸಿಕೆ ಕಾರ್ಯಕ್ರಮದಲ್ಲಿ ಲಸಿಕೆ ಹಾಕಿಸಿಕೊಂಡ ಆಟೊ ಚಾಲಕರು -ಪ್ರಜಾವಾಣಿ ಚಿತ್ರ

ಚೆಕ್‌ಪೋಸ್ಟ್ ಮೇಲೆ ಉರುಳಿದ ರೆಂಬೆ

ಬೆಂಗಳೂರು: ತಾತ್ಕಾಲಿಕ ಚೆಕ್‌ಪೋಸ್ಟ್ ಮೇಲೆ ಮರದ ರೆಂಬೆ ಉರುಳಿದ ಪರಿಣಾಮ ಪೊಲೀಸ್ ಸಿಬ್ಬಂದಿ ಗಾಯಗೊಂಡಿರುವ ಘಟನೆ ನೈಸ್ ರಸ್ತೆಯ ಬಳಿ ಭಾನುವಾರ ನಡೆದಿದೆ.

ಲಾಕ್‌ಡೌನ್ ಇರುವುದರಿಂದ ನೈಸ್ ರಸ್ತೆಯಲ್ಲಿರುವ ಮಾವಿನ ಮರದ ಕೆಳಗೆ ಚೆಕ್‌ಪೋಸ್ಟ್‌ವೊಂದನ್ನು ತಾತ್ಕಾಲಿಕವಾಗಿ ತೆರೆಯಲಾಗಿತ್ತು. ಗಾಳಿಯ ರಭಸಕ್ಕೆ ಮರದ ರೆಂಬೆಯೊಂದು ಚೆಕ್‌ಪೋಸ್ಟ್ ಮೇಲೆ ಬಿದ್ದಿದೆ.

'ಈ ವೇಳೆ ಗೃಹರಕ್ಷಕ ಸಿಬ್ಬಂದಿ ಮಹೇಶ್ ಎಂಬುವವರಿಗೆ ಸಣ್ಣಪುಟ್ಟ ಗಾಯಗಳಾಗಿವೆ' ಎಂದು ಪೊಲೀಸರು ತಿಳಿಸಿದರು.

ಬೆಂಗಳೂರು ಉತ್ತರ ವಿ.ವಿ ಘೋಷಣೆ

ಕೋವಿಡ್: ಪೋಷಕರನ್ನು ಕಳೆದುಕೊಂಡವರಿಗೆ ಉಚಿತ ಸೀಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ಗೆ ತುತ್ತಾಗಿ ಪೋಷಕರನ್ನು ಕಳೆದುಕೊಂಡಿರುವ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಕೋರ್ಸ್‌ಗಳಿಗೆ ಉಚಿತ ಸೀಟು ನೀಡುವುದಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಘೋಷಿಸಿದೆ.

ಈ ಸೌಲಭ್ಯ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆಯಲ್ಲಿ ಸಿಗಲಿದೆ. ಒಂದು ವೇಳೆ ಸೀಟುಗಳು ಭರ್ತಿಯಾಗದೆ ಉಳಿದರೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ನಗರ ವಿಶ್ವವಿದ್ಯಾಲಯ ಹಾಗೂ ಇನ್ನಿತರ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳೂ ಉಚಿತ ಸೀಟು ಪಡೆಯಬಹುದು.

ಬೆಂಗಳೂರು ವಿಶ್ವವಿದ್ಯಾಲಯದಿಂದ ವಿಭಜನೆಗೊಂಡ ನಂತರ ಉತ್ತರ ವಿಶ್ವವಿದ್ಯಾಲಯವು ಪ್ರಸ್ತುತ ಶೈಕ್ಷಣಿಕ ವರ್ಷಕ್ಕೆ ಸ್ನಾತಕೋತ್ತರ ಪದವಿಯ 22 ಕೋರ್ಸ್‌ಗಳಿಗೆ ಪ್ರವೇಶಾತಿ ಆರಂಭಿಸಿದೆ. ಈ ಸಂಬಂಧ ವಿಶ್ವವಿದ್ಯಾಲಯವು ಈಗಾಗಲೇ ತನ್ನ ಎಲ್ಲ ಸಂಯೋಜಿತ ಕಾಲೇಜುಗಳಿಗೆ ಈ ಪ್ರಕಟಣೆ ಹೊರಡಿಸಿದೆ.

'ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಳ್ಳುತ್ತಿರುವ ವಿದ್ಯಾರ್ಥಿಗಳನ್ನು ಮನಗಂಡು ವಿಶ್ವವಿದ್ಯಾಲಯ ಈ ನಿರ್ಧಾರ ಕೈಗೊಂಡಿದೆ. ಪೋಷಕರು ಅಥವಾ ಕುಟುಂಬಕ್ಕೆ ಆಧಾರವಾಗಿದ್ದವರು ಕೋವಿಡ್‌ನಿಂದ ಮೃತಪಟ್ಟಿದ್ದರೆ, ಅವರಿಗೆ ಸ್ನಾತಕೋತ್ತರ ಪದವಿಗೆ ಉಚಿತವಾಗಿ ಸೀಟು ನೀಡಲಿದ್ದೇವೆ' ಎಂದು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಟಿ.ಡಿ.ಕೆಂಪರಾಜು 'ಪ್ರಜಾವಾಣಿ'ಗೆ ತಿಳಿಸಿದರು.

ಇನ್‌ಸೈಟ್‌ನಿಂದಲೂ ಉಚಿತ ಶಿಕ್ಷಣ: ನಗರದಲ್ಲಿ ಹಲವು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಇನ್‌ಸೈಟ್ ಅಕಾಡೆಮಿಯೂ ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡ ತನ್ನ ಸಂಸ್ಥೆಯ ವಿದ್ಯಾರ್ಥಿಗಳಿಗೆ 10ನೇ ತರಗತಿವರೆಗೆ ಉಚಿತ ಶಿಕ್ಷಣ ನೀಡುವುದಾಗಿ ಪ್ರಕಟಿಸಿದೆ. ಬೇರೆ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೂ ಇನ್‌ಸೈಟ್ ಸಂಸ್ಥೆಗಳಲ್ಲಿ ಉಚಿತ ಶಿಕ್ಷಣ ನೀಡುವುದಾಗಿ ಹೇಳಿದೆ.



ಲಾಕ್‌ಡೌನ್‌ನಿಂದಾಗಿ ನಗರದಲ್ಲಿ ವಾಹನಗಳ ಸಂಚಾರ ಕಡಿಮೆಯಾಗಿದ್ದು ಎಮ್ಮೆಗಳು ರಸ್ತೆಯಲ್ಲಿ ಸಾಗುತ್ತಿದ್ದ ದೃಶ್ಯ ನಾಗರಬಾವಿ ವೃತ್ತದಲ್ಲಿ ಭಾನುವಾರ ಕಂಡುಬಂತು. ಸಂಚಾರ ಪೊಲೀಸರು ಇವುಗಳನ್ನು ಓಡಿಸಲು ಪ್ರಯತ್ನಿಸಿದರು – ಪ್ರಜಾವಾಣಿ ಚಿತ್ರ

ತಂಬಾಕು ಸಂಬಂಧಿ ಕ್ಯಾನ್ಸರ್: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಹೇಳಿಕೆ

ಲಕ್ಷ ಪುರುಷರಲ್ಲಿ 40 ಮಂದಿಗೆ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಸಂಖ್ಯೆ ಆಧಾರಿತ ಕ್ಯಾನ್ಸರ್ ನೋಂದಣಿ ಪ್ರಕಾರ ನಗರದಲ್ಲಿ ಒಂದು ಲಕ್ಷ ಪುರುಷರಲ್ಲಿ 40 ಮಂದಿ ಹಾಗೂ ಒಂದು ಲಕ್ಷ ಮಹಿಳೆಯರಲ್ಲಿ 20 ಮಂದಿ ತಂಬಾಕು ಸಂಬಂಧಿ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ತಿಳಿಸಿದೆ.

ಧೂಮಪಾನ ಹಾಗೂ ತಂಬಾಕು ಉತ್ಪನ್ನಗಳ ಸೇವನೆಯಿಂದ ಕ್ಯಾನ್ಸರ್, ಶ್ವಾಸಕೋಶದ ಸಮಸ್ಯೆ ಸೇರಿದಂತೆ ವಿವಿಧ ಕಾಯಿಲೆಗಳು ಕಾಣಿಸಿಕೊಳ್ಳಲಿವೆ. ತಂಬಾಕು ಬಳಕೆಯಲ್ಲಿ ದೇಶವು ಎರಡನೇ ಅತಿ ದೊಡ್ಡ ದೇಶ. ಒಟ್ಟಾರೆ ಜನಸಂಖ್ಯೆಯಲ್ಲಿ ಶೇ 48ರಷ್ಟು ಪುರುಷರು ಹಾಗೂ ಶೇ 20 ರಷ್ಟು ಮಹಿಳೆಯರು ತಂಬಾಕು ಉತ್ಪನ್ನಗಳನ್ನು ಬಳಸುತ್ತಿದ್ದಾರೆ. ಇದು ದೇಹದ ವಿವಿಧ ಅಂಗಾಂಗಗಳ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಬೀರುತ್ತದೆ. ಪ್ರತಿ ವರ್ಷ ಕ್ಯಾನ್ಸರ್ ಕಾಯಿಲೆಗೆ ಸಂಬಂಧಿಸಿದಂತೆ ಕಿದ್ವಾಯಿಯಲ್ಲಿ 3 ಸಾವಿರಕ್ಕೂ ಅಧಿಕ ಪ್ರಕರಣಗಳು ವರದಿಯಾಗುತ್ತಿವೆ ಎಂದು ಸಂಸ್ಥೆ ಹೇಳಿದೆ.

ಜೀವಕ್ಕೆ ಕುತ್ತು: 'ಹೆಚ್ಚಿನವರು ರೋಗ ಉಲ್ಬಣಗೊಂಡ ಬಳಿಕ ಸಂಸ್ಥೆಗೆ ಚಿಕಿತ್ಸೆಗಾಗಿ ಬರುತ್ತಾರೆ. ಕ್ಯಾನ್ಸರ್ ಇರುವುದನ್ನು ಪ್ರಾಥಮಿಕ ಹಂತದಲ್ಲಿಯೇ ಪತ್ತೆಯಾದರೆ ಅಗತ್ಯ ಚಿಕಿತ್ಸೆ ನೀಡಿ, ಗುಣಪಡಿಸಬಹುದು. ತಂಬಾಕು ಸೇವನೆಯಿಂದ ಬರುವ ಕ್ಯಾನ್ಸರ್ ನಿಯಂತ್ರಣಕ್ಕಾಗಿ ಕಾರ್ಯನೀತಿಗಳು ಹಾಗೂ ಕಾರ್ಯತಂತ್ರವನ್ನು ರೂಪಿಸಬೇಕಾಗಿದೆ. ತೆರಿಗೆ ವಿಧಿಸುವುದು, ಜಾಹೀರಾತು ನಿಷೇಧ ಸೇರಿದಂತೆ ವಿವಿಧ ಕ್ರಮಗಳನ್ನು ಕೈಗೊಂಡರೆ ಮಾತ್ರ ತಕ್ಕಮಟ್ಟಿಗೆ ನಿಯಂತ್ರಣಕ್ಕೆ ತರಬಹುದು' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದರು.

'ಕೊರೊನಾ ಸೋಂಕು ಕಾಡುತ್ತಿರುವ ಈ ಸಂದರ್ಭದಲ್ಲಿ ಧೂಮಪಾನ ಮತ್ತು ತಂಬಾಕು ಸೇವಿಸುವವರ ಜೀವಕ್ಕೇ ಕುತ್ತು ಉಂಟಾಗುವ ಸಾಧ್ಯತೆಗಳಿವೆ. ಹಾಗಾಗಿ, ತಂಬಾಕು ಉತ್ಪನ್ನಗಳನ್ನು ತ್ಯಜಿಸಿ, ಆರೋಗ್ಯಕಾರಿ ಜೀವನ ವಿಧಾನ ಅಳವಡಿಸಿಕೊಳ್ಳಬೇಕು. ಶ್ವಾಸಕೋಶದ ಸಮಸ್ಯೆ ಅಥವಾ ತೀವ್ರ ಉಸಿರಾಟದ ತೊಂದರೆ ಇರುವ ರೋಗಿಗಳಿಗೆ ಕೋವಿಡ್ ಪರೀಕ್ಷೆ ಅತ್ಯಗತ್ಯ' ಎಂದು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.





ಮತ್ತೆ ಇಬ್ಬರು ಮಕ್ಕಳಿಗೆ ಕಪ್ಪು ಶಿಲೀಂಧ್ರ ಸೋಂಕು



ಬೆಂಗಳೂರು: ನಗರದಲ್ಲಿ ಮತ್ತೆ ಇಬ್ಬರು ಮಕ್ಕಳಿಗೆ ಕಪ್ಪು ಶಿಲೀಂಧ್ರ ಸೋಂಕು ತಗುಲಿರುವುದು ದೃಢಪಟ್ಟಿದ್ದು, ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಬಳ್ಳಾರಿಯ 11 ವರ್ಷದ ಬಾಲಕಿ ಹಾಗೂ ಚಿತ್ರದುರ್ಗದ 14 ವರ್ಷದ ಬಾಲಕ ಸೋಂಕಿಗೆ ಒಳಗಾದವರಾಗಿದ್ದಾರೆ. ಈಗಾಗಲೇ ಬೌರಿಂಗ್ ಆಸ್ಪತ್ರೆಯಲ್ಲಿ ಮೈಸೂರಿನ 11 ವರ್ಷದ ಬಾಲಕನಿಗೆ ಚಿಕಿತ್ಸೆ ನೀಡಲಾಗುತ್ತಿದೆ.

'ಇಬ್ಬರು ಮಕ್ಕಳಿಗೂ ಕೊರೊನಾ ಸೋಂಕು ತಗುಲಿರುವುದು ತಿಳಿದಿರಲಿಲ್ಲ, ಆಂಟಿಬಾಡಿ ಪರೀಕ್ಷೆ ಮಾಡಿದಾಗ ಇಬ್ಬರಿಗೂ ಸೋಂಕು ತಗುಲಿ, ಕೋವಿಡ್ ಕಾಯಿಲೆ ವಾಸಿಯಾಗಿರುವುದು ಖಚಿತಪಟ್ಟಿದೆ. ಇಬ್ಬರೂ ತೀವ್ರತರದ ಮಧುಮೇಹದಿಂದ ಬಳಲುತ್ತಿದ್ದು, ಗಂಭೀರವಾಗಿ ಅಸ್ವಸ್ಥರಾಗಿದ್ದಾರೆ. ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಬೌರಿಂಗ್ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ರಾತ್ರೋರಾತ್ರಿ ಒಕ್ಕಲೆಬ್ಬಿಸಿದ ಪೊಲೀಸರು: ಬಲೂನು ವ್ಯಾಪಾರಿಗಳ ಅಳಲು ಆಲಿಸುವವರೇ ಇಲ್ಲ

ನೆಲೆಗಾಗಿ ವಲಸಿಗರ ಅಲೆದಾಟ

■ ಜಿ.ಶಿವಕುಮಾರ



ದೋಬಿಘಾಟ್ ಬಳಿಯ ಮೇಲ್ಸೇತುವೆ ಕೆಳಗೆ ವಾಸವಿರುವ ವಲಸೆ ಕಾರ್ಮಿಕರು

ಪ್ರಜಾವಾಣಿ ವಿಶೇಷ

ಬೆಂಗಳೂರು: ಅವರೆಲ್ಲ ಮಧ್ಯಪ್ರದೇಶದವರು. ಸುಮಾರು 12 ವರ್ಷಗಳಿಂದ ಮಾಗಡಿ ರಸ್ತೆ ಟೋಲ್‌ಗೇಟ್ ಸಮೀಪದ ಶನೀಶ್ವರ ದೇವಾಲಯದ ಸುತ್ತಮುತ್ತ ಟೆಂಟ್‌ಗಳಲ್ಲಿ ವಾಸಿಸುತ್ತಿದ್ದರು.

ಲಾಕ್‌ಡೌನ್ ಕಾರಣ ಬದುಕಿಗೆ ಆಧಾರವಾಗಿದ್ದ ಬಲೂನು ವ್ಯಾಪಾರ ನಿಂತಿದ್ದರೂ ದಾನಿಗಳು ನೀಡಿದ ದಿನಸಿ ಕಿಟ್ ಹಾಗೂ ಆಹಾರದ ಪೊಟ್ಟಣಗಳನ್ನು ಪಡೆದು ಹೇಗೋ ಬದುಕು ಸಾಗಿಸುತ್ತಿದ್ದರು. ಇತ್ತೀಚೆಗೆ ರಾತ್ರೋರಾತ್ರಿ ಅವರ ಬಿಡಾರಗಳ ಮೇಲೆ ದಾಳಿ ನಡೆಸಿದ ಪೊಲೀಸರು ಸುಮಾರು 15 ಕುಟುಂಬವನ್ನು ಅಲ್ಲಿಂದ ಹೊರ ಹಾಕಿದ್ದಾರೆ.

ಇವರೆಲ್ಲಾ ಈಗ ದೋಬಿ ಘಾಟ್ ಸಿಗ್ನಲ್ ಸಮೀಪದ ಮೇಲ್ಸೇತುವೆ ಕೆಳಗಡೆ ಆಶ್ರಯ ಪಡೆದಿದ್ದಾರೆ. ಇಲ್ಲಿಂದಲೂ ಜಾಗ ಖಾಲಿ ಮಾಡುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಅಧಿಕಾರಿಗಳು ಸೂಚಿಸಿದ್ದಾರೆ. ಎಲ್ಲಾದರೂ ಹೋಗಿ, 15 ದಿನ ನಮ್ಮ ಕಣ್ಣಿಗೆ ಕಾಣಿಸಿಕೊಳ್ಳಬೇಡಿ ಎಂದು ತಾಕೀತು ಮಾಡಿದ್ದಾರೆ. ಒಂದೆಡೆ ಕೊರೊನಾ ಹರಡುವ ಭೀತಿ ಕಾಡುತ್ತಿದೆ. ಊರಿಗೆ ಹೋಗೋಣವೆಂದರೆ ಬಸ್‌ಗಳೂ ಇಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಎಲ್ಲಿಗೆ ಹೋಗಬೇಕು? ಅಧಿಕಾರಿಗಳು ಹೀಗೆ ದರ್ಪ ತೋರಿದರೆ ನಮ್ಮಂತಹವರು ಬದುಕುವುದು ಹೇಗೆ? ನಾವೇನು ಅಪರಾಧ ಮಾಡಿದ್ದೇವೆ? ನಮಗೇಕೆ ಈ ಶಿಕ್ಷೆ?' ಎಂದು ಪ್ರಶ್ನಿಸಿದ್ದಾರೆ.

'ಇಷ್ಟು ವರ್ಷ ನೆಮ್ಮದಿಯಿಂದ ಜೀವನ ನಡೆಸುತ್ತಿದ್ದೆವು. ಪೊಲೀಸರು ಟೆಂಟ್‌ಗಳನ್ನು ಖಾಲಿ ಮಾಡುವಂತೆ ಸೂಚಿಸಿದರು. ಇಲ್ಲಿದ್ದರೆ ಮಹಿಳೆಯರನ್ನು [illegible] ಜೈಲಿಗೆ ಹಾಕುತ್ತೇವೆ ಎಂದು ಬೆದರಿಸಿದರು. ಹೀಗಾಗಿ ಚಿಕ್ಕ ಮಕ್ಕಳನ್ನು ಕರೆದುಕೊಂಡು ರಾತ್ರೋರಾತ್ರಿ ದೋಬಿಘಾಟ್‌ಗೆ ಬಂದೆವು. ಟೋಲ್‌ಗೇಟ್ ಸಮೀಪ ನಮಗೆ ಎಲ್ಲ ಸೌಕರ್ಯವಿತ್ತು. ಶೌಚಾಲಯ, ಸ್ನಾನಕ್ಕೆ ಯಾವ ಸಮಸ್ಯೆಯೂ ಇರಲಿಲ್ಲ. ಕೆಲವರು ನಾವಿರುವ ಜಾಗಕ್ಕೇ ಬಂದು ಆಹಾರದ ಪೊಟ್ಟಣ ಹಾಗೂ ದಿನಸಿ ಕಿಟ್ ನೀಡುತ್ತಿದ್ದರು. ಆದರೆ, ಇಲ್ಲಿ ಯಾವ ಸೌಲಭ್ಯವೂ ಇಲ್ಲ' ಎಂದು ಮಹೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಮ್ಮ ಬಳಿ ಆಧಾರ್ ಗುರುತಿನ ಚೀಟಿ ಇದೆ. ಇದರಲ್ಲಿ ಹಿಂದೆ ವಾಸ ಮಾಡುತ್ತಿದ್ದ ಸ್ಥಳದ ವಿಳಾಸವನ್ನೇ ನಮೂದಿಸಲಾಗಿದೆ. ನಮ್ಮ ಕೆಲ ಮಕ್ಕಳು ಮಕ್ಕಳ ಕಲ್ಯಾಣ ಸಮಿತಿಯಲ್ಲಿದ್ದಾರೆ. ಅವರನ್ನು ಬಿಟ್ಟು ಊರಿಗೆ ಹೋಗುವುದು ಹೇಗೆ' ಎಂದು ಪ್ರಶ್ನಿಸಿದರು.

'ಟೋಲ್‌ಗೇಟ್ ಬಳಿ ನಮಗೆ ಸೂರು ಇತ್ತು. ಆದರೆ ಇಲ್ಲಿ ಬಯಲಲ್ಲೇ ಬದುಕಬೇಕಿದೆ. ಸಣ್ಣ ಮಕ್ಕಳು ಮಳೆ, ಗಾಳಿ, ಬಿಸಿಲಿನಿಂದ ನಲುಗುತ್ತಿದ್ದಾರೆ. ಹೆಣ್ಣು ಮಕ್ಕಳು ಬಯಲಲ್ಲೇ ಮಲ, ಮೂತ್ರ ವಿಸರ್ಜಿಸಬೇಕಾಗಿದೆ. ಇದರಿಂದ ತುಂಬಾ ಮುಜುಗರ ಅನುಭವಿಸಬೇಕಾಗಿದೆ' ಎಂದು ಶೀಲಾ ಅಳಲು ತೋಡಿಕೊಂಡರು.

'ಚಿಕ್ಕ ಮಕ್ಕಳ ಜೊತೆ ವಯಸ್ಸಾದವರೂ ಇದ್ದಾರೆ. ಅವರನ್ನೆಲ್ಲಾ ಕರೆದುಕೊಂಡು ಎಲ್ಲಿಗೆ ಹೋಗಬೇಕು ಎಂದೇ ಗೊತ್ತಾಗುತ್ತಿಲ್ಲ. ಪೊಲೀಸರು ಭಿಕ್ಷುಕರ ಕಾಲೋನಿಗೆ ಕಳುಹಿಸುವುದಾಗಿ ಹೇಳುತ್ತಿದ್ದಾರೆ. ಅಲ್ಲಿ ಹೋದ ಮೇಲೆ ಕೊರೊನಾ ಸೋಂಕು ತಗುಲಿದರೆ ಏನು ಮಾಡಬೇಕು. ಚಿಕಿತ್ಸೆಗೆ ಹಣ ಎಲ್ಲಿಂದ ತರಬೇಕು. ಸರ್ಕಾರವು ಮಾನವೀಯ ದೃಷ್ಟಿಯಿಂದ ನಮಗೆ ತಾತ್ಕಾಲಿಕ ವಸತಿ ವ್ಯವಸ್ಥೆ ಮಾಡಿ ಅಗತ್ಯ ದಿನಸಿ ಕಿಟ್ ನೀಡಿದರೆ ಹೇಗೋ ಬದುಕುತ್ತೇವೆ' ಎಂದು ಆರ್ಯನ್ ಮನವಿ ಮಾಡಿದರು.

ಸುದ್ದಿ 2 ನಿಮಿಷ

'ಸಾವಿನ ಸಂಖ್ಯೆ ಮುಚ್ಚಿಡುತ್ತಿರುವ ಸರ್ಕಾರ'

ಹುಬ್ಬಳ್ಳಿ: 'ಕರ್ನಾಟಕದಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಲೆಕ್ಕವನ್ನು ಮುಚ್ಚಿಡಲಾಗುತ್ತಿದೆ. 100 ಮಂದಿ ಸತ್ತರೆ, ಸರ್ಕಾರ 40 ಎಂದು ತೋರಿಸುತ್ತಿದೆ. ರಾಜಸ್ಥಾನ ಸರ್ಕಾರ ಮಾದರಿಯಲ್ಲಿ, ರಾಜ್ಯದಲ್ಲೂ ಸಾವಿನ ಸಂಖ್ಯೆ ಕುರಿತು ಸಮೀಕ್ಷೆ ನಡೆಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭಾನುವಾರ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಅತಿ ಹೆಚ್ಚು ಕೋವಿಡ್ ಸಾವುಗಳು ಸಂಭವಿಸಿವೆ. ಇದು ನೋವಿನ ಸಂಗತಿ. ಸರ್ಕಾರ ಮೃತರ ಅಂತ್ಯಸಂಸ್ಕಾರವನ್ನೂ ಗೌರವಯುತವಾಗಿ ನಡೆಸಲಿಲ್ಲ, ಪರಿಹಾರವನ್ನೂ ನೀಡಲಿಲ್ಲ' ಎಂದರು.

'ಲಸಿಕೆ ಖರೀದಿಸುವ ಸರ್ಕಾರ ಅದನ್ನು ಖಾಸಗಿಯವರಿಗೆ ಕೊಡುತ್ತಿದೆ. ಸಂಸದ ತೇಜಸ್ವಿ ಸೂರ್ಯ, ಶಾಸಕ ರವಿ ಸುಬ್ರಮಣ್ಯ ಅವರಂತವರು ಹಣಕ್ಕಾಗಿ ಸರ್ಕಾರಿ ಆಸ್ಪತ್ರೆ ಲಸಿಕೆಯನ್ನು ಖಾಸಗಿಯವರಿಗೆ ಮಾರಾಟ ಮಾಡುತ್ತಿದ್ದಾರೆ. ಹೀಗಾದರೆ, ಜನ ಸೋಂಕಿನಿಂದ ಸಾಯದೆ ಇರುತ್ತಾರೆಯೇ?' ಎಂದು ಬೇಸರ ವ್ಯಕ್ತಪಡಿಸಿದರು.

ಆಹಾರ ಧಾನ್ಯ ಕಿಟ್ ವಿತರಣೆ



ಕೆ.ಆರ್.ಪುರ: 'ಕೇಂದ್ರ ಸರ್ಕಾರ ಜನಪರವಾಗಿ ಕೆಲಸ ನಿರ್ವಹಿಸುವ ಮೂಲಕ ಜನರ ಮೆಚ್ಚುಗೆಗೆ ಪಾತ್ರವಾಗಿದೆ' ಎಂದು ಸಂಸದ ಪಿ.ಸಿ.ಮೋಹನ್ ಹೇಳಿದರು.

ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ 7 ವರ್ಷ ಪೂರೈಸಿರುವುದರಿಂದ ಸರ್ವಜ್ಞನಗರ ಕ್ಷೇತ್ರದ ಕಾಚರಕನಹಳ್ಳಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಆಮ್ಲಜನಕ ಸಾಂದ್ರಕ, ದಿನಸಿ ಕಿಟ್ ಹಾಗೂ ಆಟೋ ಮತ್ತು ಟ್ಯಾಕ್ಸಿ ಚಾಲಕರಿಗೆ ಧನ ಸಹಾಯ ವಿತರಿಸಿ ಮಾತನಾಡಿದರು.

ಪಾಲಿಕೆಯ ಮಾಜಿ ಸದಸ್ಯ ಪದ್ಮನಾಭರೆಡ್ಡಿ ಮಾತನಾಡಿ, 'ಕೊರೊನಾ ಸಂಕಷ್ಟದ ಸಮಯದಲ್ಲಿ ಬಡವರಿಗೆ ಯಾವುದೇ ರೀತಿಯ ಆದಾಯವಿಲ್ಲದೆ ಕಷ್ಟ ಅನುಭವಿಸುತ್ತಿದ್ದಾರೆ. ಸಂಕಷ್ಟ ಎದುರಿಸುತ್ತಿರುವ ಬಡವರಿಗೆ ಆಹಾರ ಧಾನ್ಯಗಳ ಕಿಟ್, ಐದು ಆಮ್ಲಜನಕ ಸಾಂದ್ರಕ ಹಾಗೂ ಚಾಲಕರಿಗೆ ಧನ ಸಹಾಯ ನೀಡಲಾಗಿದೆ' ಎಂದು ಹೇಳಿದರು.

ಲಸಿಕೆಯಲ್ಲೂ ಮೋಸ: ಕೇಂದ್ರದ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಳ್ಳು ಹೇಳಿ ದಕ್ಷಿಣ ಭಾರತದವರನ್ನು ನಂಬಿಸುವುದನ್ನು ಬಿಡಿ. ರಾಜ್ಯಕ್ಕೆ ಸಿಗಬೇಕಾದ ಲಸಿಕೆ ಪಡೆಯಲು ಕೇಂದ್ರದ ಕೊರಳು ಪಟ್ಟಿ ಹಿಡಿದು ಕೇಳುವ ತಾಕತ್ತು ಬೆಳೆಸಿಕೊಳ್ಳಿ. ಕನ್ನಡಿಗರು ಮೆಚ್ಚುತ್ತಾರೆ. ಪದೇ ಪದೇ ಮಲತಾಯಿ ಧೋರಣೆ ಸಹಿಸುವುದಕ್ಕೆ ಸಾಧ್ಯವಿಲ್ಲ'..

ಡಾ.ಪಿ.ಆಂಜನಪ್ಪ ಎಂಬುವರು ಭಾನುವಾರ ಟ್ವಿಟರ್‌ನಲ್ಲಿ ಆಕ್ರೋಶ ವ್ಯಕ್ತಪಡಿಸಿದ ಬಗೆ ಇದು.

'ಆಮ್ಲಜನಕ ಹಾಗೂ ಔಷಧಗಳ ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯವೆಸಗಿದ್ದ ಕೇಂದ್ರ ಸರ್ಕಾರ ಈಗ ಲಸಿಕೆ ವಿಚಾರದಲ್ಲೂ ತಾರತಮ್ಯ ನೀತಿ ಅನುಸರಿಸುತ್ತಿದೆ' ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆ 'ಲಸಿಕೆಯಲ್ಲೂ ಮೋಸ' ಎಂಬ ಹ್ಯಾಷ್‌ಟ್ಯಾಗ್ ಅಡಿಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಟ್ವಿಟರ್ ಅಭಿಯಾನದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ನೂರಾರು ಮಂದಿ ಆಕ್ರೋಶ ವ್ಯಕ್ತಪಡಿಸಿದರು.

'ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರೇ ಲಸಿಕೆಯನ್ನು ಖಾಸಗಿ ಆಸ್ಪತ್ರೆಗಳಿಗೆ ಮಾರಾಟ ಮಾಡಿ ಕಮಿಷನ್ ತೆಗೆದುಕೊಳ್ಳುತ್ತಿರುವ ನಿಮ್ಮದೇ ಪಕ್ಷದ ಶಾಸಕರು, ಸಂಸದರ ಮೇಲೆ ಯಾವ ಕ್ರಮ ಕೈಗೊಂಡಿದ್ದೀರಿ' ಎಂದು ದಯಾನಂದ ಗೌಡ ಪ್ರಶ್ನಿಸಿದ್ದಾರೆ.

'ಮೇ 1ರವರೆಗೆ ಕೇಂದ್ರದಿಂದ ರಾಜ್ಯಕ್ಕೆ 1.91 ಲಕ್ಷ ಡೋಸ್ ಲಸಿಕೆ ಪೂರೈಕೆಯಾಗಿದೆ. ಈ ಅವಧಿಯಲ್ಲಿ ಉತ್ತರ ಪ್ರದೇಶಕ್ಕೆ 15.61 ಲಕ್ಷ, ಬಿಹಾರಕ್ಕೆ 10.2 ಲಕ್ಷ, ಮಧ್ಯಪ್ರದೇಶಕ್ಕೆ 8.57 ಲಕ್ಷ, ಗುಜರಾತ್‌ಗೆ 3.47 ಲಕ್ಷ ಡೋಸ್ ಲಸಿಕೆ ಸಿಕ್ಕಿದೆ. ದಕ್ಷಿಣ ರಾಜ್ಯಗಳಿಗೆ ಒಟ್ಟು 7.3 ಲಕ್ಷ ಹಾಗೂ ದೇಶದ ಇತರ ರಾಜ್ಯಗಳಿಗೆ 89 ಲಕ್ಷ ಲಸಿಕೆ ನೀಡಲಾಗಿದೆ' ಎಂದು ಎಚ್.ಕೆ.ನವನೀತ್ ತಿಳಿಸಿದ್ದಾರೆ.

'ಕರ್ನಾಟಕದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕೇಂದ್ರ ಸರ್ಕಾರ ಮಾತ್ರ ಕೋವಿಡ್ ಪೀಡಿತರ ಸಂಖ್ಯೆ ಕಡಿಮೆ ಇರುವ ಗುಜರಾತ್ ಮತ್ತು ಉತ್ತರ ಪ್ರದೇಶಕ್ಕೆ ಹೆಚ್ಚು ಲಸಿಕೆ ಹಂಚಿಕೆ ಮಾಡುತ್ತಿದೆ. ಇದು ಎಷ್ಟು ಸರಿ?' ಎಂದು ಪ್ರಸಾದ್ ಪ್ರಶ್ನಿಸಿದ್ದಾರೆ. ಈ ಟ್ವೀಟ್ ಅನ್ನು ಅವರು ಪ್ರಧಾನಿ ಮೋದಿಗೆ ಟ್ಯಾಗ್ ಮಾಡಿದ್ದಾರೆ.

'ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ಸರ್ಕಾರವಿದ್ದರೆ ಅಭಿವೃದ್ಧಿಯ ಮಳೆಗರೆಯುತ್ತೇವೆ ಎಂದು ಮಣ್ಣೆರಚಿದ್ದ ಬಿಜೆಪಿಯವರು ಈಗ ನಮ್ಮ ನಾಡಿಗೆ ಲಸಿಕೆ ಹಂಚುವಲ್ಲೂ ಮೋಸವೆಸಗಿದ್ದಾರೆ' ಎಂದು ಎಚ್.ಎಂ.ಶ್ರುತಿ ಟೀಕಿಸಿದ್ದಾರೆ.

ಹೆಬ್ಬಾಳ ಕೋವಿಡ್ ಆಸ್ಪತ್ರೆ: ಬಿಜೆಪಿ–ಕಾಂಗ್ರೆಸ್ ನಾಯಕರ ನಡುವೆ ಜಟಾಪಟಿ

ಸಚಿವ ಸದಾನಂದಗೌಡಗೆ ಘೇರಾವ್

ಪ್ರಜಾವಾಣಿ ವಾರ್ತೆ



ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ ವಿರುದ್ಧ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸ್ಥಳೀಯರು

ಬೆಂಗಳೂರು: ಹೆಬ್ಬಾಳ ಕ್ಷೇತ್ರ ವ್ಯಾಪ್ತಿಯ ಚೋಳನಗರದಲ್ಲಿರುವ ಕೋವಿಡ್ ಆಸ್ಪತ್ರೆಯು ಬಿಜೆಪಿ–ಕಾಂಗ್ರೆಸ್ ನಾಯಕರ ಜಟಾಪಟಿಗೆ ಭಾನುವಾರ ಸಾಕ್ಷಿಯಾಯಿತು.

ಆಸ್ಪತ್ರೆಯ ಪರಿಶೀಲನೆಗೆ ಬಂದ ಕೇಂದ್ರ ಸಚಿವ ಮತ್ತು ಈ ಭಾಗದ ಸಂಸದ ಡಿ.ವಿ. ಸದಾನಂದಗೌಡ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಘೇರಾವ್ ಹಾಕಿದ್ದರು. 'ಬಿಜೆಪಿ ಸರ್ಕಾರಕ್ಕೆ ಧಿಕ್ಕಾರ' ಎಂದು ಘೋಷಣೆ ಕೂಗಿದರು.

'ಈ ಆಸ್ಪತ್ರೆಗೆ ತಿಂಗಳಿಗೆ ₹1 ಕೋಟಿ ಬೇಕಾಗುತ್ತದೆ. ಬಿಬಿಎಂಪಿ ₹30 ಲಕ್ಷ ನೀಡಿದರೆ, ಗ್ಲೋಬಲ್ ಟೆಕ್ನಾಲಜೀಸ್ ಕಂಪನಿ, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ ಹಾಗೂ ಮಾನ್ಯತೆ ರೋಟರಿ ಸಂಸ್ಥೆಗಳು ₹30 ಲಕ್ಷ ಭರಿಸುತ್ತಿವೆ. ಉಳಿದ ₹40 ಲಕ್ಷಕ್ಕೂ ಹೆಚ್ಚು ದುಡ್ಡನ್ನು ಹೆಬ್ಬಾಳ ಶಾಸಕ ಬೈರತಿ ಸುರೇಶ್ ವೈಯಕ್ತಿಕವಾಗಿ ಭರಿಸುತ್ತಿದ್ದಾರೆ. ಈ ಆಸ್ಪತ್ರೆಗೆ ಭಾನುವಾರ ಭೇಟಿ ನೀಡಿದ ಸದಾನಂದ ಗೌಡರು ಅನಗತ್ಯವಾಗಿ ವೈದ್ಯಕೀಯ ಸಿಬ್ಬಂದಿ ವಿರುದ್ಧ ಹರಿಹಾಯ್ದರು' ಎಂದು ಕಾಂಗ್ರೆಸ್ ಮುಖಂಡ ಅಬ್ದುಲ್ ವಾಜಿದ್ 'ಪ್ರಜಾವಾಣಿ'ಗೆ ತಿಳಿಸಿದರು.

'ಸದಾನಂದಗೌಡರು ಅವರು ಪಕ್ಷದ ಕಾರ್ಯಕರ್ತರೊಂದಿಗೆ ಬಂದು ನೇರವಾಗಿ ಆಸ್ಪತ್ರೆಯೊಳಗೆ ಹೋಗಲು ಯತ್ನಿಸಿದರು. ಪಿಪಿಇ ಕಿಟ್ ಕೂಡ ಹಾಕಿಕೊಂಡಿರಲಿಲ್ಲ. ಆಂಬುಲೆನ್ಸ್ ಸೌಲಭ್ಯ ಸರಿಯಾಗಿಲ್ಲ ಎಂದೆಲ್ಲ ದೂರಿದರು' ಎಂದು ಹೇಳಿದರು.

'ಈ ಕ್ಷೇತ್ರದ ಜನರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಖಾಸಗಿ ಆಸ್ಪತ್ರೆಗಳನ್ನೂ ಮೀರಿಸುವಂತೆ ಬೈರತಿ ಸುರೇಶ್ ಈ ಆಸ್ಪತ್ರೆ ರೂಪಿಸಿದ್ದಾರೆ. ರಾಜ್ಯ ಸರ್ಕಾರದ ಸಚಿವರಾದ ಬಸವರಾಜ ಬೊಮ್ಮಾಯಿ ಮತ್ತು ವಿ. ಸೋಮಣ್ಣ ಕೂಡ ಬೈರತಿ ಅವರ ಕಾರ್ಯಕ್ಕೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಆದರೆ, ಸದಾನಂದಗೌಡರು ಇದನ್ನು ಸಂಪೂರ್ಣ ಸರ್ಕಾರಿ ಆಸ್ಪತ್ರೆಯೇನೋ ಎಂಬಂತೆ ವರ್ತಿಸಿದರು' ಎಂದೂ ದೂರಿದರು.

'ಆಸ್ಪತ್ರೆಯ ಪರಿಶೀಲನೆ ನಡೆಸಲು ಸಂಸದರಾದ ಡಿ.ವಿ. ಸದಾನಂದಗೌಡರಿಗೆ ಅಧಿಕಾರವಿದೆ. ಆದರೆ, ಪಕ್ಷದ ಕಾರ್ಯಕರ್ತರೊಂದಿಗೆ ಬಂದು ವೈದ್ಯಕೀಯ ಸಿಬ್ಬಂದಿ ವಿರುದ್ಧ ಹರಿಹಾಯುವ ಅಗತ್ಯವಿರಲಿಲ್ಲ. ಕುಂದು–ಕೊರತೆ ಇದ್ದರೂ ಶಾಸಕರಿಗೆ ಕರೆ ಮಾಡಿ ಸಲಹೆ ನೀಡಿ ಸರಿ ಮಾಡಿಸಬಹುದಿತ್ತು. ಅದು ಬಿಟ್ಟು ರಾಜಕೀಯ ಮಾಡಿದ್ದು ಸರಿಯಲ್ಲ' ಎಂದರು.

ಸದಾನಂದಗೌಡರ ಜೊತೆಗೆ, ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ವೈ. ನಾರಾಯಣ ಸ್ವಾಮಿ ಅವರೂ ಇದ್ದರು.

'ಬೈರತಿ ಸುರೇಶ್ ಅವರು ಈ ಆಸ್ಪತ್ರೆಗೆ ತಿಂಗಳಿಗೆ ₹1 ಕೋಟಿ ಖರ್ಚಾಗುತ್ತದೆ ಎಂದು ಹೇಳುತ್ತಿದ್ದಾರೆ. ಯಾವ ಕಾರಣಕ್ಕೆ ಇಷ್ಟು ಹಣ ಬೇಕಾಗುತ್ತದೆಯೋ ನನಗಂತೂ ತಿಳಿಯುತ್ತಿಲ್ಲ. ಆದರೆ, ಈ ಆಸ್ಪತ್ರೆಯ ನಿರ್ವಹಣೆಯಲ್ಲಿ ಸಿಂಹಪಾಲು ಬಿಬಿಎಂಪಿಯದ್ದು. ಆ ಕಾರಣ, ಸದಾನಂದ ಗೌಡರಿಗೆ ಪರಿಶೀಲನೆ ನಡೆಸುವ ಎಲ್ಲ ಅಧಿಕಾರ ಇದೆ. ಅವರ ವಿರುದ್ಧ ಪ್ರತಿಭಟನೆ ನಡೆಸಿದ್ದು ಕಾಂಗ್ರೆಸ್ ನಾಯಕರ ಅಜ್ಞಾನವನ್ನು ಸೂಚಿಸುತ್ತದೆ' ಎಂದು ನಾರಾಯಣಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕ್ಷೇತ್ರದ ಜನರು ಕೋವಿಡ್ ಚಿಕಿತ್ಸೆ ಪಡೆಯಲು ಪಡಿಪಾಟಲು ಪಡಬೇಕಿತ್ತು. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಕ್ಷೇತ್ರದ ಜನರಿಗೆ ಅನುಕೂಲ ಕಲ್ಪಿಸಲು ಕಿರು ಅವಧಿಯಲ್ಲೇ ಸರ್ವ ಸೌಲಭ್ಯ ಇರುವ ಆಸ್ಪತ್ರೆ ಆರಂಭಿಸಲಾಗಿದೆ. ಈ ವಿಚಾರದಲ್ಲಿ ಬಿಜೆಪಿಯವರು ರಾಜಕೀಯ ಮಾಡುವ ಅಗತ್ಯ ಇರಲಿಲ್ಲ. ಇದು ಅವರ ಸಣ್ಣತನಕ್ಕೆ ಸಾಕ್ಷಿ' ಎಂದು ಬೈರತಿ ಸುರೇಶ್ ಪ್ರತಿಕ್ರಿಯಿಸಿದರು.

ಜೂನ್‌ನಲ್ಲಿ 'ಡ್ರೀಮ್ಸ್' ಬೇಸಿಗೆ ಶಿಬಿರ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಡ್ರೀಮ್ಸ್ ಬೇಸಿಗೆ ಶಿಬಿರವನ್ನು ಜೂನ್ ಮಧ್ಯಂತರದಲ್ಲಿ ಆನ್‌ಲೈನ್ ಮೂಲಕ ನಡೆಸಲು ನಿರ್ಧರಿಸಲಾಗಿದೆ.

'ಮಾಧ್ಯಮಿಕ ಶಾಲೆಯ ಮಕ್ಕಳಲ್ಲಿ ಆತ್ಮವಿಶ್ವಾಸ ಹಾಗೂ ಸಾಮಾಜಿಕ ಕೌಶಲಗಳ ಕೊರತೆ ಇರುತ್ತದೆ. ಅಂತಹವರಲ್ಲಿ ಮಾನಸಿಕ ಕೌಶಲಗಳನ್ನು ಬೆಳೆಸುವುದು ಡ್ರೀಮ್ಸ್ ಕಾರ್ಯಕ್ರಮದ ಉದ್ದೇಶ. ಇದು ಪಠ್ಯಪುಸ್ತಕ ಆಧಾರಿತ ಸಮುದಾಯ ಸಹಕಾರಿ ಮಾರ್ಗದರ್ಶನ ಕಾರ್ಯಕ್ರಮ' ಎಂದು ಪ್ರಕಟಣೆ ತಿಳಿಸಿದೆ.

ಆಸಕ್ತರು bangalore@letusdream.org ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗೆ: ರೋಸೆಲಿನ್ ಗೋಮೆಸ್ 9972073420 ಹಾಗೂ ಅವಂತಿ ರಾವ್ 9448839620.



ಆರ್ಥಿಕ ನೆರವು: ವಯೋಮಿತಿ ಸಡಿಲಿಕೆಗೆ ಹೆಚ್ಚಿದ ಒತ್ತಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಹಾಗೂ ಲಾಕ್‌ಡೌನ್ ಕಾರಣ ಘೋಷಿಸಲಾಗಿರುವ ಆರ್ಥಿಕ ನೆರವಿಗೆ ವಯೋಮಿತಿಯನ್ನು ಸಡಿಲಿಸಿ, 35 ವರ್ಷದೊಳಗಿನ ಯುವ ಕಲಾವಿದರೂ ಅರ್ಜಿ ಸಲ್ಲಿಸಲು ಸರ್ಕಾರ ಅವಕಾಶ ನೀಡಬೇಕು ಎಂಬ ಒತ್ತಾಯ ಸಾಂಸ್ಕೃತಿಕ ವಲಯದಲ್ಲಿ ಕೇಳಿಬಂದಿದೆ.

ಸಂಕಷ್ಟಕ್ಕೆ ಸಿಲುಕಿರುವ ವಿವಿಧ ವಲಯಗಳಿಗೆ ಆರ್ಥಿಕ ಪ್ಯಾಕೇಜ್ ಘೋಷಿಸಿರುವ ಸರ್ಕಾರ, ಕಲಾವಿದರಿಗೆ ತಲಾ ₹ 3 ಸಾವಿರ ನೆರವು ನೀಡುತ್ತಿದೆ. ಈ ಸಂಬಂಧ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಪ್ರಾರಂಭವಾಗಿದೆ. ನೆರವಿಗೆ ಸಂಬಂಧಿಸಿದಂತೆ ಕೆಲವೊಂದು ನಿರ್ಬಂಧಗಳನ್ನು ವಿಧಿಸಲಾಗಿದ್ದು, ಕಲಾವಿದರು 35 ವರ್ಷ ಮೇಲ್ಪಟ್ಟವರಾಗಿರಬೇಕು ಎಂದು ತಿಳಿಸಲಾಗಿದೆ. ಈ ವಯೋಮಿತಿಯನ್ನು 25ಕ್ಕೆ ಇಳಿಕೆ ಮಾಡಬೇಕು ಎಂದು ಸಾಂಸ್ಕೃತಿಕ ವಲಯದ ಗಣ್ಯರು ಆಗ್ರಹಿಸಿದ್ದಾರೆ.

ಈ ಸಂಬಂಧ ಕರ್ನಾಟಕ ಜಾನಪದ ಅಕಾಡೆಮಿಯ ಮಾಜಿ ಅಧ್ಯಕ್ಷ ಪಿಚ್ಚಳ್ಳಿ ಶ್ರೀನಿವಾಸ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಿಗೆ ಪತ್ರ ಬರೆದಿದ್ದು, 'ಕಲಾವಿದರು ಹಾಗೂ ಕಲಾ ಸಂಸ್ಥೆಗಳು ಬೀದಿಗೆ ಬಿದ್ದಿವೆ. ನೆರವಿಗೆ ಸಂಬಂಧಿಸಿದಂತೆ ವಿಧಿಸಿರುವ ಷರತ್ತುಗಳು ಮಗುವನ್ನು ಚಿವುಟಿ, ತೊಟ್ಟಿಲನ್ನು ತೂಗುವಂತೆ ಆಗಿದೆ. ನಿಗದಿಪಡಿಸಲಾಗಿರುವ ವಯೋಮಿತಿಯನ್ನು 25ಕ್ಕೆ ಇಳಿಕೆ ಮಾಡಬೇಕು. ಅದೇ ರೀತಿ, ಅರ್ಜಿ ಹಾಕಲು ನಿಗದಿಪಡಿಸಿರುವ ದಿನಾಂಕವನ್ನು ಜೂ. 10ರವರೆಗೆ ವಿಸ್ತರಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಅವಧಿ ವಿಸ್ತರಿಸಲು ಮನವಿ


'ಕೆಲವು ಕಲಾವಿದರಿಗೆ ಮೊಬೈಲ್ ಮೂಲಕ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಲಾಕ್‌ಡೌನ್ ಕಾರಣ ಈ ಪ್ರಕ್ರಿಯೆ ಸಂಬಂಧ ಹೊರಗಡೆ ಹೋಗಲು ಕೂಡ ಆಗುತ್ತಿಲ್ಲ. ಹಾಗಾಗಿ, ಅರ್ಜಿ ಸಲ್ಲಿಕೆಯ ಅವಧಿಯನ್ನು ವಿಸ್ತರಿಸಬೇಕು. ವೃತ್ತಿ ಕಂಪನಿಗಳಲ್ಲಿ 35 ವರ್ಷದೊಳಗಿನ ಕಲಾವಿದರು ಕೂಡ ಇರುತ್ತಾರೆ. ಹಾಗಾಗಿ, ವಯೋಮಿತಿಯನ್ನು 25ಕ್ಕೆ ಇಳಿಕೆ ಮಾಡಬೇಕು. ಸರ್ಕಾರದ ನೆರವು ಒಪ್ಪತ್ತಿನ ಊಟಕ್ಕಾದರೂ ಆಗುತ್ತದೆ' ಎಂದು ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಎಲ್.ಬಿ. ಶೇಖ್ ಮಾಸ್ತರ್ ಮನವಿ ಮಾಡಿದ್ದಾರೆ.

'ಕೆಲವರು ಚಿಕ್ಕ ವಯಸ್ಸಿನಲ್ಲಿಯೇ ರಂಗಭೂಮಿ ಪ್ರವೇಶ ಮಾಡುತ್ತಾರೆ. ಕಲೆಯನ್ನು ಮುಂದುವರಿಸಿಕೊಂಡು ಹೋಗಲು ಶ್ರಮಿಸುತ್ತಿದ್ದಾರೆ. ಹಾಗಾಗಿ, ವಯೋಮಿತಿಯನ್ನು 20ಕ್ಕೆ ಇಳಿಕೆ ಮಾಡಬೇಕು. ₹ 3 ಸಾವಿರ ನೆರವು ಯುವ ಕಲಾವಿದರಿಗೆ ಆಸರೆಯಾಗಲಿದೆ' ಎಂದು ಅಖಿಲ ಕರ್ನಾಟಕ ವೃತ್ತಿ ರಂಗಭೂಮಿ ನಾಟಕ ಕಂಪನಿಗಳ ಮಾಲೀಕರ ಸಂಘದ ಅಧ್ಯಕ್ಷ ಚಿಂದೋಡಿ ಶ್ರೀಕಂಠೇಶ ತಿಳಿಸಿದ್ದಾರೆ.

ಚಿತ್ರಾವಳಿ



ರಾಜರಾಜೇಶ್ವರಿನಗರ ಕ್ಷೇತ್ರ ವ್ಯಾಪ್ತಿಯ ಆಶ್ರಯನಗರದಲ್ಲಿ ಬಡವರಿಗೆ ಕಾಂಗ್ರೆಸ್ ಮುಖಂಡರಾದ ಕುಸುಮಾ ಎಚ್. ಊಟ ವಿತರಿಸಿದರು



ಕಾರ್ಮಿಕರೊಬ್ಬರು ಮೈಸೂರು ರಸ್ತೆ ಮೆಟ್ರೊ ನಿಲ್ದಾಣದ ಕಂಬಗಳಿಗೆ ಬಣ್ಣ ಲೇಪಿಸುವ ಕೆಲಸದಲ್ಲಿ ಭಾನುವಾರ ಮಗ್ನರಾಗಿದ್ದರು – ಪ್ರಜಾವಾಣಿ ಚಿತ್ರ



ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ಯಲಹಂಕ ಉಪನಗರದ ರಾಘವೇಂದ್ರಸ್ವಾಮಿ ಮಠದಲ್ಲಿ ಬಿಡಿಎ ಅಧ್ಯಕ್ಷ ಎಸ್‌.ಆರ್‌.ವಿಶ್ವನಾಥ್ ಅವರು ವಿಪ್ರ ಸಮುದಾಯವರಿಗೆ ಮಾಸ್ಕ್ ಹಾಗೂ ದಿನಸಿ ಕಿಟ್‌ಗಳನ್ನು ಭಾನುವಾರ ವಿತರಿಸಿದರು. ಮಂಡಳಿ ಅಧ್ಯಕ್ಷ ಎಚ್.ಎಸ್.ಸಚ್ಚಿದಾನಂದ ಮೂರ್ತಿ ಹಾಗೂ ನಿರ್ದೇಶಕರು ಇದ್ದರು



ಕೋವಿಡ್ ಲಸಿಕೆ ಪಡೆಯಲು ಬನಶಂಕರಿಯ ವಿದ್ಯಾಪೀಠ ವೃತ್ತದ ಆರೋಗ್ಯ ಕೇಂದ್ರದ ಬಳಿ ಭಾನುವಾರ ಸೇರಿದ್ದ ಜನ –ಪ್ರಜಾವಾಣಿ ಚಿತ್ರ

ದೃಢ ಪ್ರಮಾಣ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 20,378 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 25.87 ಲಕ್ಷ ದಾಟಿದೆ.

ಈ ತಿಂಗಳ ಕೆಲ ದಿನಗಳು ಶೇ 30ರ ಗಡಿಯ ಆಸುಪಾಸಿಗೆ ಏರಿಕೆ ಕಂಡಿದ್ದ ಸೋಂಕು ದೃಢ ಪ್ರಮಾಣ, ಈಗ ಶೇ 14.68ಕ್ಕೆ ಇಳಿಕೆಯಾಗಿದೆ. ಬೆಂಗಳೂರಿನಲ್ಲಿ 213 ಮಂದಿ ಸೇರಿದಂತೆ ರಾಜ್ಯದಲ್ಲಿ 382 ಮಂದಿ ಸಾವಿಗೀಡಾಗಿರುವುದು ಭಾನುವಾರ ದೃಢಪಟ್ಟಿದೆ. ಮರಣ ಪ್ರಮಾಣ ದರ ಶೇ 1.87ರಷ್ಟಿದ್ದು, ಒಟ್ಟು ಮೃತರ ಸಂಖ್ಯೆ 28,679ಕ್ಕೆ ಏರಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 1.38 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 3.42 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸೋಂಕಿತರಲ್ಲಿ 28,053 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಸಂಖ್ಯೆ 22.17 ಲಕ್ಷ ದಾಟಿದೆ. 7 ಜಿಲ್ಲೆಗಳಲ್ಲಿ 10ಕ್ಕೂ ಅಧಿಕ ಮರಣ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಧಾರವಾಡದಲ್ಲಿ 19 ಮಂದಿ, ಬಳ್ಳಾರಿಯಲ್ಲಿ 13 ಮಂದಿ, ಶಿವಮೊಗ್ಗದಲ್ಲಿ 12 ಮಂದಿ, ಹಾಸನದಲ್ಲಿ 11 ಮಂದಿ, ಹಾವೇರಿ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ತಲಾ 10 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿದ್ದು, 24 ಗಂಟೆಗಳ ಅವಧಿಯಲ್ಲಿ 4,734 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ನಗರದ ಕೋವಿಡ್ ಅಂಕಿ–ಅಂಶ

11,59,237	ಒಟ್ಟು ಪ್ರಕರಣಗಳು
1,62,625	ಸಕ್ರಿಯ ಪ್ರಕರಣಗಳು
9,83,507	ಗುಣಮುಖರಾದವರು
13,104	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	4,734
ಗುಣಮುಖ	6,078
ಸಾವು	213

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಅಧಿಕಾರಿಗಳಿಂದ ಶೌಚಾಲಯ ಸ್ವಚ್ಛ

ತಿಪಟೂರು (ತುಮಕೂರು): ಇಲ್ಲಿಯ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯದಲ್ಲಿರುವ ಕೋವಿಡ್ ಕೇರ್ ಸೆಂಟರ್‌ಗೆ ಭಾನುವಾರ ಪರಿಶೀಲನೆಗೆ ತೆರಳಿದ್ದ ತಾಲ್ಲೂಕು ಅಧಿಕಾರಿಗಳ ತಂಡ ಅಲ್ಲಿನ ಶೌಚಾಲಯ ಸ್ವಚ್ಛಗೊಳಿಸಿ ಮರಳಿದೆ.

ತಹಶೀಲ್ದಾರ್ ಆರ್. ಜಿ.ಚಂದ್ರಶೇಖರ, ನಗರಸಭೆ ಪೌರಾಯುಕ್ತ ಉಮಾಕಾಂತ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ದಿನೇಶ್, ಸಿಡಿಪಿಒ ಪಿ.ಓಂಕಾರಪ್ಪ, ಗ್ರೇಡ್ 2 ತಹಶೀಲ್ದಾರ್ ಜಗನ್ನಾಥ ಅವರ ತಂಡ ಭೇಟಿ ನೀಡಿತ್ತು.

ಪಿಪಿಇ ಕಿಟ್ ಧರಿಸಿದ ಅಧಿಕಾರಿಗಳು ಸೆಂಟರ್‌ನಲ್ಲಿರುವ 80ಕ್ಕೂ ಹೆಚ್ಚು ಸೋಂಕಿತರ ಯೋಗಕ್ಷೇಮ ವಿಚಾರಿಸಿದರು. ನ್ಯೂನತೆಗಳ ಕುರಿತು ಮಾಹಿತಿ ಪಡೆದರು. ಕೆಲ ದಿನಗಳಿಂದ ಶೌಚಾಲಯ ಸ್ವಚ್ಛಗೊಳಿಸದಿರುವ ಬಗ್ಗೆ ಮತ್ತು ಕೆಲ ಕೊಠಡಿಗಳಲ್ಲಿ ಪೈಪ್‌ಲೈನ್ ಸಮಸ್ಯೆಯಿಂದ ನೀರು ಪೋಲಾಗುತ್ತಿರುವ ಬಗ್ಗೆ ಸೋಂಕಿತರು ದೂರಿದರು.

ಆಗ ಅಧಿಕಾರಿಗಳು ಖುದ್ದಾಗಿ ಶೌಚಾಲಯ ಸ್ವಚ್ಛ ಮಾಡಿದರು.

ಸಿಯೋನ್ ಆಶ್ರಮದಲ್ಲಿ 194 ಮಂದಿಗೆ ಸೋಂಕು

ಉಜಿರೆ: ಬೆಳ್ತಂಗಡಿ ತಾಲ್ಲೂಕಿನ ನೆರಿಯ ಗ್ರಾಮದ ಗಂಡಿಬಾಗಿಲು ಸಿಯೋನ್ ಆಶ್ರಮದಲ್ಲಿರುವ 194 ಮಂದಿಗೆ ಕೋವಿಡ್ ದೃಢಪಟ್ಟಿದೆ. ಎಲ್ಲ ಸೋಂಕಿತರನ್ನು ಶಾಸಕ ಹರೀಶ್ ಪೂಂಜ ಅವರ ಸಲಹೆಯಂತೆ ಧರ್ಮಸ್ಥಳದ ರಜತಾದ್ರಿ ವಸತಿ ಗೃಹದ ಕೋವಿಡ್ ಆರೈಕೆ ಕೇಂದ್ರಕ್ಕೆ ಭಾನುವಾರ ಸ್ಥಳಾಂತರಿಸಲಾಗಿದೆ.

ವೃದ್ಧರು, ಮಾನಸಿಕ ಅಸ್ವಸ್ಥರು, ನಿರ್ಗತಿಕರು ಸೇರಿದಂತೆ ಒಟ್ಟು 270 ಮಂದಿ ಇದ್ದು, ಈ ಪೈಕಿ 194 ಮಂದಿಗೆ ಸೋಂಕು ದೃಢಪಟ್ಟಿದೆ. ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಧರ್ಮಸ್ಥಳದ ವಸತಿಗೃಹದಲ್ಲಿ ಕೋವಿಡ್ ಆರೈಕೆ ಕೇಂದ್ರ ತೆರೆಯಲು ಅವಕಾಶ ನೀಡಿದ್ದು, 300 ಕೊಠಡಿಗಳಲ್ಲಿ 600 ಹಾಸಿಗೆಗಳ ಸೌಲಭ್ಯವಿದೆ.

ವಿದೇಶಗಳಿಗೂ ರಫ್ತಾಗುತ್ತಿದ್ದ ಬೆಳೆಗಳನ್ನು ಈಗ ಕೇಳುವವರೇ ಇಲ್ಲ

ಟೊಮೆಟೊಗೆ ಸಿಗದ ಬೆಲೆ: ಕಂಗಾಲು

ಪ್ರಜಾವಾಣಿ ವಾರ್ತೆ



ಇಳಿವಯಸ್ಸಿನಲ್ಲಿಯೂ ಟೊಮೆಟೊ ಬೆಳೆಗೆ ನೀರು ಹಾಯಿಸುತ್ತಿರುವ ದೇವಿಬಾಯಿ

ರಾಜರಾಜೇಶ್ವರಿನಗರ: ಲಾಕ್‌ಡೌನ್‌ನಿಂದ ಟೊಮೆಟೊ ಬೆಳೆಗಾರರು ಕೂಡ ಸಂಕಷ್ಟಕ್ಕೆ ಈಡಾಗಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಚುಂಚನಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರಿಕಲ್ಲು ತಾಂಡ್ಯದ ಬಡ ರೈತ ಮಹಿಳೆ ದೇವಿಬಾಯಿ ಅವರು 2.30 ಎಕರೆ ಪ್ರದೇಶದಲ್ಲಿ ಟೊಮೆಟೊ ಬೆಳೆಯುತ್ತಿದ್ದರು. ಇದು ವಿದೇಶಗಳಿಗೂ ರಫ್ತಾಗುತ್ತಿತ್ತು. ಈಗ ಲಾಕ್‌ಡೌನ್ ಇರುವುದರಿಂದ ಟೊಮೆಟೊ ಕೇಳುವವರೇ ಇಲ್ಲವಾಗಿದ್ದಾರೆ.

ಇಳಿವಯಸ್ಸಿನ ದೇವಿಬಾಯಿ ಅವರು ₹10.50 ಲಕ್ಷ ಖರ್ಚು ಮಾಡಿ ಹೊಸ ತಂತ್ರಜ್ಞಾನದೊಂದಿಗೆ ಟೊಮೆಟೊ ಬೆಳೆದಿದ್ದಾರೆ. ಆದರೆ, ಬೆಳೆಗೆ ಕನಿಷ್ಠ ಬೆಲೆಯೂ ಸಿಗದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬೆಳೆಗಾಗಿ ಮಾಡಿದ್ದ ₹6 ಲಕ್ಷ ಕೈ ಸಾಲ ಕೂಡ ಅವರ ಚಿಂತೆಯನ್ನು ಹೆಚ್ಚಿಸಿದೆ.

'ಸಮೃದ್ಧವಾಗಿ ಬೆಳೆದಿದ್ದ ಬೆಳೆಯನ್ನು ಮಾರುಕಟ್ಟೆಗೆ ಒಯ್ಯಬೇಕು ಎನ್ನುವಷ್ಟರಲ್ಲಿಯೇ ಎರಡನೇ ಬಾರಿ ಲಾಕ್‌ಡೌನ್ ಘೋಷಿಸಲಾಯಿತು. ಕಷ್ಟಪಟ್ಟು ಮಾರುಕಟ್ಟೆಗೆ ಒಯ್ದರೂ, ಒಂದು ಬಾಕ್ಸ್‌ಗೆ ₹15ಗೆ ಕೂಡ ಕೇಳುವವರಿಲ್ಲ. ಕೋಲಾರ ಎಪಿಎಂಸಿಗೆ ತೆಗೆದುಕೊಂಡು ಹೋದರೆ, ಒಂದು ಬಾಕ್ಸ್ ಅನ್ನು ಕೇವಲ ₹10ಕ್ಕೆ ಕೇಳುತ್ತಾರೆ' ಎಂದು ದೇವಿಬಾಯಿ ಅಳಲು ತೋಡಿಕೊಂಡರು.

'ಸ್ಥಳೀಯ ಮಾರುಕಟ್ಟೆಯಲ್ಲಿಯೂ ಬೆಲೆಯಿಲ್ಲ, ಗ್ರಾಹಕರಿಗೆ ಮಾತ್ರ ₹10ರಂತೆ ಕೊಡುತ್ತಿದ್ದೇವೆ. ಹಾಪ್‌ಕಾಮ್ಸ್‌ನಲ್ಲಿಯೇ ಕೆಜಿಗೆ ₹12 ದರ ಇದೆ. ನಾವು ಮಾರಲು ಹೋದರೆ ಮಾತ್ರ ಅತ್ಯಲ್ಪ ಬೆಲೆಗೆ ಕೇಳುತ್ತಾರೆ' ಎಂದು ಅವರು ದೂರಿದರು.

'ನಮ್ಮದು ರೈತ ಪರ, ಬಡವರ ಪರ ಎನ್ನುವ ಸರ್ಕಾರಗಳು ನಮ್ಮ ಕಷ್ಟವನ್ನು ಮಾತ್ರ ಕೇಳುವುದಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ರಸ್ತೆಯಲ್ಲಿ ಹೋಗುವವರಿಗೆ ಉಚಿತವಾಗಿ ಟೊಮೆಟೊ ನೀಡುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಹಳ್ಳಿ ಹಳ್ಳಿಗೂ ತೆರಳಿ ಪುಕ್ಕಟೆಯಾಗಿ ನೀಡಲು ತೀರ್ಮಾನಿಸಿದ್ದೇನೆ' ಎಂದರು.

ಅತಿ ದಟ್ಟಣೆ ಕಾರಿಡಾರ್: ₹ 477 ಕೋಟಿ ವೆಚ್ಚಕ್ಕೆ ಅನುಮೋದನೆ ಪಡೆದ ಕಾಮಗಾರಿ ವೆಚ್ಚ ದಿಢೀರ್ ₹ 1,120 ಕೋಟಿಗೆ ಹೆಚ್ಚಿದ್ದು ಹೇಗೆ?

ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂ ಬೇಕೆ?

• ಮಂಜುನಾಥ ಹೆಬ್ಬಾರ್/
ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ನಗರದ 12 ಅತಿ ದಟ್ಟಣೆ ಕಾರಿಡಾರ್‌ಗಳ ಅಭಿವೃದ್ಧಿ ಹಾಗೂ ನಿರ್ವಹಣೆ ಕಾಮಗಾರಿಗಳಿಗೆ ಆರ್ಥಿಕ ಇಲಾಖೆ ಆಡಳಿತಾತ್ಮಕ ಅನುಮೋದನೆ ನೀಡಿರುವುದು ₹ 477.29 ಕೋಟಿ ಅಂದಾಜು ವೆಚ್ಚಕ್ಕೆ (ಜಿಎಸ್‌ಟಿ ಸೇರಿಸಿ). ಆದರೆ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವು (ಕೆಆರ್‌ಡಿಸಿಎಲ್) ಆಹ್ವಾನಿಸಿರುವ ನಾಲ್ಕು ಪ್ಯಾಕೇಜ್ ಟೆಂಡರ್‌ಗಳ ಅಂದಾಜು ಮೊತ್ತ ₹ 1120.49 ಕೋಟಿ (ಜಿಎಸ್‌ಟಿ ಸೇರಿಸಿ)!

ಅಂದರೆ, ಜಿಎಸ್‌ಟಿ ಹೊರತಾಗಿ ಈ ನಾಲ್ಕು ಪ್ಯಾಕೇಜ್‌ಗಳ ಟೆಂಡರ್‌ಗಳಿಗೆ ಇಟ್ಟ ಮೊತ್ತ ₹ 787.49 ಕೋಟಿ. ಈಗ ಒಟ್ಟು ₹ 864 ಕೋಟಿ (ಜಿಎಸ್‌ಟಿ ರಹಿತವಾಗಿ) ಮೊತ್ತದ ಟೆಂಡರ್‌ಗಳಿಗೆ ಅನುಮೋದನೆ ನೀಡುವಂತೆ ಕೆಆರ್‌ಡಿಸಿಎಲ್ ಸರ್ಕಾರವನ್ನು ಕೋರಿದೆ. ಅಂದರೆ ಈ ಮೊತ್ತ ಅನುಮೋದನೆ ಪಡೆದ ಮೊತ್ತಕ್ಕಿಂತ ₹ 405.01 ಕೋಟಿಗಳಷ್ಟು ಹೆಚ್ಚು! ಹಾಗಿದ್ದರೆ ಆಡಳಿತಾತ್ಮಕ ಅನುಮೋದನೆಯ ಔಚಿತ್ಯ ಏನು. ಅನುಮೋದನೆಗಿಂತ ಇಷ್ಟೊಂದು ಹೆಚ್ಚುವರಿ ಮೊತ್ತಕ್ಕೆ ಟೆಂಡರ್ ಕರೆಯಲು ಹೇಗೆ ಸಾಧ್ಯ ಎಂಬುದು ಉತ್ತರ ಸಿಗದ ಪ್ರಶ್ನೆ.

ಆರ್ಥಿಕ ಇಲಾಖೆಯ ಆಡಳಿತಾತ್ಮಕ ಅನುಮೋದನೆಯ ಪ್ರಕಾರ ಈ ಯೋಜನೆಗೆ ಸರ್ಕಾರ ಭರಿಸುವ ಪಾಲನ್ನು 'ಬೆಂಗಳೂರಿನ ವಿಶೇಷ ಮೂಲಸೌಕರ್ಯ ಯೋಜನೆಗಳಿಗೆ ಬಂಡವಾಳ ಬೆಂಬಲ' ಲೆಕ್ಕ ಶೀರ್ಷಿಕೆಯ ಅಡಿಯಲ್ಲೇ ನೀಡಲಾಗುತ್ತದೆ. ಅಂದರೆ ಬಿಬಿಎಂಪಿ ಮೂಲಸೌಕರ್ಯ ಅಭಿವೃದ್ಧಿಗೆ ಮಂಜೂರಾದ ಅನುದಾನ ಕಡಿತಗೊಳಿಸಿ ಆ ಮೊತ್ತವನ್ನು ಕೆಆರ್‌ಡಿಸಿಎಲ್‌ಗೆ ನೀಡಲಾಗುತ್ತದೆ. ಸರ್ಕಾರ ಬಿಬಿಎಂಪಿಯ ಮೂಲಸೌಕರ್ಯ ಯೋಜನೆಗಳಿಗೆ ಮಂಜೂರು ಮಾಡಿರುವ ಅನುದಾನದಲ್ಲೇ ₹ 10 ಸಾವಿರ ಕೋಟಿ ಬಿಡುಗಡೆಗೆ ಬಾಕಿ ಇದೆ. ಅದರಲ್ಲಿ 2021–22ನೇ ಸಾಲಿನಲ್ಲಿ ಕೇವಲ ₹ 3 ಸಾವಿರ ಕೋಟಿ ಮಾತ್ರ ಬಿಡುಗಡೆ ಮಾಡಲಾಗುತ್ತಿದೆ. ಸರ್ಕಾರದ ಹಣಕಾಸಿನ ಪರಿಸ್ಥಿತಿ ಎಷ್ಟು ಬಿಗಡಾಯಿಸಿದೆ ಎಂಬುದಕ್ಕೆ ಇದು ಕೈಗನ್ನಡಿ.

ಅತಿ ದಟ್ಟಣೆಯ 12 ಕಾರಿಡಾರ್‌ಗಳ ಟೆಂಡರ್‌ಗಳ ಅಸಂಬದ್ಧತೆಗಳ ಬಗ್ಗೆ 'ಪ್ರಜಾವಾಣಿ' ಮೇ 17ರ ಸಂಚಿಕೆಯ 'ಬ್ರ್ಯಾಂಡ್ ಬೆಂಗಳೂರು ದಾರಿ ಹತ್ತಾರು' ಸರಣಿಯಲ್ಲಿ ವಿಸ್ತೃತ ವರದಿ ಪ್ರಕಟಿಸಿತ್ತು. ಈ ಯೋಜನೆ ಏಕೆ ಕಾರ್ಯಸಾಧುವಲ್ಲ, ಎಲ್ಲೆಲ್ಲ ಅನಗತ್ಯ ವೆಚ್ಚ ಮಾಡಲಾಗುತ್ತಿದೆ, ಇದರಿಂದ ಆಗುವ ದುಂದು ವೆಚ್ಚಗಳೇನು ಎಂಬುದನ್ನು ಎಳೆಎಳೆಯಾಗಿ ವಿವರಿಸಿತ್ತು. ಆದಾಗ್ಯೂ ಈ ಯೋಜನೆಯ 4 ಪ್ಯಾಕೇಜ್‌ಗಳ ಟೆಂಡರ್‌ಗಳಿಗೆ ಅನುಮೋದನೆ ನೀಡಲು ಸದ್ದಿಲ್ಲದೇ ಪ್ರಯತ್ನ ಮುಂದುವರಿದಿದೆ.



ನಗರದಲ್ಲಿ ಕೋವಿಡ್ ಸೊಂಕು ವ್ಯಾಪಿಸಿದೆ. ಸರ್ಕಾರಿ ಆಸ್ಪತ್ರೆಗಳ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು (ಪಿಎಚ್‌ಸಿ) ಬಲಪಡಿಸುವುದಕ್ಕೆ ಅನುದಾನ ಒದಗಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಪಿಎಚ್‌ಸಿಗಳ ಬಲವರ್ಧನೆಗೆ ₹ 22.94 ಕೋಟಿ ಒದಗಿಸಲು ಬಿಬಿಎಂಪಿ ಕೋರಿದ್ದರೂ ಸರ್ಕಾರ 2021–22ನೇ ಸಾಲಿನ ಬಜೆಟ್‌ನಲ್ಲಿ ಒದಗಿಸಿದ್ದು ₹ 10 ಕೋಟಿಯಷ್ಟೇ. ಆರೋಗ್ಯ ಸೇವೆ ಸುಧಾರಣೆಗೆ ₹ 23 ಕೋಟಿ ಕೊಡಲು ಹಿಂದೇಟು ಹಾಕಿದ ಸರ್ಕಾರ, ರಸ್ತೆಗಳ ನಿರ್ವಹಣೆ ನೆಪದಲ್ಲಿ ₹ 1,120 ಕೋಟಿ ವೆಚ್ಚ ಮಾಡಲು ಹೊರಟಿದೆ.

'ಈ ಯೋಜನೆಗೆ ಆರ್ಥಿಕ ಇಲಾಖೆಯ ಆಡಳಿತಾತ್ಮಕ ಅನುಮೋದನೆಗೆ ಹೊರತಾಗಿ ಒಟ್ಟು ₹ 640 ಕೋಟಿಗಳನ್ನು ವೆಚ್ಚ ಮಾಡಬೇಕು. ಹೆಚ್ಚುವರಿ ವೆಚ್ಚವನ್ನು ಬಿಬಿ ಎಂಪಿ ಭರಿಸಬೇಕು ಎಂದು ಆರ್ಥಿಕ ಇಲಾಖೆ ಕೈತೊಳೆದುಕೊಂಡಿದೆ. ತನ್ನ ಸಿಬ್ಬಂದಿಗೆ ಸಂಬಳ ನೀಡಲು ಹೆಣಗಾಡುತ್ತಿರುವ ಬಿಬಿಎಂಪಿ ಇಷ್ಟೊಂದು ಹೊರೆ ಹೊರುವ ಪರಿಸ್ಥಿತಿಯಲ್ಲಿಲ್ಲ. ಸರ್ಕಾರದ ನೆರವಿನಿಂದ ಆರಂಭಿಸಲಾದ ಕಾಮಗಾರಿಗಳೂ ಅನುದಾನ ಕೊರತೆಯಿಂದ ಆಮೆಗತಿಯಲ್ಲಿ ಸಾಗುತ್ತಿವೆ. ಒಂದು ವೇಳೆ ಅನುದಾನ ಹೊಂದಿಸಲಾಗದಿದ್ದರೆ ಕಾರಿಡಾರ್ ಕಾಮಗಾರಿಗಳು ಅರ್ಧದಲ್ಲೇ ಸ್ಥಗಿತಗೊಂಡು ಜನ ತೊಂದರೆಗೆ ಸಿಲುಕಬೇಕಾಗಿ ಬರಬಹುದು. ಆಗ ಜನರು ಬಿಬಿಎಂಪಿಯನ್ನು ದೂಷಿಸುತ್ತಾರೆ' ಎಂದು ಕಳವಳ ವ್ಯಕ್ತಪಡಿಸುತ್ತಾರೆ ಅಧಿಕಾರಿಗಳು.

'ಈಗಿನ ಪರಿಸ್ಥಿತಿಯಲ್ಲಿ ಕಾರಿಡಾರ್ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆ ಖಂಡಿತಾ ಅಗತ್ಯ ಇಲ್ಲ. ಈ ಟೆಂಡರ್‌ಗಳಿಗೆ ಅನುಮೋದನೆ ನೀಡುವ ಮುನ್ನ ಸರ್ಕಾರ ಹತ್ತು ಬಾರಿ ಯೋಚಿಸಬೇಕು' ಎನ್ನುತ್ತಾರೆ ಹಿರಿಯ ಅಧಿಕಾರಿಯೊಬ್ಬರು.

ಯೋಜನೆಗೆ ಶಾಸಕರ ಆಕ್ಷೇಪ

ಪಕ್ಷದಿಂದ ಹೋರಾಟ



ಕೋವಿಡ್ ಕಾಲದಲ್ಲಿ ಇಂತಹ ಯೋಜನೆಗಳ ಮೂಲಕ ದುಂದುವೆಚ್ಚ ಮಾಡುವ ಅಗತ್ಯವಿರಲಿಲ್ಲ. ಈ ಯೋಜನೆಯು ಹಳೆ ಕಲ್ಲು ಹೊಸ ಬಿಲ್ಲು ಇದ್ದಂತೆ. ಯೋಜನೆ ವಿರುದ್ಧ ಪಕ್ಷ ಹೋರಾಟ ಮಾಡಲಿದೆ.

ರಾಮಲಿಂಗಾರೆಡ್ಡಿ, ಕಾಂಗ್ರೆಸ್ ಶಾಸಕ

ತಪ್ಪು ಹೆಜ್ಜೆ ಬೇಡ



ನೂರಾರು ಕೋಟಿ ರೂಪಾಯಿ ವೆಚ್ಚದ ಯೋಜನೆ ಅನುಷ್ಠಾನದ ವೇಳೆ ತಪ್ಪು ಹೆಜ್ಜೆ ಇಡಬಾರದು. ಬೆಂಗಳೂರಿನ ಶಾಸಕರು ಹಾಗೂ ತಜ್ಞರ ಜತೆಗೆ ಸಮಾಲೋಚನೆ ನಡೆಸಿಯೇ ಯೋಜನೆ ಅನುಷ್ಠಾನ ಮಾಡಬೇಕು.

ಎಂ. ಸತೀಶ್ ರೆಡ್ಡಿ, ಬಿಜೆಪಿ ಶಾಸಕ

ಐಸಿಯು ಆಸ್ಪತ್ರೆ ನಿರ್ಮಿಸಲಿ



ಕೊರೊನಾ ಸೋಂಕು ವೇಗವಾಗಿ ಹರಡುತ್ತಿರುವ ಕಾಲದಲ್ಲಿ ಇಂತಹ ಯೋಜನೆಗೆ ದುಂದುವೆಚ್ಚ ಮಾಡುವ ಬದಲು ಇದೇ ಹಣದಲ್ಲಿ ಬಿಬಿಎಂಪಿಯ ಎಂಟು ವಲಯಗಳಲ್ಲಿ ಐಸಿಯು ಸೌಲಭ್ಯ ಇರುವ ಆಸ್ಪತ್ರೆಗಳನ್ನು ನಿರ್ಮಿಸಿದ್ದರೆ ನೂರಾರು ಜನರ ಪ್ರಾಣ ಉಳಿಯುತ್ತಿತ್ತು.

ಆರ್. ಮಂಜುನಾಥ್,
ಜೆಡಿಎಸ್ ಶಾಸಕ

ಕಪ್ಪುಪಟ್ಟಿಗೆ ಸೇರಿದ ಗುತ್ತಿಗೆದಾರನಿಗೂ ಟೆಂಡರ್?

ಗುತ್ತಿಗೆದಾರ ಉದಯ್ ಶಿವಕುಮಾರ್ (ಇಂಡಿಯಾ ಪ್ರೈ ಲಿಮಿಟೆಡ್) ಅವರಿಗೆ ಪ್ಯಾಕೇಜ್–3ರ ಕಾಮಗಾರಿಯನ್ನು ಗುತ್ತಿಗೆ ನೀಡಲು ಕೆಆರ್‌ಡಿಸಿಎಲ್ ಶಿಫಾರಸು ಮಾಡಿದೆ. ಆದರೆ, ಈ ಗುತ್ತಿಗೆದಾರನನ್ನು ಲೋಕೋಪಯೋಗಿ ಇಲಾಖೆಯ ಕಟ್ಟಡ ದಕ್ಷಿಣ ವಿಭಾಗದ ಮುಖ್ಯ ಎಂಜಿನಿಯರ್ 2019ರ ಮೇ 27ರಂದು ಕಪ್ಪುಪಟ್ಟಿಗೆ ಸೇರಿಸಿದ್ದರು. ಈ ಕುರಿತು ಬೆಂಗಳೂರಿನ ನಿವಾಸಿ ಎಸ್.ಸಿದ್ಧಾರ್ಥ್ ಅವರು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ದೂರು ನೀಡಿದ್ದಾರೆ.

ಕೆಆರ್‌ಡಿಸಿಎಲ್‌ನ ಟೆಂಡರ್‌ನಲ್ಲಿ ತಾಂತ್ರಿಕ ಅರ್ಹತೆ ಪಡೆಯಲು ಐದು ವರ್ಷಗಳಲ್ಲಿ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದ ₹ 80 ಕೋಟಿಗಿಂತ ಹೆಚ್ಚು ಮೊತ್ತದ ಯಾವುದಾದರೂ ಒಂದು ಕಾಮಗಾರಿಯನ್ನಾದರೂ ನಿರ್ವಹಿಸಬೇಕು. ಆದರೆ, ಈ ಗುತ್ತಿಗೆದಾರ ₹ 60 ಕೋಟಿಗಿಂತ ಹೆಚ್ಚು ಮೊತ್ತದ ಸರ್ಕಾರಿ ಕಾಮಗಾರಿಯನ್ನು ನಿರ್ವಹಿಸಿಲ್ಲ ಎಂಬ ಬಗ್ಗೆಯೂ ಅವರು ಗಮನ ಸೆಳೆದಿದ್ದಾರೆ.

ಅಚ್ಚರಿಯೆಂದರೆ ಆರಂಭದಲ್ಲಿ ಇದೇ ಗುತ್ತಿಗೆದಾರನಿಗೆ ತಾಂತ್ರಿಕ ಅರ್ಹತೆ ಇಲ್ಲ ಎಂದು ಅನರ್ಹಗೊಳಿಸಲಾಗಿತ್ತು. ನಂತರ ಅವರು ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ.

ಅತಿ ದಟ್ಟಣೆಯ 12 ಕಾರಿಡಾರ್ ಅಭಿವೃದ್ಧಿ– ವಸ್ತುಸ್ಥಿತಿ

ಕಾರಿಡಾರ್	ಪ್ರಾರಂಭಿಕ ಉನ್ನತೀಕರಣ ವೆಚ್ಚ (₹ ಕೋಟಿ)	ವಾರ್ಷಿಕ ನಿರ್ವಹಣೆ ವೆಚ್ಚ (₹ ಕೋಟಿ)	ವಾಸ್ತವ
ಬಳ್ಳಾರಿ ರಸ್ತೆ	19.88	5.27	7.45 ಕಿ.ಮೀ ರಸ್ತೆಯಲ್ಲಿ ನಿಗಮ 5.47 ಕಿ.ಮೀ ರಸ್ತೆಯನ್ನು ಅಭಿವೃದ್ಧಿಪಡಿಸಲಿದೆ. 1.75 ಕಿ.ಮೀ ರಸ್ತೆಯನ್ನು ಬಿಬಿಎಂಪಿ ನಿರ್ಮಿಸಿದೆ. 0.23 ಕಿ.ಮೀ ರಸ್ತೆ ಸ್ಮಾರ್ಟ್ ಸಿಟಿ ಯೋಜನೆಯಡಿ ನಿರ್ಮಾಣವಾಗಿದೆ.
ಹಳೆ ಮದ್ರಾಸ್ ರಸ್ತೆ	40.12	13.53	18.5 ಕಿ.ಮೀ ರಸ್ತೆಯಲ್ಲಿ ನಿಗಮವು 10 ಕಿ.ಮೀ ಮಾತ್ರ ಅಭಿವೃದ್ಧಿಪಡಿಸಲಿದೆ. 1.1 ಕಿ.ಮೀ ವೈಟ್‌ಟಾಪಿಂಗ್ ರಸ್ತೆ ಸೇರಿ 3.20 ಕಿ.ಮೀ ರಸ್ತೆಯನ್ನು ಪಾಲಿಕೆ ನಿರ್ಮಿಸಿದೆ. ಬಿಎಂಆರ್‌ಸಿಎಲ್ 5.3 ಕಿ.ಮೀ ರಸ್ತೆ ನಿರ್ವಹಿಸುತ್ತಿದೆ.
ಹಳೆ ವಿಮಾನ ನಿಲ್ದಾಣ ರಸ್ತೆ	63.94	10.24	17.15 ಕಿ.ಮೀ ರಸ್ತೆಯಲ್ಲಿ ನಿಗಮ ಅಭಿವೃದ್ಧಿಪಡಿಸುವುದು 10 ಕಿ.ಮೀ ರಸ್ತೆಯನ್ನಷ್ಟೇ. ಇನ್ನುಳಿದ ರಸ್ತೆಯಲ್ಲಿ ಬಿಬಿಎಂಪಿ ನಿರ್ಮಿಸಿದ 3.15 ಕಿ.ಮೀ ಸಿಗ್ನಲ್ ರಹಿತ ಕಾರಿಡಾರ್ ಸೇರಿದೆ.
ಸರ್ಜಾಪುರ ರಸ್ತೆ	7.55	6.25	8.74 ಕಿ.ಮೀ ರಸ್ತೆಯಲ್ಲಿ 1.1 ಕಿ.ಮೀಯನ್ನು ಮಾತ್ರ ನಿಗಮ ಅಭಿವೃದ್ಧಿಪಡಿಸಬೇಕಿದೆ. 3 ಕಿ.ಮೀ ವೈಟ್‌ಟಾಪಿಂಗ್ ರಸ್ತೆ ಸೇರಿ 7.64 ಕಿ.ಮೀ ರಸ್ತೆಯನ್ನು ಬಿಬಿಎಂಪಿ ನಿರ್ಮಿಸಿದೆ.
ಹೊಸೂರು ರಸ್ತೆ	0.0	4.60	6.45 ಕಿ.ಮೀ ಉದ್ದದ ರಸ್ತೆಯಲ್ಲಿ ಬಿಬಿಎಂಪಿ ನಿರ್ಮಿಸಿದ 5.05 ಕಿ.ಮೀ ವೈಟ್‌ಟಾಪಿಂಗ್ ರಸ್ತೆ ಇದೆ. ಇಲ್ಲಿ ನಿಗಮವು ಹೊಸ ರಸ್ತೆ ಅಭಿವೃದ್ಧಿಪಡಿಸುತ್ತಿಲ್ಲ
ಬನ್ನೇರುಘಟ್ಟ ರಸ್ತೆ	0.0	12.10	16.5 ಕಿ.ಮೀ ರಸ್ತೆಯಲ್ಲಿ ನಿಗಮ ಯಾವುದೇ ರಸ್ತೆಯನ್ನೂ ಅಭಿವೃದ್ಧಿಪಡಿಸುತ್ತಿಲ್ಲ. ಬಿಬಿಎಂಪಿ 6 ಕಿ.ಮೀ ರಸ್ತೆ ಅಭಿವೃದ್ಧಿಪಡಿಸಿದೆ. ಬಿಎಂಆರ್‌ಸಿಎಲ್ 9.6 ಕಿ.ಮೀ ಮತ್ತು ಲೋಕೋಪಯೋಗಿ ಇಲಾಖೆ 3.5 ಕಿ.ಮೀ ರಸ್ತೆ ನಿರ್ವಹಿಸುತ್ತಿವೆ.
ಕನಕಪುರ ರಸ್ತೆ	1.93	10.73	14.5 ಕಿ.ಮೀ ಉದ್ದದ ರಸ್ತೆಯಲ್ಲಿ ನಿಗಮವು 0.5 ಕಿ.ಮೀ ರಸ್ತೆಯನ್ನು ಮಾತ್ರ ಅಭಿವೃದ್ಧಿಪಡಿಸಲಿದೆ. 5 ಕಿ.ಮೀ ರಸ್ತೆಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ನಡೆದಿದೆ. 5.20 ಕಿ.ಮೀ ರಸ್ತೆಯನ್ನು ಬಿಎಂಆರ್‌ಎಸಿಎಲ್ ನಿರ್ವಹಿಸುತ್ತಿದೆ.
ಮೈಸೂರು ರಸ್ತೆ	25.14	10.09	15.4 ಕಿ.ಮೀ ಉದ್ದದ ರಸ್ತೆಯಲ್ಲಿ ನಿಗಮ 8.6 ಕಿ.ಮೀ ರಸ್ತೆಯನ್ನು ಮಾತ್ರ ಅಭಿವೃದ್ಧಿಪಡಿಸಲಿದೆ. 4.9 ರಸ್ತೆ ವೈಟ್‌ಟಾಪಿಂಗ್ ರಸ್ತೆ ಇದ್ದು, 0.75 ಕಿ.ಮೀಯನ್ನು ಬಿಎಂಆರ್‌ಸಿಎಲ್ ನಿರ್ವಹಿಸುತ್ತಿದೆ.
ಮಾಗಡಿ ರಸ್ತೆ	40.45	6.89	ಒಟ್ಟು 12 ಕಿ.ಮೀ ರಸ್ತೆಯಲ್ಲಿ ನಿಗಮವು 6.73 ಕಿ.ಮೀ ಮಾತ್ರ ಅಭಿವೃದ್ಧಿಪಡಿಸಲಿದೆ. 4.27 ಕಿ.ಮೀ ವೈಟ್‌ಟಾಪಿಂಗ್ ಕಾಮಗಾರಿ ನಡೆದಿದೆ.
ತುಮಕೂರು ರಸ್ತೆ	25.28	6.05	7.90 ಕಿ.ಮೀ ರಸ್ತೆಯಲ್ಲಿ ನಿಗಮವು 4.83 ಕಿ.ಮೀ ರಸ್ತೆಯನ್ನು ಅಭಿವೃದ್ಧಿಪಡಿಸಬೇಕಿದೆ. ಬಿಬಿಎಂಪಿ 3.27 ಕಿ.ಮೀ ನಿರ್ಮಿಸಿದೆ. ಈ ಇಡೀ ಕಾರಿಡಾರ್ ಸುಸ್ಥಿತಿಯಲ್ಲಿದೆ.
ಪಶ್ಚಿಮ ಕಾರ್ಡ್ ರಸ್ತೆ	8.56	7.88	8.4 ಕಿ.ಮೀ ಉದ್ದದ ರಸ್ತೆಯಲ್ಲಿ ನಿಗಮವು 1.7 ಕಿ.ಮೀ ರಸ್ತೆಯನ್ನು ಮಾತ್ರ ಅಭಿವೃದ್ಧಿಪಡಿಸಬೇಕಿದೆ. 4.05 ಕಿ.ಮೀ ವೈಟ್‌ಟಾಪಿಂಗ್ ಆಗಿದೆ. 1.97 ಕಿ.ಮೀ ಗ್ರೇಡ್ ಸೆಪರೇಟರ್‌ಗಳು ಇದರಲ್ಲಿವೆ.
ಮೈಸೂರು ರಸ್ತೆ– ತುಮಕೂರು ರಸ್ತೆ (ಒಆರ್‌ಆರ್–ಎ)	0.0	11.26	10.90 ಕಿ.ಮೀ ಉದ್ದದ ರಸ್ತೆ ಭಾಗ ಸಂಪೂರ್ಣ ವೈಟ್‌ಟಾಪಿಂಗ್ ಆಗಿದೆ.
ತುಮಕೂರು ರಸ್ತೆ– ಕೆ.ಆರ್.ಪುರ (ಒಆರ್‌ಆರ್ ಬಿ)	17.12	16.38	18.60 ಕಿ.ಮೀ ಉದ್ದದ ರಸ್ತೆಯಲ್ಲಿ 15.15 ಕಿ.ಮೀ ವೈಟ್‌ಟಾಪಿಂಗ್ ಆಗಿದೆ. ನಿಗಮವು 2.4 ಕಿ.ಮೀ ಅಭಿವೃದ್ಧಿಪಡಿಸಬೇಕಿದೆ.
ಕೆ.ಆರ್.ಪುರ– ಸಿಲ್ಕ್‌ಬೋರ್ಡ್ (ಒಆರ್‌ಆರ್ ಸಿ)	59.58	12.62	ಈ ಇಡೀ ರಸ್ತೆಯಲ್ಲಿ ನಮ್ಮ ಮೆಟ್ರೊ ಮಾರ್ಗ ನಿರ್ಮಾಣವಾಗಲಿದೆ. ಈ ಹಂತದಲ್ಲಿ ಕೆಆರ್‌ಡಿಸಿಎಲ್ ರಸ್ತೆ ಅಭಿವೃದ್ಧಿಪಡಿಸುವುದು ಸಾಧುವೇ ಎಂಬುದು ಪ್ರಶ್ನೆ.
ಸಿಲ್ಕ್‌ಬೋರ್ಡ್– ಮೈಸೂರು ರಸ್ತೆ (ಒಆರ್‌ಆರ್ ಡಿ)	25.62	8.23	12 ಕಿ.ಮೀ ಉದ್ದದ ರಸ್ತೆಯಲ್ಲಿ 6.50 ಕಿ.ಮೀ ರಸ್ತೆಯನ್ನು ನಿಗಮ ಅಭಿವೃದ್ಧಿಪಡಿಸಬೇಕಿದೆ.

ಎಲ್1 ಬದಲು ಎಲ್2 ಗುತ್ತಿಗೆದಾರನಿಗೆ ಟೆಂಡರ್?

ಪ್ಯಾಕೇಜ್–2ರ ಕಾಮಗಾರಿಯ ಟೆಂಡರ್‌ನಲ್ಲಿ ಜೆಎಂಸಿ ಕನ್‌ಸ್ಟ್ರಕ್ಷನ್ಸ್ ಸಂಸ್ಥೆ ಅತೀ ಕಡಿಮೆ ಮೊತ್ತವನ್ನು (₹ 200.89 ಕೋಟಿ) ನಮೂದಿಸಿತ್ತು. ಆದರೆ, ಆರ್‌ಎಂಎನ್ ಇನ್ಫ್ರಾಸ್ಟ್ರಕ್ಚರ್ಸ್ ಸಂಸ್ಥೆಗೆ (₹ 202 ಕೋಟಿ) ಈ ಪ್ಯಾಕೇಜ್‌ನ ಟೆಂಡರ್ ನೀಡುವಂತೆ ಕೆಆರ್‌ಡಿಸಿಎಲ್ ಶಿಫಾರಸು ಮಾಡಿದೆ. ಜೆಎಂಸಿ ಕನ್‌ಸ್ಟ್ರಕ್ಷನ್ಸ್ ಸಂಸ್ಥೆಗೆ ಪ್ಯಾಕೇಜ್–1ರ ಕಾಮಗಾರಿ ನೀಡುತ್ತಿರುವುದರಿಂದ ಪ್ಯಾಕೇಜ್–2ರ ಕಾಮಗಾರಿ ನೀಡುತ್ತಿಲ್ಲ ಎಂಬುದು ಕೆಆರ್‌ಡಿಸಿಎಲ್‌ನ ವಾದ.

ಆದರೆ, ಕೆಟಿಟಿಪಿ ಕಾಯ್ದೆಯಲ್ಲಿ ಎಲ್–2 ಗುತ್ತಿಗೆದಾರರಿಗೆ ಟೆಂಡರ್ ನೀಡಲು ಅವಕಾಶ ಇಲ್ಲ. ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರನ್ನು ಬಿಡ್ ತೆರೆದ ಬಳಿ ಅನರ್ಹಗೊಳಿಸುವುದಕ್ಕೂ ಅವಕಾಶ ಇಲ್ಲ. ನಾಲ್ಕು ಪ್ಯಾಕೇಜ್‌ಗಳಲ್ಲಿ ಒಂದರಲ್ಲಿ ಮಾತ್ರ ಭಾಗವಹಿಸಲು ಅವಕಾಶ ನೀಡುವುದಾದರೆ ಪ್ಯಾಕೇಜ್–2ರ ತಾಂತ್ರಿಕ ಬಿಡ್ ಪರಿಶೀಲನೆ ಸಂದರ್ಭದಲ್ಲೇ ಜೆಎಂಸಿ ಕನ್‌ಸ್ಟ್ರಕ್ಷನ್ಸ್ ಸಂಸ್ಥೆಯನ್ನು ಅನರ್ಹಗೊಳಿಸಬೇಕಾಗಿತ್ತು ಎಂದು ಬೊಟ್ಟು ಮಾಡುತ್ತಾರೆ ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಗಳು.

ಚಿತ್ರಾವಳಿ



ಕರ್ನಾಟಕ ರಾಜ್ಯ ಸ್ವಕುಳಸಾಳಿ ಸಮಾಜವು ಯಲಹಂಕದ ಅಗ್ರಹಾರ ಬಡಾವಣೆಯ ಸ್ವಕುಳಸಾಳಿ ಸಮಾಜದ ಬಡ ನೇಕಾರರ ಕುಟುಂಬಗಳಿಗೆ ದಿನಸಿ ಕಿಟ್‌ಗಳನ್ನು ವಿತರಿಸಿತು. ಸಮಾಜದ ರಾಜ್ಯ ಘಟಕದ ಅಧ್ಯಕ್ಷ ಚಂದ್ರಕಾಂತ ಭಂಡಾರೆ ನೇತೃತ್ವದಲ್ಲಿ ಈ ಕಾರ್ಯ ನಡೆಯಿತು. ಸಂಘದ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಗುರುನಾಥ ಪಾಣಿಬಾಥೆ, ಗೌರವಾಧ್ಯಕ್ಷ ವೆಂಕಟೇಶ್ ಚಿಲ್ಲಾಳೆ, ಸುರೇಶ್ ಬಾಬು, ಗಣೇಶ್, ಗೋವಿಂದ ಹಾಗೂ ಅವಿನಾಶ್ ಪಾಣಿಭಾಥೆ ಅವರು ಕಿಟ್‌ಗಳನ್ನು ವಿತರಿಸಿದರು.



ಸುರಕ್ಷಾ ಟ್ರಸ್ಟ್‌ನ ಅಧ್ಯಕ್ಷ ಸುಧೀರ್ ಹಸಿಜಾ ಮತ್ತು ಸದಸ್ಯರು ಮಲ್ಲೇಶ್ವರದ ವಾಸವಿ ಕನ್ಯಕಾ ಪರಮೇಶ್ವರಿ ದೇವಸ್ಥಾನದಲ್ಲಿ ಪುರೋಹಿತರು ಮತ್ತು ಅರ್ಚಕರಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು. ದೇವಸ್ಥಾನದ ಮುಖ್ಯ ಅರ್ಚಕ ಕಿರಣ್ ಶಾಸ್ತ್ರಿ ಮತ್ತಿತರರು ಇದ್ದರು.



ಲಾಕ್‌ಡೌನ್‌ನಿಂದಾಗಿ ಸಾರಿಗೆ ವ್ಯವಸ್ಥೆ ಇಲ್ಲದಿರುವುದರಿಂದ ಜನ ತಮ್ಮ ಸ್ಥಳಗಳಿಗೆ ತಲುಪಲು ಸರಕು ಸಾಗಣೆ ವಾಹನವೊಂದರ ಹಿಂಬದಿ ಹತ್ತಿ ಪ್ರಯಾಣಿಸುತ್ತಿದ್ದ ದೃಶ್ಯ ಹಡ್ಸನ್ ವೃತ್ತದ ಬಳಿ ಭಾನುವಾರ ಕಂಡುಬಂತು –ಪ್ರಜಾವಾಣಿ ಚಿತ್ರ

ಡಿಕೆಶಿ ಮನವಿಗೆ ತಕ್ಷಣ ಸ್ಪಂದಿಸಿದ ತೆಲಂಗಾಣ ಸರ್ಕಾರ

ಮಂಡ್ಯ ವ್ಯಕ್ತಿಯ ಶವ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಹೈದರಾಬಾದ್ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಮಂಡ್ಯದ ಮಂಜುನಾಥ್ ಸಾವು
- ಡಿಕೆಶಿ ಟ್ವೀಟ್‌ಗೆ ಅರ್ಧ ಗಂಟೆಯಲ್ಲೇ ಟಿಆರ್‌ಎಸ್ ಕಾರ್ಯಾಧ್ಯಕ್ಷ ಸ್ಪಂದನೆ



ಶಿವಕುಮಾರ್

ಬೆಂಗಳೂರು: ಹೈದರಾಬಾದಿನ ಆಸ್ಪತ್ರೆಯಲ್ಲಿ ಬಿಲ್ ಕಟ್ಟಲಾಗದೆ ಪರದಾಡುತ್ತಿದ್ದ ಮಂಡ್ಯ ಮೂಲದ ಕುಟುಂಬವೊಂದರ ನೆರವಿಗೆ ಧಾವಿಸುವಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾಡಿದ್ದ ಮನವಿಗೆ ತೆಲಂಗಾಣ ಸರ್ಕಾರ ತಕ್ಷಣ ಸ್ಪಂದಿಸಿದೆ. ಹೀಗಾಗಿ, ಮಂಡ್ಯದ ವ್ಯಕ್ತಿಯೊಬ್ಬರ ಶವವನ್ನು ಅವರ ಕುಟುಂಬ ಸದಸ್ಯರಿಗೆ ಹಸ್ತಾಂತರಿಸಲಾಗಿದೆ.

ಹೈದರಾಬಾದ್‌ನ ಮೆಡಿಕೊವರ್ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಮಂಡ್ಯದ ಮಂಜುನಾಥ್ ಎಂಬುವರು ಚಿಕಿತ್ಸೆ ಫಲಕಾರಿಯಾಗದೆ ನಿಧನರಾದರು. ಅವರ ಚಿಕಿತ್ಸೆ ವೆಚ್ಚ ₹ 7.50 ಲಕ್ಷ ಆಗಿತ್ತು. ಮಂಜುನಾಥ್ ಅವರ ಪತ್ನಿ ಶಶಿಕಲಾ ಅವರಿಗೆ ₹ 2 ಲಕ್ಷ ಮಾತ್ರ ಕಟ್ಟಲು ಸಾಧ್ಯವಾಗಿತ್ತು. ಉಳಿದ ಹಣ ಕಟ್ಟದೆ ಶವ ನೀಡುವುದಿಲ್ಲ ಎಂದು ಆಸ್ಪತ್ರೆ ಆಡಳಿತ ಮಂಡಳಿ ಪಟ್ಟು ಹಿಡಿದಿತ್ತು. ಹೀಗಾಗಿ ಶಶಿಕಲಾ ಅವರು ದಿಕ್ಕು ತೋಚದಂತಾಗಿದ್ದರು.

ಈ ವಿಷಯ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಗಮನಕ್ಕೆ ಬಂದಿತ್ತು.

ಭಾನುವಾರ ಸಂಜೆ ತೆಲಂಗಾಣ ಮುಖ್ಯಮಂತ್ರಿಯನ್ನು ಟ್ಯಾಗ್ ಮಾಡಿ ಟ್ವೀಟ್ ಮಾಡಿದ ಶಿವಕುಮಾರ್, 'ಶಶಿಕಲಾ ಮಂಜುನಾಥ್ ಅವರ ಕುಟುಂಬ ಸಂಕಷ್ಟದಲ್ಲಿದೆ. ಮೆಡಿಕವರ್ ಆಸ್ಪತ್ರೆ ಆಡಳಿತ ಮಂಡಳಿ ಮಂಜುನಾಥ್ ಅವರ ಶವ ನೀಡುತ್ತಿಲ್ಲ. ಶಶಿಕಲಾ ಅವರಿಗೆ ನೆರವು ನೀಡಬೇಕು' ಎಂದು ಮನವಿ ಮಾಡಿದ್ದರು.

ಅರ್ಧ ಗಂಟೆಯಲ್ಲಿ ಸ್ಪಂದಿಸಿದ ಟಿಆರ್‌ಎಸ್ ಪಕ್ಷದ ಕಾರ್ಯಾಧ್ಯಕ್ಷ ಹಾಗೂ ಸಚಿವ ಕಲ್ವಕುಂಟ್ಲ ತಾರಕ ರಾಮರಾವ್ (ಕೆಟಿಆರ್), 'ಶಿವಕುಮಾರ್ ಅವರೇ, ನಾವು ಆ ಕುಟುಂಬದ ಬಗ್ಗೆ ಕಾಳಜಿ ವಹಿಸುತ್ತೇವೆ. ಅವರನ್ನು ಸಂಪರ್ಕಿಸಲು ವಿವರ ನೀಡಿ. ಅಧಿಕಾರಿಗಳು ಆಸ್ಪತ್ರೆಯನ್ನು ಸಂಪರ್ಕಿಸಿ ಮಾಹಿತಿ ಪಡೆಯುವರು' ಎಂದಿದ್ದರು.

ಅದರಂತೆ, ಶಶಿಕಲಾ ಅವರ ದೂರವಾಣಿ ಸಂಖ್ಯೆ ನೀಡಲಾಗಿದ್ದು, ತೆಲಂಗಾಣ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದ್ದರಿಂದ ಮಂಜುನಾಥ್ ಅವರ ಶವವನ್ನು ಕುಟುಂಬ ಸದಸ್ಯರಿಗೆ ಆಸ್ಪತ್ರೆ ಆಡಳಿತ ಮಂಡಳಿ ಹಸ್ತಾಂತರಿಸಿದೆ.


ವುಹಾನ್ ಪ್ರಯೋಗಾಲಯದಲ್ಲೇ ವೈರಸ್ ಸೃಷ್ಟಿ: ವಿಜ್ಞಾನಿಗಳ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪ್ರಯೋಗಾಲಯದಲ್ಲಿ ಕೃತಕವಾಗಿ ಸೃಷ್ಟಿ–ಆರೋಪ
- 22 ಪುಟಗಳ ಸಂಶೋಧನಾ ವರದಿಯಲ್ಲಿ ವಿವರಣೆ
- ವಿಭಿನ್ನ ಬೆರಳಚ್ಚುಗಳ ಪತ್ತೆ ಸಂಶೋಧನಾ ಪ್ರಬಂಧ
- ಅಪಾಯದ ಪರಿಸ್ಥಿತಿಯಲ್ಲಿ ಚೀನಾದ ವಿಜ್ಞಾನಿಗಳು

ನವದೆಹಲಿ: ಸಾಂಕ್ರಾಮಿಕ ಕಾಯಿಲೆಗೆ ಕಾರಣವಾಗುವ ಸಾರ್ಸ್–ಕೋವ್–2 ವೈರಾಣು ಅನ್ನು ಚೀನಾದ ವಿಜ್ಞಾನಿಗಳೇ ಪ್ರಯೋಗಾಲಯದಲ್ಲಿ ಕೃತಕವಾಗಿ ಸೃಷ್ಟಿಸಿದ್ದರು ಎಂದು ಯುರೋಪ್‌ನ ಇಬ್ಬರು ವಿಜ್ಞಾನಿಗಳು ಪ್ರತಿಪಾದಿಸಿದ್ದಾರೆ.

22 ಪುಟಗಳ ಸಂಶೋಧನಾ ಪ್ರಬಂಧದಲ್ಲಿ ಬ್ರಿಟನ್ ಪ್ರಾಧ್ಯಾಪಕ ಅಂಗಸ್ ಡಲ್ಗಲಿಷ್ ಮತ್ತು ನಾರ್ವೆ ವಿಜ್ಞಾನಿ ಬರ್ಗರ್ ಸೊರೆನ್‌ಸೆನ್ ಅವರು ಈ ಬಗ್ಗೆ ವಿವರಗಳನ್ನು ನೀಡಿದ್ದಾರೆ.



ಕೋವಿಡ್–19 ಮಾದರಿಗಳಲ್ಲಿ 'ವಿಭಿನ್ನ ಬೆರಳಚ್ಚುಗಳು' ಪತ್ತೆಯಾಗಿವೆ. ಪ್ರಯೋಗಾಲಯದಲ್ಲಿ ತಿರುಚಿದರೆ ಮಾತ್ರ ಈ ರೀತಿಯ ಮಾದರಿಗಳು ದೊರೆಯಲು ಸಾಧ್ಯ ಎಂದು ಬ್ರಿಟನ್‌ನ ದಿನಪತ್ರಿಕೆ 'ಡೇಲಿ ಮೇಲ್' ಸಂಶೋಧನಾ ಪ್ರಬಂಧದ ಆಧಾರದ ಮೇಲೆ ವಿಶೇಷ ವರದಿ ಮಾಡಿದೆ.

ಚೀನಾದ ಪ್ರಯೋಗಾಲಯಗಳಲ್ಲಿನ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಮರೆಮಾಚುವ ಅಥವಾ ನಾಶಪಡಿಸುವ ಪ್ರಯತ್ನ ಮಾಡಲಾಗಿದೆ. ಇಂತಹ ಚಟುವಟಿಕೆಗಳ ಬಗ್ಗೆ ಮಾತನಾಡಿದ ವಿಜ್ಞಾನಿಗಳು ಅಪಾಯ ಸ್ಥಿತಿ ಎದುರಿಸುತ್ತಿದ್ದಾರೆ. ವಿಜ್ಞಾನಿಗಳು ಮೌನವಾಗಿರಬೇಕು ಅಥವಾ ಅವರನ್ನು ಇಲ್ಲದಂತೆ ಮಾಡಲಾಗುತ್ತದೆ ಎಂದು ದೂರಲಾಗಿದೆ.

ವುಹಾನ್ ಪ್ರಯೋಗಾಲಯದಲ್ಲಿ ಕೋವಿಡ್–19 ವೈರಸ್ ಸೃಷ್ಟಿಸಲಾಗಿತ್ತು. ನೈಸರ್ಗಿಕವಾದ ವೈರಸ್ ಅನ್ನು ಅತಿ ಹೆಚ್ಚು ಸೋಂಕು ಹರಡುವಂತೆ ಮಾಡುವ ಯೋಜನೆ ಸಂದರ್ಭದಲ್ಲಿ ಈ ವೈರಸ್ ಸೃಷ್ಟಿಸಲಾಗಿದೆ ಎಂದು ವಿಜ್ಞಾನಿಗಳಾದ ಡಲ್ಗಲಿಷ್ ಮತ್ತು ಬರ್ಗರ್ ಸೊರೆನ್‌ಸೆನ್ ಅಭಿಪ್ರಾಯ ಪಟ್ಟಿದ್ದಾರೆ.

ಇನ್ನೂ ಪ್ರಕಟಿಸದ ಕಾರಣ ಸಂಶೋಧನಾ ಪ್ರಬಂಧ ಸಾರ್ವಜನಿಕವಾಗಿ ಲಭ್ಯವಾಗಿಲ್ಲ.

ಸಾರ್ಸ್–ಕೋವ್–2 ವೈರಸ್ ನೈಸರ್ಗಿಕವಾಗಿ ಹುಟ್ಟಿಕೊಂಡ ಸೂಕ್ಷ್ಮ ವೈರಾಣು ಎಂದು ಚೀನಾದ ವಿಜ್ಞಾನಿಗಳು ಪ್ರತಿಪಾದಿಸಿದ್ದಾರೆ.

ಕೊಲೆಗೆ ಸಂಚು ರೂಪಿಸಿದ್ದ ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧಿ ಬಣದಲ್ಲಿದ್ದ ರೌಡಿಶೀಟರ್ ಕೊಲೆಗೆ ಸಂಚು ರೂಪಿಸಿದ್ದ ಆರೋಪದಡಿ ರೌಡಿಶೀಟರ್ ಹಾಗೂ ಸಹಚರರು ಸೇರಿ ನಾಲ್ಕು ಮಂದಿ ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಕಾಡುಬೀಸನಹಳ್ಳಿಯ ಸೋಮ (40), ಒಡಗೆರೆ ಮುಖ್ಯರಸ್ತೆಯ ಮಧು (24), ಸರ್ಜಾಪುರದ ಸುಮಂತ ಕುಮಾರ್ (24) ಹಾಗೂ ವರ್ತೂರಿನ ಮುನಿಯಲ್ಲಪ್ಪ (33) ಬಂಧಿತರು.

'ಎದುರಾಳಿ ಗುಂಪಿನಲ್ಲಿದ್ದ ಮಾರತ್ತಹಳ್ಳಿಯ ರೌಡಿಶೀಟರ್ ರೋಹಿತ್ ಎಂಬುವನ ಕೊಲೆಗೆ ಆರೋಪಿಗಳು ಸಂಚು ರೂಪಿಸಿದ್ದರು. ಈ ವಿಚಾರ ತಿಳಿದು ನಾಲ್ವರನ್ನೂ ಬಂಧಿಸಿ, ಮಾರಕಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ರೋಹಿತ್ ಹಾಗೂ ಬಂಧಿತ ಸೋಮನ ನಡುವೆ ಈ ಹಿಂದೆ ವೈರತ್ವ ಇತ್ತು. ಸೋಮನನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ ರೋಹಿತ್, ಮಂಗಳೂರಿನಿಂದ ಹುಡುಗರನ್ನು ಕರೆಸಿಕೊಂಡಿದ್ದ. ಈ ಬಗ್ಗೆ ಮಾಹಿತಿ ಪಡೆದಿದ್ದ ಸಿಸಿಬಿ ಪೊಲೀಸರು ರೋಹಿತ್‌ನನ್ನು ಬಂಧಿಸಿ ಜೈಲಿಗೆ ಕಳಿಸಿದ್ದರು. ಇತ್ತೀಚೆಗಷ್ಟೇ ರೋಹಿತ್ ಜೈಲಿನಿಂದ ಬಿಡುಗಡೆಯಾಗಿದ್ದ'.

'ರೋಹಿತ್‌ನನ್ನು ಕೊಲೆ ಮಾಡಲು ಸೋಮ ತಂಡ ಕಟ್ಟಿದ್ದ. ವರ್ತೂರು ಠಾಣಾ ವ್ಯಾಪ್ತಿಯ ಕೆರೆಕೋಡಿ ಗಂಗಮ್ಮ ದೇವಸ್ಥಾನದ ಹತ್ತಿರ ರೋಹಿತ್ ಶನಿವಾರ ಬರುವುದನ್ನು ತಿಳಿದು ಕೊಲೆಗೆ ಮಾರಕಾಸ್ತ್ರಗಳೊಂದಿಗೆ ಸಜ್ಜಾಗಿದ್ದರು' ಎಂದು ಪೊಲೀಸರು ವಿವರಿಸಿದರು.

ಬಂಧಿತ ಸೋಮ ಮಾರತ್ತಹಳ್ಳಿ ಠಾಣೆಯ ರೌಡಿಶೀಟರ್ ಆಗಿದ್ದು, ಜೋಡಿಕೊಲೆ, ಕೊಲೆ ಯತ್ನ, ಬೆದರಿಕೆ ಸೇರಿದಂತೆ 9 ಪ್ರಕರಣಗಳು ಈತನ ಮೇಲಿದೆ. ವರ್ತೂರು ಠಾಣೆಯ ರೌಡಿ ಶೀಟರ್ ಆಗಿರುವ ಮಧು ಮೇಲೂ ಹಲವು ಪ್ರಕರಣಗಳು ಹಾಗೂ ಮುನಿಯಲ್ಲಪ್ಪನ ವಿರುದ್ಧ ಒಂದು ಕೊಲೆಯತ್ನ ಪ್ರಕರಣ ದಾಖಲಾಗಿವೆ.

'ಬಂಧಿತರು 14 ಪ್ರಕರಣಗಳಲ್ಲಿ ಆರೋಪಿಗಳಾಗಿದ್ದು, ನಾಲ್ಕು ಮಾರಕಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ. ತನಿಖೆ ಮುಂದುವರಿದಿದೆ' ಎಂದು ಸಿಸಿಬಿ ಕೇರಳಕ್ಕೆ ಅಕ್ರಮ ಮದ್ಯ ಸಾಗಾಟ:ಬಂಧನ ಜಂಟಿ ಕಮಿಷನರ್ ಸಂದೀಪ್ ಪಾಟೀಲ ತಿಳಿಸಿದರು.



ಬಂಧಿತರು ಹಾಗೂ ಪೊಲೀಸರು ವಶಕ್ಕೆ ಪಡೆದಿರುವ ಮಾರಕಾಸ್ತ್ರಗಳು

ಅಪರಾಧ ಸುದ್ದಿ

ಕೇರಳಕ್ಕೆ ಅಕ್ರಮ ಮದ್ಯ ಸಾಗಾಟ: ಆರೋಪಿ ಬಂಧನ

ಬೆಂಗಳೂರಿನಿಂದ ಕೇರಳಕ್ಕೆ ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿದ್ದ ವ್ಯಕ್ತಿಯನ್ನು ದಂಡು ರೈಲ್ವೆ ನಿಲ್ದಾಣದ ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳದ ಸುಕಂತ ದಾಸ್ (36) ಬಂಧಿತ ಆರೋಪಿ.

'ರೈಲ್ವೆ ನಿಲ್ದಾಣದ ಪ್ಲಾಟ್‌ಫಾರ್ಮ್ ಎರಡರಲ್ಲಿ ಈತ ಚೀಲಗಳನ್ನು ಹಿಡಿದು ನಿಂತಿದ್ದ. ಅನುಮಾನದಿಂದ ವಿಚಾರಣೆ ನಡೆಸಿದಾಗ ಚೀಲದಲ್ಲಿ ಮದ್ಯ ಬಾಟಲಿಗಳು ಪತ್ತೆಯಾದವು' ಎಂದು ಪೊಲೀಸರು ತಿಳಿಸಿದರು.

'ಆರೋಪಿ ಜಕ್ಕೂರಿನ ಮದ್ಯದಂಗಡಿಯಿಂದ ಮದ್ಯದ ಬಾಟಲಿಗಳನ್ನು ಖರೀದಿಸಿದ್ದ. ಲಾಕ್‌ಡೌನ್‌ನಿಂದಾಗಿ ಬೇಡಿಕೆ ಇರುವ ಕಾರಣಕ್ಕೆ ಕೇರಳದಲ್ಲಿ ಹೆಚ್ಚಿನ ದರಕ್ಕೆ ಮಾರಾಟ ಮಾಡಲು ಯೋಜಿಸಿದ್ದ. ಇದಕ್ಕಾಗಿ ಬೆಂಗಳೂರಿನಿಂದ ತಿರುವನಂತಪುರಕ್ಕೆ ತೆರಳುವ ರೈಲು ಹತ್ತಲು ದಂಡು ನಿಲ್ದಾಣಕ್ಕೆ ಬಂದಿದ್ದ' ಎಂದೂ ಹೇಳಿದರು.

'ಆರೋಪಿಯಿಂದ ₹26,433 ಮೌಲ್ಯದ ಒಟ್ಟು 77 ಮದ್ಯದ ಬಾಟಲಿಗಳನ್ನು ಜಪ್ತಿ ಮಾಡಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಸೆಂಟ್ರಲ್ ವಿಸ್ತಾ: ಇಂದು ಹೈಕೋರ್ಟ್ ತೀರ್ಪು

ನವದೆಹಲಿ (ಪಿಟಿಐ): ಕೋವಿಡ್ ಪಿಡುಗಿನ ಸಂದರ್ಭದಲ್ಲಿ 'ಸೆಂಟ್ರಲ್ ವಿಸ್ತಾ' ಯೋಜನೆಯ ಕಾರ್ಯವನ್ನು ಮುಂದುವರಿಸಲು ಅನುಮತಿ ನೀಡಬೇಕೇ ಅಥವಾ ಬೇಡವೇ ಎಂಬುದರ ಕುರಿತು ದೆಹಲಿ ಹೈಕೋರ್ಟ್ ಸೋಮವಾರ ತೀರ್ಪು ನೀಡಲಿದೆ.

ನಿಧನ ವಾರ್ತೆ

ಆರ್. ರಾಮಚಂದ್ರ



ಬೆಂಗಳೂರು: ದೊಡ್ಡಬಳ್ಳಾಪುರ ವೈನ್‌ಸ್ಟೋರ್ಸ್ ಅಸೋಸಿಯೇಷನ್‌ನ ಅಧ್ಯಕ್ಷರಾಗಿದ್ದ ಆರ್. ರಾಮಚಂದ್ರ (70) ನಗರದ ಖಾಸಗಿ ಆಸ್ಪತ್ರೆಯಲ್ಲಿ ಅನಾರೋಗ್ಯದಿಂದ ಭಾನುವಾರ ನಿಧನರಾದರು.

ನಾಗರಬಾವಿಯಲ್ಲಿ ವಾಸವಿದ್ದ ಅವರು ದೊಡ್ಡಬಳ್ಳಾಪುರದ ಸಿನಿಮಾ ರಾಮಯ್ಯ ಅವರ ಪುತ್ರ. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಸೋಮವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕರಾವಳಿ ಜಿಲ್ಲೆಗಳು, ಕೊಡಗಿನಲ್ಲಿ ಮಳೆ

ಬೆಂಗಳೂರು: ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಕೊಡಗು ಜಿಲ್ಲೆಯ ವಿವಿಧೆಡೆ ಭಾನುವಾರ ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಲ್ಲಿ ಧಾರಾಕಾರ, ಬೆಳ್ತಂಗಡಿ, ಪುತ್ತೂರು, ಕಡಬದಲ್ಲಿ ಸಾಧಾರಣ ಮಳೆಯಾಗಿದೆ. ಮಂಗಳೂರು ನಗರದಲ್ಲಿ ಉತ್ತಮ ಮಳೆಯಾಗಿದೆ. ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಮಧ್ಯಾಹ್ನ ಮಳೆಯಾಗಿದೆ.


ಕಾರವಾರ ನಗರದಲ್ಲಿ ಸುಮಾರು ಎರಡು ತಾಸು ಮಳೆಯಾಗಿದ್ದರೆ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ಗೋಕರ್ಣ ಹಾಗೂ ದಾಂಡೇಲಿಯಲ್ಲಿ ಕೂಡ ಉತ್ತಮ ಮಳೆಯಾಯಿತು.

ಕೊಡಗು ಜಿಲ್ಲೆಯ ಮಡಿಕೇರಿ, ಕಾಟಕೇರಿ, ಮೇಕೇರಿ, ಕಗ್ಗೊಡ್ಲು ಭಾಗದಲ್ಲಿ ಭಾನುವಾರ ಸಂಜೆ ಸಾಧಾರಣ ಮಳೆ ಸುರಿದಿದೆ.

ನುಡಿನಮನದಲ್ಲಿ ಶತಾಯುಷಿ ಎಚ್.ಎಸ್. ದೊರೆಸ್ವಾಮಿ ವ್ಯಕ್ತಿತ್ವದ ನೆನಪು

ಗಾಂಧಿವಾದವೇ ಮೈವೆತ್ತಂತಿದ್ದರು

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಅಧಿಕಾರಷಾಹಿ ಮತ್ತು ಹಿಂದುತ್ವದ ಪ್ರಭಾವಕ್ಕೆ ಯಾವತ್ತೂ ಶರಣಾಗದ ಎಚ್.ಎಸ್. ದೊರೆಸ್ವಾಮಿ ಜೀವನದ ಕೊನೆಯವರೆಗೂ ಹೋರಾಟಗಾರನಾಗಿಯೇ ಉಳಿದರು. ಗಾಂಧಿವಾದವೇ ಮೈವೆತ್ತಂತಿದ್ದ ಅವರು ಕನ್ನಡ ನಾಡಿನ ಅಂತರಾತ್ಮದ ಕಾವಲುಗಾರರಂತೆ ಇದ್ದರು'.

– ಇವು 'ಪ್ರಜಾವಾಣಿ' ಭಾನುವಾರ ಆಯೋಜಿಸಿದ್ದ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಅವರ ನುಡಿನಮನ ಫೇಸ್‌ಬುಕ್ ಲೈವ್ ಸಂವಾದ ಕಾರ್ಯಕ್ರಮದಲ್ಲಿ ನಾಡಿನ ಹಿರಿಯ ಹೋರಾಟಗಾರರು, ದೊರೆಸ್ವಾಮಿ ಅವರ ಒಡನಾಡಿಗಳು, ಬರಹಗಾರರಿಂದ ವ್ಯಕ್ತವಾದ ಮಾತುಗಳು.

ಆರಂಭದಲ್ಲಿ ಮಾತನಾಡಿದ ಲೇಖಕ ರಾಮಚಂದ್ರ ಗುಹಾ, 'ದೊರೆಸ್ವಾಮಿ ಅವರ ಕಾಲಘಟ್ಟದ ಗಾಂಧಿವಾದಿಗಳಲ್ಲಿ ಹೆಚ್ಚಿನವರು ಒಂದೋ ಹಿಂದುತ್ವಕ್ಕೆ ಇಲ್ಲವೇ ಅಧಿಕಾರಷಾಹಿ ಪ್ರಭಾವಕ್ಕೆ ಒಳಗಾಗಿ ಬೇರೆ ದಾರಿಯಲ್ಲಿ ಸಾಗಿದರು. ಆದರೆ, ದೊರೆಸ್ವಾಮಿ ಕೊನೆಯ ಉಸಿರಿನವರೆಗೂ ಗಾಂಧಿವಾದಿಯೇ ಆಗಿ ಉಳಿದರು' ಎಂದು ಅವರೊಡನೆ ಹೋರಾಟದಲ್ಲಿ ಭಾಗಿಯಾದ ನೆನಪುಗಳನ್ನು ಹಂಚಿಕೊಂಡರು.

'ದೊರೆಸ್ವಾಮಿ ಎಂದೂ ದೊರೆಯೂ ಆಗಲಿಲ್ಲ, ಸ್ವಾಮಿಯೂ ಆಗಲಿಲ್ಲ. ಆದರೆ, ಈಗಿನ ರಾಜಕಾರಣಿಗಳು ಕಿಂಚಿತ್ತಾದರೂ ಕಣ್ಣೆತ್ತಿ ನೋಡಬೇಕಾದ,

ಅನುಸರಿಸಬೇಕಾದ ಆದರ್ಶಗಳನ್ನು ಬಿಟ್ಟು ಹೋಗಿದ್ದಾರೆ' ಎಂದು ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಹೇಳಿದರು.

ಗಾಂಧಿವಾದದ ವಿಸ್ತಾರಕ: 'ದೊರೆಸ್ವಾಮಿ ಗಾಂಧಿವಾದದ ವಿಸ್ತಾರಕ ಮತ್ತು ಮರು ನಿರೂಪಕನಾಗಿ ಜೀವನ ಸವೆಸಿದರು' ಎಂದು ಬಣ್ಣಿಸಿದರು.

'ತಮ್ಮ ಜೀವನದುದ್ದಕ್ಕೂ ಹಲವು ಬಾರಿ ವಿಧಾನಸೌಧ ಸೇರಿದಂತೆ ಸರ್ಕಾರಿ ಕಚೇರಿಗಳಿಗೆ ಬರುತ್ತಿದ್ದ ದೊರೆಸ್ವಾಮಿ ಯಾವತ್ತೂ ತಮಗಾಗಿ ಏನನ್ನೂ ಕೇಳಿದವರಲ್ಲ. ಹೋರಾಟದ ಭಾಗವಾಗಿಯೇ ಅವರು ಹಾಗೆ ಬರುತ್ತಿದ್ದರು. ನಿಜವಾದ ಅರ್ಥದಲ್ಲಿ ಕನ್ನಡ ನಾಡಿನ ಅಂತರಾತ್ಮದ ಕಾವಲುಗಾರನಾಗಿದ್ದರು' ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಹೇಳಿದರು.

ಸಿರಿಗೆರೆ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಕಾಂಗ್ರೆಸ್ ಮುಖಂಡ ಬಿ.ಎಲ್. ಶಂಕರ್, ಸಾಹಿತಿಗಳಾದ ಎಚ್.ಎಸ್. ವೆಂಕಟೇಶಮೂರ್ತಿ, ಪ್ರೊ.ಎಸ್.ಜಿ. ಸಿದ್ದರಾಮಯ್ಯ, ವಿಜಯಮ್ಮ, ಶಾಸಕ ಎ.ಟಿ. ರಾಮಸ್ವಾಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ದಲಿತ ಸಂಘರ್ಷ ಸಮಿತಿ ಸಂಚಾಲಕ ಮಾವಳ್ಳಿ ಶಂಕರ್, ಕರ್ನಾಟಕ ರಾಷ್ಟ್ರ ಸಮಿತಿ ಅಧ್ಯಕ್ಷ ರವಿಕೃಷ್ಣಾ ರೆಡ್ಡಿ ಸೇರಿದಂತೆ ಹಲವರು ನುಡಿನಮನ ಸಲ್ಲಿಸಿದರು.

ಗಾಯಕರಾದ ಪುತ್ತೂರು ನರಸಿಂಹ ನಾಯಕ್, ಸಂಗೀತಾ ಕಟ್ಟಿ, ಸುರೇಖಾ ಹೆಗಡೆ, ಮಂಗಳಾ ರವಿ, ಪಂಚಮ್ ಹಳಿಬಂಡಿ, ಸವಿತಾ ಗಣೇಶ್ ಪ್ರಸಾದ್ ಗೀತನಮನ ಸಲ್ಲಿಸಿದರು. ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ ಸಂವಾದ ನಿರ್ವಹಿಸಿದರು.

ಫೇಸ್ ಬುಕ್‌ನಲ್ಲಿ ಸಂವಾದ ವೀಕ್ಷಿಸಲು ಈ ಲಿಂಕ್ ಬಳಸಿ : https://bit.ly/3yOrluy

ರೇಣುಕಾಚಾರ್ಯ ನೇತೃತ್ವದಲ್ಲಿ ಶಾಸಕರ ಭೇಟಿ ● ಯೋಗೇಶ್ವರ್ ಕೈಬಿಡಲು ಆಗ್ರಹ

ನಿಮ್ಮೊಂದಿಗಿದ್ದೇವೆ: ಸಿ.ಎಂಗೆ ಅಭಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಪುತ್ರ ಬಿ.ವೈ.ವಿಜಯೇಂದ್ರ ವಿರುದ್ಧ ಸಚಿವ ಸಿ.ಪಿ.ಯೋಗೇಶ್ವರ್ ಪರೋಕ್ಷವಾಗಿ ವಾಗ್ದಾಳಿ ನಡೆಸಿದ ಬೆನ್ನಲ್ಲೆ, ಎಂ.ಪಿ. ರೇಣುಕಾಚಾರ್ಯ ನೇತೃತ್ವದಲ್ಲಿ ಕೆಲ ಬಿಜೆಪಿ ಶಾಸಕರು ಮುಖ್ಯಮಂತ್ರಿ ಅವರನ್ನು ಭಾನುವಾರ ಭೇಟಿ ಮಾಡಿ, 'ನಾವು ನಿಮ್ಮೊಂದಿಗಿದ್ದೇವೆ' ಎಂದು ಭರವಸೆ ನೀಡಿದ್ದಾರೆ.

ರೇಣುಕಾಚಾರ್ಯ ಜೊತೆಗೆ ರಾಜೂಗೌಡ, ಬಸವರಾಜ ದಡೆಸಗೂರು, ಬೆಳ್ಳಿ ಪ್ರಕಾಶ್, ನಿರಂಜನ ಕುಮಾರ್ ಸೇರಿ 10ಕ್ಕೂ ಹೆಚ್ಚು ಶಾಸಕರಿದ್ದರು. ಯಡಿಯೂರಪ್ಪ ವಿರೋಧಿ ಬಣದಿಂದ ತೆರೆಮರೆಯಲ್ಲಿ ಸಹಿ ಸಂಗ್ರಹಕ್ಕೆ ಯತ್ನ ನಡೆಯುತ್ತಿದೆ ಎನ್ನಲಾಗಿದ್ದು, ಈ ಬಗ್ಗೆ ಯಡಿಯೂರಪ್ಪ ಅವರ ಗಮನಕ್ಕೆ ತರಲು ಶಾಸಕರು ಭೇಟಿಯಾಗಿದ್ದರು ಎನ್ನಲಾಗಿದೆ.

ಬಳಿಕ ಮಾತನಾಡಿದ ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿಯೂ ಆಗಿರುವ ರೇಣುಕಾಚಾರ್ಯ, 'ಮುಖ್ಯಮಂತ್ರಿ ವಿರುದ್ಧ ಯಾರೋ ಒಬ್ಬಿಬ್ಬರು ಆಟ ಆಡಿದರೆ ಪ್ರಯೋಜನ ಆಗಲ್ಲ. ನಮ್ಮನ್ನು ವಿಜಯೇಂದ್ರ ಕಳುಹಿಸಿದ್ದಾರೆ ಎನ್ನಬಹುದು. ಆದರೆ, ನಮ್ಮನ್ನು ಯಾರೂ ಕಳುಹಿಸಿಲ್ಲ. ನಾವು ಪ್ರಾಮಾಣಿಕವಾಗಿ ಬಂದು ಯಡಿಯೂರಪ್ಪ ಅವರನ್ನು ಭೇಟಿಯಾಗಿದ್ದೇವೆ' ಎಂದರು.

ಬಿ.ಎಸ್.ಯಡಿಯೂರಪ್ಪ ನಮ್ಮ ಸರ್ವಸಮ್ಮತ ನಾಯಕ. ಅವರು ಪಕ್ಷಾಂತರ ಮಾಡಿ, ಯಾರದ್ದೋ ಕಾಲು ಹಿಡಿದು ಮುಖ್ಯಮಂತ್ರಿಯಾಗಿಲ್ಲ. ಸಿದ್ದರಾಮಯ್ಯ ಮುಂಚೆ ಎಲ್ಲಿದ್ರು, ಯಾರು ಅವರ ಗುರು ಆಗಿದ್ರು ಎಂದು ಯೋಚಿಸಲಿ


ನಳಿನ್ ಕುಮಾರ್ ಕಟೀಲ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ಪಕ್ಷದ ವರಿಷ್ಠರು ಯಡಿಯೂರಪ್ಪನವರೇ ನಾಯಕರು ಎಂದು ಹೇಳಿದ್ದಾರೆ. ಯಾರೋ ಒಬ್ಬರು ಬೊಗಳುತ್ತಿದ್ದಾರೆ. ಅವರು ಬೊಗಳಿಕೊಂಡೇ ಇರಲಿ. ಸುಮ್ಮನೆ ದೆಹಲಿಗೆ ಹೋಗಿ ಗೇಟ್ ಮುಟ್ಟಿ ಬರಬೇಕು ಅಷ್ಟೇ. ಅವರಿಗೆ ದೆಹಲಿಯಲ್ಲೂ ಛೀಮಾರಿ ಹಾಕಿದ್ದಾರೆ' ಎಂದು ಯೋಗೇಶ್ವರ್ ವಿರುದ್ಧ ಕಿಡಿಕಾರಿದರು.

'ಯೋಗೇಶ್ವರ್ 2008ರಲ್ಲಿ ಬಿಜೆಪಿ ಚಿಹ್ನೆಯಲ್ಲಿ ಗೆದ್ದು, ಅರಣ್ಯ ಮಂತ್ರಿಯಾಗಿ ಲೂಟಿ ಹೊಡೆದರು. ಆ ಮೇಲೆ ಕಾಂಗ್ರೆಸ್ ಸೇರಿ, ಸೈಕಲ್ ಏರಿದರು. ಬಳಿಕ ಮತ್ತೆ ಬಿಜೆಪಿಗೆ ಬಂದರು. ಮೆಗಾ ಸಿಟಿ ಹಗರಣ ಮಾಡಿದರು. ಅದಕ್ಕೆ ನನ್ನ ಬಳಿ ದಾಖಲೆಗಳಿವೆ. ನನ್ನ ವಿರುದ್ಧ ತೊಡೆ ತಟ್ಟಲಿ, ನಾನು ಎಲ್ಲವನ್ನೂ ಬಯಲಿಗೆಳೆಯುತ್ತೇನೆ. ಸೋತು ಸುಣ್ಣವಾಗಿದ್ದರೂ ಅವರನ್ನು ನಮ್ಮ ಪಕ್ಷ ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿ, ಸಚಿವರಾಗಿ ಮಾಡಿದೆ. ಅದನ್ನು ಯೋಗೇಶ್ವರ್ ಮರೆಯಬಾರದು' ಎಂದರು.

ಕ್ಷೇತ್ರದಲ್ಲಿ ಕೆಲಸ ಮಾಡಿ: 'ನೀವು ನಿಮ್ಮ ಕ್ಷೇತ್ರಗಳಿಗೆ ಹೋಗಿ ಕೆಲಸ ಮಾಡಿ. ಕೋವಿಡ್ ನಿಯಂತ್ರಣ ಮೊದಲ ಆದ್ಯತೆ ಆಗಿರಲಿ. ರಾಜಕಾರಣ ನಂತರ' ಎಂದು ಯಡಿಯೂರಪ್ಪ ಹೇಳಿದರು.

'ಪರ್ಯಾಯ ನಾಯಕರಿದ್ದಾರೆ'



ಹುಣಸೂರು (ಮೈಸೂರು): 'ಬಿಜೆಪಿಯಲ್ಲಿ ಬಿ.ಎಸ್.ಯಡಿಯೂರಪ್ಪ ಬಿಟ್ಟರೆ ಪರ್ಯಾಯ ನಾಯಕರೇ ಇಲ್ಲ ಎಂಬಂತೆ ಬಿಂಬಿಸಲಾಗಿದೆ. ಹಿಂದೆ ಯಡಿಯೂರಪ್ಪ ಜೈಲಿಗೆ ಹೋದಾಗ ಸದಾನಂದಗೌಡ ಮತ್ತು ಜಗದೀಶ ಶೆಟ್ಟರ್ ರಾಜ್ಯದ ಆಡಳಿತ ನಡೆಸಲಿಲ್ಲವೇ' ಎಂದು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಪ್ರಶ್ನಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡುತ್ತಾ, 'ಬಿಜೆಪಿ ಸ್ವಂತ ಬಲದಿಂದ ಸರ್ಕಾರ ರಚಿಸಿಲ್ಲ. ಅಧಿಕಾರಕ್ಕೆ ಬರಲು, ರಾಜಕೀಯ ಬದಲಾವಣೆಗೆ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರ ಮತ್ತು ವಿಶ್ವನಾಥ್ ಕೃಪಾಕಟಾಕ್ಷ ಕಾರಣ' ಎಂದು ಪ್ರತಿಪಾದಿಸಿದರು.

'ಪ್ರಧಾನಿ ನರೇಂದ್ರ ಮೋದಿ ನೀಡಿದ ಕಾರ್ಯಕ್ರಮಗಳ ಅಭಿಯಾನ ಆರಂಭವಾಗಬೇಕಿದೆ. ಇಂದಿರಾ ಗಾಂಧಿ ಅವರಿಗೆ ಸರಿಸಮನಾದ ವ್ಯಕ್ತಿ ಎಂದು ಜನಮಾನಸದಲ್ಲಿ ಬಿತ್ತುವ ಕೆಲಸ ಸಂಘ ಪರಿವಾರದಿಂದ ಆಗಬೇಕು. ಭಾರತವನ್ನು ವಿಶ್ವ ಗುರುತಿಸುವ ಕೆಲಸ ಮಾಡಿದ ನಾಯಕ ಮೋದಿ' ಎಂದು ಹೇಳಿದರು.

ಈಜುಕೊಳ ನಿರ್ಮಾಣ: ಸಂಸದ ಪ್ರತಾಪಸಿಂಹ ಕಿಡಿ

ಮೋಜಿಗೆ ದುಡ್ಡಿದೆ; ಔಷಧಿ ಖರೀದಿಗಿಲ್ವಾ?

ಪ್ರಜಾವಾಣಿ ವಾರ್ತೆ

ಮೈಸೂರು: 'ವೈಯಕ್ತಿಕ ಮೋಜಿಗಾಗಿ ಈಜುಕೊಳ ನಿರ್ಮಿಸಿಕೊಳ್ಳಲು ₹ 28 ಲಕ್ಷ ದುಡ್ಡಿದೆ. ಆದರೆ, ಕೊರೊನಾ ಸೋಂಕಿನಿಂದ ಪ್ರಾಣ ಕಳೆದುಕೊಳ್ಳುತ್ತಿರುವ ಜಿಲ್ಲೆಯ ಜನರ ಜೀವ ಉಳಿಸೋ ಔಷಧಿ ಖರೀದಿಗೆ ₹ 25 ಲಕ್ಷ ದುಡ್ಡಿಲ್ವಾ?' ಎಂದು ಸಂಸದ ಪ್ರತಾಪಸಿಂಹ, ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಭಾನುವಾರ ಇಲ್ಲಿ ಕಿಡಿಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಔಷಧಿ ಖರೀದಿಗಾಗಿ ಮುಖ್ಯಮಂತ್ರಿ ಅನುಮತಿ ನೀಡಿದ್ದರೂ ಟೆಂಡರ್ ಆಗಬೇಕು, ಕಾಯ್ದೆ ಪಾಲನೆ ಆಗಬೇಕು ಎನ್ನುತ್ತೀರಿ. ಆದರೆ, ಜಿಲ್ಲಾಧಿಕಾರಿ ನಿವಾಸದಲ್ಲಿ ಈಜುಕೊಳ ನಿರ್ಮಿಸಲು ಯಾವ ಟೆಂಡರ್ ಕರೆದಿದ್ದೀರಿ? ಪಾಲಿಕೆಯಿಂದ ಅನುಮತಿ ಪಡೆದಿದ್ದೀರಾ? ಪಾರಂಪರಿಕಾ ಸಮಿತಿ ಶಿಫಾರಸ್ಸು ಇದೆಯಾ?' ಎಂದು ಹರಿಹಾಯ್ದರು.

'ಕೋವಿಡ್ ಸಂಕಷ್ಟದಲ್ಲಿಯೂ ಜಿಲ್ಲಾ ಉಸ್ತುವಾರಿ ಸಚಿವರು ಮೈಸೂರಿಗೆ ₹41 ಕೋಟಿ ಅನುದಾನ ತಂದಿದ್ದಾರೆ. ಈ ಅನುದಾನದಲ್ಲಿ ₹39 ಕೋಟಿ ಖರ್ಚಾಗಿದೆ ಎಂದಿದ್ದೀರಿ. ಯಾವುದಕ್ಕೆ ಖರ್ಚು ಮಾಡಿದ್ದೀರಿ? ಲೆಕ್ಕ ಕೊಡಿ' ಎಂದು ಪ್ರಶ್ನಿಸಿದರು.

'ವೈಯಕ್ತಿಕ ಮೋಜಿಗಾಗಿ ಖರ್ಚು ಮಾಡಿಕೊಂಡು, ಔಷಧಿ ಖರೀದಿಗೆ ಸಲ್ಲದ ಸಬೂಬು ಹೇಳುವ ನಿಮ್ಮಂತಹ ಅಧಿಕಾರಿಯಿಂದ ಯಾವೊಬ್ಬ ಜನಪ್ರತಿನಿಧಿಯೂ ನೈತಿಕ ಪಾಠ ಕಲಿಯಬೇಕಿಲ್ಲ' ಎಂದು ಗುಡುಗಿದರು.

'ಸಮಿತಿ ಸಭೆಯೇ ನಡೆದಿಲ್ಲ'

'ಪ್ರತಿ ಪಾರಂಪರಿಕ ಕಟ್ಟಡವೂ ಸಂರಕ್ಷಿತ ಪ್ರದೇಶ. ತಜ್ಞರ ಸಮಿತಿಯ ಅನುಮತಿ, ಅಧ್ಯಯನ ವರದಿ ಇಲ್ಲದೇ ಕೆಲಸ ಕೈಗೊಳ್ಳುವಂತಿಲ್ಲ. ಆದರೆ, ಮೈಸೂರಿನಲ್ಲಿ ವರ್ಷದಿಂದ ಸಮಿತಿ ಸಭೆಯೇ ನಡೆದಿಲ್ಲ. ನೈತಿಕತೆ, ಭಯ ಇದ್ದವರು ಯಾವೊಂದೂ ಕೆಲಸ ಮಾಡಲ್ಲ' ಎನ್ನುತ್ತಾರೆ ಹೆಸರು ಬಹಿರಂಗ ಪಡಿಸಲು ಬಯಸದ 'ಪರಂಪರೆ ಸಂರಕ್ಷಣಾ ಸಮಿತಿ' ಸದಸ್ಯರೊಬ್ಬರು.



ಜಿಲ್ಲಾಧಿಕಾರಿ ವಿರುದ್ಧ ವೈಯಕ್ತಿಕ ಟೀಕೆ ಕೇಳಿ ಬರುತ್ತಿದ್ದರಿಂದ ಸಮರ್ಥಿಸಿಕೊಂಡಿದ್ದೆ. ಆದರೆ, ಇದೀಗ ಅವರ ಸಂವೇದನಾ ರಹಿತ ಧೋರಣೆ ಸಹಿಸಲಾಗಲ್ಲ

ಪ್ರತಾಪಸಿಂಹ, ಸಂಸದ



ಅಧಿಕಾರ ಸ್ವೀಕರಿಸಿದ ದಿನದಿಂದಲೂ ನನ್ನ ವಿರುದ್ಧ ವೈಯಕ್ತಿಕ ವಾಗ್ದಾಳಿ ನಡೆದಿದೆ. ತಪ್ಪು-ಬೇಜವಾಬ್ದಾರಿ ಹೇಳಿಕೆ ಕೊಡಲಾಗುತ್ತಿದೆ

ರೋಹಿಣಿ ಸಿಂಧೂರಿ, ಜಿಲ್ಲಾಧಿಕಾರಿ

'ಸಮಿತಿಯ ವರದಿ, ತಪಾಸಣೆಯಿಲ್ಲದೇ 16 ಸ್ಟೆಪ್‌ಡೌನ್ ಆಸ್ಪತ್ರೆಗಳ ಆರಂಭಕ್ಕೆ ಅನುಮತಿ ಕೊಟ್ಟಿದ್ದು ಏಕೆ? ಶಾಸಕ ಎಸ್.ಎ.ರಾಮದಾಸ್ ಆಸ್ಪತ್ರೆಗಳಿಗೆ ಭೇಟಿ ನೀಡಿ, ಲೋಪ ಪತ್ತೆ ಹಚ್ಚುವ ತನಕ ನೀವು, ಡಿಎಚ್‌ಒ ಏನು ಮಾಡುತ್ತಿದ್ದೀರಿ? ಇದರಲ್ಲೂ ನಿಮ್ಮ ವೈಯಕ್ತಿಕ ಹಿತಾಸಕ್ತಿ ಏನಿದೆ ಎಂದು ಬಹಿರಂಗಪಡಿಸಿ' ಎಂದರು.

₹ 36 ಕೋಟಿ ವೆಚ್ಚ: ಸಂಸದರು ಲೆಕ್ಕ ಕೇಳುತ್ತಿದ್ದಂತೆ, ರೋಹಿಣಿ ಸಿಂಧೂರಿ ವೆಚ್ಚದ ಪಟ್ಟಿ ಬಿಡುಗಡೆ ಮಾಡಿದ್ದಾರೆ. ರಾಜ್ಯ ಸರ್ಕಾರ ₹ 41.15 ಕೋಟಿ ಅನುದಾನ ಬಿಡುಗಡೆ ಮಾಡಿದ್ದು, ಇದರಲ್ಲಿ ₹ 36 ಕೋಟಿ ವೆಚ್ಚ ಮಾಡಲಾಗಿದೆ ಎಂದಿದ್ದಾರೆ.

ನಿರ್ಮಿತಿ ಕೇಂದ್ರಕ್ಕೆ ₹ 28 ಲಕ್ಷ: ಜಿಲ್ಲಾಧಿಕಾರಿ ನಿವಾಸದಲ್ಲಿ ಈಜುಕೊಳ, ಜಿಮ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಿರ್ಮಿತಿ ಕೇಂದ್ರಕ್ಕೆ ₹ 28 ಲಕ್ಷ ಪಾವತಿಸಲಾಗಿದೆ. ಈಜುಕೊಳದ ನೀರು ಶುದ್ಧೀಕರಿಸುವ ಯಂತ್ರದ ವೆಚ್ಚವೇ ₹ 11 ಲಕ್ಷದ ಆಸುಪಾಸಿದೆ. ಸ್ಪಾ ಸೇರಿದಂತೆ ₹ 50 ಲಕ್ಷಕ್ಕೂ ಹೆಚ್ಚು ವೆಚ್ಚವಾಗಿದೆ ಎಂಬುದು ತಿಳಿದು ಬಂದಿದೆ.

ನಿಯಮಾವಳಿ ಉಲ್ಲಂಘಿಸಿ ಈಜುಕೊಳ, ಜಿಮ್ ನಿರ್ಮಿಸಲಾಗಿದೆ ಎಂದು ಜೆಡಿಎಸ್ ಶಾಸಕ ಸಾ.ರಾ. ಮಹೇಶ್, ಮಾಜಿ ಕಾರ್ಪೊರೇಟರ್ ಕೆ.ವಿ.ಮಲ್ಲೇಶ್ ಈ ಹಿಂದೆಯೇ ಪತ್ರಿಕಾಗೋಷ್ಠಿ ನಡೆಸಿ ಆರೋಪಿಸಿದ್ದರು.

₹1 ಕೋಟಿ ಶಿಷ್ಯವೇತನ


ಭಾಲ್ಕಿ (ಬೀದರ್ ಜಿಲ್ಲೆ): ತಾಲ್ಲೂಕಿನ ಚನ್ನಬಸವೇಶ್ವರ ಗುರುಕುಲ ಪಿಯು ವಿಜ್ಞಾನ ಕಾಲೇಜು 2020-21ನೇ ಸಾಲಿನಲ್ಲಿ ಪ್ರಥಮ ಪಿಯು ಪ್ರವೇಶಕ್ಕಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ₹1 ಕೋಟಿ ಶಿಷ್ಯವೇತನ ಘೋಷಿಸಿದೆ. 'ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಜೂ. 6ರಂದು ಆನ್‌ಲೈನ್ ಪರೀಕ್ಷೆಗೆ ನಡೆಯಲಿದೆ' ಎಂದು ಪ್ರಾಚಾರ್ಯ ಬಸವರಾಜ ಮೊಳಕೀರೆ ತಿಳಿಸಿದ್ದಾರೆ. ಆನ್‌ಲೈನ್ ಪರೀಕ್ಷೆಗೆ ನೋಂದಾಯಿಸಿಕೊಳ್ಳಲು http://cbgurukul.in ಲಿಂಕ್ ಬಳಸಿ. ಮಾಹಿತಿಗೆ 7353304502 ಸಂಪರ್ಕಿಸಿ.

ಸುದ್ದಿ 2 ನಿಮಿಷ

ಅಂತಿಮ ವರದಿ ಬರಲಿ, ಪ್ರತಿಕ್ರಿಯಿಸುವೆ: ಸತೀಶ ಜಾರಕಿಹೊಳಿ

ಬೆಳಗಾವಿ: 'ಸಿ.ಡಿ. ಪ್ರಕರಣ ಕುರಿತಂತೆ ಅಂತಿಮ ವರದಿ ಬರಲಿ. ಸತ್ಯಾಸತ್ಯತೆ ತಿಳಿಯಲಿ. ಆ ಬಳಿಕ ಪ್ರತಿಕ್ರಿಯಿಸುತ್ತೇನೆ. ಪಕ್ಷವೂ ತನ್ನ ನಿಲುವು ತಿಳಿಸಲಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಪ್ರತಿಕ್ರಿಯಿಸಿದರು.

'ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರ ವಿರುದ್ಧದ ಈ ಪ್ರಕರಣದ ಕುರಿತು ತನಿಖಾ ತಂಡ, ಕೋರ್ಟ್‌ನಿಂದಲೇ ಸತ್ಯಾಸತ್ಯತೆ ಹೊರಬರಬೇಕು. ಈ ಬಗ್ಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಈಗಾಗಲೇ ಬಹಳಷ್ಟು ಮಾತನಾಡಿದ್ದಾರಲ್ಲವೇ?' ಎಂದು ಪ್ರತಿಕ್ರಿಯಿಸಿದರು.



ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಪ್ರಕರಣದಲ್ಲಿ ರಮೇಶಗೆ ಯಾರು ಕ್ಲೀನ್ ಚಿಟ್ ಕೊಟ್ಟಿದ್ದಾರೆ? ಸತ್ಯಾಸತ್ಯತೆ ಬಹಿರಂಗ ಆಗುವವರೆಗೂ ಈ ಮುಂದಿನ ಹೋರಾಟ ಕುರಿತು ಮಾತನಾಡಲು ಆಗುವುದಿಲ್ಲ' ಎಂದು ಹೇಳಿದರು.

ಕೋವಿಡ್ ಸೋಂಕು ನಿವಾರಣೆ ಸಂಬಂಧ ಹೋಮ ಕುರಿತ ಪ್ರಶ್ನೆಗೆ, 'ಬಿಜೆಪಿಯವರಿಗೆ ಹೋಮ-ಹವನ ಹೊಸದೇನಲ್ಲ. ಹೋಮದಿಂದ ಕೊರೊನಾ ಹೋಗುತ್ತದೆ ಎನ್ನುವುದಾದರೆ ವೈದ್ಯರು, ಆಸ್ಪತ್ರೆ ಏಕೆ ಬೇಕು?' ಎಂದು ಪ್ರಶ್ನಿಸಿದರು.

'ಮತ್ತೊಂದು ಪ್ಯಾಕೇಜ್ ಘೋಷಿಸಿ'

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಭಾನುವಾರ ಭೇಟಿ ಮಾಡಿದ ಬಿಜೆಪಿಯ 15 ಕ್ಕೂ ಹೆಚ್ಚು ಶಾಸಕರು, ಮತ್ತೊಂದು ಆರ್ಥಿಕ ಪ್ಯಾಕೇಜ್ ಘೋಷಿಸುವಂತೆ ಮನವಿ ಮಾಡಿದರು.

ಕೊರೊನಾ ಮುಂಚೂಣಿ ಕಾರ್ಯಕರ್ತರಾದ (ಫ್ರಂಟ್ ಲೈನ್ ವರ್ಕರ್ಸ್) ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಪಂಚಾಯಿತಿ ಸಿಬ್ಬಂದಿ ಹಾಗೂ ಸಂಕಷ್ಟದಲ್ಲಿರುವ ಅರ್ಚಕರು, ಅನುದಾನರಹಿತ ಶಾಲೆಗಳ ಶಿಕ್ಷಕರಿಗೆ ಪ್ಯಾಕೇಜ್ ಘೋಷಿಸಬೇಕು ಎಂದು ಮನವಿ ಮಾಡಿದರು.

ಭೇಟಿ ಬಳಿಕ ಮಾತನಾಡಿದ ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ, 'ಅನೇಕ ಜನರಿಗೆ ಆರ್ಥಿಕ ಪ್ಯಾಕೇಜ್ ತಪ್ಪಿದೆ. ಇದನ್ನು ಘೋಷಿಸುವಂತೆ ಮನವಿ ಮಾಡಿದ್ದೇವೆ' ಎಂದರು.

'ನಮ್ಮ ಕ್ಷೇತ್ರಗಳಲ್ಲಿ ಕೊರೊನಾ ರೋಗಿಗಳು ಹಾಗೂ ಆರೈಕೆ ಕೇಂದ್ರಗಳಲ್ಲಿ ದಿನಕ್ಕೆ 18 ಗಂಟೆ ಕೆಲಸ ಮಾಡುತ್ತಿದ್ದೇವೆ. ಊಟೋಪಚಾರ ವ್ಯವಸ್ಥೆ, ಆಮ್ಲಜನಕ ಘಟಕ ಸ್ಥಾಪನೆಗೆ ಒತ್ತು ನೀಡಿದ್ದೇವೆ' ಎಂದರು.

'ಕ್ಷೇತ್ರದ ಅಭಿವೃದ್ಧಿಗೆ ಸಹಕಾರ ಕೊಡಬೇಕು, ನಿಮ್ಮ ಜೊತೆ ನಾವಿದ್ದೇವೆಂದು ಮುಖ್ಯಮಂತ್ರಿಗೆ ಮಾತು ಕೊಟ್ಟಿದ್ದೇವೆ. ಇನ್ನೂ ಎರಡು ವರ್ಷ ಕಾಲ ಹೀಗೆ ಕೆಲಸ ಮಾಡಿದರೆ 2008ರಲ್ಲಿ ಪಕ್ಷಕ್ಕಿದ್ದ ವರ್ಚಸ್ಸು ಮರಳಿ ಬರುತ್ತದೆ' ಎಂದರು.

3.06 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಆರಂಭ

ಬೆಂಗಳೂರು: ಈ ಬಾರಿಯೂ ಮುಂಗಾರು ಹಂಗಾಮಿನಲ್ಲಿ ಕೃಷಿ ಹಾಗೂ ರೈತರಿಗೆ ಯಾವುದೇ ತೊಂದರೆ ಆಗದಂತೆ ಕ್ರಮ ವಹಿಸಲಾಗಿದೆ. ರಸಗೊಬ್ಬರ, ಬಿತ್ತನೆ ಬೀಜದ ಕೊರತೆ ಇಲ್ಲ ಎಂದು ಕೃಷಿ ಇಲಾಖೆ ತಿಳಿಸಿದೆ.

2021-22ನೇ ಸಾಲಿನ ಪೂರ್ವ ಮುಂಗಾರು ಹಂಗಾಮಿನಲ್ಲಿ ಮೇ 28 ರವರೆಗೆ 105 ಮಿ.ಮೀ ಸಾಮಾನ್ಯ ಮಳೆಯಾಗಿದ್ದು,159 ಮಿ.ಮೀ. ವಾಸ್ತವಿಕ ಸರಾಸರಿ ಮಳೆ, ಅಂದರೆ ಶೇ 51ರಷ್ಟು ಮಳೆಯಾಗಿದೆ.

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ 77 ಲಕ್ಷ ಹೆಕ್ಟೇರ್ ವಿಸ್ತೀರ್ಣ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ.

ಮೇ 28 ರವರೆಗಿನ ವಿವರ: ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಆದ ಮಳೆಯಿಂದಾಗಿ ಚಾಮರಾಜನಗರ, ಮಂಡ್ಯ, ಹಾಸನ, ಚಿಕ್ಕಮಗಳೂರು, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳ ಕೆಲವೆಡೆ ಭೂ ಸಿದ್ಧತೆ ಹಾಗೂ ಜೋಳ, ಹೆಸರು ಉದ್ದು, ಹಲಸಂದೆ, ಎಳ್ಳು, ಸೂರ್ಯಕಾಂತಿ, ಹತ್ತಿ, ತಂಬಾಕು ಸೇರಿ ವಿವಿಧ ಬೆಳೆಗಳ ಬಿತ್ತನೆ ಆರಂಭವಾಗಿದೆ. ಕರಾವಳಿ, ಮಲೆನಾಡು, ಉತ್ತರ ಒಳನಾಡು ಮತ್ತು ದಕ್ಷಿಣ ಒಳನಾಡಿನಲ್ಲಿಯೂ ಭೂಮಿ ಸಿದ್ಧತೆ, ಬಿತ್ತನೆ ಕಾರ್ಯಗಳು ಆರಂಭವಾಗಿವೆ.

ಚಾಮರಾಜನಗರ, ಮಂಡ್ಯ, ಹಾಸನ, ಚಿಕ್ಕಮಗಳೂರು, ತುಮಕೂರು, ಚಿತ್ರದುರ್ಗ, ಮೈಸೂರು, ಬೆಳಗಾವಿ ಹಾಗೂ ರಾಮನಗರ ಜಿಲ್ಲೆಯ ಕೆಲವೆಡೆ ಮಳೆಯಾಗಿದೆ. ಮೇ 28 ರವರೆಗೆ 3.06 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆಯಾಗಿದೆ. ಈವರೆಗೆ 77 ಲಕ್ಷ ಹೆಕ್ಟೇರ್ ಬಿತ್ತನೆ ಗುರಿಗೆ ಪ್ರತಿಯಾಗಿ 3.06 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಶೇ 3.97ರಷ್ಟು ಬಿತ್ತನೆಯಾಗಿದೆ.

ಕೊರತೆ ಇಲ್ಲ: ಪ್ರಸಕ್ತ ಮುಂಗಾರು ಹಂಗಾಮಿಗೆ ಅಂದಾಜು 6 ಲಕ್ಷ ಕ್ವಿಂಟಲ್ ಬಿತ್ತನೆ ಬೀಜಗಳಿಗೆ ಬೇಡಿಕೆಯಿದ್ದು, ಮೇ 28ರವರೆಗೆ ರೈತ ಸಂಪರ್ಕ ಕೇಂದ್ರಗಳಲ್ಲಿ 9,675 ಕ್ವಿಂಟಲ್ ಬಿತ್ತನೆ ಬೀಜ ವಿತರಿಸಲಾಗಿದೆ. 1,74,653 ಕ್ವಿಂಟಲ್ ದಾಸ್ತಾನಿದೆ. ಅಗತ್ಯಕ್ಕೆ ತಕ್ಕಂತೆ ಬಿತ್ತನೆ ಬೀಜ ಪೂರೈಸಲಾಗಿದೆ ಎಂದು ಕೃಷಿ ಇಲಾಖೆ ಮಾಹಿತಿ ನೀಡಿದೆ.


ಒಟ್ಟು 26.47 ಲಕ್ಷ ಟನ್ ರಾಸಾಯನಿಕ ಗೊಬ್ಬರಗಳಿಗೆ ಬೇಡಿಕೆಯಿದೆ. ಏಪ್ರಿಲ್, ಮೇ ತಿಂಗಳಲ್ಲಿ 7,97,662 ಟನ್ ರಸಗೊಬ್ಬರಗಳಿಗೆ ಬೇಡಿಕೆ ಇದೆ. ಮೇ 8ರವರೆಗೆ ಒಟ್ಟು 5,67,239 ಟನ್ ಪ್ರಮಾಣದಲ್ಲಿ ರಸಗೊಬ್ಬರ ಪೂರೈಕೆಯಾಗಿದೆ ಎಂದಿದೆ.

ಒಳನೋಟ

'ಉದ್ಯಮಕ್ಕೆ ಕೋವಿಡ್ ಉರುಳು'

ಬೆಂಗಳೂರು: 'ಉದ್ಯಮಕ್ಕೆ ಕೋವಿಡ್ ಉರುಳು' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಮೇ 30) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಉದ್ಯಮಗಳು ಕಣ್ಮರೆಯಾಗದಿರಲಿ



ಪ್ರಸ್ತುತ ಲಾಕ್‌ಡೌನ್‌ನಿಂದ ದೊಡ್ಡ ಕೈಗಾರಿಕೆಗಳ ಮಾಲೀಕರ ಮೇಲೂ ಪರಿಣಾಮ ಬೀರಿದೆ. ಕೈಗಾರಿಕೆಗಳು ಸ್ತಬ್ಧವಾಗಿವೆ. ಚನ್ನಪಟ್ಟಣ ಗೊಂಬೆ, ಬೀದರ್‌ನ ಮಿಶ್ರಲೋಹಗಳು, ಕಲಘಟಗಿ ತೊಟ್ಟಿಲುಗಳು ಇಂತಹ ಪಾರಂಪರಿಕ ಉದ್ಯಮಗಳೂ ಕಣ್ಮರೆಯಾಗುವ ಹಂತಕ್ಕೆ ತಲುಪಿವೆ. ಸರ್ಕಾರ ಇಂತಹ ಉದ್ಯಮಗಳ ಕಡೆ ಹೆಚ್ಚು ಗಮನ ಹರಿಸಿ, ನೆರವು ನೀಡಬೇಕು.

ಈರಮ್ಮ, ರಾಯಚೂರು

ಪ್ಯಾಕೇಜ್‌ನಿಂದ ಸಂಕಟ ದೂರವಾಗದು



ಸಣ್ಣ ಮತ್ತು ಗೃಹ ಕೈಗಾರಿಕೆಗಳು ಲಾಕ್‌ಡೌನ್‌ನಿಂದ ನೆಲಕಚ್ಚಿವೆ. ಹಲವು ವರ್ಷಗಳಿಂದ ಜೀವನಾಧಾರವಾಗಿದ್ದ ಕೈಗಾರಿಕೆಗಳು ಮುಚ್ಚಿರುವುದರಿಂದ ಅನೇಕ ಕುಟುಂಬಗಳು ಬೀದಿಗೆ ಬಂದಿವೆ. ಕೆಲಸವಿಲ್ಲದೆ, ಕುಟುಂಬ ನಿರ್ವಹಣೆ ಅತಂತ್ರವಾಗಿದೆ. ಒಂದು ವರ್ಷದಿಂದ ಕೈಗಾರಿಕೆಗಳ ಸ್ಥಿತಿ ಹೀಗೇ ಇದೆ. ಒಮ್ಮೆ ಪ್ಯಾಕೇಜ್ ಘೋಷಿಸುವುದರಿಂದ ಇವರ ಸಂಕಷ್ಟಗಳು ಕಡಿಮೆಯಾಗದು.

ಪ್ರಕಾಶ್, ದಾವಣಗೆರೆ

ಕೆಲಸಗಾರರಿಗೆ ಆರೋಗ್ಯ ಭದ್ರತೆ ಸಿಗಲಿ



ಒಂದು ಉದ್ಯಮಕ್ಕೆ ಕೆಲಸಗಾರರು ಅತಿ ಮುಖ್ಯ. ಲಾಕ್‌ಡೌನ್‌ನಿಂದ ಉದ್ಯಮಗಳಿಗೆ ಹಾಗೂ ಅಲ್ಲಿನ ಕೆಲಸಗಾರರಿಗೆ ಯಾವುದೇ ತೊಂದರೆಯಾಗಬಾರದು. ಕೈಗಾರಿಕಾ ಪ್ರದೇಶಗಳಲ್ಲಿ ಸರ್ಕಾರ ಸೂಚಿಸಿರುವ ಮಾರ್ಗಸೂಚಿಗಳನ್ನು ಅನುಸರಿಸುವ ಮೂಲಕ ಚಟುವಟಿಕೆಗಳು ಮುಂದುವರಿಯಬೇಕು. ಕೆಲಸಗಾರರಿಗೆ ಲಸಿಕೆ ಸೇರಿದಂತೆ ಎಲ್ಲ ರೀತಿಯ ಆರೋಗ್ಯ ಭದ್ರತೆ ಒದಗಿಸಬೇಕು.

ಲಿಂಗರಾಜ್, ವಿಜಯನಗರ

ಗಾಯದ ಮೇಲೆ ಬರೆ ಬೇಡ



ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಕ್ಷೇತ್ರವಾಗಿರುವ ಕೈಗಾರಿಕೆಗಳು ಕೋವಿಡ್ ಮೊದಲ ಅಲೆಯಲ್ಲೇ ವಿಪರೀತ ಹೊಡೆತ ಕಂಡಿವೆ. ಚೇತರಿಕೆಗೆ ಸಜ್ಜಾಗುತ್ತಿದ್ದ ಸಮಯದಲ್ಲೇ ಮತ್ತೆ ಎರಡನೇ ಅಲೆಯ ದಾಳಿಯು ಗಾಯದ ಮೇಲೆ ಬರೆ ಎಳೆದಂತಾಗಿದೆ. ಕೈಗಾರಿಕೆಗಳಿಗೆ ಈವರೆಗಿನ ನಷ್ಟ ಭರಿಸುವುದು ಹಾಗೂ ಮೂರನೇ ಅಲೆ ತಡೆಯುವುದು ಸರ್ಕಾರದ ಮುಂದಿರುವ ಸವಾಲು.

ಯಶಸ್ವಿನಿ, ಮೈಸೂರು


ಗುಡಿ ಕೈಗಾರಿಕೆಗಳಿಗೆ ನೆರವು ಅಗತ್ಯ



ಒಳನೋಟ ವರದಿ ವಾಸ್ತವಕ್ಕೆ ಹತ್ತಿರವಾದ ಸಂಗತಿ. ಸಂಘಟಿತ ವಲಯದ ಕೈಗಾರಿಕೆಗಳಿಗಿಂತ ಅಸಂಘಟಿತ ವಲಯದ ವ್ಯಾಪ್ತಿಗೆ ಬರುವ ಗುಡಿ ಕೈಗಾರಿಕೆಗಳ ಮೇಲೆ ಕೋವಿಡ್ ಕರಿನೆರಳು ಆವರಿಸಿದೆ. ಬೀಡಿ ಸುತ್ತುವುದು, ಗೊಂಬೆ ಕೆಲಸ, ರೇಷ್ಮೆ, ಊದುಬತ್ತಿ ತಯಾರಿಕೆ ಸೇರಿದಂತೆ ಹಲವಾರು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಯಾವುದೇ ಭದ್ರ ಬುನಾದಿಯಿಲ್ಲ. ತುರ್ತಾಗಿ ನೆರವು ಬೇಕಿರುವುದು ಇಂತಹ ಸಣ್ಣ ಕೈಗಾರಿಕೆಗಳಿಗೆ ಎಂಬುದನ್ನು ಸರ್ಕಾರ ಅರಿಯಬೇಕು.

ಹರೀಶ್, ರಾಮನಗರ

ಕಾರ್ಯಾಚರಣೆಗೆ ಅವಕಾಶ ನೀಡಿ



ಲಾಕ್‌ಡೌನ್‌ನಿಂದ ಗುಡಿಕೈಗಾರಿಕೆಗಳು ನಲುಗಿವೆ. ಇವುಗಳನ್ನೇ ಆಧರಿಸಿದ್ದ ಕುಟುಂಬಗಳ ಬದುಕು ತುಂಬಾ ಕಷ್ಟವಾಗಿದೆ. ಬಳ್ಳಾರಿಯಲ್ಲಿ ಜೀನ್ಸ್ ಉದ್ಯಮ ಹೆಣ್ಣುಮಕ್ಕಳಿಗೆ ಆಶಾಕಿರಣದಂತೆ ಇತ್ತು. ಲಾಕ್‌ಡೌನ್‌ನಿಂದಾಗಿ ಈ ಹೆಣ್ಣುಮಕ್ಕಳ ಗೋಳು ಹೇಳತೀರದು. .

ಜಯಶ್ರೀ, ಬಳ್ಳಾರಿ

ಕುತೂಹಲ ತುಂಬಿದ ಮನಸ್ಸಿಗೆ ಪ್ರಪಂಚವೇ ಪ್ರಯೋಗಾಲಯ

ಗುರು ಎಂದರೆ ವ್ಯಕ್ತಿಯಲ್ಲ ಒಂದು ಶಕ್ತಿ. ಅಜ್ಞಾನದ ಕತ್ತಲೆ ಕಳೆದು ಸುಜ್ಞಾನದೆಡೆಗೆ ಕರೆದೊಯ್ಯುವವನೇ ಗುರು.





ಮಕ್ಕಳಿಗೆ ಅಕ್ಷರ ಕಲಿಸುವ ಮುನ್ನ ಅವರಿಗೆ ಕೆಲವು ಸುಲಭವಾದ ಚಟುವಟಿಕೆಗಳನ್ನು ರೂಢಿಸಬೇಕು. ಇದರಿಂದ ಅವರಲ್ಲಿ ಚಲನಾ ಕೌಶಲ ಸುಧಾರಿಸಿ ಅಕ್ಷರಗಳನ್ನು ಕಲಿಯಲು ಸಿದ್ಧವಾಗುತ್ತಾರೆ.

ಮಕ್ಕಳಿಗೆ ಅಕ್ಷರ ಕಲಿಸುವ ಮುನ್ನ...

ಮಂಜುಳ ರಾಜ್

ಮಗು ಹುಟ್ಟಿದ ತಕ್ಷಣ ಎದ್ದು ಓಡಾಡಲಿ ಎನ್ನುವುದು ತಂದೆ-ತಾಯಿಯರ ಆಸೆ, ಸ್ವಲ್ಪ ಎದ್ದು ನಡೆಯುವಂತಾದ ಮೇಲೆ ಬೇಗನೆ ಮಗು ಬರೆಯುವುದನ್ನು ಕಲಿಯಲಿ ಎನ್ನುವ ಅವಸರ, ಮಗುವನ್ನು ಶಾಲೆಗೆ ಕಳುಹಿಸಿದ ನಂತರ ಅದು ಹೆಚ್ಚು ಹೆಚ್ಚು ಪುಟ ಬರೆಯಲಿ ಎನ್ನುವ ಬಯಕೆ. ಆದರೆ ಸುಖಾ ಸುಮ್ಮನೆ ಮಗು ಬರೆಯಲು ಪ್ರಾರಂಭಿಸುವುದು ಸಾಧ್ಯವೇ? ಹಾಗಾದರೆ ಏನು ಮಾಡಬೇಕು ಎನ್ನುವ ಪ್ರಶ್ನೆ ಪೋಷಕರದು.

ಮಗುವಿಗೆ ಬರೆಯುವುದು ಸುಲಭವಾಗುವಂತೆ ಕೆಲವು ಚಟುವಟಿಕೆಗಳನ್ನು ಮಾಡಿಸುವುದು ಅಗತ್ಯ. ತನ್ಮೂಲಕ ಅವರಲ್ಲಿ ಉತ್ತಮ ಚಲನಾ ಕೌಶಲ (ಫೈನ್ ಮೋಟರ್ ಸ್ಕಿಲ್ಸ್) ಗಳನ್ನು ಮೂಡಿಸುವುದು ಸಾಧ್ಯ. ಅದಕ್ಕಾಗಿ ನಾವು ಮನೆಯಲ್ಲಿ ಬಳಸುವ ವಸ್ತುಗಳ ಮೂಲಕವೇ, ನಮ್ಮ ದೈನಂದಿನ ಚಟುವಟಿಕೆ (ಜೀವನ ಕೌಶಲ)ಗಳಲ್ಲಿ ಅವರನ್ನು ಸೇರಿಸಿಕೊಳ್ಳುವುದರಿಂದ ಅವರಲ್ಲಿನ ಚಲನಾ ಕೌಶಲಗಳನ್ನು ಉತ್ತಮಗೊಳಿಸಬಹುದು.

ಮನೆಯಲ್ಲೇ ಮಾಡಬಹುದಾದ ಚಟುವಟಿಕೆಗಳು

1. ನಾವು ಮನೆಯಲ್ಲಿ ಚಪಾತಿ ಹಿಟ್ಟನ್ನು ಕಲೆಸುವಾಗ ಮಕ್ಕಳಿಂದ ಸಣ್ಣ ಸಣ್ಣ ಉಂಡೆಗಳನ್ನು ಮಾಡಿಸಿ, ಬೇರೆ ಬೇರೆ ಆಕಾರಗಳನ್ನು ಮಾಡಲು ಹೇಳಿ. ಉದಾ: ಹಾವು, ಮೀನು ಇತ್ಯಾದಿ. ಮಕ್ಕಳ ಪುಟ್ಟ ಪುಟ್ಟ ಕೈಗಳು ಹಿಟ್ಟಿನೊಡನೆ ಆಟವಾಡುವಾಗ ಅವರಲ್ಲಿನ ಕೈಗಳ ಮಣಿಕಟ್ಟಿನ ಬಲ ಖಂಡಿತ ಹೆಚ್ಚಾಗುತ್ತದೆ.
2. ನಾವು ರೊಟ್ಟಿ ಅಥವಾ ಚಪಾತಿ ಮಾಡುವಾಗ ಅದ್ದಲು ಬಳಸುವ ಹಿಟ್ಟನ್ನು ಒಂದು ತಟ್ಟೆಯಲ್ಲಿ ಹಾಕಿಕೊಳ್ಳುತ್ತೇವೆ. ಈ ಹಿಟ್ಟಿನ ಜೊತೆ ಆಟವಾಡುವುದು ಮಕ್ಕಳಿಗೆ ಬಹಳ ಪ್ರಿಯ. ಅದರ ಮೇಲೆ ಅವರ ಪುಟ್ಟ ಬೆರಳುಗಳಿಂದ ಏನಾದರೂ ಬರೆಯಲು ಹೇಳಬಹುದು. ವಿಧ ವಿಧವಾದ ಆಕಾರಗಳು ಆ ಹಿಟ್ಟಿನಲ್ಲಿ ಮೂಡಿದಾಗ ಮಗುವಿನ ಮುಖ ಅರಳುವುದನ್ನು ನೋಡುವ ಖುಷಿ ತಾಯಿಯದಾದರೆ, ಕೈ ಮತ್ತು ಬೆರಳುಗಳು ಸರಾಗವಾಗಿ ಚಲಿಸಿದಾಗ ಆಗುವ ಲಾಭ ಮಗುವಿಗೆ.
3. ಕಾಗದದಲ್ಲಿ ದೋಣಿ, ವಿಮಾನ, ಇನ್ನೂ ಅನೇಕ ಆಕಾರಗಳನ್ನು ನಾವು ಚಿಕ್ಕಂದಿನಲ್ಲಿ ಮಾಡುತ್ತಿದ್ದುದನ್ನು ಅವರಿಗೂ ಮಾಡಲು ಕಲಿಸಿ.
4. ಅವರ ಶರ್ಟ್‌ನ ಗುಂಡಿಗಳನ್ನು ಅವರಿಗೇ ಹಾಕಿಕೊಳ್ಳಲು ಹೇಳಿ ಅಥವಾ ಯಾವುದಾದರೂ ಶರ್ಟ್ ಅನ್ನು ಕೊಟ್ಟು ಅದರ ಗುಂಡಿಗಳನ್ನು ಬಿಚ್ಚುವುದು, ಹಾಕುವುದನ್ನು ಮಾಡಿಸಿ.
5. ಅವರ ಶೂ ಲೇಸ್ ಅನ್ನು ಅವರಿಗೇ ಕಟ್ಟಿಕೊಳ್ಳಲು ಕಲಿಸಿ. ಒಂದು ಫ್ರೇಮ್‌ಗೆ ದಾರ ಅಥವಾ ಲೇಸ್ ಹಾಕಿ ಕಟ್ಟಲು ಹೇಳಬಹುದು.
6. ಪೇಪರ್ ಕೊಟ್ಟು ವಿಭಿನ್ನ ಆಕಾರಗಳನ್ನು ಕತ್ತರಿಸಲು ಹೇಳಿ. ಅದು ಅವರಿಗೆ ಕಷ್ಟವೆನಿಸಿದರೆ ಚಪಾತಿ ಹಿಟ್ಟನ್ನು ಲಟ್ಟಿಸಿ, ಅದನ್ನು ಕತ್ತರಿಸುವಂತೆ ಹೇಳಬಹುದು.
7. ಮನೆಯ ಮುಂದೆ ಎರಡು ಬೆರಳುಗಳಿಂದ ರಂಗೋಲಿ ಚೆಲ್ಲಲು ಮಗುವಿಗೆ ಪ್ರೋತ್ಸಾಹಿಸಿ.
8. ಮನೆಯಲ್ಲಿರುವ ಮಣಿಗಳನ್ನು ದಾರಕ್ಕೆ ಪೋಣಿಸಲು ಹೇಳಿ. ಕಷ್ಟವೆನಿಸಿದರೆ ತೂತು ದೊಡ್ಡದಾಗಿರುವ ಮಣಿಗಳನ್ನು ನೀಡಿ.
9. ಮಕ್ಕಳಿಗೆ ಅಂಕಿಗಳನ್ನು ಎಣಿಸುವ ಮಣಿಗಳ ಸ್ಟ್ಯಾಂಡ್ (ಅಬ್ಯಾಕಸ್)ನಲ್ಲಿ ಮಣಿಗಳನ್ನು ಒಂದು ಕಡೆಯಿಂದ ಮತ್ತೊಂದೆಡೆಗೆ ಒಂದೊಂದನ್ನೇ ಜರುಗಿಸಲು ತಿಳಿಸಿ.
10. ಮಸಾಲೆ ಕುಟ್ಟುವ ಕುಟ್ಟಾಣಿಯಲ್ಲಿ ಸ್ವಲ್ಪ ಸಕ್ಕರೆ ಮತ್ತು ಹುರಿಗಡಲೆ ಹಾಕಿ ಕುಟ್ಟಲು ಹೇಳಿ. ನಂತರ ಒಂದು ಚಮಚದಲ್ಲಿ ಎಲ್ಲರಿಗೂ ಸ್ವಲ್ಪ ಸ್ವಲ್ಪ ಕೊಡಲು ಹೇಳಬಹುದು.
11. ಗಂಧವನ್ನು ತೇಯುವಂತೆ ತಿಳಿಸಿ. ಗಂಧದ ಕಲ್ಲಿನ ಮೇಲೆ ಚಕ್ಕೆಯನ್ನು ಹಾಕಿ ಉಜ್ಜುವುದು ಮಕ್ಕಳಿಗೆ ಒಂದು ರೀತಿಯಲ್ಲಿ ತಮಾಷೆಯಾಗಿರುತ್ತದೆ .
12. ಮಕ್ಕಳಿಗೆ ಊಟವನ್ನು ತಾಯಿ ತಿನ್ನಿಸದೆ, ತಾವೇ ತಿನ್ನುವಂತೆ ಕಲಿಸಿ.
13. ಎರಡು ಲೋಟಗಳನ್ನಿಟ್ಟು, ಒಂದರಲ್ಲಿ ನೀರನ್ನಿಟ್ಟು ಒಂದು ಚಮಚ ಅಥವಾ ಉದ್ಧರಣೆಯನ್ನು ಕೊಟ್ಟು ಮತ್ತೊಂದು ಲೋಟಕ್ಕೆ ತುಂಬಿಸಲು ತಿಳಿಸಿ. ಒಂದು ಲೋಟದಿಂದ ಮತ್ತೊಂದು ಲೋಟಕ್ಕೆ ಬಗ್ಗಿಸಲು ಹೇಳಿ.
14. ಮರದ ಬ್ಲಾಕ್‌ಗಳನ್ನು ಜೋಡಿಸಲು ಉತ್ತೇಜಿಸಿ, ಬಣ್ಣ ಬಣ್ಣದ ಮರದ ತುಂಡುಗಳನ್ನು ಮಕ್ಕಳು ಆನಂದವಾಗಿಯೇ ಜೋಡಿಸುತ್ತಾರೆ.

ಈ ಚಟುವಟಿಕೆಗಳನ್ನೆಲ್ಲಾ ಮಾಡಿಸಿದಾಗ ಮಕ್ಕಳ ಚಲನಾ ಕೌಶಲ ಖಂಡಿತ ಉತ್ತಮವಾಗುತ್ತದೆ. ಮಣಿಕಟ್ಟಿನ ಚಲನೆ ಸರಾಗವಾಗುತ್ತದೆ.

ಮೊಟ್ಟ ಮೊದಲಿಗೆ ಪೆನ್ಸಿಲ್ ಅನ್ನು ಹಿಡಿಯಲು ಅವರ ಬೆರಳುಗಳು ಸಿದ್ಧವಾಗಬೇಕು. ಹಿಂದೆ ಬಳಪದಲ್ಲಿ ಸ್ಲೇಟ್‌ನ ಮೇಲೆ ಬರೆಸುತ್ತಿದ್ದರು, ಆದರೆ ಒಂದೇ ಬಾರಿಗೆ ಅವರಿಗೆ ಪೆನ್ಸಿಲ್ ಅನ್ನು ಕೊಡಲಾಗುತ್ತದೆ, ಅದನ್ನು ಮಗು ಹಿಡಿಯುವಂತಾಗಬೇಕು. ಬರೆಯಲು ಪ್ರಾರಂಭವಾದ ಮೇಲೂ ಅಷ್ಟೇ, ಮೊದಲು ಚುಕ್ಕಿಗಳನ್ನು ಕೂಡಿಸಬೇಕು. ಗೆರೆಗಳು, ಓರೆ ಗೆರೆಗಳು, ಸಮಾನಾಂತರ ಗೆರೆ, ನಂತರ ಡೊಂಕಾದ ಗೆರೆ.. ಈ ರೀತಿ ಒಂದರ ನಂತರ ಮತ್ತೊಂದು ಹಂತಕ್ಕೆ ಹೋಗಬೇಕು.

ಮಗು ಹೆಚ್ಚು ಬರೆದಿಲ್ಲ ಅಥವಾ ಶಾಲೆಯಲ್ಲಿ ಹೆಚ್ಚು ಬರೆಸುತ್ತಿಲ್ಲ ಎಂದು ಬೇಸರಿಸಬೇಡಿ. ಬರೆಯುವುದರ ಜೊತೆಗೆ ಬರೆದದ್ದನ್ನು ಓದುವುದು ಮತ್ತು ಅರ್ಥ ಮಾಡಿಕೊಳ್ಳುವುದು ಅಷ್ಟೇ ಮುಖ್ಯ. ಒಂದನೆಯ ತರಗತಿಯಲ್ಲಿ ಓದುವ ಮಗು, ಬೋರ್ಡಿನ ಮೇಲಿರುವುದನ್ನು ನೋಡಿಕೊಂಡು ಗುಂಡಾಗಿ ಬರೆಯಬಹುದು. ಆದರೆ ಅದನ್ನು ಓದಲು ಹಾಗೂ ಅರ್ಥ ಮಾಡಿಕೊಳ್ಳಲು ಆ ಮಗುವಿಗೆ ಬರದೇ ಇರಬಹುದು. ಆದ್ದರಿಂದ ಬರೆಯುವುದರ ಜೊತೆ ಓದುವುದು, ಅರ್ಥಮಾಡಿಕೊಳ್ಳುವುದು ಅಷ್ಟೇ ಮುಖ್ಯ. ಒಂದು ಭಾಷೆಯನ್ನು ಕಲಿಯುವುದೆಂದರೆ ಸಹಜವಾಗಿ ಒಂದು ಮಗು ಮನೆಯ ವಾತಾವರಣದಲ್ಲಿ ಮಿಕ್ಕವರು ಮಾತನಾಡಿದ್ದನ್ನು ಕೇಳಿಸಿಕೊಂಡು ಹೇಗೆ ತಾನೂ ಮಾತನಾಡಲು ಕಲಿಯುತ್ತದೆಯೋ (ಆರ್ಗ್ಯಾನಿಕ್ ಅಕ್ವಿಸಿಶನ್ ಆಫ್ ಲ್ಯಾಂಗ್ವೇಜ್) ಅದೇ ರೀತಿ ಕೇಳಿಸಿಕೊಳ್ಳುವುದು, ಮಾತನಾಡುವುದು ನಂತರ ಓದುವುದು ಅಥವಾ ನಾವು ಜೋರಾಗಿ ಓದಿ ಅವರಿಗೆ ಕೇಳಿಸುವುದು (ಎಲ್‌ಎಸ್‌ಆರ್‌ಡಬ್ಲ್ಯು- ಲಿಸನ್, ಸ್ಪೀಕ್, ರೀಡ್, ರೈಟ್) ಮಾಡಬೇಕು. ನಂತರ ಮಗು ಬರೆಯಲು ಸಿದ್ಧವಾಗುತ್ತದೆ. ಅದಕ್ಕಿಂತ ಮೊದಲು ಬರೆಯಲು ಬಲವಂತ ಮಾಡಬಾರದು. ಮಗು ನಿಧಾನವಾಗಿ ಕಲಿಯುತ್ತದೆ ಅದಕ್ಕೇಕೆ ಅವಸರ ಅಲ್ಲವೇ?

(ಲೇಖಕಿ: ಬೆಂಗಳೂರಿನಲ್ಲಿ ಶೈಕ್ಷಣಿಕ ಆಪ್ತಸಮಾಲೋಚಕರು)

ಮೇಘಶಾಲಾ ಶೈಕ್ಷಣಿಕ ಆ್ಯಪ್

ಕ್ರಿಯಾತ್ಮಕ ಕಲಿಕೆಗೆ ಹೊಸ ಹಾದಿ

ರೇಷ್ಮಾ

ಮಕ್ಕಳಿಗೆ ಪಾಠ ಸುಲಭವಾಗಿ ಅರ್ಥವಾಗಬೇಕಾದರೆ ಬೋಧನ ವಿಧಾನ ಸೃಜನಶೀಲತೆಯಿಂದ ಕೂಡಿರಬೇಕು. ಶಿಕ್ಷಕರು ಇಂತಹ ಕ್ರಿಯಾತ್ಮಕ ವಿಧಾನಗಳನ್ನು ಅಳವಡಿಸಿಕೊಂಡರೆ ಮಕ್ಕಳು ಬಹು ಬೇಗ ಗ್ರಹಿಸುವರಲ್ಲದೇ, ಅವರ ಕಲಿಕೆಗೆ ಅನುಕೂಲ ಎಂಬುದು ಈಗಾಗಲೇ ಸಾಬೀತಾಗಿದೆ. ಈ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಬೆಂಗಳೂರಿನ ಮೇಘಶಾಲಾ ಸಂಸ್ಥೆ ಸರಳವಾದ ಪಠ್ಯಕ್ರಮವನ್ನು ರೂಪಿಸಿದೆ; ಒಂದರಿಂದ 8ನೇ ತರಗತಿವರೆಗಿನ ಪಾಠವನ್ನು ಮಿತಿಗೊಳಿಸಿ ಮಕ್ಕಳು ಹಾಗೂ ಶಿಕ್ಷಕರು ಇಬ್ಬರಿಗೂ ನೆರವಾಗುವಂತೆ ಪಠ್ಯಕ್ರಮವಿರುವ ಉಚಿತ ಆ್ಯಪ್ ಸಿದ್ಧಪಡಿಸಿದೆ.


ಪಠ್ಯಕ್ರಮ

2014ರಲ್ಲಿ ಆರಂಭವಾದ ಮೇಘಶಾಲಾ ಸಂಸ್ಥೆಯು ಶೈಕ್ಷಣಿಕ ಮೊಬೈಲ್ ಹಾಗೂ ವೆಬ್ ಆ್ಯಪ್‌ಗಳನ್ನು ಸಿದ್ಧಪಡಿಸಿದ್ದು, ಕನ್ನಡ ಹಾಗೂ ಹಿಂದಿ ಭಾಷಾ ಪಠ್ಯ ಬಿಟ್ಟು ಉಳಿದೆಲ್ಲಾ ವಿಷಯಗಳ ಪಠ್ಯಗಳು ಇದರಲ್ಲಿ ಲಭ್ಯವಿವೆ. ಉತ್ತಮ ಶಿಕ್ಷಕರು ಹಾಗೂ ಸುಸಜ್ಜಿತ ತರಗತಿ ಕೊಠಡಿಯ ಪರಿಕಲ್ಪನೆಯಲ್ಲಿ ಆರಂಭವಾದ ಈ ಆ್ಯಪ್ ಅನ್ನು ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳು ಉಚಿತವಾಗಿ ಬಳಸಿಕೊಳ್ಳಬಹುದು. ಒಮ್ಮೆ ಅಂತರ್ಜಾಲದ ಸಹಾಯದಿಂದ ಪಾಠಗಳನ್ನು ಡೌನ್‌ಲೋಡ್ ಮಾಡಿ ಇರಿಸಿಕೊಂಡರೆ ನಮಗೆ ಬೇಕಾದಾಗ ಬಳಸಬಹುದು. ಕರ್ನಾಟಕ ಮಾತ್ರವಲ್ಲದೇ ಬೇರೆ ಬೇರೆ ರಾಜ್ಯಗಳಲ್ಲೂ ಈ ಆ್ಯಪ್ ಅನ್ನು ಬಳಸುತ್ತಿದ್ದಾರೆ.

‘ಗುಣಮಟ್ಟದ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಸರ್ಕಾರದ ಪಠ್ಯಕ್ರಮಕ್ಕೆ ಅನುಗುಣವಾಗಿ ಹೊಸ ಪಠ್ಯಕ್ರಮವನ್ನು ರೂಪಿಸಿದೆ ಮೇಘಶಾಲಾ. ಸರ್ಕಾರದ ಪಠ್ಯಕ್ರಮಕ್ಕೆ ವಿಡಿಯೊ ಹಾಗೂ ಫೋಟೊಗಳನ್ನು ಸೇರಿಸಿ ಅದನ್ನು ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ’ ಎನ್ನುತ್ತಾರೆ ಸಂಸ್ಥೆಯ ರೂವಾರಿ, ಬೆಂಗಳೂರು ಮೂಲದ ಜ್ಯೋತಿ ತ್ಯಾಗರಾಜನ್. ಭಾರತ ಮಾತ್ರವಲ್ಲ, ವಿದೇಶಗಳಲ್ಲೂ ಶಿಕ್ಷಕಿಯಾಗಿ ಕೆಲಸ ಮಾಡಿರುವ ಜ್ಯೋತಿ ಅವರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿ 40 ವರ್ಷಗಳ ಅನುಭವವಿದೆ.

ಮೇಘಶಾಲಾದೊಂದಿಗೆ ಬೆಂಗಳೂರಿನ ಆಂಟಮ್ ಎಜ್ಯುಕೇಷನ್ ಅಂಡ್ ಟೆಕ್ ಕಂಪನಿಯ ಅರ್ಜುನ್ ಮತ್ತು ಸ್ತುತಿ ಅಗರವಾಲಾ ಕೂಡ ಕೈ ಜೋಡಿಸಿದ್ದಾರೆ.





ಜ್ಯೋತಿ ತ್ಯಾಗರಾಜನ್

ಶಿಕ್ಷಕರಿಗೆ ನೆರವು

ಕಡಿಮೆ ಸಮಯದಲ್ಲಿ ಶಿಕ್ಷಕರು ತರಗತಿಯಲ್ಲಿ ಬೋಧಿಸಲು ಸಿದ್ಧರಾಗುವ ನಿಟ್ಟಿನಲ್ಲಿ ಮೂರು ಪರಿಕಲ್ಪನೆಗಳನ್ನು ಇಲ್ಲಿ ರೂಪಿಸಲಾಗಿದೆ. ಇದರಲ್ಲಿ ಯಾಕೆ, ಹೇಗೆ, ಏನು ಎಂಬ ಮೂರು ಅಂಶಗಳಿರುತ್ತವೆ. ಒಂದೇ ಸ್ಲೈಡ್‌ನಲ್ಲಿ ಕಡಿಮೆ ಸಮಯದಲ್ಲಿ ಮಕ್ಕಳಿಗೆ ಉತ್ತಮ ಕಲಿಕೆಗೆ ನೆರವಾಗಲು ಇದು ಸಹಾಯ ಮಾಡುತ್ತದೆ.

ಮಕ್ಕಳಿಗೆ ಯೋಚಿಸಲು, ಕಲಿಯಲು ನೆರವಾಗುವಂತೆ ಚಟುವಟಿಕೆಗಳ ಆಧಾರದ ಮೇಲೆ ಈ ಆ್ಯಪ್‌ನಲ್ಲಿ ಪಾಠಗಳನ್ನು ರೂಪಿಸಲಾಗಿದೆ. ಇದರಲ್ಲಿ ಒಟ್ಟು 5500 ಪಾಠಗಳಿವೆ. ಈಗಾಗಲೇ ಈ ಆ್ಯಪ್ ಅನ್ನು ಸುಮಾರು 20 ಸಾವಿರ ಮಂದಿ ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ಗೂಗಲ್ ಪ್ಲೇಸ್ಟೋರ್‌ನಿಂದ Meghashala Online ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ವೆಬ್‌ನಲ್ಲಿ http://meghshala.online ನಲ್ಲಿ ನೋಡಬಹುದು.

ತರಗತಿ ಚೇತರಿಕೆ ಕಾರ್ಯಕ್ರಮ

ಕಳೆದ ಒಂದೂವರೆ ವರ್ಷದಿಂದ ಮಕ್ಕಳಿಗೆ ಸರಿಯಾಗಿ ತರಗತಿಗಳು ನಡೆಯುತ್ತಿಲ್ಲ. ಆ ಕಾರಣಕ್ಕೆ ಮಕ್ಕಳು ಹಿಂದಿನ ಪಾಠಗಳನ್ನೂ ಮರೆತಿದ್ದಾರೆ. ಹೀಗಾಗಿ ‘ಸೇತುಬಂಧ’ ಕಾರ್ಯಕ್ರಮದಂತೆ ತರಗತಿ ಚೇತರಿಕೆ ಕಾರ್ಯಕ್ರಮವನ್ನು ಆ್ಯಪ್‌ನಲ್ಲಿ ಅಳವಡಿಸಲಾಗಿದೆ. ಇದು ಆರು ವಾರಗಳ ಕಾರ್ಯಕ್ರಮ. ಇದನ್ನೂ ಕೂಡ ಸರ್ಕಾರಿ ಹಾಗೂ ಖಾಸಗಿ ಶಾಲಾ ಶಿಕ್ಷಕರು ಮತ್ತು ಮಕ್ಕಳು ಉಚಿತವಾಗಿ ಬಳಸಿಕೊಳ್ಳಬಹುದಾಗಿದೆ ಎಂದು ವಿವರಣೆ ನೀಡುತ್ತಾರೆ ಮೇಘಶಾಲಾದ ಶಿಕ್ಷಕ ನಾಗರಾಜ್ ಬೇವೂರ್. ಈ ತರಗತಿ ಚೇತರಿಕಾ ಕಾರ್ಯಕ್ರಮವನ್ನು ‘ಆಂಟಮ್’ ಸಂಸ್ಥೆಯ ಸಹಯೋಗದಲ್ಲಿ ರೂಪಿಸಲಾಗಿದೆ.

ವಿದ್ಯಾರ್ಥಿ ವೇತನ ಕೈಪಿಡಿ

ಐಐಎಸ್‌ಇಆರ್ ತಿರುಪತಿ ಡಿಎಸ್‌ಟಿ-ಎಸ್‌ಇಆರ್‌ಬಿ ಜ್ಯೂನಿಯರ್ ಫೆಲೋಶಿಪ್ 2021

- ವಿವರ: ತಿರುಪತಿಯ ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಸೈನ್ಸ್ ಎಜುಕೇಷನ್ ಅಂಡ್ ರಿಸರ್ಚ್ (ಐಐಎಸ್‌ಇಆರ್), ಸ್ನಾತಕೋತ್ತರ ಪದವಿ ಪಡೆದವರಿಂದ ಜ್ಯೂನಿಯರ್ ಫೆಲೋಶಿಪ್ 2021ಕ್ಕೆ ಅರ್ಜಿಗಳನ್ನು ಆಹ್ವಾನಿಸಿದೆ.
- ಅರ್ಹತೆ: ಶೇ 55 ಅಂಕಗಳೊಂದಿಗೆ ರಸಾಯನಶಾಸ್ತ್ರದಲ್ಲಿ ಎಂಎಸ್‌ಸಿ ಮುಗಿಸಿದವರು ಈ ಫೆಲೋಶಿಪ್‌ಗೆ ಅರ್ಹರು. ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳಿಗೆ 28 ವರ್ಷ ಮೀರಿರಬಾರದು. ಅಭ್ಯರ್ಥಿಗಳು ಸಿಎಸ್‌ಐಆರ್, ಯುಜಿಸಿ-ನೆಟ್ ಅಥವಾ ಗೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ ಸಿಂಥೆಟಿಕ್ ಕೆಮಿಸ್ಟ್ರಿ ಅಥವಾ ಕ್ಯಾಟಲಿಸಿಸ್‌ನಲ್ಲಿ ಅನುಭವ ಹೊಂದಿರಬೇಕು.
- ಆರ್ಥಿಕ ನೆರವು: ತಿಂಗಳಿಗೆ ₹ 31,000 ಹಾಗೂ ಶೇ 8 ರಷ್ಟು ಎಚ್‌ಆರ್‌ಎ ಭರಿಸಲಾಗುವುದು.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜೂನ್ 10, 2021
- ಅರ್ಜಿ ಸಲ್ಲಿಕೆ ವಿಧಾನ: ಇಮೇಲ್ ಮೂಲಕ
- ಹೆಚ್ಚಿನ ಮಾಹಿತಿಗೆ: www.b4s.in/praja/TBR5

ಡಿಆರ್‌ಡಿಒ ರಿಸರ್ಚ್ ಅಂಡ್ ಇನೊವೇಶನ್ ಸೆಂಟರ್ ಜ್ಯೂನಿಯರ್ ರಿಸರ್ಚ್ ಫೆಲೋಶಿಪ್ 2021

- ವಿವರ: ಡಿಫೆನ್ಸ್ ಅಂಡ್ ಡೆವಲಪ್‌ಮೆಂಟ್ ಆರ್ಗನೈಜೇಷನ್‌ನ ರಿಸರ್ಚ್ ಅಂಡ್ ಇನೊವೇಶನ್ ಸೆಂಟರ್ ಸ್ನಾತಕೋತ್ತರ ಪದವಿ ಪಡೆದವರಿಂದ ಜ್ಯೂನಿಯರ್ ರಿಸರ್ಚ್ ಫೆಲೋಶಿಪ್‌ಗೆ ಅರ್ಜಿಗಳನ್ನು ಆಹ್ವಾನಿಸಿದೆ.
- ಅರ್ಹತೆ: ಮೆಟಿರಿಯಲ್ಸ್ ಸೈನ್ಸ್, ಫಿಸಿಕ್ಸ್, ಅಪ್ಲೈಡ್ ಸೈನ್ಸ್‌ನಲ್ಲಿ ಪ್ರಥಮ ದರ್ಜೆ ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳು ಈ ಫೆಲೋಶಿಪ್‌ಗೆ ಅರ್ಜಿ ಸಲ್ಲಿಸಬಹುದು. ನೆಟ್ ಅಥವಾ ಗೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದ 28 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಅರ್ಜಿ ಸಲ್ಲಿಸಲು ಅರ್ಹರು.
- ಆರ್ಥಿಕ ನೆರವು: ತಿಂಗಳಿಗೆ ₹ 31,000 ಹಾಗೂ ಎಚ್‌ಆರ್‌ಎ
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜೂನ್ 12, 2021
- ಅರ್ಜಿ ಸಲ್ಲಿಕೆ ವಿಧಾನ: ಇಮೇಲ್ ಮೂಲಕ
- ಹೆಚ್ಚಿನ ಮಾಹಿತಿಗೆ: www.b4s.in/praja/RCF8

ಕೃಪೆ: buddy4study.com

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮೇಲ್ಮೈ ವಿಸ್ತೀರ್ಣಗಳು ಮತ್ತು ಘನಫಲಗಳು (ಮುಂದುವರಿದ ಭಾಗ)

ಎಸ್ಸೆಸ್ಸೆಲ್ಸಿ

ಗಣಿತ

ಉದಾಹರಣೆ 5: ಶಾಂತ ಅವರು ಜೋಪಡಿಯಲ್ಲಿ ಒಂದು ಕೈಗಾರಿಕೆಯನ್ನು ನಡೆಸುತ್ತಿದ್ದಾರೆ. ಜೋಪಡಿಯ ಆಕಾರವು ಆಯತ ಘನಾಕೃತಿಯಾಗಿದ್ದು, ಇದರ ಮೇಲ್ಛಾವಣಿಯು ಅರ್ಧ ಸಿಲಿಂಡರ್‌ನಿಂದ ಸಂಪೂರ್ಣವಾಗಿ ಆವರಿಸಿದೆ. ಜೋಪಡಿಯ ಪಾದದ ಅಳತೆಯು 7m*15m ಮತ್ತು ಆಯತ ಘನಾಕೃತಿಯ ಎತ್ತರ 8m ಆದರೆ ಜೋಪಡಿಯಲ್ಲಿ ಹಿಡಿಯುವ ಗಾಳಿಯ ಘನಫಲಗಳನ್ನು ಕಂಡುಹಿಡಿಯಿರಿ. ಮುಂದುವರೆದು, ಜೋಪಡಿಯಲ್ಲಿ ಇರುವ ಎಲ್ಲಾ ಯಂತ್ರಗಳ ಒಟ್ಟು ಘನಫಲವು $300m^3$ ಮತ್ತು ಅದರಲ್ಲಿನ 20 ಕೆಲಸಗಾರರು, ಪ್ರತಿ ಕೆಲಸಗಾರರು ಸರಾಸರಿಯಾಗಿ $0.08m^3$ ಅವಕಾಶವನ್ನು ಹೊಂದಿದ್ದಾರೆ ಎಂದು ಭಾವಿಸಿದರೆ, ನಂತರ ಜೋಪಡಿಯಲ್ಲಿ ಉಳಿಯುವ ಗಾಳಿ ಎಷ್ಟು?

$(\pi = \frac{22}{7}$ (ಎಂದು ತೆಗೆದುಕೊಳ್ಳಿ)

ಪರಿಹಾರ: ಜೋಪಡಿಯಲ್ಲಿ ಇರುವ ಗಾಳಿಯ ಘನಫಲವು (ಜೋಪಡಿಯಲ್ಲಿನ ಯಂತ್ರಗಳು ಮತ್ತು ಕೆಲಸಗಾರರು ಇರದೇ ಇದ್ದಾಗ) ಆಯತ ಘನಾಕೃತಿಯ ಘನಫಲ ಮತ್ತು ಅರ್ಧದ ಸಿಲಿಂಡರ್‌ನ ಒಳಭಾಗದ ಘನಫಲಗಳನ್ನು ಒಟ್ಟಾಗಿ ತೆಗೆದುಕೊಂಡಿದ್ದಕ್ಕೆ ಸಮವಾಗುತ್ತದೆ. ಈಗ ಆಯತ ಘನಾಕೃತಿಯ ಉದ್ದ, ಅಗಲ ಮತ್ತು ಎತ್ತರಗಳು ಕ್ರಮವಾಗಿ 15 , 7 ಮತ್ತು 8 ಆಗಿದೆ. ಅಲ್ಲದೆ ಅರ್ಧ ಸಿಲಿಂಡರ್‌ನ ವ್ಯಾಸವು 7m ಮತ್ತು ಅದರ ಎತ್ತರ 15m ಆಗಿದೆ. ಆದ್ದರಿಂದ

ಅಪೇಕ್ಷಿತ ಘನಫಲ = ಆಯತ ಘನಾಕೃತಿಯ ಘನಫಲ $+\frac{22}{7}\times$ ಸಿಲಿಂಡರ್‌ನ ಘನಫಲ

$$=(15\times 7\times 8+\frac{1}{2}\times\frac{22}{7}\times\frac{7}{2}\times\frac{7}{2}\times 15)$$

$$m^3 = 1128.75\, m^3$$


ನಂತರ, ಯಂತ್ರಗಳಿಂದ ಆವರಿಸಿದ ಒಟ್ಟು ಘನಫಲ = 300 m3 = 1128.75m3

ಕೆಲಸಗಾರರಿಂದ ಆವರಿಸಿದ ಒಟ್ಟು ಅವಕಾಶ = $20*0.08m^3 = 1.6m^3$


ಆದ್ದರಿಂದ ಯಂತ್ರಗಳು ಮತ್ತು ಕೆಲಸಗಾರರು ಇದ್ದಾಗ ಗಾಳಿಯ ಘನಫಲ $= 1128.86-(500.00 + 1.60) = 827.15\, m^3$

ಘನಾಕೃತಿಯನ್ನು ಒಂದು ಆಕಾರದಿಂದ ಮತ್ತೊಂದು ಆಕಾರಕ್ಕೆ ಪರಿವರ್ತಿಸುವುದು.

ನೀವೆಲ್ಲರೂ ಮೇಣದ ಬತ್ತಿಯನ್ನು ನೋಡುತ್ತೀರಿ. ಸಾಮಾನ್ಯವಾಗಿ ಅವುಗಳು ಸಿಲಿಂಡರ್‌ನ ಆಕಾರದಲ್ಲಿ ಇರುತ್ತವೆ. ನೀವು ಕೆಲವು ಮೇಣದ ಬತ್ತಿಗಳು ಪ್ರಾಣಿಗಳ ಆಕಾರದಲ್ಲಿ ಇರುವುದನ್ನು ಸಹ ನೋಡುತ್ತೀರಿ.



ಅವುಗಳನ್ನು ಹೇಗೆ ತಯಾರು ಮಾಡುತ್ತಾರೆ? ನೀವು ಮೇಣದ ಬತ್ತಿಯನ್ನು ಯಾವುದಾದರೂ ವಿಶೇಷ ಆಕಾರದಲ್ಲಿ ರೂಪಿಸಬೇಕಾದರೆ, ಮೊದಲು ಮೇಣವನ್ನು ಸಂಪೂರ್ಣವಾಗಿ ಒಂದು ಪಾತ್ರೆಯಲ್ಲಿ ಕರಗಿಸಬೇಕು. ನಂತರ ನಿಮಗೆ ಬೇಕಾದ ವಿಶೇಷ ಆಕಾರ ಇರುವ ಇನ್ನೊಂದು ಪಾತ್ರೆಯಲ್ಲಿ ಸುರಿಯಬೇಕಾಗುತ್ತದೆ. ಉದಾಹರಣೆಗೆ, ಸಿಲಿಂಡರ್ ಆಕೃತಿಯಲ್ಲಿ ಇರುವ ಮೇಣದ ಬತ್ತಿಯನ್ನು ಕರಗಿಸಿ ಮತ್ತು ದ್ರವೀಕೃತ ಮೇಣವನ್ನು ಮೊಲದ ಆಕಾರದಲ್ಲಿ ಇರುವ ಪಾತ್ರೆಗೆ ಸುರಿಯಿರಿ. ಅದನ್ನು ತಂಪಾಗಿಸಿದ ನಂತರದಲ್ಲಿ, ನೀವು ಮೇಣದ ಬತ್ತಿಯನ್ನು ಮೊಲದ ಆಕಾರದಲ್ಲಿ ಪಡೆಯುವಿರಿ. ನೂತನವಾಗಿ ಪಡೆದ ಮೇಣದ ಬತ್ತಿಯ ಘನಫಲವು ಈ ಮೊದಲಿದ್ದ ಮೇಣದ ಬತ್ತಿಯ ಘನಫಲಕ್ಕೆ ಸಮನಾಗಿರುತ್ತದೆ. ಈ ರೀತಿಯಾಗಿ ಒಂದು ವಸ್ತುವನ್ನು ಕರಗಿಸಿ ಅದರ ಆಕಾರವನ್ನು ಬದಲಾಯಿಸಿದಾಗ ಅದರ ಘನಫಲದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ.



ನಾವು ಇದುವರೆಗೆ ಚರ್ಚಿಸಿದನ್ನು ಅರ್ಥಮಾಡಿಕೊಳ್ಳಲು ಕೆಲವು ಉದಾಹರಣೆಗಳನ್ನು ನೋಡೋಣ.

ಉದಾಹರಣೆ 8: ಒಂದು ಶಂಕುವಿನ ಎತ್ತರ 24 cm ಮತ್ತು ಅದರ ಪಾದದ ತ್ರಿಜ್ಯವು 6 cm ಇದೆ. ಮಾದರಿಯನ್ನು ಜೇಡಿ ಮಣ್ಣಿನಿಂದ ತಯಾರಿಸಿದೆ. ಒಂದು ಮಗುವು ಇದನ್ನು ಗೋಲಾಕೃತಿಗೆ ಪರಿವರ್ತಿಸಿದರೆ, ಗೋಲದ ತ್ರಿಜ್ಯವನ್ನು ಕಂಡುಹಿಡಿಯಿರಿ.

ಪರಿಹಾರ: ಶಂಕುವಿನ ಘನಫಲ = $\frac{22}{7}\times\pi\times 6\times 6\times 24\ cm^3$

ಗೋಲದ ತ್ರಿಜ್ಯ r ಎಂದಾದರೆ ಅದರ ಘನಫಲವು $\frac{4}{3}\pi r^3$

ಆದ್ದರಿಂದ ಜೇಡಿ ಮಣ್ಣಿನಿಂದ ಮಾಡಿದ ಶಂಕುವಿನ ಘನಫಲ ಮತ್ತು ಗೋಲದ ಘನಫಲವು ಸಮನಾಗಿರುವುದರಿಂದ

$$\frac{4}{3}\pi r^3=\frac{1}{3}\times\pi\times 6\times 6\times 24$$

ಹಾಗಾಗಿ

$$r^3 = 3\times 3\times 24 = 3^3\times 2^3$$

ಆದ್ದರಿಂದ ಗೋಳದ ತ್ರಿಜ್ಯವು 6 ಸೆಂ.ಮೀ.

$$r = 3\times 3 = 6cm$$

(ಮುಂದುವರಿಯುವುದು)

ಸಂಕುಲನ ದಕ್ಷತೆ (ಮುಂದುವರಿದ ಭಾಗ)

ದ್ವಿತೀಯ ಪಿಯುಸಿ

ರಸಾಯನ ಶಾಸ್ತ್ರ

ಘಟಕ ಕೋಶದ ಆಯಾಮಗಳನ್ನು ಒಳಗೊಂಡಿರುವ ಲೆಕ್ಕಾಚಾರಗಳು:

$$d = \frac{ZM}{a^3N_A}$$

ಇಲ್ಲಿ z ಒಂದು ಘಟಕ ಕೋಶದಲ್ಲಿರುವ ಪರಮಾಣುಗಳ ಸಂಖ್ಯೆ ಮತ್ತು M = ಏಕ ಪರಮಾಣುವಿನ ರಾಶಿ ಘಟಕ ಕೋಶದಲ್ಲಿರುವ ಪರಮಾಣುವಿನ ರಾಶಿ $\frac{M}{}$ (M (ಎಂಬುದು ದ್ರವ್ಯರಾಶಿ)

ಘಟಕ ಕೋಶದ= $\frac{\text{ಘಟಕ ಕೋಶದ ರಾಶಿ}}{\text{ಸಾಂದ್ರತೆಯು ಘಟಕ ಕೋಶದ ಘನಫಲ}}\times 100$

$$= \frac{ZM}{a^3N_A}\ OR$$

$$d = \frac{ZM}{a^3N_A}$$

1) ಒಂದು ಧಾತು ಅಂಚಿನ ಉದ್ದ 288 ರೊಂದಿಗೆ ಕಾಯ ಕೇಂದ್ರಿತ ಘನ ರಚನೆಯನ್ನು ಹೊಂದಿದೆ. ಧಾತುವಿನ ಸಾಂದ್ರತೆಯು $7.2g/cm^3$, 208 g ನ ಧಾತುವಿನಲ್ಲಿ ಎಷ್ಟು ಪರಮಾಣುಗಳಿವೆ?

ಉತ್ತರ: ಘಟಕ ಕೋಶದ ಘನಫಲ $= (288pm)^3$

$= (288*10-12m)^6$

$= (288*10- 10cm)^6$

$= 2.39* 10-23cm^3$

200g ನ ಧಾತುವಿನ ಘನಫಲ = $\frac{\text{ರಾಶಿ}}{\text{ಸಾಂದ್ರತೆ}}$

$$= \frac{208g}{7.2gcm^3} = 28.88\, cm^3$$

ಈ ಘನಫಲದಲ್ಲಿರುವ ಘಟಕ ಕೋಶಗಳ ಸಂಖ್ಯೆ $\frac{28.88cm^3}{2.39\times 10^{23}cm^3/\text{ ಘಟಕ ಕೋಶ}}$

$= 12.08\times 10^{23}$ ಘಟಕ ಕೋಶಗಳನ್ನು

ಪ್ರತಿಯೊಂದು ಬಿಸಿಸಿ ಘಟಕ ಕೋಶವು 2 ಪರಮಾಣುಗಳನ್ನು ಹೊಂದಿರುವುದರಿಂದ 208 ನಲ್ಲಿ ಒಟ್ಟು ಪರಮಾಣುಗಳ ಸಂಖ್ಯೆ $= 2 * 12.08* 10^{23}$ ಘಟಕ ಕೋಶಗಳು $= 24.16* 10^{23}$ ಪರಮಾಣುಗಳು.

2) ತಾಮ್ರವು ಅಂಚಿನ ಉದ್ದ 3.608* 10–8cm ನೊಂದಿಗೆ ಎಫ್‌ಸಿಸಿ ಘಟಕ ಕೋಶದಲ್ಲಿ ಸ್ಫಟಿಕೀಕರಣಗೊಳ್ಳುತ್ತದೆ ಎಂದು ಕಿರಣ X - ವಿವರ್ತನೆಯ ಅಧ್ಯಯನವು ತೋರಿಸುತ್ತದೆ. ಬೇರೆ ಪ್ರಯೋಗದಲ್ಲಿ ತಾಮ್ರದ ಸಾಂದ್ರತೆಯು $8.92\ gcm^3$ ಎಂದು ಕಂಡುಹಿಡಿಯಲಾಗಿದ್ದರೆ, ತಾಮ್ರದ ಪರಮಾಣು ರಾಶಿಯನ್ನು ಕಂಡು ಹಿಡಿಯಿರಿ.

ಉತ್ತರ: ಎಫ್‌ಸಿಸಿ ಜಾಗದಲ್ಲಿ ಒಂದು ಘಟಕ ಕೋಶದಲ್ಲಿರುವ ಪರಮಾಣುಗಳ ಸಂಖ್ಯೆ Z = 4 ಪರಮಾಣುಗಳು ಆದ್ದರಿಂದ,

$$d = \frac{ZM}{a^3N_A}$$

$$d = 8.92/gcm^3,\ N_A = 6.022\times 10^{23}\text{ಪರಮಾಣು}$$

$$a = 3.608\times 10^{-4}cm,\ z = 4,\ m =?$$

$$M = \frac{da^3N_A}{Z}$$

$$= \frac{8.92g/cm^3\times(3.608\times 10^{-4}cm)^3\times 6.022\times 10^{23}}{4}$$

$$= \frac{8.92g/cm^3\times 46.96\times 10^{-12}cm^3\times 6.022\times 10^{23}}{4}$$

$$= \frac{2522.514\times 10^{11}}{4}$$

$$= 630.62\times 10^{11}\ g/moal$$

ಘನವಸ್ತುಗಳಲ್ಲಿನ ನ್ಯೂನತೆ

ಸ್ಫಟಿಕೀಯ ಘನವಸ್ತುಗಳು ಘಟಕ ಕಣಗಳ ಜೋಡಣೆಯಲ್ಲಿ ಅಲ್ಪವ್ಯಾಪ್ತಿ ಅಥವಾ ದೀರ್ಘವ್ಯಾಪ್ತಿ ಹೊಂದಿದ್ದರೂ ಸ್ಫಟಿಕಗಳು ಪರಿಪೂರ್ಣವಾಗಿಲ್ಲ. ಸಾಮಾನ್ಯವಾಗಿ ಘನವು ದೊಡ್ಡ ಪ್ರಮಾಣದ ಸಣ್ಣ ಸ್ಫಟಿಕಗಳ ಸಂಗ್ರಹವಾಗಿರುತ್ತದೆ. ಈ ಸಣ್ಣ ಹರಳುಗಳು ಅವುಗಳಲ್ಲಿ ನ್ಯೂನತೆಗಳನ್ನು ಹೊಂದಿವೆ. ವೇಗದ ಅಥವಾ ಮಧ್ಯಮ ಪ್ರಮಾಣದಲ್ಲಿ ಸ್ಫಟಿಕೀಕರಣ ಪ್ರಕ್ರಿಯೆಯು ಸಂಭವಿಸಿದಾಗ ಇದು ಘಟಿಸುತ್ತದೆ. ಸ್ಫಟಿಕೀಕರಣ ಪ್ರಕ್ರಿಯೆಯು ಅತ್ಯಂತ ನಿಧಾನ ಪ್ರಮಾಣದಲ್ಲಿ ಸಂಭವಿಸಿದಾಗ ಏಕ ಹರಳುಗಳು ರೂಪುಗೊಳ್ಳುತ್ತವೆ. ಈ ಹರಳುಗಳು ಸಹ ನ್ಯೂನತೆಗಳಿಂದ ಮುಕ್ತವಾಗಿರುವುದಿಲ್ಲ. ಮೂಲತಃ ಘಟಕ ಕಣಗಳ ಜೋಡಣೆಯಲ್ಲಿನ ಅಸಮರ್ಪಕತೆಯಿಂದ ಘನಗಳಲ್ಲಿ ನ್ಯೂನತೆಗಳು ಉಂಟಾಗುತ್ತದೆ. ನ್ಯೂನತೆಗಳು ಎರಡು ಪ್ರಕಾರಗಳಾಗಿದ್ದು, ಅವುಗಳೆಂದರೆ ಬಿಂದು ನ್ಯೂನತೆಗಳು ಮತ್ತು ರೇಖಾ ನ್ಯೂನತೆಗಳು.

ಬಿಂದು ನ್ಯೂನತೆಗಳು ಘಟಕದಂತಹ ವಸ್ತುವಿನಲ್ಲಿ ಒಂದು ಬಿಂದು ಅಥವಾ ಅಣುವಿನ ಸುತ್ತಲೂ ಇರುವ ಪರಿಪೂರ್ಣ ಜೋಡಣೆಯಲ್ಲಾಗುವ ವಿಚಲನೆ ಅಥವಾ ವ್ಯತ್ಯಾಸಗಳು, ಆದರೆ ರೇಖಾ ನ್ಯೂನತೆಗಳು ಜಾಲರಿಯಲ್ಲಿನ ಸಂಪೂರ್ಣ ಸಾಲುಗಳ ಪರಿಪೂರ್ಣ ಜೋಡಣೆಯಲ್ಲಾಗುವ ವ್ಯತ್ಯಾಸವಾಗಿರುತ್ತದೆ. ಈ ನ್ಯೂನತೆಗಳನ್ನು ಸ್ಫಟಿಕ ನ್ಯೂನತೆಗಳು ಎಂದು ಕರೆಯಲಾಗುತ್ತದೆ.



ಚಿತ್ರ 1.23 ಖಾಲಿ ನ್ಯೂನತೆ

(ಮುಂದುವರಿಯುವುದು)

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಒಬ್ಬ ವ್ಯಕ್ತಿಯ ಹೃದಯ ಮತ್ತು ಮನಸ್ಸನ್ನು ಅರ್ಥ ಮಾಡಿಕೊಳ್ಳಲು, ಅವನು ಈಗಾಗಲೇ ಸಾಧಿಸಿರುವುದನ್ನು ನೋಡಬಾರದು, ಭವಿಷ್ಯದ ಅವನ ಆಕಾಂಕ್ಷೆಗಳೇನು ಎಂಬುದನ್ನು ಪರಿಗಣಿಸಬೇಕು. **–ಖಲೀಲ್ ಗಿಬ್ರಾನ್**

ಕೋವಿಡ್: ಮನೆ ಮುಂದೆ ಕೆಂಪು ಪಟ್ಟಿ ಕಟ್ಟುವ ಔಚಿತ್ಯವೇನು?

ರಾಜ್ಯದ ರಾಜಧಾನಿ ಬೆಂಗಳೂರಿನ ಜನ ಕೋವಿಡ್‌ನಿಂದ ತತ್ತರಿಸಿದ್ದಾರೆ. ನಗರದಲ್ಲಿ ಇದುವರೆಗೆ 11.59 ಲಕ್ಷ ಮಂದಿ ಸೋಂಕಿಗೆ ಒಳಗಾಗಿದ್ದು, 13,105 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ನಗರದಲ್ಲಿ ಈಗಲೂ 1.62 ಲಕ್ಷದಷ್ಟು ಸಕ್ರಿಯ ಪ್ರಕರಣಗಳಿವೆ. ಇವರಲ್ಲಿ ಶೇಕಡ 90ಕ್ಕೂ ಹೆಚ್ಚು ಮಂದಿ ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೆಲವು ಮನೆಗಳಲ್ಲಿ ನಾಲ್ಕೈದು ಮಂದಿ ಏಕಕಾಲದಲ್ಲಿ ಸೋಂಕಿನಿಂದ ಬಳಲುತ್ತಿದ್ದಾರೆ. ಕೋವಿಡ್ ನಿಯಂತ್ರಣಕ್ಕಾಗಿ ಸರ್ಕಾರ ಲಾಕ್‌ಡೌನ್ ಜಾರಿಗೊಳಿಸಿದೆ. ಇದು ಅನಿವಾರ್ಯ ಆಗಿತ್ತಾದರೂ ಇದರಿಂದ ಜನ ಹೈರಾಣಾಗಿದ್ದಾರೆ ಎಂಬುದು ಕೂಡ ದಿಟ. ಈ ನಡುವೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ‘ಅಪಾಯ’ ಎಂಬ ಬರಹಗಳಿರುವ ಕೆಂಪು ಪಟ್ಟಿಯನ್ನು ಕೋವಿಡ್ ಸೋಂಕಿಗೆ ಒಳಗಾಗಿ ಮನೆ ಆರೈಕೆಯಲ್ಲಿರುವವರ ನಿವಾಸದ ಮುಂದೆ ಕಟ್ಟುವ ಅಮಾನವೀಯ ತೀರ್ಮಾನವನ್ನು ಕೈಗೊಂಡಿದೆ. ಕೋವಿಡ್ ಮೊದಲ ಅಲೆಯ ಆರಂಭದಲ್ಲಿ ನಗರದಲ್ಲಿ ಸೋಂಕಿತರು ಕಡಿಮೆ ಸಂಖ್ಯೆಯಲ್ಲಿದ್ದರು. ಸೋಂಕು ಬೇರೆ ಕಡೆ ಹರಡುವುದನ್ನು ನಿಯಂತ್ರಿಸಲು ಬಿಬಿಎಂಪಿ ಕಂಟೈನ್ಮೆಂಟ್ ವಲಯಗಳನ್ನು ಗುರುತಿಸಿ, ಸೋಂಕಿತರ ಮನೆಯ 100 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ಸಂಪೂರ್ಣ ಸೀಲ್‌ಡೌನ್ ಮಾಡುತ್ತಿತ್ತು. ಈ ಪ್ರದೇಶದಿಂದ ಒಬ್ಬರೂ ಆಚೆ ಹೋಗದಂತೆ ಹಾಗೂ ಹೊರಗಿನವರು ಅಲ್ಲಿಗೆ ಬರದಂತೆ ಮಾಡಲು ನಿಗಾ ಇರಿಸಿತ್ತು. ಕಂಟೈನ್‌ಮೆಂಟ್ ಪ್ರದೇಶದ ಅಷ್ಟೂ ಮನೆಗಳಿಗೆ ಅಗತ್ಯ ಸಾಮಗ್ರಿ ಪೂರೈಕೆಗೆ ವ್ಯವಸ್ಥೆ ಮಾಡಿತ್ತು. ಸೀಲ್‌ಡೌನ್ ಮಾಡಲಾದ ಪ್ರದೇಶಗಳ ನಿವಾಸಿಗಳು ಹಾಗೂ ಸೋಂಕು ದೃಢಪಟ್ಟವರ ಮನೆ ಮಂದಿ ಅನುಭವಿಸುವ ಮಾನಸಿಕ ಯಾತನೆ ಬಗ್ಗೆ ಬಿಬಿಎಂಪಿ ಕೌನ್ಸಿಲ್ ಸಭೆಗಳಲ್ಲಿ ತಾಸುಗಟ್ಟಲೆ ಚರ್ಚೆಗಳು ನಡೆದಿವೆ. ಇಂತಹ ಉಪಕ್ರಮಗಳಿಂದ ಆಗುವ ಸಾಮಾಜಿಕ ದುಷ್ಪರಿಣಾಮಗಳ ಬಗ್ಗೆ ತಜ್ಞರು ಕೂಡಾ ಎಚ್ಚರಿಸಿದ್ದಾರೆ. ಟೀಕೆಗಳು ವ್ಯಕ್ತವಾದ ಬಳಿಕ ಕಂಟೈನ್‌ಮೆಂಟ್ ವಲಯಗಳನ್ನು ಗುರುತಿಸುವ ಹಾಗೂ ಮನೆಗಳನ್ನು ಸೀಲ್‌ಡೌನ್ ಮಾಡುವ ಪರಿಪಾಟವನ್ನು ಬಿಬಿಎಂಪಿ ಕೈಬಿಟ್ಟಿತ್ತು. ಅವೈಜ್ಞಾನಿಕ ಎಂಬ ಕಾರಣಕ್ಕೆ ಕೈಬಿಟ್ಟ ಪದ್ಧತಿಯನ್ನು ಮನೆ ಬಳಿ ಕೆಂಪು ಪಟ್ಟಿ ಕಟ್ಟುವ ಮೂಲಕ ಬಿಬಿಎಂಪಿ ಮತ್ತೆ ಬೇರೆ ರೂಪದಲ್ಲಿ ಈಗ ಜಾರಿಗೊಳಿಸಿದೆ. ಈ ಬಗ್ಗೆ ಅಧಿಕೃತ ಆದೇಶ ಹೊರಬಿದ್ದಿಲ್ಲ. ಮುಖ್ಯ ಆಯುಕ್ತ ಗೌರವ ಗುಪ್ತ ಅವರ ಮೌಖಿಕ ಸೂಚನೆ ಮೇರೆಗೆ ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.



ಕೋವಿಡ್ ರೋಗಿಗಳಲ್ಲಿ ಧೈರ್ಯ ತುಂಬಿ, ನೆರವು ನೀಡಬೇಕಾದ ಕಾಲದಲ್ಲಿ ಅವರ ಮನೆ ಮುಂದೆ ಕೆಂಪು ಪಟ್ಟಿ ಕಟ್ಟುವ ಮೂಲಕ ಸಮಾಜದಿಂದ ಅವರನ್ನು ಪ್ರತ್ಯೇಕಿಸುವ ಕ್ರಮ ಸರಿಯಲ್ಲ

ಸೋಂಕಿತರ ಮನೆ ಮುಂದೆ ಕೆಂಪು ಪಟ್ಟಿ ಕಟ್ಟುವ ಔಚಿತ್ಯವೇ ಅರ್ಥವಾಗುತ್ತಿಲ್ಲ. ಸೋಂಕಿತರ ಮನೆಗಳನ್ನು ಗುರುತಿಸಿ ಜಾಹೀರುಗೊಳಿಸುವುದರಿಂದ ಆ ಮನೆ ಮಂದಿಯ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಬಿಬಿಎಂಪಿ ಕಿಂಚಿತ್ತೂ ಯೋಚನೆ ಮಾಡಿದಂತಿಲ್ಲ. ‘ಸೋಂಕಿತರು ಮನೆಯಿಂದ ಹೊರಗಡೆ ಬಂದು ತಿರುಗಾಡುವುದನ್ನು ತಡೆಯಲು ಈ ರೀತಿ ಮಾಡಲಾಗುತ್ತಿದೆ’ ಎಂಬುದು ಬಿಬಿಎಂಪಿ ಅಧಿಕಾರಿಗಳು ನೀಡುತ್ತಿರುವ ಸಮಜಾಯಿಷಿ. ಕೋವಿಡ್ ರೋಗಿಗಳನ್ನು ಮಾನವೀಯವಾಗಿ ನಡೆಸಿಕೊಂಡು, ಎಲ್ಲ ರೀತಿಯ ನೆರವು ನೀಡಬೇಕಾದ ಆಡಳಿತ ವ್ಯವಸ್ಥೆಯೇ ಅವರನ್ನು ಕೀಳಾಗಿ ನೋಡಲು ಕಾರಣವಾಗುವಂತೆ ಮಾಡುತ್ತಿರುವುದು ಒಪ್ಪತಕ್ಕ ಕ್ರಮ ಅಲ್ಲ. ಸೋಂಕಿತರ ನೆರವಿಗೆ ಬರುವುದಕ್ಕೆ ಜನರು ಹಿಂದೇಟು ಹಾಕುತ್ತಿರುವ ಸಂದರ್ಭದಲ್ಲಿ ಅವರ ಮನೆಗೆ ಕೆಂಪು ಪಟ್ಟಿ ಅಂಟಿಸುವ ಕ್ರಮವು ಸೋಂಕಿತರನ್ನು ಮತ್ತಷ್ಟು ಅಸಹಾಯಕತೆಗೆ ದೂಡುವ ಸಾಧ್ಯತೆ ಇದೆ. ಕುಟುಂಬದಲ್ಲಿನ ಸೋಂಕಿತರಲ್ಲದ ಸದಸ್ಯರೂ ಅಗತ್ಯ ವಸ್ತುಗಳ ಖರೀದಿಗೆ ಹೊರಗೆ ಬರುವುದಕ್ಕೆ ಈ ಕ್ರಮ ತಡೆಯೊಡ್ಡುತ್ತದೆ. ಕೋವಿಡ್ ರೋಗಿಗಳಲ್ಲಿ ಧೈರ್ಯ ತುಂಬಿ, ನೆರವು ನೀಡಬೇಕಾದ ಸಂದರ್ಭದಲ್ಲಿ ಕೆಂಪು ಪಟ್ಟಿಯ ಮೂಲಕ ಸಮಾಜದಿಂದ ಅವರನ್ನು ಪ್ರತ್ಯೇಕಿಸುವ ಕ್ರಮಗಳಿಂದ ಯಾವ ಪ್ರಯೋಜನವೂ ಆಗದು. ಅವೈಜ್ಞಾನಿಕವಾದ ಇಂತಹ ಕ್ರಮವನ್ನು ಕೈಬಿಟ್ಟು, ಸೋಂಕಿತರಿಗೆ ಅಗತ್ಯ ನೆರವು ಒದಗಿಸುವುದು ಮತ್ತು ಹೊರಗೆ ಓಡಾಡದಂತೆ ಮನವೊಲಿಸುವ, ಅರಿವು ಮೂಡಿಸುವ ಕೆಲಸವನ್ನು ಬಿಬಿಎಂಪಿ ಆಡಳಿತ ಮಾಡಬೇಕಿದೆ.

ದಿನದ ಟ್ವೀಟ್



ಬೇಕಾಗಿರುವುದು...

ಮುಂಬರುವ ವರ್ಷಗಳಲ್ಲಿ ಎಲ್ಲಿ ಬೇಕೆಂದರೆ ಅಲ್ಲಿಂದ ಕೆಲಸ ಮಾಡಬಹುದಾದ ಸಂಸ್ಕೃತಿ ಹೆಚ್ಚುತ್ತಾ ಹೋಗುತ್ತದೆ. ಯುವಕರು ನಗರದಲ್ಲಿ ಕೆಲಸ ದಕ್ಕಿಸಿಕೊಂಡು ಕೃಷಿಕರಾಗಿ ಮುಂದುವರಿಯಲು ಕೂಡ ಅವಕಾಶ ಇರುತ್ತದೆ. ಆದರೆ ಇದು ಸಾಧ್ಯವಾಗಲು ಬೇಕಾಗಿರುವುದು ಸತತವಾದ ವಿದ್ಯುಚ್ಛಕ್ತಿ ಪೂರೈಕೆ ಮತ್ತು ಉತ್ತಮ ಇಂಟರ್ನೆಟ್ ಸೌಲಭ್ಯ.

ಕಿರಣ್ ಕೊಡ್ಲಾಡಿ, ನಾಗರಿಕ

25 ವರ್ಷಗಳ ಹಿಂದೆ

ಶುಕ್ರವಾರ, 31-5-1996

• ಜೆ.ಎಚ್.ಪಟೇಲ್ ನೂತನ ಮುಖ್ಯಮಂತ್ರಿ

ಬೆಂಗಳೂರು, ಮೇ 30– ದಿನವಿಡೀ ನಡೆದ ಅನಿರೀಕ್ಷಿತ ನಾಟಕೀಯ ಬೆಳವಣಿಗೆ ನಂತರ ನೂತನ ಮುಖ್ಯಮಂತ್ರಿಯಾಗಿ ಜಯದೇವಪ್ಪ ಹಾಲಪ್ಪ ಪಟೇಲ್ ಹಾಗೂ ಉಪಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ಆಯ್ಕೆಗೊಂಡರು.

ನಿಯೋಜಿತ ಪ್ರಧಾನಿ ಹಾಗೂ ಮುಖ್ಯಮಂತ್ರಿ ಎಚ್.ಡಿ.ದೇವೇಗೌಡರು ರಾತ್ರಿ ಮತ್ತೆ ಸೇರಿದ ಜನತಾದಳದ ಶಾಸಕಾಂಗ ಪಕ್ಷದ ಸಭೆಯಲ್ಲಿ ನೂತನ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರ ಹೆಸರನ್ನು ಪ್ರಸ್ತಾಪಿಸಿದಾಗ, ಸಭೆ ಒಕ್ಕೊರಲಿನಿಂದ ಅನುಮೋದನೆ ನೀಡಿತು.

ಮುಖ್ಯಮಂತ್ರಿ ಹುದ್ದೆಗೆ ಪೈಪೋಟಿ ಏರ್ಪಟ್ಟ ಕಾರಣ, ಬೆಳಗಿನಿಂದ ರಾತ್ರಿಯ ವರೆವಿಗೂ ವಿವಿಧ ಬಣಗಳ ಮುಖಂಡರು ಹಾಗೂ ಶಾಸಕರ ಜತೆಗೆ ಪಕ್ಷದ ನಾಯಕರು ಎಡೆಬಿಡದೆ ಸಮಾಲೋಚನೆ ನಡೆಸಿ, ಸಂಜೆಯ ಹೊತ್ತಿಗೆ ಸರ್ವಸಮ್ಮತವಾದ ನಿಲುವಿಗೆ ಬಂದರು.

• ಜೂನ್ 7ಕ್ಕೆ ದೇವೇಗೌಡರಿಂದ ವಿಶ್ವಾಸಮತ?

ನವದೆಹಲಿ, ಮೇ 30– ನೂತನ ಪ್ರಧಾನಿಯಾಗಿ ಜೂನ್ 1ರಂದು ಪ್ರಮಾಣ ವಚನ ಸ್ವೀಕಾರ ಮಾಡಲಿರುವ ಎಚ್.ಡಿ. ದೇವೇಗೌಡ ಅವರು ಏಳರಂದು ಲೋಕಸಭೆಯಲ್ಲಿ ವಿಶ್ವಾಸಮತ ಪಡೆಯಲಿದ್ದಾರೆಂದು ವಿಶ್ವಸನೀಯ ಮೂಲಗಳಿಂದ ಗೊತ್ತಾಗಿದೆ.

ವಾಜಪೇಯಿ ಅವರು ರಾಜೀನಾಮೆ ನೀಡಿದ ನಂತರ ಸಂಯುಕ್ತ ರಂಗ ಮತ್ತು ಕಾಂಗ್ರೆಸ್‌ನ 311 ಸದಸ್ಯರ ಬೆಂಬಲ ಹೊಂದಿರುವ ದೇವೇಗೌಡ ಅವರನ್ನು ರಾಷ್ಟ್ರಪತಿ ಡಾ. ಶಂಕರ ದಯಾಳ ಶರ್ಮಾ ಅವರು ಸರ್ಕಾರ ರಚಿಸಲು ಕಳೆದ ಮಂಗಳವಾರ ರಾತ್ರಿ ಆಮಂತ್ರಿಸಿ, ಜೂನ್ 12ರೊಳಗೆ ವಿಶ್ವಾಸಮತ ಪಡೆಯಲು ಆದೇಶಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

50 ವರ್ಷಗಳ ಹಿಂದೆ

ಸೋಮವಾರ, 31-5-1971

• ಪಳನಿಯ ಚಿಲ್ಲರೆ ನಗರ ಪೊಲೀಸರ ವಶ

ಬೆಂಗಳೂರು, ಮೇ 30– ನಗರದ ಪೊಲೀಸರು ಇಂದು ಬೆಳಿಗ್ಗೆ ಚಾಮರಾಜಪೇಟೆಯ ನಾಲ್ಕು ಮಾರುವಾಡಿ ಅಂಗಡಿಗಳನ್ನು ಶೋಧಿಸಿ ಸುಮಾರು ಹತ್ತು ಸಹಸ್ರ ರೂಪಾಯಿಯ ಚಿಲ್ಲರೆ ನಾಣ್ಯಗಳನ್ನು ವಶಪಡಿಸಿಕೊಂಡರು.

ಈ ಸಂಬಂಧದಲ್ಲಿ ಮದುರೆ ಜಿಲ್ಲೆಯ ಪಳನಿ ನಿವಾಸಿ ಕುಪ್ಪುಸ್ವಾಮಿ ಮತ್ತು ಅವರ ಸೇವಕನನ್ನು ಪೊಲೀಸರು ತಮ್ಮ ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ಹನ್ನೊಂದು ಚೀಲಗಳಲ್ಲಿ ತುಂಬಿಡಲಾಗಿದ್ದ ಒಂದು, ಮೂರು ಹಾಗೂ ಐದು ಪೈಸೆ ನಾಣ್ಯಗಳ ಅಂದಾಜು ತೂಕ 470 ಕೆ.ಜಿ.

ನಗರದಲ್ಲಿ ಕಳೆದ ಕೆಲವು ತಿಂಗಳಿಂದ ಚಿಲ್ಲರೆ ನಾಣ್ಯಗಳ ಅಭಾವ ಉಂಟಾಗಿದ್ದು, ಸಾರ್ವಜನಿಕರು, ವರ್ತಕರು ರಾಜ್ಯಪಾಲರಿಗೆ ಅನೇಕ ಬಾರಿ ದೂರು ಕೊಟ್ಟಿರುವುದನ್ನು ಇಲ್ಲಿ ಸ್ಮರಿಸಬಹುದು.

• ದಕ್ಷಿಣದ ಚಿತ್ರೋದ್ಯಮ ಭಾರಿ ಬಿಕ್ಕಟ್ಟಿನಲ್ಲಿ

ಮದರಾಸು, ಮೇ 30– ಮದರಾಸಿನ ಚಲನಚಿತ್ರೋದ್ಯಮ ಈ ವರ್ಷದ ಆರಂಭದಿಂದಲೂ ಗಲ್ಲಾಪೆಟ್ಟಿಗೆಯ ದೃಷ್ಟಿಯಿಂದ ತೀರಾ ಇಳಿಮುಖವಾಗಿ ಬಿಕ್ಕಟ್ಟನ್ನೆದುರಿಸುತ್ತಿದೆ.

ಕಳೆದ ಆರು ತಿಂಗಳಲ್ಲಿ ತಯಾರಿಸಿದ ಚಿತ್ರಗಳಲ್ಲಿ ಶೇ 95ರಷ್ಟು ಗಲ್ಲಾ ಪೆಟ್ಟಿಗೆಯ ದೃಷ್ಟಿಯಿಂದ ಭಾರಿ ಪೆಟ್ಟು ತಿಂದಿದೆ.

ಪರಿಸ್ಥಿತಿ ಹೀಗಿರುವಾಗ, ತಯಾರಿಕೆಯ ವಿವಿಧ ಘಟ್ಟಗಳಲ್ಲಿದ್ದು ಮೂರು ಕೋಟಿ ರೂ.ಗಳ ಬಂಡವಾಳ ಹೊಂದಿರುವ ಎಪ್ಪತ್ತೈದು ಚಿತ್ರಗಳು ಹೊರ ಬರುವುದು ಸಂದೇಹ ಎಂದು ದಕ್ಷಿಣ ಭಾರತ ಫಿಲ್ಮ್ ಚೇಂಬರಿನ ಅಧ್ಯಕ್ಷ ಎ.ಎಲ್.ಶ್ರೀನಿವಾಸನ್ ಇಂದು ಇಲ್ಲಿ ಹೇಳಿದರು.

ಸಂಸದೀಯ ಪ್ರಜಾಸತ್ತೆ ಒಬ್ಬ ಪ್ರಬಲ ನಾಯಕನ ಸುಪರ್ದಿಯಲ್ಲಿ ಯಾಕಾದರೂ ಇರಬೇಕು?

ಏಳು ವರ್ಷ, ಎರಡು ಸತ್ಯ



ಅನುರಣನ

ಎ. ನಾರಾಯಣ

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ನಿನ್ನೆಗೆ (ಮೇ 30) ಏಳು ವರ್ಷಗಳು ತುಂಬಿವೆ. ಕೋವಿಡ್ ಎರಡನೆಯ ಅಲೆಯನ್ನು ಎದುರಿಸುವಲ್ಲಿ ಎಡವಿದ ಕಾರಣ ಇಷ್ಟು ಸಮಯದ ನಂತರ ಸರ್ಕಾರದ ವಿರುದ್ಧ ಜನಾಭಿಪ್ರಾಯ ರೂಪುಗೊಳ್ಳುತ್ತಿದೆ ಮತ್ತು ಪ್ರಧಾನಮಂತ್ರಿಯ ವರ್ಚಸ್ಸು ಮೊದಲ ಬಾರಿಗೆ ಸೊರಗುತ್ತಿದೆ ಎನ್ನುವ ವರ್ತಮಾನವಿದೆ. ಈ ಬೆಳವಣಿಗೆಗಳನ್ನು ಸ್ವಲ್ಪ ಸೂಕ್ಷ್ಮವಾಗಿ ಅರ್ಥ ಮಾಡಿಕೊಳ್ಳಬೇಕಿದೆ.

ಕೋವಿಡ್ ಸಂಬಂಧಿ ವೈಫಲ್ಯಗಳ ಒಂದೇ ಕಾರಣಕ್ಕಾಗಿ ಜನರು ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ತಿರುಗಿಬಿದ್ದಿದ್ದಾರೆ ಎಂದಾದರೆ ಅದು ಈ ಸರ್ಕಾರದ ಸೋಲಲ್ಲ, ಗೆಲುವು. ಜನರಿಗೆ ಅಸಮಾಧಾನ ಮೂಡಿದ್ದು ಕೋವಿಡ್ ಎರಡನೆಯ ಅಲೆಯ ಸಂದರ್ಭದಲ್ಲಿ ಹೀಗೆಲ್ಲಾ ಆಗಿ ಹೋದದ್ದಕ್ಕೆ ಮಾತ್ರ ಎಂದಾದರೆ, ಈ ತನಕ ಈ ಸರ್ಕಾರದ ಅವಧಿಯಲ್ಲಿ ಆಗಿಹೋದ ಎಲ್ಲ ವಿದ್ಯಮಾನಗಳಿಗೂ ದೇಶದ ಬಹುಪಾಲು ಜನರ (ಕೊನೇಪಕ್ಷ ಚುನಾವಣೆಯಲ್ಲಿ ಬಹುಮತ ಪಡೆಯಲು ಅಗತ್ಯ ಇರುವಷ್ಟು ಸಂಖ್ಯೆಯ ಜನರ) ಅಂಗೀಕಾರದ ಮುದ್ರೆ ಇದೆ ಎಂದಾಯಿತು. ಇಲ್ಲಿಯತನಕ ಈ ಸರ್ಕಾರ ಸಾಧನೆಯ ಹಾದಿಯಲ್ಲಿ ಎಡವುತ್ತಾ ಸಾಗಿದ ಬಗ್ಗೆ, ಚುನಾವಣೆ ಗೆಲ್ಲಲು ಆಳುವ ಪಕ್ಷ ಬಳಸಿಕೊಂಡ ಕೆಟ್ಟ ತಂತ್ರಗಳ ಬಗ್ಗೆ ಜನ ತಲೆ ಕೆಡಿಸಿಕೊಂಡಿಲ್ಲ ಎಂದಾಯಿತು. ಅಂದಮೇಲೆ ಬಿಜೆಪಿಯನ್ನು ದೊಡ್ಡ ಮಟ್ಟಿಗೆ ಕಂಗೆಡಿಸುವಂತಹುದು ಏನೂ ಆಗಿಲ್ಲ ಅಂತಲೇ ಹೇಳಬೇಕಾಗುತ್ತದೆ.

ಈಗಿನ ಹಿನ್ನಡೆಯಿಂದ ಪಾರಾಗಲು ಅದಕ್ಕೆ ಬೇಕಾಗಿರುವುದು ಇನ್ನೊಂದು ಕಣ್ಕಟ್ಟು. ಅರ್ಧಸತ್ಯಗಳನ್ನು ಮತ್ತು ಪೂರ್ಣ ಸುಳ್ಳುಗಳನ್ನು ಬೆರೆಸಿ ತಯಾರಿಸಿದ ಇನ್ನೊಂದು ನರೇಟಿವ್. ಇಷ್ಟನ್ನು ಮಾಡುವ ವಿದ್ಯೆ ಬಿಜೆಪಿಗೆ ಕರತಲಾಮಲಕ. ಅದಕ್ಕೆ ಅಗತ್ಯ ಇರುವ ಎಲ್ಲಾ ತಯಾರಿಯನ್ನು ಬಿಜೆಪಿಯ ಭಯಾನಕ ಐ.ಟಿ. ಸೆಲ್ ಮತ್ತು ಅದರ ಟ್ರೋಲ್ ಸೇನೆ ಈಗಾಗಲೇ ನಡೆಸುತ್ತಿವೆ ಎನ್ನುವ ಸೂಚನೆಗಳಿವೆ.

ಬಿಜೆಪಿಯ ಈ ಏಳು ವರ್ಷಗಳ ಆಡಳಿತದ ಕುರಿತಾಗಿ ಎರಡು ಗಂಭೀರವಾದ ಸತ್ಯಗಳನ್ನು ಜನ ಮನಗಾಣದೇ ಹೋದ ಹೊರತು ಬಿಜೆಪಿಯ ರಾಷ್ಟ್ರ ಮಟ್ಟದ ಭದ್ರಕೋಟೆಯಲ್ಲಿ ಬಿರುಕು ಮೂಡುತ್ತಿದೆ ಎಂದು ಹೇಳುವ ಹಾಗಿಲ್ಲ. ಬಿಜೆಪಿಯ ಆಳ್ವಿಕೆಯ ಅವಧಿಯಲ್ಲಿ ಪ್ರಬಲವಾಗಿ ಬೆಳೆದದ್ದು ಆ ಪಕ್ಷವೇ ಹೊರತು ದೇಶವಲ್ಲ ಎನ್ನುವುದು ಮೊದಲ ಸತ್ಯ. ತಾನು ದೇಶವನ್ನು ಪ್ರಬಲವಾಗಿ ಕಟ್ಟಿದ ಹಾಗೆ ಇನ್ಯಾವ ಪಕ್ಷವೂ ಮಾಡಲು ಸಾಧ್ಯ ಇಲ್ಲ ಅಂತ ಜನರನ್ನು ಬಿಜೆಪಿ ನಂಬಿಸಿರಬಹುದು. ಆದರೆ ಏಳು ವರ್ಷಗಳಲ್ಲಿ ದೇಶ ಕಂಡ ವಾಸ್ತವವೇ ಬೇರೆ ಎನ್ನುವ ಸತ್ಯ ಅದು.

ಎರಡನೆಯದ್ದು, ದೇಶ ಬಹಳ ಕಾಲದಿಂದ ನಿರೀಕ್ಷಿಸುತ್ತಿದ್ದ ಪ್ರಬಲ ನಾಯಕನೊಬ್ಬ ಕೊನೆಗೂ 2014ರಲ್ಲಿ ಅವತರಿಸಿಯೇ ಬಿಟ್ಟ ಎಂಬ ನಂಬಿಕೆ ಕೂಡಾ ಸುಳ್ಳು ಎನ್ನುವ ಸತ್ಯ. ಏಳು ವರ್ಷಗಳ ಹಿಂದೆ ದೇಶ ಕಂಡುಕೊಂಡದ್ದು ಒಬ್ಬ ಪ್ರಬಲ ನಾಯಕನನ್ನಲ್ಲ- ಬದಲಿಗೆ ನಾಯಕತ್ವದ ಒಂದು ಹುಸಿ ಮಾದರಿಯನ್ನು, ನಾಯಕತ್ವದ ಒಂದು ಅಪ್ರಬುದ್ಧ ಪ್ರಭೇದವನ್ನು.

ಈ ಎರಡೂ ಸತ್ಯಗಳು ಜನಮನದ ಆಳಕ್ಕಿಳಿಯದಷ್ಟೂ ಕಾಲ ಬಿಜೆಪಿ ಅನುಭವಿಸುವ ಎಲ್ಲಾ ಹಿನ್ನಡೆಗಳು ತಾತ್ಕಾಲಿಕ ಆಗಬಹುದಾದ ಸಾಧ್ಯತೆಯೇ ಹೆಚ್ಚು. ಇತ್ತೀಚೆಗೆ ಪಂಚರಾಜ್ಯಗಳ ಚುನಾವಣೆಗಳಲ್ಲಿ ಬಿಜೆಪಿ ನಿರೀಕ್ಷಿತ ಫಲಿತಾಂಶ ಪಡೆಯಲಿಲ್ಲ ಎಂಬುದರಿಂದಾಗಲೀ ಅಥವಾ ಕೋವಿಡ್ ಎದುರಿಸುವಲ್ಲಿ ಕೇಂದ್ರ ಸರ್ಕಾರ ತೋರಿದ ಕಳಪೆ ನಿರ್ವಹಣೆಯ ಕುರಿತಾಗಿ ಜನರಲ್ಲಿ ಉಂಟಾಗಿರುವ ಅಸಮಾಧಾನದಿಂದಾಗಲೀ ರಾಷ್ಟ್ರ ರಾಜಕೀಯದ ದಿಕ್ಕು ಬದಲಾಗುವ ಸಾಧ್ಯತೆಗಳು ಉದ್ಭವಿಸಬಹುದು ಅಂತ ವಿರೋಧ ಪಕ್ಷಗಳು ಅಂದುಕೊಂಡಿದ್ದರೆ ಅದು ತುಸು ಅವಸರದ ತೀರ್ಮಾನ ಅಂತ ಭಾವಿಸಬೇಕಾಗುತ್ತದೆ. ಅಂತಹ ಸಾಧ್ಯತೆಯೊಂದು ಸೃಷ್ಟಿಯಾಗಬೇಕಾದರೆ, ವಿರೋಧ ಪಕ್ಷಗಳು ಮೇಲೆ ಹೇಳಿದ ಎರಡೂ ಸತ್ಯಗಳನ್ನು ಗಂಭೀರವಾಗಿ ಜನರಿಗೆ ತಲುಪಿಸಬೇಕಾಗುತ್ತದೆ.

ಮೊದಲಿಗೆ, ಪ್ರಬಲ ರಾಷ್ಟ್ರ ಕಟ್ಟುವ ವಿಚಾರವನ್ನು ನೋಡೋಣ. ಒಂದು ರಾಷ್ಟ್ರವನ್ನು ಪ್ರಬಲವಾಗಿ ಕಟ್ಟುವುದು ಎಂದರೆ ಮಿಲಿಟರಿ ಬಲ ಹೆಚ್ಚಿಸಿಕೊಳ್ಳುವುದು, ಸುತ್ತಲಿರುವ ಒಂದೆರಡು ದೇಶಗಳ ವಿರುದ್ಧ ಅಬ್ಬರಿಸುವುದು, ಸಮಸ್ತ ಅಧಿಕಾರವನ್ನು ಕೇಂದ್ರೀಕರಿಸಿ ಚಲಾಯಿಸುವುದು ಎಂಬುದೆಲ್ಲಾ ಆಧುನಿಕ ಜಗತ್ತಿನಲ್ಲಿ ಅಪ್ರಸ್ತುತ ಮಾದರಿಗಳು. ಆದರೆ ಅಧಿಕಾರದ ಅವಧಿಯುದ್ದಕ್ಕೂ ಬಿಜೆಪಿ ನೇತೃತ್ವದ ಸರ್ಕಾರ ಮಾಡಿದ್ದು ಮಾತ್ರ ಇದನ್ನೇ. ಈ ಕಾಲಕ್ಕೆ ಅನುಗುಣವಾಗಿ ರಾಷ್ಟ್ರವನ್ನು ಬಲಗೊಳಿಸುವುದು ಎಂದರೆ ಮೊದಲಿಗೆ ಅರ್ಥ ವ್ಯವಸ್ಥೆಯನ್ನು ಸುಸ್ಥಿರವಾಗಿ ಬೆಳೆಸುವುದು, ಸಮಾಜದಲ್ಲಿ ಸಾಮರಸ್ಯ ಕಾಯ್ದುಕೊಳ್ಳುವುದು, ಪ್ರಜಾತಾಂತ್ರಿಕವಾಗಿ ಅಧಿಕಾರ ಚಲಾಯಿಸುವುದು. ಆದರೆ ಆದದ್ದೇನು? ಏಳು ವರ್ಷಗಳಲ್ಲಿ ಅರ್ಥವ್ಯವಸ್ಥೆ ಕಂಡುಕೇಳರಿಯದ ರೀತಿಯಲ್ಲಿ ಕುಸಿಯಿತು. ಕೋವಿಡ್ ಕಾಣಿಸಿಕೊಳ್ಳುವ ಮೊದಲೇ ಆದ ವಿದ್ಯಮಾನ ಇದು. ಅರ್ಥವ್ಯವಸ್ಥೆಗೆ ಸಂಬಂಧಿಸಿದಂತೆ ಸದ್ಯ ಯಾವ ಬೆಳ್ಳಿಗೆರೆಗಳೂ ಕಾಣಿಸುತ್ತಿಲ್ಲ.

ಸಾಮರಸ್ಯದ ಬದಲಿಗೆ ವ್ಯಾಪಕವಾಗಿ ದ್ವೇಷವನ್ನು ಬಿತ್ತಲಾಗಿದೆ. ದ್ವೇಷವೇ ಏಳು ವರ್ಷಗಳ ರಾಜಕೀಯದ ಮೂಲಮಂತ್ರ. ದೇಶದ ಹೆಮ್ಮೆಯ ಬಳುವಳಿಯಾದ ಪ್ರಜಾತಾಂತ್ರಿಕ ಸಂವಿಧಾನವನ್ನು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವ ಹಾಗೆ ಕಡೆಗಣಿಸಿ ಅಧಿಕಾರ ಚಲಾಯಿಸಲಾಗಿದೆ. ದೇಶದ ಚರಿತ್ರೆಯ ಕರಾಳ ಅಧ್ಯಾಯ ಎಂದೇ ಭಾವಿಸಲಾದ ತುರ್ತುಪರಿಸ್ಥಿತಿಯನ್ನಾದರೂ ಸಂವಿಧಾನದ ಆವರಣದೊಳಗೆ ಹೇರಲಾಗಿತ್ತು. ತುರ್ತುಪರಿಸ್ಥಿತಿಯ ಕಾಲದಲ್ಲಿ ಸಂವಿಧಾನಕ್ಕೆ ಆ ಮಟ್ಟಿಗಾದರೂ ಇದ್ದ ಬೆಲೆಯೂ ಈಗ ಇಲ್ಲವಾಗಿದೆ.



ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿದ್ದರಲ್ಲಿ, ಇನ್ನೊಂದು ರಾಮ ಮಂದಿರ ನಿರ್ಮಿಸುವುದರಲ್ಲಿ, ಬಾನೆತ್ತರದ ಪ್ರತಿಮೆಗಳನ್ನು ಸ್ಥಾಪಿಸುವುದರಲ್ಲಿ, ಭವ್ಯ ಪಾರ್ಲಿಮೆಂಟ್ ಭವನ, ಪ್ರಧಾನಮಂತ್ರಿಗಳ ವಾಸಕ್ಕೆ ಮಧ್ಯಯುಗದ ದೊರೆಗಳ ರೀತಿಯ ಐಷಾರಾಮಿ ಅರಮನೆ ಎಬ್ಬಿಸುವುದರಲ್ಲಿ ದೇಶದ ಶಕ್ತಿ, ಸ್ವಾಭಿಮಾನ ಮೆರೆಸುತ್ತಿದ್ದೇವೆ ಎಂಬ ಸರ್ಕಾರದ ಮಂದಿಯ ವಾದ, ಹೆಚ್ಚೆಂದರೆ ಒಂದು ಸೈದ್ಧಾಂತಿಕ ನಿಲುವು ಹೊಂದಿದವರ ಅಭಿಪ್ರಾಯವಾದೀತೇ ಹೊರತು ಅದನ್ನು ಸತ್ಯ ಅಂತ ಸ್ವೀಕರಿಸಲೂ ಸಾಧ್ಯವಿಲ್ಲ, ಇವೆಲ್ಲದರಿಂದಾಗಿ ಭಾರತ ಪ್ರಬಲ ರಾಷ್ಟ್ರ ಆಗುವುದೂ ಇಲ್ಲ.

ಈ ಏಳು ವರ್ಷಗಳಲ್ಲಿ ಸ್ಥಾಪನೆಯಾದ ಯಾವ ಸಂಸ್ಥೆ, ಕೈಗೆತ್ತಿಕೊಂಡ ಯಾವ ಯೋಜನೆ, ಜಾರಿಗೊಳಿಸಿದ ಯಾವ ಕಾನೂನು-ಕಟ್ಟಲೆಗಳು ಕಳೆದೆರಡು ತಿಂಗಳುಗಳ ಘೋರ ಸಂಕಷ್ಟದಲ್ಲಿ ದೇಶವಾಸಿಗಳ ರಕ್ಷಣೆಗೆ ಬಂದವು ಎನ್ನುವ ಒಂದೇ ಒಂದು ಪ್ರಶ್ನೆಗೆ ಸಿಗುವ ಉತ್ತರಕ್ಕಿಂತ ಹೆಚ್ಚಿನ ಯಾವ ಮಾನದಂಡ ಬೇಕು ಈ ಸರ್ಕಾರದ ಈ ತನಕದ ಸಾಧನೆಯನ್ನು ಅಳೆಯುವುದಕ್ಕೆ ಹೇಳಿ. ಈ ಅವಧಿಯಲ್ಲಿ ಬಿಜೆಪಿ ಮತ್ತೆ ಮತ್ತೆ ಚುನಾವಣೆಗಳನ್ನು ಗೆದ್ದಿದೆ, ಸಾಧ್ಯವಾದಲ್ಲೆಲ್ಲಾ ತನ್ನ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಅದರಿಂದ ಏನೀಗ?

ಇನ್ನು ಪ್ರಬಲ ನಾಯಕತ್ವದ ವಿಚಾರಕ್ಕೆ ಬಂದರೆ, ಒಂದು ಸಂಸದೀಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಬಲ ನಾಯಕತ್ವ ಅಂದರೆ ಏನು ಮತ್ತು ಅದು ಯಾಕಾದರೂ ಬೇಕು ಎನ್ನುವ ಮೂಲಭೂತ ಪ್ರಶ್ನೆ ಇದೆ. ಪ್ರಬಲ ನಾಯಕತ್ವ ಬೇಕು ಎನ್ನುವ ಹಾಗೆ 2014ರ ವೇಳೆಗೆ ದೇಶಕ್ಕೆ ದೇಶವೇ ಹಾತೊರೆಯುವ ಹಾಗೆ ಮಾಡಿದ್ದೇ ಈಗ ನೋಡಿದರೆ ಒಂದು ರಾಜಕೀಯ ಗಿಮಿಕ್ ಎನ್ನುವಂತೆ ಕಾಣಿಸುತ್ತದೆ. ಅದಿರಲಿ. ಏಳು ವರ್ಷಗಳ ನಂತರ ಸಮಸ್ತ ದೇಶವಾಸಿಗಳು ಪ್ರಬಲ ನಾಯಕತ್ವದ ಲಕ್ಷಣಗಳ ಕುರಿತಂತೆ ಕೆಲ ಪ್ರಾಥಮಿಕ ಪಾಠಗಳನ್ನು ಕಲಿಯಬೇಕಾದ ಕಾಲ ಬಂದಿದೆ. ಇಲ್ಲದೇ ಹೋದರೆ ಅವರು ಮತ್ತೊಮ್ಮೆ ಅದೇ ತಪ್ಪು ಮಾಡುವ ಸಾಧ್ಯತೆ ಇದೆ. ಯಾವ ತಪ್ಪು ಎಂದರೆ, ತನ್ನ ಮೂಲ ವೈಯಕ್ತಿಕ ವಿವರಗಳಲ್ಲೇ (ಬಯೊ-ಡೇಟಾ) ಸತ್ಯಗಳನ್ನು ದಾಖಲಿಸಲಾಗದ, ಯಾವುದೇ ರೀತಿಯ ಪ್ರಶ್ನೆಗಳನ್ನೂ ಎದುರಿಸಲಾಗದ, ದೇಶದ ನಿರ್ವಹಣೆ ಎಂದರೆ ಪ್ರಚಾರದ ನಿರ್ವಹಣೆ ಅಂತ ಭಾವಿಸುವ, ಮಾತನಾಡಬೇಕಾದಲ್ಲಿ ಮೌನವನ್ನೂ ಮೌನದಿಂದಿರಬೇಕಾದಲ್ಲಿ ಮಾತುಗಳನ್ನೂ ಆಡುವ, ಸ್ಥಾನದ ಘನತೆ ಮರೆತು ಸಾರ್ವಜನಿಕ ಭಾಷಣಗಳಲ್ಲಿ ಕ್ಷುಲ್ಲಕ ಉದ್ಗಾರಗಳನ್ನು ಮಾಡುವ, ಸಂಕೀರ್ಣ ಸಮಸ್ಯೆಗಳಿಗೆ ಸರಳೀಕೃತ ಪರಿಹಾರಗಳು ಸಾಧ್ಯ ಅಂತ ನಂಬಿ ನಿರ್ಧಾರಗಳನ್ನೂ ಕೈಗೊಳ್ಳುವ ರಾಜಕಾರಣಿಗಳನ್ನು ಪ್ರಬಲ ನಾಯಕರು ಅಂತ ಒಪ್ಪಿ ಸ್ವೀಕರಿಸುವ ತಪ್ಪು.

ಚುರುಮುರಿ



ಮಾರ್ಜಾಲ ಗುರು

• ಸುಮಂಗಲಾ

ಬೆಕ್ಕಣ್ಣ ಬೆಳಬೆಳಗ್ಗೆಯೇ ನನ್ನ ಕಪಾಟಿನಲ್ಲಿ ಏನೋ ಹುಡುಕುತ್ತಿತ್ತು.

‘ಏನು ಕಿತ್ತುಕುಡುಗಾಕೆ ಹತ್ತೀಯಲೇ’ ಎಂದು ರೇಗಿದೆ.

‘ರುದ್ರಾಕ್ಷಿ ಸರ, ದೊಡ್ಡ ಬಂಗಾರದ ಗುಂಡುಗಳಿರೋ ಸರ ಅದಾವೇನಂತ ಹುಡುಕಾಕೆ ಹತ್ತೀನಿ’ ಎಂದಿತು.

‘ಮಂಗ್ಯಾನಂಥವನೇ... ನನ್ ಹತ್ರ ಸಣ್ಣ ಚೈನೂ ಇಲ್ಲ, ನಿನಗೆ ಎದಕ್ಕೆ ಈಗ?’

‘ಒಂದು ನಾಕು ರುದ್ರಾಕ್ಷಿ ಸರ, ಒಂದೆರಡು ಬಂಗಾರದ ಗುಂಡಿನ ಸರ, ಕೈಗೆ ಕಡಗ ಎಲ್ಲಾ ಹಾಕ್ಕಂಡು ಟೀವಿವಳಗ ಕೊರೊನಾ ಭವಿಷ್ಯ ಹೇಳಾಕ ಹೋಗತೀನಿ. ನನಗ ಇವೆಲ್ಲಾನೂ ತರಿಸಿಕೊಡು’ ಎಂದು ವರಾತ ಶುರು ಮಾಡಿತು.

‘ರೊಕ್ಕ ಇಲ್ಲಲೇ. ರೈತ್ರು ಇನ್ನಾತನ ದೆಹಲಿ ಗಡಿವಳಗ ವಣಮಾರಿ ಮಾಡಿ ಕುಂತಾರ. ಕಪ್ಪು, ಕೆಂಪು, ಹಳದಿ ಫಂಗಸ್ ಕೊರೊನಾ ಜೋಡಿ ಸ್ಪರ್ಧೆಗಿಳಿದಾವು, ಕಾಮನಬಿಲ್ಲಿನ ಬಣ್ಣದಾಗೆ ನಾಕು ಬಣ್ಣದ ಫಂಗಸ್ ಅಟ್ಯಾಕ್ ಅಷ್ಟೇ ಉಳಿದೈತಿ. ನೀ ಏನ್ ಭವಿಷ್ಯ ಹೇಳೂದು ಬಾಕಿ ಐತಿ?’ ಸಮಾ ಬೈದೆ.

‘ಏನರ ಹೊಸಾದು ಮಾಡ್ತೀನಂದ್ರ ಎಲ್ಲಾದಕ್ಕೆ ಅಡ್ಡಬಾಯಿ ಹಾಕ್ತಿದಿ. ಹೋದವರ್ಷ ಬಾಬಾನ ಕೊರೊನಿಲ್ ಔಷಧ, ಕಷಾಯದ ಏಜೆನ್ಸಿ ತಗೋತೀನಿ ಅಂದ್ರ ಬ್ಯಾಡ ಅಂದಿ. ಬಣ್ಣದ ರುಮಾಲು ಸುತ್ತಿಕೆಂಡು, ಗಡ್ಡಬಿಟ್ಕಂಡು, ಆ ಗುರು ಹಂಗ ಉಪದೇಶ ಮಾಡ್ತೀನಂದ್ರ ಅದಕ್ಕೂ ಬಿಡಲಿಲ್ಲ. ಈ ಗುರೂಜಿ ಹಂಗ ಭವಿಷ್ಯ ಹೇಳಿದ್ರ, ಎಲ್ಲ ಟೀವಿಯವರು ಕರಿತಾರ, ರಗಡ್ ರೊಕ್ಕ ಬರತೈತಂದ್ರ ಬ್ಯಾಡ ಅಂತಿ’ ಮೂತಿ ಉಬ್ಬಿಸಿ ಲ್ಯಾಪ್‌ಟಾಪಿನಲ್ಲಿ ಮುಖ ಹುದುಗಿಸಿತು.

‘ವ್ಯಾಕ್ಸೀನಿಲ್ಲ, ಬೆಡ್ ಇಲ್ಲ, ಆಕ್ಸಿಜೆನ್ ಸಿಗಂಗಿಲ್ಲ, ದುಡಿದು ತಿನ್ನೂ ಮಂದಿಗೆ ಕೆಲಸನೂ ಇಲ್ಲ, ಹೊಟ್ಟಿಗೂ ಇಲ್ಲ, ನಮ್ಮ ದೇಶಕ್ಕೆ ಹಿಂತಾ ದುರ್ದೆಸೆ ತಂದಿಟ್ಟವರು ನಮ್ಮ ದೇವ್ರೇ ಆದ್ರೂ ನಾ ಪ್ರಶ್ನೆ ಮಾಡಾಂವ ಅಂತ ನಿರ್ಮಲಕ್ಕನ ಗಂಡ ಭಾಷಣ ಮಾಡ್ಯಾರ. ಭವಿಷ್ಯ ಹೇಳೂ ಗುರೂಜಿ ಬದಲಿಗೆ ಹಿಂಗ ಯುಟ್ಯೂಬ್ ಭಾಷಣ ಶುರು ಮಾಡತೀನಿ’ ಎಂದು ಕೊನೆಗೊಮ್ಮೆ ಬುದ್ಧಿವಂತಿಕೆಯ ಮಾತಾಡಿತು.

ಸಂಗತ

ಕೋವಿಡ್: ತಂಬಾಕಿನ ಕಣ್ಣಲ್ಲಿ

ಕೋವಿಡ್ ಮತ್ತು ತಂಬಾಕು ನಂಟಿನ ಬಗ್ಗೆ ಅವೈಜ್ಞಾನಿಕ ಪ್ರಚಾರ ಜೋರಾಗಿದೆ

• ಡಾ. ಕೆ.ಎಸ್.ಪವಿತ್ರ

ಜನರು ವಿವಿಧ ಬಗೆಯ ಮೌಢ್ಯಗಳಿಗೆ ಮೊರೆ ಹೋಗುತ್ತಿರುವಾಗಲೇ ಮತ್ತೊಂದು ಸವಾಲು! ಮೊನ್ನೆ ರೋಗಿಯೊಬ್ಬರು ಬಂದು ಕೇಳಿದರು ‘ಡಾಕ್ಟ್ರೇ, ತಂಬಾಕು ತಿನ್ನಬೇಡಿ, ಸಿಗರೇಟು ಸೇದಬೇಡಿ ಒಳ್ಳೆಯದಲ್ಲ ಅಂತ ನೀವು ಹೇಳ್ತೀರ. ಆದರೆ ಟಿ.ವಿ.ಯಲ್ಲಿ ತೋರಿಸ್ತಿದಾರೆ ಸಿಗರೇಟು ಸೇದುವವರಲ್ಲಿ ಕೋವಿಡ್ ಸಾಧ್ಯತೆ ಕಡಿಮೆಯಂತೆ’!

ಪುಣ್ಯಕ್ಕೆ ಈ ಅಧ್ಯಯನದ ಬಗ್ಗೆ, ಅದರ ನಂತರ ನಡೆದ ವಿದ್ಯಮಾನಗಳ ಬಗ್ಗೆ ನನಗೆ ಮಾಹಿತಿ ಇತ್ತು. ರೋಗಿಯ ಅನುಮಾನ ಪರಿಹರಿಸಿ, ವಿವರಿಸಿ ‘ತಂಬಾಕು, ಸಿಗರೇಟು ಅನಾರೋಗ್ಯಕ್ಕೆ ದಾರಿ’ ಎಂಬುದನ್ನು ಮತ್ತೆ ಖಚಿತಪಡಿಸಿ ಕಳಿಸಿದೆ. ವಿಶ್ವ ತಂಬಾಕು ರಹಿತ ದಿನದಂದು (ಮೇ 31) ‘ತಂಬಾಕಿನಿಂದ ಕೋವಿಡ್ ತಡೆಗಟ್ಟಲು ಸಾಧ್ಯವೇ’ ಎಂಬ ಗೊಂದಲ ಉಂಟಾಗಿರುವುದು ಎಂಥ ವಿಪರ್ಯಾಸ ಎನಿಸಿಬಿಟ್ಟಿತು!


‘ಯುರೋಪಿಯನ್ ರೆಸ್ಪಿರೇಟರಿ ಜರ್ನಲ್’ ಎಂಬ ವೈಜ್ಞಾನಿಕ ನಿಯತಕಾಲಿಕ 2020ರ ಜುಲೈನಲ್ಲಿ ಜಗತ್ತಿನ ಗಮನ ಸೆಳೆಯುವಂತಹ ಒಂದು ಅಧ್ಯಯನ ವನ್ನು ಪ್ರಕಟಿಸಿತು. ಅಲ್ಲಿಯವರೆಗೆ, ಶ್ವಾಸಕೋಶಗಳ ಮೇಲೆ ದಾಳಿ ಮಾಡುವ ಕೋವಿಡ್‌ನಿಂದ ಧೂಮಪಾನಿಗಳಲ್ಲಿ ತೀವ್ರ ಕಾಯಿಲೆ ಮತ್ತು ಸಾವಿನ ಪ್ರಮಾಣ ಹೆಚ್ಚು ಎಂಬುದು ವಿಶ್ವ ಆರೋಗ್ಯ ಸಂಸ್ಥೆಯೂ ಒಳಗೊಂಡಂತೆ ವೈದ್ಯಕೀಯ ಜಗತ್ತು ಹೊಂದಿದ್ದ ಸಾಮಾನ್ಯ ಗ್ರಹಿಕೆ. ಆದರೆ ಈ ಅಧ್ಯಯನ ಹೇಳಿದ್ದು ‘ಧೂಮಪಾನಿಗಳು ಕೋವಿಡ್– 19 ಸೋಂಕಿಗೆ ಒಳಗಾಗುವ ಸಾಧ್ಯತೆಯೇ ಕಡಿಮೆ. ಒಂದೊಮ್ಮೆ ಸೋಂಕು ತಗುಲಿದರೂ ಐಸಿಯು ಸೇರುವುದು, ವೆಂಟಿಲೇಟರ್ ಬೇಕಾಗುವುದು, ಸಾವು ಇವು ವಿರಳ’.

ಈ ಅಧ್ಯಯನವು ಮಾಧ್ಯಮಗಳು ಹಾಗೂ ಜನರ ಗಮನ ಸೆಳೆದಷ್ಟು, ವೈದ್ಯ ಜಗತ್ತನ್ನು ‘ಅರೆ!’ ಎಂದು ಆಘಾತಕಾರಿ ಅಚ್ಚರಿ ಪಡಿಸಿದಷ್ಟು, ಅದರ ನಂತರ ಅದೇ ನಿಯತಕಾಲಿಕ ಪ್ರಕಟಿಸಿದ ‘ತಪ್ಪೊಪ್ಪಿಗೆ’ ಗಮನ ಸೆಳೆಯಲಿಲ್ಲ. ಈ ಅಧ್ಯಯನದಲ್ಲಿ ಪಾಲ್ಗೊಂಡಿದ್ದ ಐವರು ಲೇಖಕರಲ್ಲಿ ಇಬ್ಬರು ತಂಬಾಕು ಉದ್ಯಮದೊಂದಿಗೆ ನಂಟು ಹೊಂದಿದ್ದರು, ಈ ಉದ್ಯಮದಿಂದ ಧನಸಹಾಯ ಪಡೆದಿದ್ದರು ಎಂಬುದು ಕಂಡುಬಂದಿತು.

ಕೋವಿಡ್ ಮತ್ತು ತಂಬಾಕು ನಂಟಿನ ಬಗ್ಗೆ ಹಲವು ಅಧ್ಯಯನಗಳು ಅಲ್ಲಲ್ಲಿ, ಸರಿಯಾಗಿ ಸಂಶೋಧನಾ ವಿಧಾನಗಳನ್ನು ಅನುಸರಿಸದೆ ಪ್ರಕಟವಾಗಿವೆ. ವೈಜ್ಞಾನಿಕವಾಗಿ ಅವುಗಳನ್ನು ಪರಿಶೀಲಿಸದೆ ಕೆಲವು ಮಾಧ್ಯಮಗಳು ಜಗತ್ತಿನಾದ್ಯಂತ ‘ಧೂಮಪಾನಿಗಳು ಕೋವಿಡ್‌ಗೆ ಒಳಗಾಗುವುದಿಲ್ಲ’ ಎಂದು ಪ್ರಚಾರವನ್ನೂ ಆರಂಭಿಸಿಬಿಟ್ಟಿವೆ. ಧೂಮಪಾನದ ವ್ಯಸನಿಗಳು ‘ವೈದ್ಯ ಹೇಳಿದ್ದೂ ತಂಬಾಕು, ರೋಗಿ ಬಯಸಿದ್ದೂ ತಂಬಾಕು’ ಎಂದು ತಮ್ಮ ವ್ಯಸನ ಮುಂದುವರಿಸಲು ಹೊಸ ಕಾರಣ ಹುಡುಕಿಕೊಂಡಿದ್ದಾರೆ.

ಮಾಧ್ಯಮಗಳು ಪ್ರಸಾರ ಮಾಡದ, ಜನರು ಗಮನಿಸದ, ವೈದ್ಯಕೀಯ ಜಗತ್ತಿನಲ್ಲಿ ಮಾತ್ರ ಮತ್ತೆ ಮತ್ತೆ ಎತ್ತಿ ತೋರಿಸುವ ಸತ್ಯಗಳು ಕೆಲವಿವೆ. ಅಂತಹ ಒಂದು ಸತ್ಯ, ‘2020ರಲ್ಲಿ ಕೋವಿಡ್‌ನಿಂದ ಸತ್ತಷ್ಟೇ ಜನ, ಅಂದರೆ 5 ಲಕ್ಷ ಜನ ಅಮೆರಿಕವೊಂದರಲ್ಲೇ ತಂಬಾಕಿನಿಂದಲೂ ಸತ್ತಿದ್ದಾರೆ’. ಇನ್ನು ಜನಸಂಖ್ಯೆ ಹೆಚ್ಚಿರುವ, ಅಂಕಿ-ಅಂಶಗಳು ನಿಖರವಾಗಿ ಲಭ್ಯವಾಗದ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ?

ಜನರ ಮಾನಸಿಕ ನೆಲೆಗಟ್ಟೂ ಈ ದಿಕ್ಕಿನಲ್ಲಿ ಮುಖ್ಯವಾಗುತ್ತದೆ. ನಮ್ಮ ಮನಸ್ಸು ಯಾವಾಗಲೂ ನಮಗೆ ‘ಬೇಕು’ ಎನಿಸುವ ಅಭ್ಯಾಸಗಳನ್ನು ಸಮರ್ಥಿಸಿಕೊಳ್ಳುವ ಕಾರಣಗಳನ್ನು ಹುಡುಕುತ್ತಲೇ ಇರುತ್ತದೆ. ಅಂದರೆ ಮದ್ಯವ್ಯಸನಕ್ಕೆ ಜನರು ಕೊಡುವ ‘ಹಾರ್ಟ್‌ಗೆ ಒಳ್ಳೇದು ಅಂತ ಕುಡಿತೀವಿ’, ‘ಅಸ್ತಮಾಕ್ಕೆ ಸ್ವಲ್ಪ ಕುಡಿದರೆ ನಿಯಂತ್ರಣದಲ್ಲಿರುತ್ತೆ ಅಂತ ಯಾರೋ ಹೇಳಿದ್ರು’ ಇಂಥ ಅಂಶಗಳನ್ನು ಮುಂದಿಟ್ಟುಕೊಂಡು ಅದರಿಂದಾಗುವ ಅಪಾಯವನ್ನು ಗಣನೆಗೇ ತೆಗೆದುಕೊಳ್ಳದೆ ವ್ಯಸನವನ್ನು ಬಹುಜನ ಮುಂದುವರಿಸುತ್ತಾರೆ. ಅದೇ ರೀತಿ ತಂಬಾಕು- ಧೂಮಪಾನದ ಪ್ಯಾಕೆಟ್‌ಗಳ ಮೇಲೆ ಮುದ್ರಿಸಲಾಗಿರುವ ‘ಧೂಮಪಾನ/ ತಂಬಾಕು ಆರೋಗ್ಯಕ್ಕೆ ಹಾನಿಕರ ಎಂಬ ಹೇಳಿಕೆಯನ್ನೋ ಅಥವಾ ತಂಬಾಕಿನಿಂದ ಉಂಟಾದ ಕ್ಯಾನ್ಸರ್ ಗಡ್ಡೆಯಿಂದ ಜೀವಕ್ಕೆ ಅಪಾಯ ತಂದುಕೊಂಡ ಜಾಹೀರಾತನ್ನೋ ಜನರು ಗಮನಿಸುವುದೂ ಇಲ್ಲ, ಈ ರೀತಿ ನಮಗಾದೀತು ಎಂದರೆ ಹೆದರುವುದೂ ಇಲ್ಲ. ಆದರೆ ವಾರ್ತೆಯ ಮಧ್ಯೆ ಒಂದು ಸಣ್ಣ ಸುದ್ದಿಯಾಗಿ ಬರುವ ‘ಸಿಗರೇಟು ಸೇದುವವರಲ್ಲಿ ಕೋವಿಡ್ ಕಡಿಮೆ’ ಎಂಬ ದೃಢಪಡದ ಸಂಶೋಧನೆಯನ್ನು ಗಮನಿಸುವುದಷ್ಟೇ ಅಲ್ಲ, ನೆನಪಿಟ್ಟುಕೊಂಡು ತಮ್ಮ ವ್ಯಸನಕ್ಕೆ ಸಮರ್ಥನೆಯಾಗಿ ಉಪಯೋಗಿಸತೊಡಗುತ್ತಾರೆ. ವೈದ್ಯರಿಗೇ ಸವಾಲೆಸೆಯುತ್ತಾರೆ!



ವೈದ್ಯಕೀಯ ಜಗತ್ತು ಹಾಗೆಂದು ಕೈಕಟ್ಟಿ ಕುಳಿತಿಲ್ಲ. ಈ ದಿಸೆಯಲ್ಲಿ ಈಗಾಗಲೇ ಅಧ್ಯಯನಗಳು ಆರಂಭವಾಗಿವೆ. ಕೋವಿಡ್– 19 ಮತ್ತು ಧೂಮಪಾನದ ಬಗ್ಗೆ ಆತಂಕಕಾರಿ ಸತ್ಯಗಳೂ ಪ್ರಾಥಮಿಕ ಸಂಶೋಧನೆಗಳಲ್ಲಿ ಹೊರಬೀಳುತ್ತಿವೆ. ಕೋವಿಡ್- 19ರಿಂದ ಉಂಟಾಗುವ ಮಿದುಳಿನ ಸೋಂಕು ರೋಗಗಳು ಧೂಮಪಾನಿಗಳಲ್ಲಿ ಹೆಚ್ಚು ಎಂಬುದು ಕಂಡುಬಂದಿದೆ.

ಕೋವಿಡ್‌ನಿಂದ ನರಳದಿರಲು, ಸೋಂಕಿನಿಂದ ಹೊರಬರಲು, ವಿವಿಧ ರೀತಿಯ ಕಾಯಿಲೆಗಳಿಂದ ದೂರವಿರಲು, ಶ್ವಾಸಕೋಶವನ್ನು ಆರೋಗ್ಯವಾಗಿಡಲು ಧೂಮಪಾನ-ತಂಬಾಕುಗಳನ್ನು ತ್ಯಜಿಸಬೇಕು ಎಂಬ ಬಗ್ಗೆ ಜನರು ಕೇವಲ ಇತರರ ಮನವಿ- ಸಲಹೆಗಳಿಂದ, ಮಾಧ್ಯಮ- ಅಧ್ಯಯನಗಳಿಂದಷ್ಟೇ ಅಲ್ಲ ಸ್ವಾನುಭವದಿಂದ ಅರಿಯಬೇಕಾದ ಹೊತ್ತೂ ಇದಾಗಿದೆ. ಕೇಳಿದ್ದನ್ನು, ಕಂಡದ್ದನ್ನು ವಿವೇಚಿಸದೆ ನಂಬಿ, ಇನ್ನೊಬ್ಬರಿಗೆ ಹೇಳಿ ಬೇರೆಯವರನ್ನು ವಂಚಿಸದಿರೋಣ. ನಮಗೆ ನಾವೇ ಮೋಸ ಮಾಡಿಕೊಳ್ಳದಿರೋಣ!

ವಾಚಕರ ವಾಣಿ

ಅವೈಜ್ಞಾನಿಕ ಆದೇಶ ಸಲ್ಲದು

ಮೈಸೂರಿನಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗಿರುವುದರಿಂದ ವಾರದ ಎರಡು ದಿನಗಳಲ್ಲಿ ಮಾತ್ರ ಜನರ ಚಟುವಟಿಕೆಗಳಿಗೆ ಅವಕಾಶ ನೀಡಿರುವುದು ಶುದ್ಧ ಅವೈಜ್ಞಾನಿಕ ನಿರ್ಧಾರ. ಇದು, ಸಹಜವಾಗಿ ಹರಿಯುವ ನೀರಿಗೆ ಕಟ್ಟೆ ಕಟ್ಟಿ ನಿಲ್ಲಿಸಿ, ಬಾಗಿಲು ತೆಗೆದು ಒಟ್ಟಿಗೆ ರಭಸವಾಗಿ ಹರಿಯಲು ಬಿಟ್ಟಂತೆ. ಇದರಿಂದ, ಜನರ ಓಡಾಟಕ್ಕೆ ಅವಕಾಶವಿದ್ದ ದಿನ ಗದ್ದಲ ಹೆಚ್ಚಿ, ಪದಾರ್ಥಗಳನ್ನು ಖರೀದಿಸುವ ಆತುರದಲ್ಲಿ ಕೋವಿಡ್ ನಿಯಮಗಳನ್ನು ಗಾಳಿಗೆ ತೂರಿ ಸೋಂಕು ಇನ್ನೂ ಹೆಚ್ಚಾಗಲು ಕಾರಣರಾಗುತ್ತಾರೆ. ಅದರ ಬದಲು, ಪೊಲೀಸ್ ಸಿಬ್ಬಂದಿಯನ್ನು ನಗರದ ಮುಖ್ಯ ವಾಣಿಜ್ಯ ಭಾಗಗಳಿಗೆ ನಿಯೋಜಿಸಿ, ವ್ಯಾಪಾರದ ವೇಳೆಯಲ್ಲಿ ಕೋವಿಡ್ ಮಾರ್ಗಸೂಚಿಗಳ ಪಾಲನೆಯಾಗುವಂತೆ ನೋಡಿಕೊಂಡರೆ ಸಾಕು. ಸಣ್ಣಪುಟ್ಟ ಆಸ್ಪತ್ರೆಗಳಲ್ಲಿಯೂ ಈ ಬಗ್ಗೆ ಗಮನ ಹರಿಸುವ ಅವಶ್ಯಕತೆ ಇದೆ. ಜಿಲ್ಲಾಡಳಿತ ಈ ದಿಸೆಯಲ್ಲಿ ತನ್ನ ನಿರ್ಧಾರ ಬದಲಿಸುವುದು ಒಳಿತು.

ಎಸ್.ರವಿ, ಮೈಸೂರು

ಬದಲಾಗದ ವಸ್ತುಸ್ಥಿತಿ

‘ವೈದ್ಯ ಪದ್ಧತಿಯ ಟೀಕೆ ತರವಲ್ಲ’ ಎನ್ನುವ ಲೇಖನದಲ್ಲಿ ವಚನಾನಂದ ಸ್ವಾಮೀಜಿ ‘ಜೀವ ಉಳಿಸುವ ಮತ್ತು ಕೊಲ್ಲುವ ಎರಡೂ ಸಾಧ್ಯತೆ ವೈದ್ಯರ ಕೈಯಲ್ಲಿ ಇರುತ್ತದೆ, ಅಂದ ಮಾತ್ರಕ್ಕೆ ವೈದ್ಯ ದೇವರಾಗಿಯೇ ಉಳಿದಿದ್ದಾನೆ ಅಂತೇನೂ ಅಲ್ಲ’ ಎಂದಿದ್ದಾರೆ (ಆಳ- ಅಗಲ, ಮೇ 28). ಈ ಸಂದರ್ಭದಲ್ಲಿ, ಇಂತಹುದೇ ಅಭಿಪ್ರಾಯವನ್ನು ಧ್ವನಿಸುವ ಸಂಸ್ಕೃತದ ಸುಭಾಷಿತವೊಂದು ಅತ್ಯಂತ ಪ್ರಾಸಂಗಿಕ ಎನಿಸುತ್ತದೆ. ಅದೆಂದರೆ: ವೈದ್ಯ ರಾಜ ನಮಸ್ತುಭ್ಯಂ ಯಮರಾಜ ಸಹೋದರಃ| ಯಮಸ್ತು ಹರತಿ ಪ್ರಾಣಂ ವೈದ್ಯೋ ಪ್ರಾಣಂ ಧನಾನಿ ಚ.

ತಾತ್ಪರ್ಯ: ಯಮರಾಜನ ಖಾಸಾ ಸಹೋದರನಾದ ವೈದ್ಯರಾಜನೇ ನಿನಗೆ ನಮಸ್ಕಾರ. ಯಮರಾಜನು ಕೇವಲ ಪ್ರಾಣವನ್ನು ಹರಣ ಮಾಡಿದರೆ, ನೀನು ಪ್ರಾಣ ಮತ್ತು ಹಣ ಎರಡನ್ನೂ ಹರಣ ಮಾಡುತ್ತೀಯ.

ಈ ಸುಭಾಷಿತ ಎಷ್ಟೋ ಕಾಲದ ಹಿಂದೆ ರಚನೆಯಾಗಿದ್ದರೂ ಕೆಲವು ವೈದ್ಯರ ಇನ್ನೊಂದು ಮುಖದ ಅನಾವರಣ ಅಂದಿಗೂ ಇಂದಿಗೂ ಹಾಗೆಯೇ ಇರುವುದು ಮತ್ತು ವಸ್ತುಸ್ಥಿತಿಯಲ್ಲಿ ಕೊಂಚವೂ ಬದಲಾವಣೆ ಇಲ್ಲ ಎನ್ನುವುದು ವಿಷಾದದ ಸಂಗತಿಯಾಗಿದೆ.

ವಿ.ಕೆ.ವೆಂಕಟ ಸುಬ್ಬರಾವ್, ಹುಬ್ಬಳ್ಳಿ

ವಯಸ್ಸಿನ ತಾರತಮ್ಯ ತರವೇ?

ಲಾಕ್‌ಡೌನ್‌ನಿಂದ ಆರ್ಥಿಕ ಸಂಕಷ್ಟದಲ್ಲಿರುವ, 35 ವರ್ಷ ದಾಟಿದ ಕಲಾವಿದರಿಗೆ ₹ 3,000 ಆರ್ಥಿಕ ನೆರವನ್ನು ಸರ್ಕಾರ ಘೋಷಿಸಿದೆ. ನಾನು ಒಬ್ಬ ಜನಪದ ನೃತ್ಯ ಕಲಾವಿದ. ನಾನು ಜನಪದ ಕಲಾವಿದನಾಗಿ ಗುರುತಿಸಿಕೊಂಡು ಸುಮಾರು 5 ವರ್ಷಗಳಾದವು. ನನ್ನ ವಿದ್ಯಾರ್ಥಿ ಜೀವನದ ಜೊತೆಗೇ ಜನಪದ ಕಲಿಕೆ ಮತ್ತು ಕಲಿಸುವಿಕೆಯನ್ನು ಆರಂಭಿಸಿದ್ದು, ಪ್ರಸ್ತುತ ಕುವೆಂಪು ವಿಶ್ವವಿದ್ಯಾಲಯದಲ್ಲಿ ಅಂತಿಮ ಎಂ.ಎ ಓದುತ್ತಿದ್ದೇನೆ.

ನಾನು ಜನಪದ ನೃತ್ಯ ಕಲಿಕೆಗೆ ತೊಡಗಿದಾಗ ನನ್ನ ಗುರುಗಳು 30 ವರ್ಷದ ಒಳಗಿನವರಾಗಿದ್ದರು. ನಾವುಗಳು ಕಲಿತು ಪ್ರದರ್ಶನಕ್ಕೆ ಹೋದ ಸಮಯದಲ್ಲಿ ಊಟವಿಲ್ಲದೆ, ಮಲಗಲು ಸರಿಯಾದ ಜಾಗವಿಲ್ಲದೆ, ಎಷ್ಟೋ ಕಡೆ ಗಲೀಜು ಜಾಗದಲ್ಲಿಯೇ ಸಿದ್ಧತೆ ಮಾಡಿಕೊಂಡು ಧೈರ್ಯವಾಗಿ ಪ್ರದರ್ಶನ ಕೊಟ್ಟಿದ್ದು ಉಂಟು. ಪ್ರೇಕ್ಷಕರ ಹುಬ್ಬೇರಿದ ಕಣ್ಣುಗಳ ಜೊತೆಗೆ ಶಹಬ್ಬಾಸ್ ಅನ್ನಿಸಿಕೊಂಡದ್ದೂ ಇದೆ. ಆದರೆ, ನನ್ನಂತೆಯೇ ಕಲಾವಿದರೆನ್ನಿಸಿಕೊಂಡು ಬಹಳಷ್ಟು ಕಡೆ ಬೀದಿ ನಾಟಕಗಳು, ಜನಪದ ನೃತ್ಯಗಳು, ನಾಟಕ ಪ್ರದರ್ಶನಗಳನ್ನು ನೀಡಿದ ನನ್ನ ಗುರುಗಳು, ಕಲಾವಿದ ಗೆಳೆಯರು, ಜನಪದ ಕ್ಷೇತ್ರದ ಸ್ನೇಹಿತರು ಹಾಗೂ ರಂಗಭೂಮಿ ಕಲಾವಿದರಲ್ಲಿ 35 ವರ್ಷದ ಒಳಗಿನವರೇ ಹೆಚ್ಚು. ಹೀಗಿರುವಾಗ, ಆರ್ಥಿಕ ನೆರವು ನೀಡಿಕೆಗೆ ಕಲಾವಿದರ ವಯಸ್ಸಿನಲ್ಲಿ ತಾರತಮ್ಯ ಮಾಡುತ್ತಿರುವುದು ನಿಜಕ್ಕೂ ಬೇಸರಗೊಳಿಸುವ ವಿಷಯ. ಸರ್ಕಾರ ಕೂಡಲೇ ತನ್ನ ನಿರ್ಧಾರವನ್ನು ಬದಲಿಸಿ, ಎಲ್ಲಾ ವಯಸ್ಸಿನ ಕಲಾವಿದರಿಗೂ ನೆರವು ಘೋಷಿಸಲಿ.

ಮನೋಜ್ ಆರ್. ಕಂಬಳಿ, ಶಿವಮೊಗ್ಗ

ಟ್ವಿಟರ್ ವಿರುದ್ಧ ತಿರುಗಿಬೀಳಲು ನಾನಾ ಕಾರಣ

ಕೇಂದ್ರ ಸರ್ಕಾರವು ಟ್ವಿಟರ್ ಜೊತೆ ಜಟಾಪಟಿಗೆ ಇಳಿದಿರುವುದನ್ನು ಗಮನಿಸಿದಾಗ, ದೇಶ ಎಂತಹುದೇ ಸಂಕಷ್ಟದಲ್ಲಿರಲಿ ಸರ್ಕಾರಕ್ಕೆ ಅದರ ಪ್ರತಿಷ್ಠೆಯೇ ಮೊದಲ ಆದ್ಯತೆ ಎಂಬುದು ಸ್ಪಷ್ಟವಾಗುತ್ತದೆ. ಸಾಮಾಜಿಕ ಮಾಧ್ಯಮಗಳಿಂದಲೇ ಪ್ರಚಾರ ಗಿಟ್ಟಿಸಿಕೊಂಡು ಹಾಗೆಯೇ ಅಧಿಕಾರ ಪಡೆದುಕೊಂಡವರು ಇಂದು ಅದೇ ಮಾಧ್ಯಮಗಳ ವಿರುದ್ಧ ತಿರುಗಿ ಬೀಳಲು ಅನೇಕ ಕಾರಣಗಳಿವೆ. ಇಂದು ಸಾಮಾಜಿಕ ಮಾಧ್ಯಮಗಳು ಮೊದಲಿನಂತೆ ಕೇವಲ ಒಂದೇ ಪಕ್ಷದ ಪ್ರಭಾವಕ್ಕೆ ಸೀಮಿತವಾಗಿಲ್ಲ. ಸರ್ಕಾರ ಮತ್ತು ಪ್ರಧಾನಿ ಕುರಿತು ವಿದೇಶಿ ಮಾಧ್ಯಮಗಳಲ್ಲಿ ಪ್ರಕಟವಾಗುವ, ಭಾರತೀಯ ಮಾಧ್ಯಮಗಳಲ್ಲೂ ಸಿಗದ ಹೊಗಳಿಕೆರಹಿತ ಚಿತ್ರಣಗಳು ಸಾಮಾಜಿಕ ಮಾಧ್ಯಮಗಳ ಮೂಲಕ ಭಾರತೀಯರನ್ನು ತಲುಪುತ್ತಿರುವುದು ಸರ್ಕಾರಕ್ಕೆ ಸಹ್ಯವಾಗುತ್ತಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ, ಸಾಮಾಜಿಕ ಮಾಧ್ಯಮಗಳು ತಮ್ಮಲ್ಲಿ ಪ್ರಕಟವಾಗುತ್ತಿದ್ದ ಸುಳ್ಳು ಸುದ್ದಿಗಳನ್ನು ನಿಯಂತ್ರಿಸಲು ಕೈಗೊಂಡ ಸ್ವಯಂಪ್ರೇರಿತ ಕ್ರಮಗಳು ಪ್ರಚಾರವನ್ನೇ ನೆಚ್ಚಿಕೊಂಡಿರುವ ತನ್ನ ವಿಶ್ವಾಸಾರ್ಹತೆಗೆ ಕುಂದು ತರಬಹುದೆಂಬ ಭಯ ಸರ್ಕಾರವನ್ನು ಕಾಡುತ್ತಿದೆ.

ಸರ್ಕಾರ ಕೇವಲ ಟ್ವಿಟರ್ ಅನ್ನು ನಿಯಂತ್ರಿಸಿ ಸುಮ್ಮನಾಗಲು ಸಾಧ್ಯವಿಲ್ಲ. ಸುಳ್ಳನ್ನು ಸತ್ಯದಿಂದ ಪ್ರತ್ಯೇಕಿಸಲು ಯತ್ನಿಸುತ್ತಿರುವ ಫ್ಯಾಕ್ಟ್ ಚೆಕಿಂಗ್ ಜಾಲತಾಣಗಳು ಅದರ ಮುಂದಿನ ಗುರಿಯಾಗಬಹುದು. ಹೀಗೆಯೇ ಮುಂದುವರಿದರೆ ಸರ್ಕಾರವೇ ಫ್ಯಾಕ್ಟ್ ಚೆಕರ್ ಆಗಿ ಕಾರ್ಯ ನಿರ್ವಹಿಸತೊಡಗುವ ದಿನಗಳು ದೂರವಿರಲಾರವು.

ಸುನೀಲ ನಾಯಕ, ಬೆಂಗಳೂರು

ನಕಾರಾತ್ಮಕ ಸಂದೇಶ ನೀಡುವ ನಡೆ

ಕೊರೊನಾ ತಂದೊಡ್ಡಿದ ಸಮಸ್ಯೆಗಳಿಂದ ಒಂದು ದೊಡ್ಡ ಶಿಕ್ಷಿತ ವರ್ಗವಾದ ಖಾಸಗಿ ಶಾಲಾ ಶಿಕ್ಷಕರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಮುಖ್ಯಮಂತ್ರಿ ಪ್ರಕಟಿಸಿದ ಆರ್ಥಿಕ ಪ್ಯಾಕೇಜಿನಲ್ಲಿ ಇವರ ಬಗ್ಗೆ ಯಾವ ಉಲ್ಲೇಖವೂ ಇರಲಿಲ್ಲ. ಈಗ, ಈ ವರ್ಗಕ್ಕಾಗಿ ಸರ್ಕಾರಿ ಶಿಕ್ಷಕರು ತಮ್ಮ ಒಂದು ದಿನದ ಸಂಬಳವನ್ನು ಸ್ವಯಂಪ್ರೇರಿತವಾಗಿ ತ್ಯಾಗ ಮಾಡುವಂತೆ ಶಿಕ್ಷಣ ಸಚಿವರು ಮಾಡಿದ ಮನವಿಯನ್ನು ಸರ್ಕಾರಿ ಶಿಕ್ಷಕರ ಸಂಘ ಖಡಾಖಂಡಿತವಾಗಿ ತಿರಸ್ಕರಿಸಿದೆ. ಮಕ್ಕಳಿಗೆ ನೈತಿಕ ಪಾಠಗಳ ಮೂಲಕ ಸಹಾಯ, ಪರೋಪಕಾರದ ಜ್ಞಾನ ನೀಡುವ ಶಿಕ್ಷಕರು ಸ್ವತಃ ತಾವು ನೆರವಾಗುವ ಸಂದರ್ಭ ಬಂದಾಗ ಹೀಗೆ ಕೈಚೆಲ್ಲಿದ್ದು, ಸಮಾಜಕ್ಕೆ ಒಂದು ನಕಾರಾತ್ಮಕ ಸಂದೇಶ ನೀಡುವುದಿಲ್ಲವೇ?

ಮಹಮ್ಮದ್ ಯೂನಸ್ ಸಾರವಾನ್, ಮುಧೋಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಓಡಿಹೋದವರ ಬೆನ್ನು ಹತ್ತಿ...




ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ (ಪಿಎನ್‌ಬಿ) ಸುಮಾರು ₹14,000 ಕೋಟಿ ವಂಚನೆ ಪ್ರಕರಣದ ಆರೋಪಿ, ಭಾರತದಿಂದ ಪರಾರಿಯಾಗಿದ್ದ ಮೆಹುಲ್ ಚೋಕ್ಸಿಯ ಹಸ್ತಾಂತರ ಶೀಘ್ರ ಸಾಧ್ಯವಾಗುವಂತೆ ಕಾಣಿಸುತ್ತಿದೆ. ಆ್ಯಂಟಿಗಾ-ಬಾರ್ಬುಡಾಕ್ಕೆ ಪರಾರಿಯಾಗಿದ್ದ ಚೋಕ್ಸಿ ಅಲ್ಲಿನ ಪೌರತ್ವ ಪಡೆದುಕೊಂಡಿದ್ದಾರೆ. ಆದರೆ, ಕಳೆದ ವಾರ ಅಲ್ಲಿಂದಲೂ ತಪ್ಪಿಸಿಕೊಂಡ ಅವರು ಡೊಮಿನಿಕಾ ದ್ವೀಪಕ್ಕೆ ಹೋಗಿದ್ದರು. ಅಲ್ಲಿ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಚೋಕ್ಸಿ ಹಸ್ತಾಂತರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹೊತ್ತ ವಿಮಾನವು ಡೊಮಿನಿಕಾದ ಡಗ್ಲಾಸ್-ಚಾರ್ಲ್ಸ್ ವಿಮಾನ ನಿಲ್ದಾಣ ತಲುಪಿದೆ ಎಂದು ಆ್ಯಂಟಿಗಾ-ಬಾರ್ಬುಡಾದ ಪ್ರಧಾನಿ ಗ್ಯಾಸ್ಟನ್ ಬ್ರೌನ್ ಭಾನುವಾರ ಹೇಳಿದ್ದಾರೆ. ಚೋಕ್ಸಿ ಅವರನ್ನು ಮರಳಿ ಆ್ಯಂಟಿಗಾ-ಬಾರ್ಬುಡಾಕ್ಕೆ ಕಳುಹಿಸುವ ಬದಲು, ನೇರವಾಗಿ ಭಾರತಕ್ಕೆ ಹಸ್ತಾಂತರಿಸಿ ಎಂದೂ ಬ್ರೌನ್ ಅವರು ಡೊಮಿನಿಕಾ ಪ್ರಧಾನಿಗೆ ಹೇಳಿದ್ದಾರೆ.

ಚೋಕ್ಸಿ ಹಸ್ತಾಂತರ ಪ್ರಕ್ರಿಯೆಯಲ್ಲಿ ಈಗ ಆಗಿರುವ ಬೆಳವಣಿಗೆಗಳು, ಬೇರೆ ದೇಶಗಳಿಗೆ ಪರಾರಿಯಾದ ಇತರರ ಹಸ್ತಾಂತರದ ಬಗ್ಗೆಯೂ ಚರ್ಚೆಯಾಗುವಂತೆ ಮಾಡಿದೆ.

ಭಾರತದಲ್ಲಿ ಅಪರಾಧ ಕೃತ್ಯ ಎಸಗಿ ಬೇರೆ ದೇಶಗಳಿಗೆ ಪರಾರಿಯಾಗಿರುವ 72 ಮಂದಿಯನ್ನು ಮರಳಿ ಕರೆತರುವ ಪ್ರಯತ್ನವನ್ನು ಭಾರತ ಸರ್ಕಾರ ನಡೆಸುತ್ತಿದೆ ಎಂಬ ಮಾಹಿತಿಯನ್ನು 2020ರ ಫೆಬ್ರುವರಿಯಲ್ಲಿ ರಾಜ್ಯಸಭೆಗೆ ನೀಡಲಾಗಿತ್ತು. ಹೀಗೆ ಪರಾರಿಯಾದವರನ್ನು ವಾಪಸ್ ಕರೆಸಿಕೊಳ್ಳುವ ಪ್ರಯತ್ನವು ಸುದೀರ್ಘ ಮತ್ತು ಅದರಲ್ಲಿ ಭಾರತಕ್ಕೆ ಈವರೆಗೆ ಸಿಕ್ಕ ಯಶಸ್ಸು ಅತ್ಯಲ್ಪ. 2015ರ ಬಳಿಕ ಇಬ್ಬರನ್ನು ಮಾತ್ರ ಹಿಂದಕ್ಕೆ ಕರೆಸಿಕೊಳ್ಳಲು ಭಾರತಕ್ಕೆ ಸಾಧ್ಯವಾಗಿದೆ ಎನ್ನಲಾಗಿದೆ.

ಆರೋಪಿಯು ನೆಲೆ ಕಂಡುಕೊಂಡ ದೇಶದಲ್ಲಿ ಅಲ್ಲಿನ ಕಾನೂನು ಪ್ರಕಾರವೇ ಹೋರಾಟ ನಡೆಸಿ ಕರೆತರಬೇಕಾಗುತ್ತದೆ. ಸ್ವದೇಶಕ್ಕೆ ಮರಳಿದರೆ ತಮ್ಮ ಜೀವಕ್ಕೇ ಅಪಾಯ ಇದೆ ಎಂದು ಇಂತಹ ಆರೋಪಿಗಳು ವಾದಿಸುತ್ತಾರೆ. ಮಾನವ ಹಕ್ಕುಗಳಿಗೆ ಹೆಚ್ಚು ಮಹತ್ವ ಕೊಡುವ ದೇಶಗಳು ಈ ದಿಸೆಯಲ್ಲಿಯೂ ಸಮಗ್ರವಾದ ಪರಿಶೀಲನೆಗೆ ಮುಂದಾಗುತ್ತವೆ. ಸಾಧ್ಯವಿರುವ ಎಲ್ಲ ಕಾನೂನು ಅವಕಾಶಗಳನ್ನು ಬಳಸಿಕೊಳ್ಳುವ ಆರೋಪಿಗಳು, ಕೆಳ ನ್ಯಾಯಾಲಯಗಳ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುತ್ತಲೇ ಇರುತ್ತಾರೆ. ಹಾಗಾಗಿ, ಹಸ್ತಾಂತರ ಪ್ರಕ್ರಿಯೆಯು ಇನ್ನಷ್ಟು ಸಮಯ ತೆಗೆದುಕೊಳ್ಳುತ್ತದೆ.



ನೀರವ್ ಮೋದಿ

₹14,000 ಕೋಟಿ – ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ವಂಚನೆ

ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ವಂಚನೆ ಮಾಡಿ ಲಂಡನ್‌ಗೆ ಪರಾರಿಯಾಗಿರುವ ಉದ್ಯಮಿ ನೀರವ್ ಮೋದಿ ಅವರು ಭಾರತಕ್ಕೆ ಹಸ್ತಾಂತರವಾಗುವ ಹಾದಿಯಲ್ಲಿದ್ದಾರೆ. ಹಸ್ತಾಂತರ ತಡೆಗೆ ಕಳೆದ ಏಪ್ರಿಲ್‌ನಲ್ಲಿ ಮೋದಿ ಅವರು ಲಂಡನ್ ಕೋರ್ಟ್‌ನಲ್ಲಿ ನಡೆಸಿದ ಹೋರಾಟ ಮುಕ್ತಾಯವಾಗಿದೆ. ನೀರವ್ ಮೋದಿಯನ್ನು ಭಾರತಕ್ಕೆ ಕಳುಹಿಸಲು ಲಂಡನ್ ಕೋರ್ಟ್ ಒಪ್ಪಿಗೆ ನೀಡಿದೆ. ಆದರೆ ನೀರವ್ ಛಲ ಬಿಡದೆ ಮತ್ತೆ ಕೋರ್ಟ್‌ಗೆ ಹೊಸ ಅರ್ಜಿ ಸಲ್ಲಿಸಿದ್ದಾರೆ. 2017ರಲ್ಲಿ ಅವರು ಪಲಾಯನ ಮಾಡಿದ್ದರು. ಹಸ್ತಾಂತರ ಮಾಡುವಂತೆ 2018ರಿಂದಲೂ ಲಂಡನ್‌ಗೆ ಭಾರತ ಮನವಿ ಮಾಡುತ್ತಿದೆ. ಸಂಬಂಧಿ ಮೆಹುಲ್ ಚೋಕ್ಸಿ ಜೊತೆಗೂಡಿ ಈ ವಂಚನೆ ಎಸಗಿದ್ದರು.



ಮೆಹುಲ್ ಚೋಕ್ಸಿ

ಪಂಜಾಬ್ ನ್ಯಾಷನಲ್ ಬ್ಯಾಂಕ್ ಹಗರಣದಲ್ಲಿ ನೀರವ್ ಮೋದಿ ಜೊತೆ ಸಹ ಆರೋಪಿಯಾಗಿರುವ ಉದ್ಯಮಿ ಮೆಹುಲ್ ಚೋಕ್ಸಿ ಅವರು ಭಾರತದ ತನಿಖಾ ಸಂಸ್ಥೆಗಳಿಗೆ ಸವಾಲಾಗಿದ್ದರು. ಆದರೆ ಇತ್ತೀಚೆಗೆ ಕ್ಯೂಬಾಗೆ ಪಲಾಯನ ಮಾಡುವ ವೇಳೆ ಡೊಮಿನಿಕಾದಲ್ಲಿ ಸಿಕ್ಕಿಬಿದ್ದಿರುವ ಅವರನ್ನು ಭಾರತಕ್ಕೆ ನೇರವಾಗಿ ಹಸ್ತಾಂತರ ಮಾಡಲು ಅಥವಾ ಆ್ಯಂಟಿಗಾ ಮೂಲಕ ಹಸ್ತಾಂತರಿಸಲು ಡೊಮಿನಿಕಾ ಸರ್ಕಾರ ನಿರ್ಧರಿಸಿದೆ. ಚೋಕ್ಸಿ ಅವರು ಹಗರಣ ಬಯಲಿಗೆ ಬರುವ ಕೆಲವು ದಿನದ ಮುನ್ನ ಆ್ಯಂಟಿಗಾದ ಪೌರತ್ವ ಪಡೆದಿದ್ದಾರೆ. 'ಹೂಡಿಕೆ ಮಾಡಿದವರಿಗೆ ಪೌರತ್ವ ನೀಡುವ ಯೋಜನೆ' ಅನ್ವಯ ಅವರು ಆ್ಯಂಟಿಗಾದ ಪೌರತ್ವ ಪಡೆದಿದ್ದಾರೆ.



ವಿಜಯ ಮಲ್ಯ

₹9,000 ಕೋಟಿ – ವಿವಿಧ ಬ್ಯಾಂಕ್‌ಗಳಿಗೆ ವಂಚನೆ

ಮದ್ಯದ ದೊರೆ ವಿಜಯ ಮಲ್ಯ ಬ್ಯಾಂಕ್‌ಗಳಿಗೆ ವಂಚಿಸಿ 2016ರ ಮಾರ್ಚ್‌ನಲ್ಲಿ ಭಾರತ ತೊರೆದಿದ್ದರು. ಆ ವೇಳೆ ಅವರು ರಾಜ್ಯಸಭಾ ಸದಸ್ಯರಾಗಿದ್ದರು. ಸದ್ಯ ಲಂಡನ್‌ನಲ್ಲಿರುವ ಮಲ್ಯ ಅವರು ಹಸ್ತಾಂತರ ತಡೆಗೆ ಅಲ್ಲಿನ ಕೋರ್ಟ್‌ನಲ್ಲಿ ನಡೆಸಿದ ಕಾನೂನು ಹೋರಾಟದಲ್ಲಿ ಸೋತಿದ್ದಾರೆ. ಭಾರತಕ್ಕೆ ಅವರನ್ನು ಹಸ್ತಾಂತರಿಸಲು ಬ್ರಿಟನ್ ಸರ್ಕಾರ ನೀಡುವ ಅಂತಿಮ ಅನುಮತಿಗೆ ಕಾಯಲಾಗುತ್ತಿದೆ.



ನಿತಿನ್ ಸಂದೇಸರ

₹15,600 ಕೋಟಿ – ಬ್ಯಾಂಕ್ ವಂಚನೆ

ಬ್ಯಾಂಕಿಂಗ್ ವಂಚನೆಗೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿರುವ ಉದ್ಯಮಿ ನಿತಿನ್ ಸಂದೇಸರ, ಅವರ ಪತ್ನಿ ದೀಪ್ತಿ ಸಂದೇಸರ ಮತ್ತು ಸೋದರ ಮಾವ ಹಿತೇಶ್ ಪಟೇಲ್ ಅವರು ಭಾರತಕ್ಕೆ ಬೇಕಾಗಿದ್ದಾರೆ. ಸಂದೇಸರ ಅವರು ಪ್ರವರ್ತಕರಾಗಿದ್ದ ಸ್ಟರ್ಲಿಂಗ್ ಬಯೊಟೆಕ್ ಗ್ರೂಪ್ ಜೊತೆ ಹಗರಣ ತಳಕು ಹಾಕಿಕೊಂಡಿದೆ. ಕಳೆದ ವರ್ಷ ಇವರನ್ನು ದೇಶಭ್ರಷ್ಟ ವಂಚಕರು ಎಂದು ಸರ್ಕಾರ ಘೋಷಿಸಿತ್ತು. ಈ ಮೂವರೂ 2017ರಲ್ಲಿ ನೈಜೀರಿಯಾಗೆ ಪಲಾಯನ ಮಾಡಿದ್ದರು. ಭಾರತವು ಇವರ ಹಸ್ತಾಂತರಕ್ಕೆ ಮಾಡಿದ್ದ ಮನವಿಯನ್ನು ನೈಜೀರಿಯಾ ಸರ್ಕಾರ 2019ರಲ್ಲಿ ತಿರಸ್ಕರಿಸಿದೆ. ಎಂಬ ಮಾಹಿತಿಯನ್ನು ಇದೇ ಫೆಬ್ರುವರಿಯಲ್ಲಿ ಭಾರತದ ಸುಪ್ರೀಂ ಕೋರ್ಟ್‌ಗೆ ತಿಳಿಸಲಾಗಿದೆ.



ಲಲಿತ್ ಮೋದಿ

₹753 ಕೋಟಿ – ಬಿಸಿಸಿಐಗೆ ವಂಚನೆ

ಐಪಿಎಲ್ ಶುರು ಮಾಡಿದ ಖ್ಯಾತಿಯ ಲಲಿತ್ ಮೋದಿ ಅವರು ಬಿಸಿಸಿಐಗೆ ವಂಚನೆ ಮಾಡಿದ ಆರೋಪ ಎದುರಿಸುತ್ತಿದ್ದಾರೆ. ಜಾರಿ ನಿರ್ದೇಶನಾಲಯವು ಇವರ ಮೇಲೆ ಪ್ರಕರಣ ದಾಖಲಿಸುವುದಕ್ಕೆ ಮುನ್ನ, 2010ರ ಮೇ ತಿಂಗಳಿನಲ್ಲಿ ಭಾರತದಿಂದ ಪರಾರಿಯಾಗಿದ್ದರು. ಲಂಡನ್‌ಗೆ ತೆರಳಿದ ಅವರು, ಭಾರತದಲ್ಲಿ ತಮ್ಮ ಜೀವಕ್ಕೆ ಅಪಾಯವಿದೆ ಎಂಬ ಕಾರಣ ನೀಡಿದ್ದರು. ಈಗಲೂ ಅವರು ಲಂಡನ್‌ನಲ್ಲಿ ಇದ್ದಾರೆ ಎಂಬ ಮಾಹಿತಿ ಇದೆ.

7 ವರ್ಷಗಳ ಕಾಲ ಪೊಲೀಸರ ತನಿಖೆ ಏನೂ ಪ್ರಗತಿ ಕಂಡಿರಲಿಲ್ಲ. ತನಿಖೆ ತಡವಾದ ಕಾರಣ, ರೆಡ್‌ಕಾರ್ನರ್ ನೋಟಿಸ್ ನೀಡುವಂತೆ ಸಿಬಿಐ ಮಾಡಿದ ಮನವಿಯನ್ನು ಇಂಟರ್‌ಪೋಲ್ ತಿರಸ್ಕರಿಸಿತ್ತು. ಅವರು ಓಡಿಹೋದ ಒಂದು ದಶಕಕ್ಕೂ ಹೆಚ್ಚು ಸಮಯದ ನಂತರ ಭಾರತವು ಹಸ್ತಾಂತರದ ಕೋರಿಕೆ ಸಲ್ಲಿಸಿತ್ತು.



ಜತಿನ್ ಮೆಹ್ತಾ

₹6,500 ಕೋಟಿ – ಬ್ಯಾಂಕ್ ವಂಚನೆ

ವಿನ್ಸಮ್ ಡೈಮಂಡ್ಸ್ ಅಂಡ್ ಜ್ಯುವೆಲರ್ಸ್ ಪ್ರವರ್ತಕ ಜತಿನ್ ಮೆಹ್ತಾ ಅವರು ಬ್ಯಾಂಕ್ ವಂಚನೆ ಪ್ರಕರಣದಲ್ಲಿ 2013ರಲ್ಲಿಯೇ ದೇಶ ತೊರೆದು ಕೆರಿಬಿಯನ್ ದ್ವೀಪ ಸೇಂಟ್ ಕಿಟ್ಸ್‌ನಲ್ಲಿ ಕುಟುಂಬ ಸಮೇತ ವಾಸಿಸುತ್ತಿದ್ದಾರೆ. ಇವರು ಸೇಂಟ್ ಕಿಟ್ಸ್ ಮತ್ತು ಲಂಡನ್ ಮಧ್ಯೆ ಓಡಾಡುತ್ತಿದ್ದಾರೆ ಎಂಬ ಮಾಹಿತಿ ಇದೆ. 2020ರ ಮಾಹಿತಿ ಪ್ರಕಾರ, ಆಗ್ನೇಯ ಐರೋಪ್ಯ ದೇಶವಾದ ಮಾಂಟೆನಿಗ್ರೊದಲ್ಲಿ ಕಾಯಂ ಆಗಿ ನೆಲೆಸುವ ಸಾಧ್ಯತೆ ಇದೆ. ಅಲ್ಲಿ ಅವರು ಹೊಸ ಉದ್ಯಮ ಆರಂಭಿಸಿದ್ದಾರೆ.



ಸಂಜಯ್ ಭಂಡಾರಿ

₹4,000 ಕೋಟಿ – ಅಕ್ರಮ ಹಣ ವರ್ಗಾವಣೆ ಪ್ರಕರಣ

ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಭಾರತಕ್ಕೆ ಬೇಕಿರುವ ಉದ್ಯಮಿ ಸಂಜಯ್ ಭಂಡಾರಿ 2016ರಲ್ಲಿ ಬ್ರಿಟನ್‌ಗೆ ಪಲಾಯನ ಮಾಡಿದ್ದರು. ಭಾರತಕ್ಕೆ ಹಸ್ತಾಂತರ ಪ್ರಕ್ರಿಯೆ ವಿರುದ್ಧ ಲಂಡನ್ ಕೋರ್ಟ್‌ನಲ್ಲಿ ಹೋರಾಟ ನಡೆಸುತ್ತಿದ್ದು, ಜಾಮೀನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಭಂಡಾರಿ ಹಾಗೂ ರಾಬರ್ಟ್ ವಾದ್ರಾ ನಡುವೆ ವ್ಯವಹಾರದ ನಂಟು ಇದೆ ಎಂಬ ಆರೋಪ ಆಗ ಕೇಳಿಬಂದಿತ್ತು. ವಾದ್ರಾ ಇದನ್ನು ಅಲ್ಲಗಳೆದಿದ್ದರು.

ಪಾರೇಖ್ ಸಹೋದರರು

₹7,200 ಕೋಟಿ – ವಿದೇಶಿ ವಿನಿಮಯ ಹಗರಣ

ಕೋಲ್ಕತ್ತದ ಶ್ರೀಗಣೇಶ್ ಜ್ಯುವೆಲರಿ ಹೌಸ್‌ನ ಪ್ರವರ್ತಕರಾದ ನಿಲೇಶ್ ಪಾರೇಖ್, ಉಮೇಶ್ ಪಾರೇಖ್ ಮತ್ತು ಕಮಲೇಶ್ ಪಾರೇಖ್ ಸಹೋದರರು ವಿವಿಧ ಬ್ಯಾಂಕ್‌ಗಳಿಗೆ ವಂಚಿಸಿದ ಹಾಗೂ ಅಕ್ರಮವಾಗಿ ವಿದೇಶಿ ವಿನಿಮಯ ವ್ಯವಹಾರ ನಡೆಸಿದ ಆರೋಪ ಎದುರಿಸುತ್ತಿದ್ದಾರೆ. ಇವರಿಗೆ ಜಾರಿ ನಿರ್ದೇಶನಾಲಯವು ಫೆಮಾ ಕಾಯ್ದೆಯಡಿ ನೋಟಿಸ್ ನೀಡಿದೆ. ಕೋಲ್ಕತ್ತದಲ್ಲಿರುವ ಇವರ 48 ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಮೂರು ವರ್ಷಗಳ ಹಿಂದೆ ನಿಲೇಶ್ ಪಾರೇಖ್ ಅವರನ್ನು ಸಿಬಿಐ ಬಂಧಿಸಿ ವಿಚಾರಣೆ ನಡೆಸುತ್ತಿದೆ.



ನಿಲೇಶ್ ಪಾರೇಖ್

ಪಕ್ಷಗಳ ಕೆಸರೆರಚಾಟ

ಉದ್ಯಮಿಗಳಾದ ವಿಜಯ ಮಲ್ಯ, ನೀರವ್ ಮೋದಿ, ಮೆಹುಲ್ ಚೋಕ್ಸಿ ಅವರು ಸಾಲ ಮರುಪಾವತಿ ಮಾಡದೆ, ದೇಶಬಿಟ್ಟು ಪರಾರಿಯಾಗುವಲ್ಲಿ ನರೇಂದ್ರ ಮೋದಿ ಅವರ ಸರ್ಕಾರ ನೆರವು ನೀಡಿದೆ ಎಂದು 2018ರಲ್ಲಿ ಕಾಂಗ್ರೆಸ್ ಗಂಭೀರ ಆರೋಪ ಮಾಡಿತ್ತು.

ವಿಜಯ ಮಲ್ಯ ಅವರು ದೇಶಬಿಟ್ಟು ಪರಾರಿಯಾಗುವ ಮುನ್ನ ಸಂಸತ್ ಭವನದಲ್ಲಿ ಅಂದಿನ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರನ್ನು ಭೇಟಿ ಮಾಡಿ, ಮಾತುಕತೆ ನಡೆಸಿದ್ದರು ಎಂದು ಕಾಂಗ್ರೆಸ್ ಆರೋಪಿಸಿತ್ತು. ಅರುಣ್ ಜೇಟ್ಲಿ ಅವರು ಈ ಆರೋಪವನ್ನು ತಳ್ಳಿಹಾಕಿದ್ದರು. ಈ ವಿಚಾರವು ಸಂಸತ್ ಕಲಾಪದಲ್ಲಿಯೂ ಭಾರಿ ಚರ್ಚೆಗೆ ಕಾರಣವಾಗಿತ್ತು. ಆದರೆ ಈ ಆರೋಪಗಳಿಗೆ ಯಾವುದೇ ತಾರ್ಕಿಕ ಅಂತ್ಯ ದೊರೆತಿರಲಿಲ್ಲ.

2018ರ ಜನವರಿ ವೇಳೆಗೆ ಪಿಎನ್‌ಬಿ ಬ್ಯಾಂಕ್ ವಂಚನೆ ಹಗರಣದ ಪ್ರಮುಖ ಆರೋಪಿಗಳಾದ ನೀರವ್ ಮೋದಿ ಮತ್ತು ಮೆಹುಲ್ ಚೋಕ್ಸಿ ಅವರು ದೇಶವನ್ನು ಬಿಟ್ಟು ಪರಾರಿಯಾಗಿದ್ದರು. 'ಇವರ ವಂಚನೆಗಳಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಯು 2017ರ ಜೂನ್‌ನಲ್ಲಿಯೇ ಆದಾಯ ತೆರಿಗೆ ತನಿಖಾ ವರದಿಯನ್ನು ಸಿದ್ಧಪಡಿಸಿತ್ತು. ಆದರೆ ಇಬ್ಬರು ವಂಚಕರೂ ದೇಶವನ್ನು ಬಿಟ್ಟು ಹೋಗುವವರೆಗೂ ಈ ವರದಿಯನ್ನು ಸಿಬಿಐ, ಜಾರಿ ನಿರ್ದೇಶನಾಲಯ ಮತ್ತು ಹಣಕಾಸು ಸಚಿವಾಲಯದ ಗಂಭೀರ ವಂಚನೆಗಳ ತನಿಖಾ ಕಚೇರಿಗೆ ನೀಡಿರಲಿಲ್ಲ. ವರದಿ ಸಲ್ಲಿಸದೇ ಇರುವ ಮೂಲಕ, ವಂಚಕರು ದೇಶವನ್ನು ಬಿಟ್ಟು ಪರಾರಿಯಾಗಲು ಅವಕಾಶ ಮಾಡಿಕೊಡಲಾಯಿತು' ಎಂದು ಕಾಂಗ್ರೆಸ್‌ನ ವಕ್ತಾರ ರಣದೀಪ್ ಸಿಂಗ್ ಸುರ್ಜೇವಾಲಾ ಆರೋಪಿಸಿದ್ದರು.

'ಈ ವಂಚನೆ ಬಗ್ಗೆ ಅರಿವಿದ್ದ ಕಾರಣದಿಂದಲೇ ಕೇಂದ್ರೀಯ ನೇರ ತೆರಿಗೆಗಳ ಮಂಡಳಿ ಮುಖ್ಯಸ್ಥ ಸುಶೀಲ್ ಚಂದ್ರ ಅವರ ಸೇವೆಯನ್ನು ಎರಡು ಬಾರಿ ವಿಸ್ತರಿಸಲಾಗಿತ್ತು. ಈ ಮೂಲಕ ಈ ವಂಚನೆ ಹಗರಣ ಬೆಳಕಿಗೆ ಬರದಂತೆ ನೋಡಿಕೊಳ್ಳಲಾಯಿತು. ಈ ವಂಚಕರು ಪರಾರಿಯಾಗಲು ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಟ್ರಾವೆಲ್ ಏಜೆನ್ಸಿಯಂತೆ ಕೆಲಸ ಮಾಡಿತು' ಎಂದು ಸುರ್ಜೇವಾಲಾ ಆರೋಪಿಸಿದ್ದರು.

ಇದನ್ನು ಬಿಜೆಪಿ ನಿರಾಕರಿಸಿತ್ತು. 'ಈ ಎಲ್ಲಾ ವಂಚಕರು ಕಾಂಗ್ರೆಸ್ ನೇತೃತ್ವದ ಯುಪಿಎ-2 ಅವಧಿಯಲ್ಲಿ ಸಾಲ ಪಡೆದಿದ್ದರು. ಕಾಂಗ್ರೆಸ್ ಸರ್ಕಾರವೇ ಇವರಿಗೆ ಅಕ್ರಮವಾಗಿ ಸಾಲ ನೀಡಿತ್ತು. ಈಗ ದೇಶಕ್ಕೆ ನರೇಂದ್ರ ಮೋದಿ ಎಂಬ ಹೊಸ ಕಾವಲುಗಾರ ಬಂದಿದ್ದಾನೆ. ತಾವು ಸಿಲುಕಿಬೀಳುತ್ತೇವೆ ಎಂಬ ಭಯದಿಂದ ಈ ವಂಚಕರೆಲ್ಲಾ ದೇಶಬಿಟ್ಟು ಹೋಗಿದ್ದಾರೆ' ಎಂದು ಕೇಂದ್ರ ಸಚಿವ ರಾಜನಾಥ್ ಸಿಂಗ್ ಸಮಜಾಯಿಸಿ ನೀಡಿದ್ದರು.

ಅಕ್ರಮ ಹಣ ವರ್ಗಾವಣೆ ಪ್ರಕರಣ ಒಂದರಲ್ಲಿ ಆರೋಪಿಯಾಗಿರುವ ಉದ್ಯಮಿ ಸಂಜಯ್ ಭಂಡಾರಿ, ಸೋನಿಯಾ ಗಾಂಧಿ ಅಳಿಯ ರಾಬರ್ಟ್ ವಾದ್ರಾ ಅವರ ಆಪ್ತ. 2012ರಲ್ಲಿ ದೆಹಲಿ ಮತ್ತು ಪ್ಯಾರಿಸ್ ಮಧ್ಯೆ ವಾದ್ರಾಗಾಗಿ ಭಂಡಾರಿ ವಿಮಾನದ ಟಿಕೆಟ್ ಖರೀದಿಸಿದ್ದರು ಎಂಬುದು ಜಾರಿ ನಿರ್ದೇಶನಾಲಯದ ಆರೋಪ. ಆರೋಪ ಪಟ್ಟಿಯಲ್ಲಿಯೂ ಇದು ದಾಖಲಾಗಿದೆ. ವಾದ್ರಾ ಮತ್ತು ಸಂಜಯ್ ಮಧ್ಯೆ ವಿವಿಧ ವ್ಯವಹಾರಗಳು ನಡೆದಿರುವ ಬಗ್ಗೆ ತನಿಖೆ ನಡೆಯುತ್ತಿದೆ. ಸಂಜಯ್ ಪರಾರಿಯಾಗಿ ತಲೆಮರೆಸಿಕೊಳ್ಳಲು ಕಾಂಗ್ರೆಸ್ ನೆರವು ನೀಡಿದೆ ಎಂಬುದು ಬಿಜೆಪಿ ಆಪಾದನೆ.

ಡೊಮಿನಿಕಾದಿಂದ ಮೆಹುಲ್ ಚೋಕ್ಸಿಯನ್ನು ನೇರವಾಗಿ ಭಾರತಕ್ಕೆ ಗಡೀಪಾರು ಮಾಡಿ ಎಂದು ಆ್ಯಂಟಿಗಾ ಸರ್ಕಾರ ಹೇಳಿರುವುದಕ್ಕೆ, ಅಲ್ಲಿನ ವಿರೋಧ ಪಕ್ಷ ಆಕ್ಷೇಪ ವ್ಯಕ್ತಪಡಿಸಿದೆ. ಚೋಕ್ಸಿಯಿಂದ ದೇಣಿಗೆ ದೊರೆಯಬಹುದು ಎಂಬ ಕಾರಣಕ್ಕೆ ಗಡೀಪಾರಿಗೆ ವಿರೋಧ ಪಕ್ಷ ಅಡ್ಡಿ ಮಾಡುತ್ತಿದೆ ಎಂದು ಅಲ್ಲಿನ ಸರ್ಕಾರ ಹೇಳಿದೆ.

ಆಲಾಪನ್ ವರ್ಗಾವಣೆ ಪ್ರಕರಣ

ಕೇಂದ್ರದ ಆದೇಶ ಪಾಲನೆ ಸಾಧ್ಯತೆ ಇಲ್ಲ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯ ಕಾರ್ಯದರ್ಶಿ ಆಲಾಪನ್ ಬಂದೋಪಾಧ್ಯಾಯ ಅವರನ್ನು ಕೇಂದ್ರ ಸರ್ಕಾರವು, ಕೇಂದ್ರ ಸೇವೆಗೆ ಕರೆಸಿಕೊಂಡಿದೆ. ಕೇಂದ್ರ ಸರ್ಕಾರದ ಆದೇಶದ ಅನ್ವಯ, ಮೇ 31ರ ಸೋಮವಾರ ಅವರು ಕೇಂದ್ರ ಸೇವೆಗೆ ಹೋಗಬೇಕಿದೆ. ಸೋಮವಾರ ಅವರು ನಿವೃತ್ತಿಯೂ ಆಗಲಿದ್ದಾರೆ. ಆದರೆ, ಕೇಂದ್ರ ಸರ್ಕಾರದ ಈ ಆದೇಶವನ್ನು ಪಶ್ಚಿಮ ಬಂಗಾಳ ಸರ್ಕಾರವು ತಿರಸ್ಕರಿಸುವ ಸಾಧ್ಯತೆಯೇ ಹೆಚ್ಚು ಎಂದು ನಿವೃತ್ತ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಯಸ್ ಚಂಡಮಾರುತದಿಂದ ಹಾನಿಗೆ ಒಳಗಾಗಿದ್ದ ಪಶ್ಚಿಮ ಬಂಗಾಳದ ಜಿಲ್ಲೆಗಳ ವೈಮಾನಿಕ ಸಮೀಕ್ಷೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ನಡೆಸಿದ್ದರು. ಆನಂತರ ನಡೆದ ಪರಿಶೀಲನಾ ಸಭೆಗೆ ರಾಜ್ಯದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳು ಗೈರು ಹಾಜರಾಗಿದ್ದರು. ಇದು ತೀವ್ರ ವಿವಾದಕ್ಕೆ ಕಾರಣವಾಗಿತ್ತು. ಈ ಬೆಳವಣಿಗೆಯ ಕೆಲವೇ ಗಂಟೆಗಳಲ್ಲಿ ರಾಜ್ಯದ ಮುಖ್ಯಕಾರ್ಯದರ್ಶಿಯನ್ನು ಕೇಂದ್ರ ಸರ್ಕಾರವು ಕೇಂದ್ರ ಸೇವೆಗೆ ಕರೆಸಿಕೊಂಡು ಆದೇಶ ಹೊರಡಿಸಿತ್ತು.

'ಒಕ್ಕೂಟ ವ್ಯವಸ್ಥೆಯಲ್ಲಿ, ರಾಜ್ಯದ ಅಧೀನದಲ್ಲಿರುವ ಅಧಿಕಾರಿಯನ್ನು ಕೇಂದ್ರ ಸರ್ಕಾರವು ಏಕಪಕ್ಷೀಯವಾಗಿ ವರ್ಗಾವಣೆ ಮಾಡಲು ಅಖಿಲ ಭಾರತ ಸೇವಾ ನಿಯಮಗಳಲ್ಲಿ ಅವಕಾಶವಿಲ್ಲ. ಕೇಂದ್ರ ಸರ್ಕಾರದ ಈ ಆದೇಶವನ್ನು ಪಶ್ಚಿಮ ಬಂಗಾಳ ಸರ್ಕಾರವು ತಿರಸ್ಕರಿಸುವ ಸಾಧ್ಯತೆಯೇ ಹೆಚ್ಚು' ಎಂದು ಭಾರತ ಸರ್ಕಾರದಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಜವಾಹರ್ ಸರ್ಕಾರ್ ಅಭಿಪ್ರಾಯಪಟ್ಟಿದ್ದಾರೆ.

'ಭಾರತ ಆಡಳಿತ ಸೇವೆ ನಿಯಮಗಳು-1954' ಸಹ ಇದನ್ನೇ ಹೇಳುತ್ತದೆ. 'ರಾಜ್ಯಗಳಲ್ಲಿ ಕರ್ತವ್ಯದಲ್ಲಿರುವ ಅಧಿಕಾರಿಗಳನ್ನು, ಆಯಾ ರಾಜ್ಯದ ಒಪ್ಪಿಗೆ ಪಡೆದು ನಿಯೋಜನೆ ಮಾಡಬೇಕು' ಎಂದು ಈ ನಿಯಮಗಳ 6 (1)ನೇ ನಿಯಮದ ಅಡಿ ವಿವರಿಸಲಾಗಿದೆ.

'ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ ಆಲಾಪನ್ ಬಂದೋಪಾಧ್ಯಾಯ ಅವರನ್ನು ಕೇಂದ್ರಕ್ಕೆ ಕರೆಸಿಕೊಳ್ಳುವ ವಿಚಾರವನ್ನು ಕೇಂದ್ರ ಸರ್ಕಾರವು ಪಶ್ಚಿಮ ಬಂಗಾಳ ಸರ್ಕಾರದ ಜತೆ ಚರ್ಚಿಸಿಯೇ ಇಲ್ಲ. ಆಲಾಪನ್ ಅವರ ಜತೆಯೂ ಚರ್ಚಿಸಿಲ್ಲ. ಇಂತಹ ವರ್ಗಾವಣೆ ಮಾಡುವ ಮೊದಲು ಸಂಬಂಧಿತ ರಾಜ್ಯ ಸರ್ಕಾರ ಮತ್ತು ಅಧಿಕಾರಿಯ ಜತೆ ಚರ್ಚೆ ನಡೆಸುವುದು ಅನಿವಾರ್ಯ. ಹೀಗಾಗಿ ಕೇಂದ್ರ ಸರ್ಕಾರದ ಈ ಆದೇಶದ ವಿರುದ್ಧ ಪಶ್ಚಿಮ ಬಂಗಾಳ ಸರ್ಕಾರವು, ಕೇಂದ್ರ ಆಡಳಿತ ನ್ಯಾಯಮಂಡಳಿ ಅಥವಾ ಹೈಕೋರ್ಟ್‌ನಲ್ಲಿ ಮೊಕದ್ದಮೆ ಹೂಡಬಹುದು. ಕಾನೂನು ಹೋರಾಟ ನಡೆಸಬಹುದು' ಎಂದು ಸರ್ಕಾರ್ ಅಭಿಪ್ರಾಯಪಟ್ಟಿದ್ದಾರೆ.

'ರಾಜ್ಯ ಸರ್ಕಾರ ಅಥವಾ ಅಧಿಕಾರಿಯ ಸಮ್ಮತಿಯನ್ನು ಕೇಂದ್ರ ಸರ್ಕಾರ ಪಡೆದುಕೊಂಡಿಲ್ಲ. ರಾಜಕೀಯ ಬದಿಗಿರಲಿ. ಕೇಂದ್ರ ಸರ್ಕಾರವು ಹೊರಡಿಸಿರುವ ಈ ಆದೇಶವು ಕಾನೂನಿನ ಎದುರು ನಿಲ್ಲುವುದಿಲ್ಲ' ಎಂದು ಭಾರತೀಯ ಲೆಕ್ಕಪರಿಶೋಧನಾ ಸೇವೆಯ ನಿವೃತ್ತ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಇದೇ ರೀತಿ ಏಕಪಕ್ಷೀಯವಾಗಿ ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಕೇಂದ್ರ ಸರ್ಕಾರವು ಹೊರಡಿಸಿದ್ದ ಮೂರು ಆದೇಶಗಳನ್ನು ಪಶ್ಚಿಮ ಬಂಗಾಳ ಸರ್ಕಾರವು ತಿರಸ್ಕರಿಸಿತ್ತು. ತಮಿಳುನಾಡು ಸರ್ಕಾರ ಸಹ ಇಂತಹ ಒಂದು ಆದೇಶವನ್ನು ತಿರಸ್ಕರಿಸಿತ್ತು.

ಕಾನೂನು ಸಂಘರ್ಷ

'ಮುಖ್ಯ ಕಾರ್ಯದರ್ಶಿಯು ಮುಖ್ಯಮಂತ್ರಿಯ ಅಧೀನದಲ್ಲಿಯೇ ಬರುತ್ತಾರೆ. ಆಲಾಪನ್ ಬಂದೋಪಾಧ್ಯಾಯ ಅವರನ್ನು ಸೇವೆಯಿಂದ ಬಿಡುಗಡೆ ಮಾಡದೇ ಇರಲು ಮುಖ್ಯಮಂತ್ರಿ ನಿರ್ಧರಿಸಿದರೆ, ಅದರಿಂದ ಕಾನೂನು ತೊಡಕು ಎದುರಾಗುತ್ತದೆ' ಎಂದು ಹಿರಿಯ ವಕೀಲ ಅರುನಭಾ ಘೋಷ್ ಹೇಳಿದ್ದಾರೆ.

'ಕೆಲವು ನಿಯಮಗಳ ಅಡಿ ಕೇಂದ್ರ ಸರ್ಕಾರವು ಇಂತಹ ಆದೇಶ ಹೊರಡಿಸಬಹುದು. ಆದರೆ, ಅದಕ್ಕೊಂದು ಸಮಯವಿರುತ್ತದೆ. ಯುದ್ಧದ ಮಧ್ಯೆ, ಸೇನಾಧಿಪತಿಯನ್ನು ವಾಪಸ್ ಕರೆಸಿಕೊಳ್ಳಲಾಗುತ್ತದೆಯೇ' ಎಂದು ಅವರು ಪ್ರಶ್ನಿಸಿದ್ದಾರೆ.


ಕೋವಿಡ್-19 ಕಾರಣದಿಂದಲೇ ಆಲಾಪನ್ ಅವರ ಸೇವಾವಧಿಯನ್ನು 3 ತಿಂಗಳು ವಿಸ್ತರಿಸಿ, ಕೇಂದ್ರ ಸರ್ಕಾರವು ಈಚೆಗಷ್ಟೇ ಆದೇಶ ಹೊರಡಿಸಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ


9606038256

'ಕೋವಿಡ್ 19 ನಿಂದ ಮೃತಪಟ್ಟ ವ್ಯಕ್ತಿಯ ಕುಟುಂಬದವರಿಗೆ ಕೇಂದ್ರ ಸರ್ಕಾರ ₹4 ಲಕ್ಷ ರೂಪಾಯಿ ಸಹಾಯ ಧನ ಪ್ರಕಟಿಸಿದೆ. ಇದನ್ನು ಪಡೆಯಲು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಲ್ಲಿಸಬೇಕಾದ ನಮೂನೆ ಈ ಪಿಡಿಎಫ್ ಫೈಲ್‌ನಲ್ಲಿದೆ. ಈ ವಿಷಯ ಎಲ್ಲರಿಗೂ ತಲುಪಿಸಿ' ಎಂಬ ಸಂದೇಶ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಜತೆಗೆ ನಾಲ್ಕು ಪುಟಗಳ ಒಂದು ಪಿಡಿಎಫ್ ಕಡತ ಸಹ ವೈರಲ್ ಆಗಿದೆ.



ಇದು ಸುಳ್ಳು ಸುದ್ದಿ. ವಿಕೋಪಗಳಲ್ಲಿ ಮೃತಪಟ್ಟವರ ಕುಟುಂಬದವರಿಗೆ ₹4 ಲಕ್ಷ ಪರಿಹಾರ ನೀಡಲು ರಾಷ್ಟ್ರೀಯ ವಿಕೋಪ ನಿರ್ವಹಣಾ ಕಾಯ್ದೆಯ 12 (3) ಸೆಕ್ಷನ್ ಅಡಿಯಲ್ಲಿ ಅವಕಾಶವಿದೆ. ಇದಕ್ಕೆ ಸಂಬಂಧಿಸಿದ ಕಡತವನ್ನು, ಸರ್ಕಾರದ ಆದೇಶ ಎಂದು ತಪ್ಪಾಗಿ ಹಂಚಿಕೊಳ್ಳಲಾಗಿದೆ. 'ದೇಶದಾದ್ಯಂತ ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ, ಈ ಕಾಯ್ದೆ ಅಡಿ ₹4 ಲಕ್ಷ ಪರಿಹಾರ ನೀಡಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿ' ಎಂದು ಸುಪ್ರೀಂ ಕೋರ್ಟ್‌ಗೆ ಹಲವು ಅರ್ಜಿಗಳು ಸಲ್ಲಿಕೆಯಾಗಿವೆ. ಇದಕ್ಕೆ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನೋಟಿಸ್ ನೀಡಿದೆ. ಕೋವಿಡ್‌ನಿಂದ ಮೃತಪಟ್ಟವರ ಕುಟುಂಬದವರಿಗೆ ₹4 ಲಕ್ಷ ಪರಿಹಾರ ನೀಡಲಾಗುವುದು ಎಂಬ ಆದೇಶವನ್ನು ಕೇಂದ್ರ ಸರ್ಕಾರ ಹೊರಡಿಸಿಲ್ಲ.

ಗುಂಡಣ್ಣ



ದಿನ ಭವಿಷ್ಯ

ಸೋಮವಾರ ಮೇ 31, 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ರೋಹಿಣಿ ಪಂಚಮೀ ಗಂ. 2-7 (ಬೆ. 6-52) ಉಪರಿ ಷಷ್ಠೀ ಗಂ. 57-21 (ಬೆ.ಝಾ. 5-48) ಸೋಮವಾರ ನಿತ್ಯ ನಕ್ಷತ್ರ ಶ್ರವಣ ಗಂ. 37-1 (ರಾ. 8-49) ಬ್ರಹ್ಮನಾಮ ಯೋಗ ಗಂ. 12-0 ತೈತಲ ಕರಣ ಗಂ. 2-7 ಉಪರಿ ಗರಜ ಕರಣ 28-40 ವಿಷ ಗಂ. 46-53 ಅಮೃತ ಗಂ. 11-56 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 5-58 ಸೂರ್ಯಾಸ್ತ: 6-38 ಅದೃಷ್ಟ ಸಂಖ್ಯೆ 3 9

ಮೇಷ: ಆತ್ಮೀಯತೆಯಿಂದಾಗಿ ಶುಭ ಸಂದರ್ಭ ನಿರ್ಮಾಣ. ಹೊಣೆಗಾರಿಕೆಯ ವಿಷಯದಲ್ಲಿ ಸಮರ್ಥ ನಿರ್ವಹಣೆ. ವಿಷಯಗಳ ಸ್ಪಷ್ಟ ಅರಿವು ಉಂಟಾಗಿ ವಿಶ್ವಾಸ ಮೂಡುವುದು.

ವೃಷಭ: ಬಿಚ್ಚು ಮನಸ್ಸಿನ ಸ್ಪಷ್ಟ ಹೇಳಿಕೆಯಿಂದಾಗಿ ಸಹೋದ್ಯೋಗಿಗಳಿಗೆ ಇರುಸುಮುರುಸು. ಸತ್ಯ ದರ್ಶನದಿಂದ ಗೊಂದಲ ನಿವಾರಣೆಯಾಗಿ ಎಲ್ಲವೂ ನಿರಾಳ. ಅನುಮಾನಗಳು ದೂರ.

ಮಿಥುನ: ಆತ್ಮಶೋಧನೆಯಿಂದ ತಲೆದೋರಿರುವ ಆಂತರಿಕ ಗೊಂದಲಗಳ ನಿವಾರಣೆ. ನಿಷ್ಕಲ್ಮಷ ಭಾವನೆಯಿಂದ ಸಮಾಧಾನ. ಸ್ನೇಹಿತರಿಂದ ಪ್ರಶಂಸೆ, ಸಂಗಾತಿಯಿಂದ ಉತ್ತಮ ಸಹಕಾರ.

ಕರ್ಕಾಟಕ: ಬೇರೆಯವರ ವಿವಾದಗಳನ್ನು ಪರಿಹರಿಸುವಲ್ಲಿ ಮಧ್ಯಸ್ಥಿಕೆ ವಹಿಸಬೇಕಾದೀತು. ಅಡ್ಡಿ ಆತಂಕಗಳಿಲ್ಲದ ಜೀವನದಿಂದಾಗಿ ಉಲ್ಲಾಸ. ಸ್ನೇಹಿತರಿಂದಾಗಿ ಸಂತೋಷದ ವಾತಾವರಣ.

ಸಿಂಹ: ಗಂಡಾಂತರಕ್ಕೆ ಬಲಿಯಾಗದಂತೆ ಹಿರಿಯರಿಂದ ಸಕಾಲಿಕ ಸಲಹೆಗಳು. ವೈಮನಸ್ಯ ನಿವಾರಣೆಯಾಗಿ ದೃಢ ಸಂಕಲ್ಪ. ಹಿರಿಯರ ಆರೋಗ್ಯ ಉತ್ತಮ. ಬಂಧುಗಳ ಆಗಮನ ಸಾಧ್ಯತೆ.

ಕನ್ಯಾ: ಸಹೋದರರೊಂದಿಗಿನ ಭಿನ್ನಾಭಿಪ್ರಾಯದಿಂದಾಗಿ ನಿಂತುಹೋದ ಕಾರ್ಯಗಳು ಒಮ್ಮತದಿಂದ ಸಾಧಿಸಲ್ಪಡುವವು. ಮದುವೆ ಮುಂತಾದ ಮಂಗಲ ಕಾರ್ಯಗಳ ನಿಶ್ಚಯ ಸಾಧ್ಯತೆ. ಕೆಲಸ ಕಾರ್ಯಗಳಲ್ಲಿ ಹುಮ್ಮಸ್ಸು.

ತುಲಾ: ಜಟಿಲ ಸಮಸ್ಯೆಗೆ ಸಂಬಂಧಿಸಿ ನಿಮ್ಮ ನಿಲುವಿನಲ್ಲಿ ಬದಲಾವಣೆಯಿಂದಾಗಿ ಹೊಂದಾಣಿಕೆ ಕಂಡಬರುವುದು. ದೈಹಿಕ ಮತ್ತು ಮಾನಸಿಕ ಶ್ರಮ ಕಡಿಮೆಯಾಗಿ ನಿರಾಳ ಭಾವ. ಕಾರ್ಯನಿರ್ವಹಣೆಯಲ್ಲಿ ಯಶಸ್ಸು.

ವೃಶ್ಚಿಕ: ಕೆಲಸ ಕಾರ್ಯಗಳಲ್ಲಿ ಉತ್ತಮ ಪ್ರಗತಿ. ನಿಕಟವರ್ತಿಗಳಿಂದ ಸಹಾಯ. ಆತ್ಮಸ್ಥೈರ್ಯ ಮೂಡುವುದು. ವ್ಯಾಪಾರದಲ್ಲಿ ಹೆಚ್ಚಿನ ಲಾಭದ ನಿರೀಕ್ಷೆ. ಗಣ್ಯರ ಭೇಟಿ ಸಂಭವ.

ಧನು: ಸಹೋದ್ಯೋಗಿಗಳ ನಡುವೆ ಹೊಂದಾಣಿಕೆಯಿಂದ ಬೆಂಬಲ ಗಳಿಸುವಿರಿ. ಸಂಘರ್ಷದಿಂದ ದೂರ. ಕಾರ್ಯಕ್ಷೇತ್ರದಲ್ಲಿ ನೆಮ್ಮದಿ. ವ್ಯಕ್ತಿಗಳ ಸಂಪರ್ಕದಿಂದಾಗಿ ಉತ್ತಮ ಲಾಭದ ನಿರೀಕ್ಷೆ.

ಮಕರ: ಮುಕ್ತ ಭಾವನೆಯಿಂದಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಕೃಷಿ ಕ್ಷೇತ್ರದವರಿಗೆ ಸಕಾಲಿಕವಾಗಿ ಕಾರ್ಯ ಚಟುವಟಿಕೆಗಳು ಪೂರ್ಣಗೊಳ್ಳುವವು.

ಕುಂಭ: ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವಿರಿ. ದಣಿವರಿಯದ ಕೆಲಸ ಕಾರ್ಯಗಳಲ್ಲಿ ಕಳೆದುಹೋಗುವಿರಿ. ಸ್ವಪ್ರಯತ್ನದಿಂದ ಕಾರ್ಯಕ್ಷೇತ್ರಗಳಲ್ಲಿ ಉನ್ನತಿ. ಸಾಮಾಜಿಕ ಮನ್ನಣೆ.

ಮೀನ: ಸ್ನೇಹಿತರೊಂದಿಗೆ ವಿಷಯಗಳ ವಿನಿಮಯದಿಂದಾಗಿ ಮನಸ್ಸಿಗೆ ನೆಮ್ಮದಿ. ಅತಿಯಾದ ದಣಿವಿನಿಂದಾಗಿ ದೇಹಾಲಾಸ್ಯ ಉಂಟಾಗುವ ಸಾಧ್ಯತೆ. ವೈದ್ಯಕೀಯ ಸಲಹೆ ಬೇಕಾದೀತು.

ನಿಮ್ಮ ಜನ್ಮದಿನ 31-ಮೇ ಈ ದಿನವು ಅತ್ಯಂತ ಶುಭಕರವಾಗಿದ್ದು, ಸ್ವತಂತ್ರ ವ್ಯಕ್ತಿತ್ವ ಹೊಂದಿದವರು ಸದಾ ಕಾರ್ಯತತ್ಪರರಾಗಿರುವಿರಿ. ಸಾರ್ವಜನಿಕ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುವ ಅವಕಾಶಗಳು ನಿಮಗೆ ಲಭಿಸಲಿದೆ. ಸ್ವಂತ ನಿರ್ಧಾರದ ಕೆಲಸಗಳು ಹೆಚ್ಚು ಫಲ ನೀಡುವವು.

ಬೆರಗಿನ ಬೆಳಕು



ಗುರುರಾಜ ಕರಜಗಿ

ಮಹೋಷಧಕುಮಾರನ ಬುದ್ಧತ್ವ

ಮಹೋಷಧಕುಮಾರ ಈಗ ಸೇನಾಪತಿಯಾಗಿ, ಅಪಾರ ಧನಕ್ಕೆ ಒಡೆಯನಾದ ಮೇಲೆ ಅವನಿಗೊಂದು ಯೋಚನೆ ಬಂತು. ಈ ರಾಜ ತುಂಬ ಸಂತೋಷದಿಂದ ಏನೇನೋ ಸವಲತ್ತುಗಳನ್ನು ಕೊಟ್ಟ. ಮತ್ತೆ ಮುಂದೆ ಅವುಗಳನ್ನು ಕಿತ್ತುಕೊಳ್ಳಲೂಬಹುದು. ರಾಜರದು ಕ್ಷಣ ಚಿತ್ತ, ಕ್ಷಣ ಪಿತ್ತ. ನಿಜವಾಗಿಯೂ ತನ್ನ ಬಗ್ಗೆ ರಾಜನ ಅಭಿಪ್ರಾಯವೇನು ಎಂಬುದನ್ನು ತಿಳಿಯಲು ಕುಮಾರ, ಪರಿವ್ರಾಜಿಕೆಯ ಸಹಾಯ ಪಡೆದ. 'ಆರ್ಯೆ, ರಾಜ ನನಗೆಲ್ಲ ನೀಡಿದ್ದಾನೆ. ಆದರೆ ನನ್ನ ಬಗ್ಗೆ ರಾಜನ ಮನಸ್ಸು ನಿಜವಾಗಿ ಹೇಗಿದೆ ಎಂಬುದನ್ನು ತಿಳಿದು ಹೇಳುತ್ತೀಯಾ?' ಎಂದು ಕೇಳಿದ. ಆಗಲಿ ಎಂದು ಆಕೆ ಒಪ್ಪಿಕೊಂಡಳು.

ಮರುದಿನ ಊಟವಾದ ನಂತರ ರಾಜನ ಮುಂದೆ ಬಂದು ಕುಳಿತುಕೊಂಡಳು. ರಾಜ ಆಕೆಗೆ ನಮಸ್ಕಾರ ಮಾಡಿದ. ಆಗ ಪರಿವ್ರಾಜಿಕೆ, 'ಮಹಾರಾಜಾ, ನಾನು ನಿನ್ನ ಹತ್ತಿರ ಏಕಾಂತದಲ್ಲಿ ಮಾತನಾಡಬೇಕು' ಎಂದಳು. ತಕ್ಷಣ ರಾಜ, ಮಂದಿರದಲ್ಲಿದ್ದ ಎಲ್ಲರನ್ನೂ ಹೊರಗೆ ಕಳುಹಿಸಿ, 'ಈಗ ಹೇಳಿ' ಎಂದ. ಪರಿವ್ರಾಜಿಕೆ, 'ರಾಜಾ, ನಿನಗೊಂದು ಪ್ರಶ್ನೆ ಕೇಳುತ್ತೇನೆ. ವಿಚಾರ ಮಾಡಿ ಉತ್ತರಕೊಡು' ಎಂದಳು. ನಂತರ, 'ಒಂದು ಉಗ್ರವಾದ ಸಮುದ್ರದಲ್ಲಿ ಒಂದು ನೌಕೆ ಹೊಯ್ದಾಡುತ್ತಿದೆ. ಅದರಲ್ಲಿ ನಿಮ್ಮ ತಾಯಿ ತಲತಲಾದೇವಿ, ನಿಮ್ಮ ಪತ್ನಿ ನಂದಾದೇವಿ, ಒಬ್ಬ ಪ್ರಮುಖ ಮಂತ್ರಿ, ಒಬ್ಬ ಆಪ್ತ ಮಿತ್ರ, ಪುರೋಹಿತ, ಮಹೋಷಧಕುಮಾರ ಮತ್ತು ನೀನು ಇದ್ದೀರಿ. ಆಗ ಒಂದು ಮಹಾರಾಕ್ಷಸ ಬಂದು ನರಬಲಿ ಕೇಳುತ್ತದೆ. ನೀನು ಯಾವ ಕ್ರಮದಲ್ಲಿ ಅವರನ್ನು ಬಲಿ ಕೊಡುತ್ತೀ? ಒಬ್ಬನನ್ನು ಮಾತ್ರ ರಾಕ್ಷಸ ಬಿಟ್ಟು ಬಿಡುತ್ತದೆ' ಎಂದು ಒಗಟನ್ನು ಹೇಳಿದಳು.

ರಾಜ ಒಂದು ಕ್ಷಣ ಕಣ್ಣು ಮುಚ್ಚಿ ಯೋಚಿಸಿ ಹೇಳಿದ, 'ಮೊದಲು ತಾಯಿಯನ್ನು ಬಲಿಕೊಡುತ್ತೇನೆ, ಆನಂತರ ಹೆಂಡತಿ, ಮಂತ್ರಿ, ಮಿತ್ರ, ಪುರೋಹಿತರನ್ನು ಕೊಟ್ಟು ಆರನೆಯನವನಾಗಿ ನನ್ನನ್ನು ಬಲಿಕೊಡುತ್ತೇನೆ. ಮಹೋಷಧಕುಮಾರನನ್ನು ಉಳಿಸಿಕೊಳ್ಳುತ್ತೇನೆ' ಎಂದ. ಪರಿವ್ರಾಜಿಕೆ ಆಶ್ಚರ್ಯದಿಂದ ಕೇಳಿದಳು, 'ನಿಮಗೆ ಜನ್ಮಕೊಟ್ಟ ತಾಯಿ, ಜನ್ಮ ಸಂಗಾತಿ ಹೆಂಡತಿ, ಮಂತ್ರಿ, ಮಿತ್ರ, ಪುರೋಹಿತರಿಗಿಂತ, ನಿಮಗಿಂತ ಈ ಮಹೋಷಧಕುಮಾರ ಯಾಕೆ ಮುಖ್ಯನಾದ?'. ರಾಜನ ಉತ್ತರ ಅದ್ಭುತವಾಗಿತ್ತು. 'ಆರ್ಯೆ, ನನ್ನ ತಾಯಿ ಜೀವನವನ್ನು ಸಂಪೂರ್ಣವಾಗಿ ಭೋಗಿಸಿದವಳು. ಅವಳೊಂದು ಮಾಗಿದ ಹಣ್ಣು. ಆದರೆ ಅವಳಲ್ಲಿ ತಾನಿನ್ನೂ ತರುಣಿಯಂತೆಯೇ ಇರಬೇಕೆಂಬ ಆಸೆ ಅತಿಯಾಗಿದೆ. ನನ್ನ ಹೆಂಡತಿಗೆ ಕಾಮವಾಸನೆ ಪ್ರಬಲವಾದದ್ದು. ಆಕೆ ಅಪೇಕ್ಷಿಸುವ ವಸ್ತುಗಳಿಗೆ ಮಿತಿಯೇ ಇಲ್ಲ. ನನ್ನ ಮಂತ್ರಿ ದೇಶಕ್ಕಾಗಿ ದುಡಿದಿದ್ದಾನೆ, ಆದರೆ ತನ್ನಿಂದಲೇ ರಾಜ್ಯವೆಂದು ತಿಳಿದು ಕೆಲವೊಮ್ಮೆ ನನ್ನನ್ನೇ ಉಪೇಕ್ಷಿಸುತ್ತಾನೆ. ನನ್ನ ಮಿತ್ರ, ಮಿತ್ರತ್ವವನ್ನು ಸಲುಗೆಯಿಂದ ಭಾವಿಸಿ, ರಾಜತ್ವವನ್ನು ಕಡೆಗಣಿಸುತ್ತಾನೆ. ಪುರೋಹಿತನಿಗೆ ಆತ ಪಡೆದ ವಿದ್ಯೆಯೇ ವೈರಿಯಾಗಿದೆ. ಅವನ ಅಹಂಕಾರದ ಕೊಡ ತುಂಬಿದೆ. ನನ್ನಲ್ಲೂ ಅನೇಕ ದೋಷಗಳಿವೆ. ನಾನು ವಿದೇಹ ರಾಜನನ್ನು ಕೊಲ್ಲಲು ಬಯಸಿದ್ದೆ. ಆದರೆ ಮಹೋಷಧಕುಮಾರನಲ್ಲಿ ಯಾವ ದೋಷವೂ ಇಲ್ಲ. ಅವನಿಗೆ ರಾಜ್ಯವನ್ನು ಆಳುವ ಆಸೆ ಇಲ್ಲ. ನಾನು ಸತ್ತರೂ ಆತ ನನ್ನ ಮಕ್ಕಳನ್ನು ಕೈ ಹಿಡಿದು ನಡೆಸಿ ರಾಜ್ಯವನ್ನು ಸುರಕ್ಷಿತ ಮಾಡುತ್ತಾನೆ. ಆದ್ದರಿಂದ ಆತ ಉಳಿಯಬೇಕು'. ಈ ಮಾತನ್ನು ಮಹೋಷಧಕುಮಾರನಿಗೆ ಹೇಳಿದಾಗ ಆತ ತನ್ನ ಬುದ್ಧತ್ವವನ್ನು ಪ್ರಕಟಿಸಿದ. ಅಲ್ಲಿಗೆ ಮಹೋಷಧ ಜಾತಕ ಮುಗಿಯಿತು. ❖

ಪದಬಂಧ 4613


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬೂಟಾಟಿಕೆ ಗುಣದವನು, ಆಷಾಡದಲ್ಲಿ ಬಂದಿಹನಲ್ಲಾ? (5)
3.ಉಪಕಾರವನ್ನು ಮರೆಯುವವನು (3)
5.ಯುದ್ಧವನ್ನು ಸಾರುವ ಕಹಳೆ (5)
7.ಆದರ ತೋರಿ ತಿಳಿಸಿದ ಧಾರಣೆ (2)
9.ಪೋಲಕ ತೊಟ್ಟಿರುವವಳ ಕೆನ್ನೆ (3)
11.ವಾಸಸ್ಥಳ ಇಲ್ಲಿದೆ (2)
13.ಬ್ರಹ್ಮೋಪದೇಶವನ್ನು ಹೀಗೆನ್ನಿ (5)
15.ಖೇದಗೊಂಡವನು ಇಲ್ಲಿದ್ದಾನೆ (3)
16.ಅಲ್ಪನಾದ ಮನುಷ್ಯನಿವನು (5)

ಮೇಲಿಂದ ಕೆಳಕ್ಕೆ

1.ಭಾರತೀಯ ವೈದ್ಯಶಾಸ್ತ್ರ (4)
2.ಸಮುದ್ರದೊಳಗೆ ಚಾಚಿಕೊಂಡಿರುವ ಭೂಭಾಗ (3)
4.ತುಂಟ ಸ್ವಭಾವದ ಹುಡುಗಿ (3)
6.ಕೊಳೆ ಇಲ್ಲದ (3)
8.ಸರಕನ್ನು ಒಂದು ಪ್ರದೇಶದಿಂದ ಹೊರಕ್ಕೆ ಸಾಗಿಸುವುದು (2)
9.ಕದ ಜಡಿದು ನಡೆಸಿದ ಯುದ್ಧ (3)
10.ಮೂಲವಸ್ತು ಇಲ್ಲಿ ಉಲ್ಟಾ ಕಾಣುತ್ತಿದೆಯಲ್ಲಾ? (2)
12. ಮಜದಲ್ಲಿರುವ ಚಕ್ರವರ್ತಿ (4)
13.ಬಲವಾದ ಧ್ವನಿಯಿದು (3)
14.ನಲಿಯುತ್ತಿರುವ ರಾಷ್ಟ್ರಪಕ್ಷಿ (3)



4612ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅನುಲೋಮ 3.ಪರಪುಟ್ಟ 4.ನೀರವ 5.ಅಪಜಯ 7.ಶಸ್ತ್ರಾಗಾರ 9.ಆಗಮಿಕ 11.ದಸಕತ್ತು 12.ಅಗುನ 14.ಅನುಭಾವ 15.ಹಿಯ್ಯಾಳಿಕೆ

ಮೇಲಿಂದ ಕೆಳಕ್ಕೆ: 1.ಅಬ್ಬ 2.ಮಹನೀಯ 3.ಪರವಶ 6.ಪಲ್ಲಂಗ 8.ಗಾಯಕ 10.ಕಲರವ 11.ದನಗಾಹಿ 13.ಅಂಕೆ

ಸುಡೊಕು 4999

	5		7		2		8	6
						3	7	4
	7	8	3		9		1	
1		4			5		2	3
				3				
8		7	6				5	9
		3	9		6	5		8
5								
	8		5		4		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4998 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಆರೋಗ್ಯ ಇಲಾಖೆಯ ವಿಶೇಷ ತಂಡದ ಕಾರ್ಯಾಚರಣೆ: ತಂಬಾಕು ಉತ್ಪನ್ನ ಸೇವನೆ 1.83 ಲಕ್ಷ ಪ್ರಕರಣ ದಾಖಲು

ಕೋವಿಡ್ ನಿರ್ಬಂಧಕ್ಕೂ ತಗ್ಗದ ಧೂಮಪಾನ!

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಕಾರಣ ಸಾರ್ವಜನಿಕ ಪ್ರದೇಶಗಳಲ್ಲಿ ನಿರ್ಬಂಧಗಳನ್ನು ವಿಧಿಸಿದರೂ ಧೂಮಪಾನಕ್ಕೆ ಕಡಿವಾಣ ಬಿದ್ದಿಲ್ಲ. ತಂಬಾಕು ಉತ್ಪನ್ನಗಳ ಸಾರ್ವಜನಿಕ ಬಳಕೆ ನಿಯಂತ್ರಣ ಕಾಯ್ದೆಯಡಿ (ಕೋಟ್ಪಾ) 2020–21ನೇ ಸಾಲಿನಲ್ಲಿ 1.83 ಲಕ್ಷ ಪ್ರಕರಣಗಳನ್ನು ದಾಖಲಿಸಲಾಗಿದೆ.

ಶ್ವಾಸಕೋಶಕ್ಕೆ ಹಾನಿ ಮಾಡುವ ತಂಬಾಕು ಉತ್ಪನ್ನಗಳು ಕೋವಿಡ್ ಅಪಾಯವನ್ನು ತಂದೊಡ್ಡುವ ಸಾಧ್ಯತೆ ಇದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯು ಎಚ್ಚರಿಸಿದೆ. ಅದೇ ರೀತಿ, ಈ ಉತ್ಪನ್ನಗಳ ಸೇವನೆಯು ಬಾಯಿ, ಗಂಟಲು, ಧ್ವನಿಪಟ್ಟಿಗೆ, ಮಿದುಳು, ಅನ್ನನಾಳ, ಶ್ವಾಸಕೋಶ, ಪಿತ್ತಕೋಶ, ಮೂತ್ರಪಿಂಡ, ಸ್ತನ ಸೇರಿದಂತೆ ದೇಹದ ವಿವಿಧ ಅಂಗಗಳ ಕ್ಯಾನ್ಸರ್‌ಗೆ ಕಾರಣವಾಗುತ್ತದೆ. ಹೃದಯ ಕಾಯಿಲೆ, ಶ್ವಾಸಕೋಶದ ಸಮಸ್ಯೆ, ಪಾರ್ಶ್ವವಾಯು, ಅಂಧತ್ವ, ಹಲ್ಲು ಮತ್ತು ಒಸಡಿನ ಸಮಸ್ಯೆ ಸೇರಿದಂತೆ ವಿವಿಧ ಕಾಯಿಲೆಗಳು ಸಹ ಇದರಿಂದ ಬರುವ ಸಾಧ್ಯತೆಗಳಿವೆ ಎಂದು ವೈದ್ಯಕೀಯ ತಜ್ಞರು ಎಚ್ಚರಿಸಿದ್ದಾರೆ.



ಧೂಮಪಾನವು ಕೋವಿಡ್ ಸೇರಿದಂತೆ ವಿವಿಧ ಉಸಿರಾಟ ಸಂಬಂಧಿ ಕಾಯಿಲೆಗಳ ತೀವ್ರತೆ ಹೆಚ್ಚಿಸುತ್ತದೆ. ಜಗಿಯುವ ತಂಬಾಕಿನಿಂದ ಕ್ಯಾನ್ಸರ್ ಸೇರಿದಂತೆ ದೀರ್ಘಾವಧಿ ಕಾಯಿಲೆ ಬರುತ್ತವೆ

ಡಾ.ಸಿ. ರಾಮಚಂದ್ರ
ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ತಂಬಾಕು ಉತ್ಪನ್ನಗಳ ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಮೇ 31ರಂದು ವಿಶ್ವ ತಂಬಾಕು ರಹಿತ ದಿನವನ್ನು ಆಚರಿಸಲಾಗುತ್ತಿದೆ. ರಾಜ್ಯದಲ್ಲಿ ಧೂಮಪಾನ ಮತ್ತು ತಂಬಾಕು ಉತ್ಪನ್ನಗಳ ಸೇವನೆಗೆ ಕಡಿವಾಣ ಹಾಕಲು ಆರೋಗ್ಯ ಇಲಾಖೆಯಡಿ ತಂಬಾಕು ನಿಯಂತ್ರಣ ಘಟಕ ಕಾರ್ಯನಿರ್ವಹಿಸುತ್ತಿದೆ. ಸಾರ್ವಜನಿಕ ಪ್ರದೇಶಗಳಲ್ಲಿ ಧೂಮಪಾನ ಮಾಡಿದವರ ಮೇಲೆ ಮೇಲೆ ಪ್ರಕರಣ ದಾಖಲಿಸಿ, ₹ 200 ದಂಡ ವಿಧಿಸಲಾಗುತ್ತಿದೆ. ಕಳೆದ ಸಾಲಿನಲ್ಲಿ ₹ 2.4 ಕೋಟಿಗೂ ಅಧಿಕ ದಂಡ ಸಂಗ್ರಹಿಸಲಾಗಿದೆ.

ಕೋಟ್ಪಾ ಕಾಯ್ದೆಯಡಿ ಪ್ರಕರಣಗಳ ದಾಖಲು

ವರ್ಷ	ಸೆಕ್ಷನ್ 4	ಸೆಕ್ಷನ್ 6
2019–20	1,80,000	4,529
2020–21	1,79,000	4,118

ವಿಶ್ವ ತಂಬಾಕು ರಹಿತ ದಿನ

ಕೋವಿಡ್: ಧೂಮಪಾನಿಗಳಿಗೆ ಅಪಾಯ

‘ಧೂಮಪಾನಿಗಳು ಕೊರೊನಾ ಸೋಂಕಿಗೆ ಒಳಗಾದಲ್ಲಿ ಅವರ ಜೀವಕ್ಕೇ ಕುತ್ತು ಬರುವ ಸಾಧ್ಯತೆಯಿದೆ. ಧೂಮಪಾನವು ಶ್ವಾಸಕೋಶದ ಕಾರ್ಯಕ್ಷಮತೆ ಹದಗೆಡಿಸಿ, ರೋಗ ನಿರೋಧಕ ಶಕ್ತಿ ಕುಗ್ಗಿಸುತ್ತದೆ. ಉಸಿರಾಟದ ಸಮಸ್ಯೆ ಕಾಣಿಸಿಕೊಂಡು, ಗಂಭೀರ ಸ್ವರೂಪ ಪಡೆದುಕೊಳ್ಳುತ್ತದೆ. ಧೂಮಪಾನಿಗಳಿಗೆ ಶ್ವಾಸಕೋಶ ಮತ್ತು ಹೃದಯ ಸೋಂಕಿನ ಅಪಾಯದ ತೀವ್ರತೆಗಳೂ ಹೆಚ್ಚಿರುತ್ತವೆ. ಕೊರೊನಾ ಸೋಂಕಿಗೆ ತುತ್ತಾಗುವ ಧೂಮಪಾನಿಗಳು ಹೆಚ್ಚಿನ ತೊಂದರೆ ಅನುಭವಿಸುವುದಲ್ಲದೆ, ಮೃತಪಡುವ ಸಾಧ್ಯತೆ ಇರುತ್ತದೆ’ ಎಂದು ವೈದ್ಯಕೀಯ ತಜ್ಞರು ಎಚ್ಚರಿಸಿದ್ದಾರೆ.

‘ಧೂಮಪಾನಿಗಳಿಗೆ ಕೊರೊನಾ ಸೋಂಕು ತಗುಲಿದರೆ ಅದು ಅವರ ಮೇಲೆ ಇನ್ನಷ್ಟು ಗಂಭೀರ ಪರಿಣಾಮಗಳನ್ನು ಬೀರುತ್ತವೆ. ಪರೋಕ್ಷ ಧೂಮಪಾನವೂ ಶ್ವಾಸಕೋಶ ಮತ್ತು ರೋಗನಿರೋಧಕ ಶಕ್ತಿಯ ಮೇಲೆ ಪರಿಣಾಮ ಬೀರುತ್ತದೆ. ಹೃದಯ ಮತ್ತು ಉಸಿರಾಟದ ಸೋಂಕಿಗೂ ಒಳಗಾಗುವ ಸಾಧ್ಯತೆ ಇದೆ’ ಎಂದು ರಾಜ್ಯ ಸರ್ಕಾರದ ತಂಬಾಕು ನಿಯಂತ್ರಣ ಕುರಿತಾದ ಉನ್ನತ ಸಮಿತಿ ಸದಸ್ಯ ಡಾ.ಯು.ಎಸ್. ವಿಶಾಲ್ ರಾವ್ ತಿಳಿಸಿದರು.

ಕೋವಿಡ್ ನಡುವೆಯೂ ಕಾರ್ಯಾಚರಣೆ: ಸಾರ್ವಜನಿಕ ಪ್ರದೇಶಗಳಲ್ಲಿ ಧೂಮಪಾನಕ್ಕೆ ಕಡಿವಾಣ ಹಾಕಲು ಹಾಗೂ ಕಾನೂನು ಬಾಹಿರವಾಗಿ ಮಾರಾಟ ಮಾಡುತ್ತಿರುವ ಮಳಿಗೆಗಳ ಮೇಲೆ ಕ್ರಮಕೈಗೊಳ್ಳಲು ಆರೋಗ್ಯ ಇಲಾಖೆಯು ವಿಶೇಷ ತಂಡಗಳನ್ನು ರಚಿಸಿದೆ. ತಾಲ್ಲೂಕು ಮಟ್ಟದಲ್ಲಿ 176 ಹಾಗೂ ಜಿಲ್ಲಾ ಮಟ್ಟದಲ್ಲಿ 32 ತಂಡಗಳು ಕಾರ್ಯಾಚರಣೆ ನಡೆಸುತ್ತಿವೆ. ಕೋವಿಡ್ ಕಾಣಿಸಿಕೊಂಡ ಬಳಿಕ ಈ ತಂಡಗಳು ಕಾರ್ಯಾಚರಣೆಯನ್ನು ಮುಂದುವರಿಸಿದ್ದು, ಲಾಕ್‌ಡೌನ್ ವಿನಾಯಿತಿ ಅವಧಿ ಸೇರಿದಂತೆ ವಿವಿಧ ಸಂದರ್ಭದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡಿದವರ ಮೇಲೆ ಪ್ರಕರಣ ದಾಖಲಿಸುತ್ತಿವೆ.

‘ಕೋವಿಡ್ ಕಾಣಿಸಿಕೊಂಡ ಬಳಿಕ ತಂಬಾಕು ಉತ್ಪನ್ನಗಳ ಸೇವನೆಯಿಂದ ಆಗುವ ದುಷ್ಪರಿಣಾಮದ ಬಗ್ಗೆ ಜನರಲ್ಲಿ ಜಾಗೃತಿ ಮೂಡುತ್ತಿದೆ. ಇದರಿಂದ ಹಲವರು ಧೂಮಪಾನ ಹಾಗೂ ತಂಬಾಕು ಉತ್ಪನ್ನವನ್ನು ತ್ಯಜಿಸುತ್ತಿದ್ದಾರೆ. ಇನ್ನಷ್ಟು ಜಾಗೃತಿ ಮೂಡಬೇಕಿದೆ’ ಎಂದು ಇಲಾಖೆಯ ಉಪನಿರ್ದೇಶಕ ಡಾ.ಎಂ. ಸೆಲ್ವರಾಜನ್ ತಿಳಿಸಿದರು.

ಒಟ್ಟು 39 ಮಂದಿ ಸಾವು • ಡೆತ್ ಆಡಿಟ್‌ಗೆ ಸೂಚನೆ: ಸಚಿವ ಡಾ.ಸುಧಾಕರ್

ಕಪ್ಪು ಶಿಲೀಂಧ್ರ: 1,250 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ಸೋಂಕಿನ 1,250 ಪ್ರಕರಣಗಳು ಕಂಡುಬಂದಿವೆ. ಸೋಂಕಿನಿಂದ 39 ಮಂದಿ ಮೃತಪಟ್ಟಿದ್ದು, ಡೆತ್ ಆಡಿಟ್‌ಗೆ ಸೂಚಿಸಲಾಗಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮನವಿ ಮಾಡಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘18 ಸೋಂಕಿತರು ಚೇತರಿಸಿಕೊಂಡಿದ್ದಾರೆ. ಸದ್ಯ 1,193 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಿಗೆ ಸಮಸ್ಯೆಯಾಗದಂತೆ ಅಗತ್ಯ ಔಷಧ ವಿತರಿಸಲಾಗುತ್ತಿದೆ’ ಎಂದರು.

‘ಕಪ್ಪು ಶಿಲೀಂಧ್ರ ಸೋಂಕಿಗೆ ಔಷಧಿ ಒದಗಿಸಲು ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ಅವರು ಎಂಟಕ್ಕೂ ಹೆಚ್ಚು ಕಂಪನಿಗಳ ಜೊತೆ ಚರ್ಚಿಸಿದ್ದಾರೆ. ಸುಮಾರು 80 ಸಾವಿರ ವಯಲ್ಸ್ ಮಾರುಕಟ್ಟೆಯಲ್ಲಿದೆ. ರಾಜ್ಯಕ್ಕೆ ಈವರೆಗೆ 8 ಸಾವಿರದಿಂದ 10 ಸಾವಿರ ವಯಲ್ಸ್ ದೊರೆತಿದೆ’ ಎಂದರು.

‘ರಾಜ್ಯಗಳ ಬೇಡಿಕೆಗೆ ಅನುಗುಣವಾಗಿ ರೆಮ್‌ಡಿಸಿವಿರ್ ಔಷಧಿಯನ್ನು ಕೇಂದ್ರ ಸರ್ಕಾರ ಹಂಚಿಕೆ ಮಾಡುತ್ತಿತ್ತು. ಮಾರುಕಟ್ಟೆಯಲ್ಲಿ ಔಷಧಿ ಲಭ್ಯವಿರುವುದರಿಂದ ಕೇಂದ್ರ ಸರ್ಕಾರ ನೇರವಾಗಿ ಖರೀದಿಸಲು ರಾಜ್ಯಗಳಿಗೆ ಸೂಚನೆ ನೀಡಿದೆ’ ಎಂದರು.

ಎಲ್ಲರಿಗೂ ಲಸಿಕೆ ಗುರಿ:

‘ಎಲ್ಲರಿಗೂ ಶೀಘ್ರ ಕೋವಿಡ್ ಲಸಿಕೆ ನೀಡುವುದು ಸದ್ಯದ ಗುರಿ. ಆ ಮೂಲಕ, ಕೊರೊನಾ ಸೋಂಕಿನ ಮುಂದಿನ ಅಲೆ ತಡೆಯಬಹುದು. ಅಲ್ಲಿಯವರೆಗೆ ಕೋವಿಡ್ ಸುರಕ್ಷತಾ ಕ್ರಮಗಳನ್ನು ಯಾರೂ ಕಡೆಗಣಿಸಬಾರದು’ ಎಂದರು.

‘ಲಸಿಕೆ ಪಡೆಯದೇ ಇದ್ದರೆ ಮೂರು, ನಾಲ್ಕನೇ ಅಲೆ ಬರುವ ಸಾಧ್ಯತೆ ಹೆಚ್ಚು. ಮಕ್ಕಳಿಗೂ ಲಸಿಕೆ ನೀಡಲು ಪ್ರಯೋಗ ನಡೆಯುತ್ತಿದೆ. ಎರಡು ಡೋಸ್ ಪಡೆದವರು ಇಡೀ ಪ್ರಕ್ರಿಯೆ ಮುಗಿಯುವವರೆಗೆ ಕೋವಿಡ್ ಸುರಕ್ಷತಾ ಕ್ರಮ ಪಾಲಿಸಬೇಕು. ಆರು ತಿಂಗಳು ಅಥವಾ ಒಂದು ವರ್ಷ ಮಾಸ್ಕ್ ಧರಿಸುವುದು ಸೇರಿ ಸುರಕ್ಷತಾ ಕ್ರಮಗಳನ್ನು ನಿರ್ಲಕ್ಷಿಸಬಾರದು’ ಎಂದರು.

ಅಧಿಕ ಮರಣ ಪ್ರಕರಣ ವರದಿಯಾದ ಜಿಲ್ಲೆಗಳು

ಜಿಲ್ಲೆ	ಮರಣ ಪ್ರಕರಣಗಳು
ಧಾರವಾಡ	8
ಶಿವಮೊಗ್ಗ	5
ಕಲಬುರ್ಗಿ	4
ದಕ್ಷಿಣ ಕನ್ನಡ	4
ಬೆಂಗಳೂರು ನಗರ	3
ಹಾಸನ	3

50ಕ್ಕಿಂತ ಹೆಚ್ಚು ಪ್ರಕರಣ ವರದಿಯಾದ ಜಿಲ್ಲೆಗಳು

ಜಿಲ್ಲೆ	ಪ್ರಕರಣಗಳು
ಬೆಂಗಳೂರು ನಗರ	521
ಧಾರವಾಡ	119
ಕಲಬುರ್ಗಿ	102
ಬಾಗಲಕೋಟೆ	68
ವಿಜಯಪುರ	57

ಕೆಶಿಪ್: ₹ 100 ಕೋಟಿ ವರ್ಗಾವಣೆ ನಿಗೂಢ

ಒಂದನೇ ಪುಟದಿಂದ

‘ದಾಖಲೆಗಳನ್ನು ಹಾಜರುಪಡಿಸಲು ತಾವು ಅಧಿಕೃತ ವ್ಯಕ್ತಿಗಳಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸಿರುತ್ತಾರೆ’ ಎಂದು ಕೆ-ಶಿಪ್ ಜಂಟಿ ಲೆಕ್ಕಪತ್ರ ನಿಯಂತ್ರಕ ವಿ.ಡಿ. ನಿಶ್ಚಿತ್ ನೇತೃತ್ವದ ತಪಾಸಣಾ ತಂಡ ಸಲ್ಲಿಸಿರುವ ಟಿಪ್ಪಣಿಯಲ್ಲಿದೆ.

ಮುಂಗಡ ಹಣದ ಬಳಕೆಗೆ ಸಂಬಂಧಿಸಿದಂತೆ ದಾಖಲೆಗಳು, ಬ್ಯಾಂಕ್ ವಹಿವಾಟು ವಿವರ, ಬಿಲ್‌ಗಳು ಮತ್ತು ವೋಚರ್‌ಗಳನ್ನು ಸಲ್ಲಿಸುವಂತೆ ಕಂಪನಿಗೆ ಸೂಚಿಸಲಾಗಿತ್ತು. ಆದರೆ, ಕಂಪನಿ ದಾಖಲೆಗಳನ್ನು ಹಾಜರುಪಡಿಸದ ಕಾರಣದಿಂದ ತಪಾಸಣೆ ಸಾಧ್ಯವಾಗಿಲ್ಲ. ಕಂಪನಿ ಹಿಂದೆ ಸಲ್ಲಿಸಿರುವ ಎಸ್ಕ್ರೊ ಖಾತೆಯ ವಿವರಗಳನ್ನು ಗಮನಿಸಿದರೆ ಮುಂಗಡ ಹಣವನ್ನು ಅನ್ಯ ಉದ್ದೇಶಕ್ಕೆ ಬಳಸಿರುವ ಸಾಧ್ಯತೆ ಇದೆ ಎಂದೂ ಅಧಿಕಾರಿಗಳ ತಂಡ ಅಭಿಪ್ರಾಯಪಟ್ಟಿದೆ.

ಕ್ರಮಕ್ಕೆ ಶಿಫಾರಸು: ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಕೆ-ಶಿಪ್ ಯೋಜನಾ ನಿರ್ದೇಶಕ ಸುರೇಶ್ ಬಾಬು, ‘ಎರಡು ಬಾರಿ ಲೆಕ್ಕಪತ್ರ, ದಾಖಲೆ ಪರಿಶೀಲನೆಗೆ ಪ್ರಯತ್ನ ನಡೆದಿತ್ತು. ಇತ್ತೀಚೆಗೆ ಸದ್ಭವ್ ಕಂಪನಿ ಕೆಲವು ದಾಖಲೆಗಳನ್ನು ಸಲ್ಲಿಸಿದೆ. ಅವುಗಳ ನೈಜತೆ ಪರಿಶೀಲಿಸಬೇಕಿದೆ. ಹಣ ಅನ್ಯ ಉದ್ದೇಶಕ್ಕೆ ಬಳಕೆಯಾಗಿದೆಯೇ ಎಂದು ಪರಿಶೀಲನೆ ನಡೆದಿದೆ’ ಎಂದರು.

ಈ ಕುರಿತು ಸದ್ಭವ್ ಗದಗ್ ಹೈವೆ ಲಿಮಿಟೆಡ್‌ನ ಬಿ.ಜಿ. ಹೂಲಿ ಅವರ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತು. ಆದರೆ, ಅವರ ಮೊಬೈಲ್ ‘ಸ್ವಿಚ್ಡ್ ಆಫ್’ ಆಗಿತ್ತು.

ಕೋವಿಡ್ ಪೀಡಿತನ ಶವ ನದಿಗೆ: ಇಬ್ಬರ ಬಂಧನ

ಬಲರಾಂಪುರ್, ಉತ್ತರಪ್ರದೇಶ (ಪಿಟಿಐ): ಕೋವಿಡ್ ಸೋಂಕಿತ ವ್ಯಕ್ತಿಯ ಶವವನ್ನು ಸೇತುವೆಯಿಂದ ಇಲ್ಲಿನ ರಾಪ್ತಿ ನದಿಗೆ ಎಸೆದ ಆತಂಕಕಾರಿ ಬೆಳವಣಿಗೆ ಈಚೆಗೆ ನಡೆದಿದೆ. ಇದಕ್ಕೆ ಸಂಬಂಧಿಸಿದ ವಿಡಿಯೊ ವೈರಲ್ ಆಗಿದೆ.


ಸೇತುವೆಯ ಮೇಲಿನಿಂದ ಇಬ್ಬರು ಕೂಡಿ ಶವ ಎಸೆಯುತ್ತಿದ್ದು, ಇವರಲ್ಲಿ ಒಬ್ಬ ಪಿಪಿಇ ಕಿಟ್ ಧರಿಸಿದ್ದ. ದಾರಿಹೋಕರು ಇದನ್ನು ಚಿತ್ರೀಕರಿಸಿದ್ದಾರೆ. ವಿಡಿಯೊ ಜಾಲತಾಣದಲ್ಲಿ ಕಾಣಿಸಿಕೊಳ್ಳುತ್ತಿದ್ದಂತೆಯೇ ಪೊಲೀಸರು ಪ್ರಕರಣ ದಾಖಲಿಸಿದ್ದು ಆರೋಪಿಗಳಿಬ್ಬರನ್ನೂ ಬಂಧಿಸಿದ್ದಾರೆ.

‘ಮೃತನನ್ನು ರಾಜ್ಯದ ಸಿದ್ಧಾರ್ಥನಗರ ಜಿಲ್ಲೆಯ ಸೋಹ್ರತ್‌ಗರ್‌ನ ನಿವಾಸಿ ಪ್ರೇಮ್‌ನಾಥ್ ಮಿಶ್ರಾ ಎಂದು ಗುರುತಿಸಲಾಗಿದೆ’ ಎಂದು ಬಲರಾಂಪುರ್‌ನ ಮುಖ್ಯ ವೈದ್ಯಾಧಿಕಾರಿ ವಿಜಯ್ ಬಹಾದ್ದೂರ್ ಸಿಂಗ್ ತಿಳಿಸಿದ್ದಾರೆ.

‘ಕೋವಿಡ್ ದೃಢಪಟ್ಟಿದ್ದ ಮಿಶ್ರಾ ಅವರನ್ನು ಮೇ 25ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. 28ರಂದು ಮೃತಪಟ್ಟಿದ್ದರು. ಕೋವಿಡ್ ಶಿಷ್ಟಾಚಾರ ದಂತೆ ಶವವನ್ನು ಕುಟುಂಬದ ಸದಸ್ಯರಿಗೆ ಹಸ್ತಾಂತರಿಸಲಾಗಿತ್ತು’ ಎಂದು ವಿವರಿಸಿದ್ದಾರೆ. ಈ ಸಂಬಂಧ ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 25 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 28 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.



ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ ‘ಡೆಕ್ಕನ್ ಹೆರಾಲ್ಡ್’ ಹಾಗೂ ‘ಪ್ರಜಾವಾಣಿ’ ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ವಸುಮತಿ ಕೆ.ಎಲ್,** 132, 3 ನೇ ಮುಖ್ಯರಸ್ತೆ, 9 ನೇ ಅಡ್ಡರಸ್ತೆ, ಕೋಣನಕುಂಟೆ, ಬೆಂಗಳೂರು	50,000
2	**ಬಸವರಾಜು,** ನಂ.49, 'ಸುಕೃತಾ', ಮೊದಲ ಮಹಡಿ, 10 ನೇ ಮುಖ್ಯ ರಸ್ತೆ, 16 ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು	25,000
3	**ಡಾ.ಕಾಂತರಾಜು ಎಸ್.ಟಿ,** ಕನಕ ನರ್ಸಿಂಗ್ ಹೋಮ್, ಜೆ.ಸಿ ಎಕ್ಸ್‌ಟೆನ್ಷನ್, ಕನಕಪುರ	25,000
4	**ಆಶಾ ಲತಾ ಮತ್ತು ಎ.ಕೆ ರಾಮಕೃಷ್ಣನ್,** ಫ್ಲ್ಯಾಟ್ 13092, ಶೋಭಾ ಎಲ್ಲೈಟ್, 8 ನೇ ಮೈಲ್, ತುಮಕೂರು ರಸ್ತೆ, ನಾಗಸಂದ್ರ ಮೆಟ್ರೊ ನಿಲ್ದಾಣದ ಎದುರು, ಬೆಂಗಳೂರು	10,000
5	**ಮಾಲತಿ ವೈದ್ಯನಾಥ,** ನಂ.23, 4 ನೇ ಅಡ್ಡರಸ್ತೆ, ಮೊದಲನೇ ಬ್ಲಾಕ್, ಜಯನಗರ, ಬೆಂಗಳೂರು	10,000
6	**ಪಲ್ಲವಿ ಎಸ್.ಎಲ್,** # 20 ಬೃಂದಾವನ ನಿಲಯ, ವಾಟರ್ ಟ್ಯಾಂಕ್ ರಸ್ತೆ, ಬಿಳೇಕಹಳ್ಳಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು	5,000
7	**ವಿನಿತಾ ಭರತ್,** #1168, ದೈವಿಕ್, 1ನೇ ಮುಖ್ಯರಸ್ತೆ, 7ನೇ ಬ್ಲಾಕ್, ಎರಡನೇ ಘಟ್ಟ, ಬನಶಂಕರಿ ಮೂರನೇ ಹಂತ, ಬೆಂಗಳೂರು	5,000
8	**ಮಾರ್ತಾಂಡಪ್ಪ ಎಂ.ಎನ್,** # 17, 2 ನೇ ಅಡ್ಡರಸ್ತೆ, ಭಗೀರಥ ಬಡಾವಣೆ, ಕೆ.ಎಸ್.ಟೌನ್, ಶಿರ್ಕೆ ಅಪಾರ್ಟ್‌ಮೆಂಟ್ ಎದುರು, ಬೆಂಗಳೂರು	5,000
9	**ವೈಶಾಲಿ ಪಿ.,** ವೈಶಾಲಿ ನಿಲಯ, ಅಗಡಿಮಠ, 2 ನೇ ಅಡ್ಡರಸ್ತೆ, ಸಾಗರ	2,500
10	**ತೇಜಸ್ವಿ ಎಸೆನ್ಷಿಯಲ್ಸ್** 97, 4 ನೇ ಅಡ್ಡರಸ್ತೆ, ಎಜಿಎಸ್ ಲೇಔಟ್, ಆರ್‌ಎಂವಿ 2ನೇ ಹಂತ, ಬೆಂಗಳೂರು	2,121
11	**ನರೇಂದ್ರ ಸಂಗಪ್ಪ ಸರೂರ,** ಘನಶ್ಯಾಮ್ ಹೌಸಿಂಗ್ ಕಾಂಪ್ಲೆಕ್ಸ್, ಫ್ಲ್ಯಾಟ್ ಎ–101, ಫೈರ್ ಸ್ಟೇಷನ್ ಎದುರು, ಬ್ರಹ್ಮಪುರ, ಕಲಬುರ್ಗಿ	2,000
12	**ಕೆ.ಎನ್ ಕೃಷ್ಣಪ್ರಸಾದ್,** 843,9ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಶ್ರೀನಗರ ಎಕ್ಸ್‌ಟೆನ್ಷನ್, ಬೆಂಗಳೂರು	2,000
13	**ಗೀತಾ,** ಸಿ 225, ಅಕ್ಷಯ ರೆಗಾಲಿಯಾ, 1ನೇ ಬ್ಲಾಕ್, ಬಿಎಸ್‌ಕೆ 6 ನೇ ಹಂತ, ಬೆಂಗಳೂರು	1,500
14	**ನಾರಾಯಣಪ್ಪ ಎಚ್.ಆರ್,** ನಂ.823, 8 ನೇ ಮುಖ್ಯರಸ್ತೆ, 5 ನೇ ಅಡ್ಡರಸ್ತೆ, 4 ನೇ ಹಂತ, ಬಿಇಎಂಎಲ್ ಲೇಔಟ್, ರಾಜರಾಜೇಶ್ವರಿ ನಗರ, ಬೆಂಗಳೂರು	1,100
15	**ಚೊಕ್ಕಲಿಂಗಂ ಪಿ.,** ನಂ.410, ಉಪಕಾರ್ ಲೇಔಟ್,ಉಲ್ಲಾಳ ಆರ್.ಟಿ.ಒ ಹತ್ತಿರ, ವಿಶ್ವನಿದಂ ಪೋಸ್ಟ್, ಬೆಂಗಳೂರು	1,001
16	**ಕೆ.ಪ್ರಕಾಶ್,** ಜವಾಹರ್ ನವೋದಯ ವಿದ್ಯಾಲಯ, ಸಿಗೋಡು, ಬಾಳೆಹೊನ್ನೂರು, ಚಿಕ್ಕಮಗಳೂರು	1001
17	**ಮುದ್ಲೆಗೌಡ ಟಿ.,** ಶ್ರೀನಿವಾಸ ನಿಲಯ, ಕೆಂದಾವರೆ ರಸ್ತೆ, 4ನೇ ಹಂತ, ಗೋಕುಲ ಎಕ್ಸ್‌ಟೆನ್ಶನ್, ತುಮಕೂರು	1,001
18	**ಲೋಕೇಶ್ ಜಿ.,** ನಂ.ಬಿ - 19, ಬಿಹೆಚ್‌ಇಎಲ್- ಎಸ್‌ಬಿಡಿ ಟೌನ್ ಶಿಪ್, 19 ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು	1,001
19	**ಮಂಗಳ ಗೌರಮ್ಮ,** 122/2, 5 ನೇ ಅಡ್ಡರಸ್ತೆ, ರೈಲ್ವೆ ಗೇಟ್ ಹತ್ತಿರ, ಪಂತರಪಾಳ್ಯ, ನಾಯಂಡಹಳ್ಳಿ, ಬೆಂಗಳೂರು	1,000
20	**ವಿ.ಶ್ರೀರಾಮ್,** 304 ಆಕರ್ಷಣ ಎನ್‌ಕ್ಲೇವ್, ಪಾಪಯ್ಯ ರೆಡ್ಡಿ ಲೇನ್, ನ್ಯೂ ತಿಪ್ಪಸಂದ್ರ, ಬೆಂಗಳೂರು	1,000
	ಒಟ್ಟು	1,52,225
	ಇದುವರೆಗೆ ಸಂಗ್ರಹವಾದ ಒಟ್ಟು ಮೊತ್ತ	33,48,000

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

‘7 ವರ್ಷಗಳಲ್ಲಿ ಹಲವು ಹೆಮ್ಮೆ’

ಒಂದನೇ ಪುಟದಿಂದ

- ಹಲವು ಹಳೆಯ ವಿವಾದಗಳು ಶಾಂತಿ ಮತ್ತು ಸೌಹಾರ್ದದಿಂದ ಬಗೆಹರಿದಿವೆ. ಈಶಾನ್ಯ ಭಾರತದಿಂದ ಕಾಶ್ಮೀರದವರೆಗೂ ಶಾಂತಿ ಮತ್ತು ಅಭಿವೃದ್ಧಿಯ ಹೊಸ ವಿಶ್ವಾಸವನ್ನು ಹುಟ್ಟುಹಾಕಿದೆ
- ‘ಆಯುಷ್ಮಾನ್ ಯೋಜನೆ’ಯಲ್ಲಿ ಬಡವರಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಸ್ವಾತಂತ್ರ್ಯ ಪಡೆದು ಏಳು ದಶಕಗಳ ನಂತರ ಅನೇಕ ಗ್ರಾಮಗಳು ವಿದ್ಯುತ್ ಸಂಪರ್ಕ ಪಡೆದಿವೆ. ಸುಸಜ್ಜಿತ ರಸ್ತೆಯ ಮೂಲಕ ಗ್ರಾಮಗಳನ್ನು ನಗರಕ್ಕೆ ಸಂಪರ್ಕಿಸಲಾಗಿದೆ
- ಕೊರೊನಾ ಪಿಡುಗು ನಮ್ಮನ್ನು ನಿರಂತರವಾಗಿ ಪರೀಕ್ಷೆಗೆ ಒಳಪಡಿಸುತ್ತಿದೆ. ಎಷ್ಟೋ ಜನರು ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡಿದ್ದಾರೆ. ಇದರ ನಡುವೆಯೂ ಭಾರತ ಸೇವೆ ಮತ್ತು ಸಹಕಾರದ ಸಂಕಲ್ಪದೊಂದಿಗೆ ಮುನ್ನಡೆಯುತ್ತಿದೆ

‘ರೈತರು ಹೆಚ್ಚು ದರ ಪಡೆದಿದ್ದಾರೆ’

ಪಿಡುಗಿನ ಸಂದರ್ಭದಲ್ಲೂ ರೈತರು ದಾಖಲೆಯ ಪ್ರಮಾಣದಲ್ಲಿ ಬೆಳೆ ಬೆಳೆದಿದ್ದಾರೆ. ಕೃಷಿ ಕ್ಷೇತ್ರವು ಪಿಡುಗಿನಿಂದ ತನ್ನನ್ನು ರಕ್ಷಿಸಿಕೊಂಡಿದೆ. ಸರ್ಕಾರವು ರೈತರಿಂದ ದಾಖಲೆ ಪ್ರಮಾಣದಲ್ಲಿ ಉತ್ಪನ್ನಗಳನ್ನು ಖರೀದಿಸಿದೆ. ಅನೇಕ ಕಡೆಗಳಲ್ಲಿ ರೈತರು ಕನಿಷ್ಠ ಬೆಂಬಲ ಬೆಲೆಗಿಂತ ಹೆಚ್ಚಿನ ದರವನ್ನು ಪಡೆದಿದ್ದಾರೆ ಎಂದು ಮೋದಿ ಹೇಳಿದರು.

ರೈತರ ಉತ್ಪನ್ನಗಳ ಸಾಗಾಟಕ್ಕೆ ಸರ್ಕಾರವು ಆರಂಭಿಸಿದ ‘ಕಿಸಾನ್ ರೈಲ್’ ಸೇವೆಯನ್ನು ಉಲ್ಲೇಖಿಸುತ್ತಾ, ‘ಸುಮಾರು ಎರಡು ಲಕ್ಷ ಟನ್‌ನಷ್ಟು ಉತ್ಪನ್ನಗಳನ್ನು ಕಿಸಾನ್ ರೈಲ್ ಮೂಲಕ ದೇಶದ ಬೇರೆಬೇರೆ ಭಾಗಗಳಿಗೆ ಸಾಕಾಣಿಕೆ ಮಾಡಲಾಗಿದೆ. ತಾವು ಬೆಳೆದ ತರಕಾರಿ, ಹಣ್ಣು–ಹಂಪಲವನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ದೇಶದ ಹಳ್ಳಿಹಳ್ಳಿಗೆ ಕಳುಹಿಸಲು ಈಗ ರೈತರಿಗೆ ಸಾಧ್ಯವಾಗಿದೆ’ ಎಂದರು.

ಕೆಲವು ಉತ್ಪನ್ನಗಳ ರಫ್ತು ಸಹ ಆರಂಭವಾಗಿದೆ. ತ್ರಿಪುರಾದ ಹಲಸಿನಹಣ್ಣುಗಳು, ಬಿಹಾರದ ಲಿಚಿಯನ್ನು ಲಂಡನ್‌ಗೆ ರಫ್ತು ಮಾಡಲಾಗುತ್ತಿದೆ. ದಕ್ಷಿಣ ಭಾರತದ ವಿಜಯನಗರದಲ್ಲಿ ಬೆಳೆಯುವ ರಸಭರಿತ ಮಾವಿನ ಹಣ್ಣಿನ ರುಚಿಯನ್ನು ಈಗ ಉತ್ತರ ಭಾರತದವರೂ ಸವಿಯುತ್ತಿದ್ದಾರೆ ಎಂದರು.

‘ಈಗಿನ ಕೇಂದ್ರ ಸರ್ಕಾರ ದೇಶಕ್ಕೆ ಮಾರಕ’

ಒಂದನೇ ಪುಟದಿಂದ

ಸರ್ಕಾರದ ವೈಫಲ್ಯಗಳನ್ನು ಕುರಿತು ‘ಏಳು ಅಂಶಗಳ ಪ್ರಮಾದ ಪಟ್ಟಿ’ಯನ್ನು ಕಾಂಗ್ರೆಸ್ ಹೊರತಂದಿದೆ. ಅದರಲ್ಲಿ ಕೋವಿಡ್–19 ಸಾಂಕ್ರಾಮಿಕ ನಿರ್ವಹಣೆ, ಆರ್ಥಿಕ ಕುಸಿತ, ನಿರುದ್ಯೋಗ ಹೆಚ್ಚಳ, ಹಣದುಬ್ಬರಗಳಂಥ ವಿಷಯಗಳನ್ನು ಮುಖ್ಯವಾಗಿರಿಸಿಕೊಂಡಿದೆ. ಜೊತೆಗೆ, ಜಿಎಸ್‌ಟಿ, ನೋಟು ರದ್ದತಿ ಮತ್ತು ಇತರ ಹಲವಾರು ಉಪಕ್ರಮಗಳು ಮೋದಿ ತಂದಿಟ್ಟಿರುವ ವಿಪತ್ತುಗಳು ಎಂದು ಟೀಕಿಸಿದೆ.


ಹಿಂದಿನ ಸರ್ಕಾರಗಳು ಏಳು ದಶಕಗಳಲ್ಲಿ ಮಾಡಲಾಗದ ಕೆಲಸಗಳನ್ನು ತಮ್ಮ ಸರ್ಕಾರ ಏಳು ವರ್ಷಗಳಲ್ಲಿ ಮಾಡಿದೆ ಎಂದು ಮೋದಿ ಅವರು ತಮ್ಮ ಮನದ ಮಾತು ಬಾನುಲಿ ಕಾರ್ಯಕ್ರಮದಲ್ಲಿ ಹೇಳಿದ್ದರು. ಅದಕ್ಕೆ ಕಾಂಗ್ರೆಸ್ ಪ್ರತಿಕ್ರಿಯೆ ನೀಡಿದೆ. 60 ವರ್ಷಗಳ ಕಾಂಗ್ರೆಸ್ ಸಾಧನೆ ಮತ್ತು ಏಳು ವರ್ಷಗಳಲ್ಲಿ ಬಿಜೆಪಿ ಮಾಡಿರುವ ಹಾನಿ ಕುರಿತ ‘ಭಾರತ್ ಮಾತಾ ಕಿ ಕಹಾನಿ’ ಎಂಬ ವಿಡಿಯೊವನ್ನು ಬಿಡುಗಡೆ ಮಾಡಿದೆ.

ಇದಲ್ಲದೇ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೂಡಾ ಸರ್ಕಾರದ ವೈಫಲ್ಯವನ್ನು ಟೀಕಿಸಿ ಟ್ವೀಟ್ ಮಾಡಿದ್ದಾರೆ. ‘ಕೊರೊನಾ ವಿರುದ್ಧ ಹೋರಾಡಲು ಸರಿಯಾದ ಆಶಯ, ದೃಢ ನಿರ್ಧಾರ ಮತ್ತು ನೀತಿಯ ಅಗತ್ಯವಿದೆಯೇ ಹೊರತು ತಿಂಗಳಿಗೊಮ್ಮೆ ಮಾಡುವ ರೇಡಿಯೊ ಭಾಷಣಗಳಲ್ಲ’ ಎಂದಿದ್ದಾರೆ.

ಈ ಎಲ್ಲಾ ಆರೋಪಗಳಿಗೆ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ತಿರುಗೇಟು ನೀಡಿದ್ದಾರೆ. ಬಿಜೆಪಿ ನಾಯಕರು, ಕಾರ್ಯಕರ್ತರು ಜನರಿಗೆ ನೆರವು ನೀಡುವ ಕೆಲಸಗಳಲ್ಲಿ ತೊಡಗಿದ್ದಾಗ ವಿರೋಧ ಪಕ್ಷಗಳು ಕ್ವಾರಂಟೈನ್‌ನಲ್ಲಿ ಇದ್ದವು. ಆನ್‌ಲೈನ್ ಮಾಧ್ಯಮಗೋಷ್ಠಿಗಳಲ್ಲಿ ಮಾತ್ರ ವಿರೋಧ ಪಕ್ಷದ ನಾಯಕರು ಕಾಣಿಸಿಕೊಂಡರು. ಇನ್ನೂ ಕೆಲವು ರಾಜಕೀಯ ಮುಖಂಡರು ಲಾಕ್‌ಡೌನ್ ಕುರಿತು ಬೇಜವಾಬ್ದಾರಿ ಹೇಳಿಕೆಗಳನ್ನು ನೀಡುವಲ್ಲಿ ನಿರತರಾಗಿದ್ದರು ಎಂದು ವ್ಯಂಗ್ಯವಾಡಿದರು.



ಗ್ರಾಮಾರೋಗ್ಯ; ಆಗಲಿ ಇನ್ನಷ್ಟು ಯೋಗ್ಯ



ಆಸ್ಪತ್ರೆ ಎಂದರೆ ಬೆಚ್ಚಿ ಬೀಳುವ ಹಳ್ಳಿಗರು

● ನಾಗರಾಜ ಚಿನಗುಂಡಿ

ರಾಯಚೂರು: 'ಆಸ್ಪತ್ರೆಗೆ ಹೋಗಲು ಜನ ಒಪ್ಪುತ್ತಿಲ್ಲ, ಆಸ್ಪತ್ರೆ ಎಂದರೆ ಗ್ರಾಮಸ್ಥರಲ್ಲಿ ಅಂಜಿಕೆ ಹುಟ್ಟಿದೆ' ಎಂದರು ತಾಲ್ಲೂಕಿನ ಗಂಜಹಳ್ಳಿಯ ಅಂಗನವಾಡಿ ಕಾರ್ಯಕರ್ತೆ ಗೌರಮ್ಮ.

'ಕೋವಿಡ್ ಪೀಡಿತ ಗ್ರಾಮದ ಇಬ್ಬರನ್ನು ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ (ರಿಮ್ಸ್)ಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಆಸ್ಪತ್ರೆಯಲ್ಲೇ ಮೃತಪಟ್ಟರು. ಹೀಗಾಗಿ ನಮ್ಮವರಿಗೆ ಆಸ್ಪತ್ರೆ ಎಂದರೇ ಭಯ' ಎಂದು ದನಿಗೂಡಿಸಿದರು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಅಕ್ರಂಸಾಬ.

'ಮನೆಯಲ್ಲೇ ಪ್ರತ್ಯೇಕವಾಗಿ ಇರ್ತೀವಿ. ಆಸ್ಪತ್ರೆಗೆ ಮಾತ್ರ ಬರುವುದಿಲ್ಲ ಎಂದು ಸೋಂಕಿತರು ತಕರಾರು ಮಾಡುತ್ತಾರೆ. ಗಂಟಲು ದ್ರವದ ಮಾದರಿ ಸಂಗ್ರಹಿಸಿ ಪರೀಕ್ಷೆ ಮಾಡಿಸಿದ್ದೇ ತಪ್ಪು ಎಂದು ಜಗಳಕ್ಕೆ ಬೀಳುತ್ತಾರೆ. ಆಸ್ಪತ್ರೆಯವರನ್ನು ಗ್ರಾಮಕ್ಕೆ ಕರೆತಂದು ಪರೀಕ್ಷೆ ಮಾಡಿಸಿದ್ದರಿಂದ ತಮ್ಮೂರಲ್ಲಿ ಕೊರೊನಾ ಸೋಂಕು ಹರಡಿದೆ ಎಂದು ಕೆಲವರು ಬೈಯುತ್ತಾರೆ' ಎಂದು ಗೌರಮ್ಮ ಅಳಲು ಹೇಳಿಕೊಂಡರು. 'ಪ್ರಜಾವಾಣಿ' ಭೇಟಿ ನೀಡಿದ ಬಹುತೇಕ ಗ್ರಾಮಗಳಲ್ಲಿ ಇದೇ ಪರಿಸ್ಥಿತಿ ಕಂಡು ಬಂತು.

ದೇವಸುಗೂರು ಹೋಬಳಿ ವ್ಯಾಪ್ತಿಯಲ್ಲಿ 300ಕ್ಕೂ ಹೆಚ್ಚು ಜನರಿಗೆ ಸೋಂಕು ತಗುಲಿದೆ. ಕಾಡ್ಲೂರು, ದೇವಸುಗೂರು, ಯದ್ಲಾಪುರ, ಸಗಮಕುಂಟಾ ನಾಲ್ಕು ಗ್ರಾಮ ಪಂಚಾಯಿತಿಗಳನ್ನು ಒಳಗೊಂಡ ಹೋಬಳಿಯನ್ನು 'ರೆಡ್ ಜೋನ್' ಎಂದು ಘೋಷಿಸಲಾಗಿದೆ.

ಗಂಜಹಳ್ಳಿ ಗ್ರಾಮವೊಂದರಲ್ಲೇ 32 ಸೋಂಕಿತರು ಪತ್ತೆಯಾಗಿದ್ದು, ಆಸ್ಪತ್ರೆಯಲ್ಲಿ ಮೃತಪಟ್ಟಿದ್ದ ಇಬ್ಬರದ್ದು ಕೋವಿಡ್‌ನಿಂದ ಸಾವು ಎಂದು ಪರಿಗಣಿಸಲಾಗಿದೆ. ಆದರೆ, ಇದುವರೆಗೂ ಮೃತಪಟ್ಟಿರುವುದು ಎಂಟು ಜನ ಎಂದು ಗ್ರಾಮಸ್ಥರು ಹೇಳುತ್ತಾರೆ.

ದೇವಸುಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಯಚೂರು ಶಾಖೋತ್ಪನ್ನ ವಿದ್ಯುತ್ ಘಟಕದ ಉದ್ಯೋಗಿಗಳಿರುವ ಕಾಲೊನಿ ಸೋಂಕಿತರ ಬೀಡಾಗಿ ಪರಿವರ್ತಿತವಾಗಿದೆ.

ಹೆಸರಿಗಷ್ಟೇ ಆಸ್ಪತ್ರೆ: ಶಕ್ತಿನಗರದಲ್ಲಿ ಕೆಪಿಸಿಎಲ್ ಆಸ್ಪತ್ರೆ ಇದೆ. ದೇವಸುಗೂರು, ಯದ್ಲಾಪುರಗಳಲ್ಲಿ ಉಪ ಆರೋಗ್ಯ ಕೇಂದ್ರಗಳಿವೆ. ಕೋವಿಡ್ ದೃಢಪಟ್ಟವರಿಗೆ ಚಿಕಿತ್ಸೆ ನೀಡುವ ಯಾವುದೇ ವ್ಯವಸ್ಥೆ ಇಲ್ಲ.

'ಸರ್ಕಾರ ನೀಡುವ ಸಾವಿನ ಲೆಕ್ಕಕ್ಕೂ-ಗ್ರಾಮೀಣ ಭಾಗದಲ್ಲಿ ಸತ್ತವರ ಸಂಖ್ಯೆಗೂ ಅಜಗಜಾಂತರ ಇದೆ. ಸಕಾಲಕ್ಕೆ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯದೇ ಸಾಯುವವರ ಸಂಖ್ಯೆ ಹೆಚ್ಚಿದೆ. ಸಾವಿನ ಕಾರಣ ಕೇಳಿದರೆ, ಎರಡು ದಿನಗಳಿಂದ ಜ್ವರ ಬಂದಿತ್ತು ಎಂದು ಮನೆಯವರು ಹೇಳುತ್ತಾರೆ. ಇಂಥ ಸಾವುಗಳು ಜಿಲ್ಲಾಡಳಿತದ ಗಮನಕ್ಕೆ ಬರುವುದೇ ಇಲ್ಲ' ಎನ್ನುತ್ತಾರೆ ರಾಯಚೂರು ತಾಲ್ಲೂಕು ಯರಗೇರಾ ಗ್ರಾಮದ ಸಾಮಾಜಿಕ ಕಾರ್ಯಕರ್ತ ಹಫೀಜುಲ್ಲಾ.

ಖಾಲಿ ಖಾಲಿ: 'ಕೋವಿಡ್ ಆರೈಕೆ ಕೇಂದ್ರದಲ್ಲಿ 550 ಜನರು ಉಳಿಯುವುದಕ್ಕೆ ವ್ಯವಸ್ಥೆ ಇದೆ. ಊಟ, ಶುದ್ಧ ಕುಡಿಯುವ ನೀರು ಹಾಗೂ ಕಷಾಯ ಕೊಡಲಾಗುತ್ತಿದೆ. ಸಮಯ ಕಳೆಯುವುದಕ್ಕೆ ಟಿ.ವಿ. ವ್ಯವಸ್ಥೆಯನ್ನೂ ಮಾಡಿದ್ದೇವೆ. ಆದರೂ ಸೋಂಕಿತರು ಬರುತ್ತಿಲ್ಲ' ಎಂದು ಯರಮರಸ್ ಕೋವಿಡ್ ಆರೈಕೆ ಕೇಂದ್ರದ ಉಸ್ತುವಾರಿ ಅಧಿಕಾರಿ ವೆಂಕಟ್ ರಾಘವ ಹೇಳಿದರು.

ಇದೇ ಕೇಂದ್ರದಲ್ಲಿ ದಾಖಲಾಗಿರುವ ಜೇಗರಕಲ್ ಗ್ರಾಮದ ಕೋವಿಡ್ ಪೀಡಿತ ಹನುಮಂತಪ್ಪ ಅವರನ್ನು ಹೇಗೇಕೆ ಎಂದು ಕೇಳಿದರೆ, 'ಇಲ್ಲಿ ಎಲ್ಲ ರೀತಿಯ ವ್ಯವಸ್ಥೆ ಮಾಡಿದ್ದಾರೆ ನಿಜ. ಆದರೆ, ನಾವು ವಾರಗಟ್ಟಲೆ ಈ ಕೇಂದ್ರದಲ್ಲೇ ಇದ್ದರೆ ನಮ್ಮ ಮನೆಯವರ ಸ್ಥಿತಿ ಹೇಗಿರುತ್ತದೆಯೋ ಎಂಬ ಚಿಂತೆ ಕಾಡುತ್ತಿರುತ್ತದೆ' ಎಂದರು.


ರಾಯಚೂರು ತಾಲ್ಲೂಕಿನ ಶಕ್ತಿನಗರದಲ್ಲಿ ಪಡಿತರ ಧಾನ್ಯ ಪಡೆಯಲು ಜನರು ಮುಗಿಬಿದ್ದರು

ಮುಖ್ಯಾಂಶಗಳು
- ಪಡಿತರ ಪಡೆಯಲು ಮುಗಿಬೀಳುವ ಜನ
- ಹಳ್ಳಿಗಳಲ್ಲಿ ಪಾಲನೆಯಾಗದ ನಿಯಮ

ರಾಯಚೂರು ಜಿಲ್ಲಾ
ಕೋವಿಡ್ ಅಂಕಿ-ಅಂಶ

37,859 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
4,975 ▼	32,617 ▲	267 ▲

ದಿನದ ಏರಿಕೆ

ಹೊಸ ಪ್ರಕರಣ	278 ▼
ಗುಣಮುಖ	674 ▲
ಸಾವು	3 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಿಕಿತ್ಸೆಗೆ ಬನ್ನಿ ಎಂದರೆ ನಾಯಿ ಬಿಟ್ಟರು!

ದೇವದುರ್ಗ ತಾಲ್ಲೂಕಿನ ಕುರುಬರದೊಡ್ಡಿಯಲ್ಲಿ ದಂಪತಿಗೆ ಕೋವಿಡ್ ದೃಢಪಟ್ಟಿತ್ತು. ಆರೈಕೆ ಕೇಂದ್ರಕ್ಕೆ ದಾಖಲಾಗುವಂತೆ ಅವರ ಮನವೊಲಿಸಲು ಮೇ 28ರಂದು ಹೋದ ಅಂಗನವಾಡಿ ಕಾರ್ಯಕರ್ತೆಯರ ಮೇಲೆ ನಾಯಿ ಬಿಟ್ಟು ಅಲ್ಲಿಂದ ಅಟ್ಟಿಸಿದರು!

ವಿಷಯ ತಿಳಿಯುತ್ತಿದ್ದಂತೆಯೇ ರಾಯಚೂರು ಉಪ ವಿಭಾಗಾಧಿಕಾರಿ ಸಂತೋಷ ಕಾಮಗೌಡ, 'ಕೊರೊನಾ ಸೇನಾನಿಗಳನ್ನು ನಿಂದಿಸಿದ್ದಾರೆ ಮತ್ತು ಅವರ ಮೇಲೆ ನಾಯಿ ಛೂಬಿಟ್ಟಿದ್ದಾರೆ' ಎಂಬ ಕಾರಣ ನೀಡಿ ಈ ದಂಪತಿಯ ಪಡಿತರ ಚೀಟಿ ರದ್ದುಪಡಿಸಿ ಮತ್ತು ಅವರ ಮನೆಯ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಆದೇಶಿಸಿದ್ದರು. ಮರುದಿನ ಈ ದಂಪತಿ ಕೋವಿಡ್ ಆರೈಕೆ ಕೇಂದ್ರ ಸೇರಿಕೊಂಡರು. ಪಡಿತರ ಚೀಟಿ ರದ್ದು ಕೈಬಿಡಲಾಯಿತು.

ಮದುವೆಗಳು ನಿರಾತಂಕ

ಕೋವಿಡ್ ಆತಂಕದ ಮಧ್ಯೆಯೂ ಗ್ರಾಮಗಳಲ್ಲಿ ರಾತ್ರೋರಾತ್ರಿ ಮದುವೆ ನೆರವೇರಿಸುವುದು ಸಾಮಾನ್ಯವಾಗಿದೆ. ದೇವದುರ್ಗ ತಾಲ್ಲೂಕಿನ ಮರಲದಿನ್ನಿ ಮತ್ತು ರಾಯಚೂರಿನ ಗೋದಾಮು ಏರಿಯಾದಲ್ಲಿ ಕದ್ದುಮುಚ್ಚಿ ಮಾಡುತ್ತಿದ್ದ ಮದುವೆ ಸಮಾರಂಭ ಸ್ಥಳಕ್ಕೆ ಈಚೆಗೆ ದಾಳಿ ನಡೆಸಿದ ಅಧಿಕಾರಿಗಳು ದಂಡ ವಿಧಿಸಿ, ಪ್ರಕರಣ ದಾಖಲಿಸಿದ್ದಾರೆ. ಆದರೂ ಸಮಾರಂಭಗಳ ಆಯೋಜನೆ ಸ್ಥಗಿತವಾಗಿಲ್ಲ. ಗ್ರಾಮಗಳಲ್ಲಿ ನಡೆಯುವ ಅಂತ್ಯಕ್ರಿಯೆಗಳಿಗೆ ಜನರು ಹೆಚ್ಚಾಗಿ ಸೇರುವುದು ತಪ್ಪುತ್ತಿಲ್ಲ.

'ಗ್ರಾಮಸ್ಥರು ಮದುವೆಗಾಗಿ ಖರ್ಚು ಮಾಡಿ ಪೂರ್ವಸಿದ್ಧತೆ ಮಾಡಿಕೊಂಡ ಬಗ್ಗೆ, ಮದುವೆ ಮಾಡಲೇಬೇಕಾದ ಅನಿವಾರ್ಯತೆ ಬಗ್ಗೆ ಹೇಳುತ್ತಿದ್ದಾರೆ. ಆದರೂ ಮುಂದೂಡುವಂತೆ ಮನವೊಲಿಸಲಾಗುತ್ತಿದೆ' ಎಂದು ಮಾನ್ವಿ ತಹಶೀಲ್ದಾರ್ ಸಂತೋಷರಾಣಿ ಹೇಳಿದರು.



ಮಹಾನಗರಗಳಿಂದ ವಲಸೆ ಕಾರ್ಮಿಕರು ಗ್ರಾಮಗಳಿಗೆ ವಾಪಸ್ ಬಂದ ನಂತರ ಕೊರೊನಾ ಪ್ರಕರಣಗಳು ಹೆಚ್ಚಾಗಿವೆ.
ಡಾ.ಎಸ್.ಜಿ.ಕಣ್ಣೂರ
ಯಾಪಲದಿನ್ನಿ ಪಿಎಚ್‌ಸಿ ವೈದ್ಯಾಧಿಕಾರಿ



ಸೋಂಕಿತರು ಮನೆಯಲ್ಲಿ ಉಳಿಯುತ್ತಿರುವುದೇ ಸಮಸ್ಯೆಗೆ ಮೂಲ. ಅವರಿಂದ ಸಂಬಂಧಿಗಳಿಗೆ, ಆ ವಾರ್ಡ್‌ನ ಜನರಿಗೆ- ಇಡೀ ಊರಿಗೆ ಸೋಂಕು ಹರಡುತ್ತಿದೆ
ಬಲರಾಮ್ ಕಟ್ಟಿಮನಿ
ಮಸ್ಕಿ ತಹಶೀಲ್ದಾರ್



ಕೋವಿಡ್ ಬಗೆಗೆ ಭಯ ಹಾಗೂ ತಪ್ಪು ತಿಳಿವಳಿಕೆ ಇದೆ. ಕೋವಿಡ್ ಆರೈಕೆ ಕೇಂದ್ರ ಎಂದರೆ ಆಸ್ಪತ್ರೆ ಎಂದು ತಿಳಿದುಕೊಳ್ಳುತ್ತಿದ್ದಾರೆ. ಆಸ್ಪತ್ರೆಗಳ ಬಗ್ಗೆ ಅಪನಂಬಿಕೆ ಹೆಚ್ಚಾಗಿದೆ
ಮಂಜುನಾಥ ಭೋಗಾವತಿ
ಸಿಂಧನೂರು ತಹಶೀಲ್ದಾರ್

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಗ್ರಾಮಗಳಲ್ಲಿ ಶ್ರದ್ಧಾಂಜಲಿ ಫ್ಲೆಕ್ಸ್‌ಗಳ ಸ್ವಾಗತ!

ಒಂದನೇ ಪುಟದಿಂದ...

'ಸರ್ಕಾರಿ ಆಂಬುಲೆನ್ಸ್‌ಗೂ ಹಣ ಪಡೆಯುತ್ತಾರೆ. ವೈದ್ಯರಿಲ್ಲದೇ ನರ್ಸ್‌ಗಳೇ ಚಿಕಿತ್ಸೆ ನೀಡುತ್ತಿದ್ದಾರೆ. ಸೋಂಕಿನಿಂದ ಮೃತರಾದವರ ಶವವನ್ನು ಕುಟುಂಬದವರ ಸುಪರ್ದಿಗೆ ಕೊಡಲು ಸತಾಯಿಸುತ್ತಾರೆ. ಐದಾರು ಗಂಟೆ ಕಾಯಿಸುತ್ತಾರೆ, ದಾಖಲೆ ಕೇಳುತ್ತಾರೆ'–ಹೀಗೆ ದೂರುಗಳು ಕೇಳಿಬಂದಿದ್ದು ಎಚ್.ಡಿ.ಕೋಟೆ ಹಾಗೂ ಕೆ.ಆರ್.ನಗರ ತಾಲ್ಲೂಕಿನಲ್ಲಿ.

ಕೋವಿಡ್ ಮೊದಲ ಅಲೆ ವೇಳೆ ಎದುರಾದ ಸಮಸ್ಯೆ ಗೊತ್ತಿದ್ದರೂ ಜಿಲ್ಲಾಡಳಿತ ಎಚ್ಚೆತ್ತುಕೊಂಡಂತೆ ಕಾಣುತ್ತಿಲ್ಲ. ಜಿಲ್ಲೆಯ ಎಂಟೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಶೇ 50ರಷ್ಟು ವೈದ್ಯರು, ನರ್ಸ್, ತಂತ್ರಜ್ಞರು ಹಾಗೂ 'ಡಿ' ದರ್ಜೆ ನೌಕರರ ಕೊರತೆ ಎದ್ದು ಕಾಣುತ್ತಿದೆ. ಹೀಗಾಗಿ, ಸರಿಯಾಗಿ ರೋಗಿಗಳತ್ತ ಕಾಳಜಿ ವಹಿಸಲು ಸಾಧ್ಯವಾಗುತ್ತಿಲ್ಲ. 'ಅಧಿಕಾರಿಗಳು ಸಭೆಗಳಲ್ಲೇ 'ಬ್ಯುಸಿ'ಯಾಗಿದ್ದು, ಗ್ರಾಮಗಳಿಗೆ ಬರುತ್ತಿಲ್ಲ' ಎಂಬ ದೂರು ಒಂದೆಡೆಯಾದರೆ, ವೈದ್ಯರು ಬೆಳಿಗ್ಗೆ ಪಟ್ಟಣದಿಂದ ಹೊರಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬರುವಷ್ಟರಲ್ಲಿ 11 ಗಂಟೆ ದಾಟಿರುತ್ತದೆ ಎನ್ನುತ್ತಾರೆ ಸ್ಥಳೀಯರು.

'ರಜೆಯೂ ಸಿಗದೆ ಒತ್ತಡದಿಂದ ಕೆಲಸ ಮಾಡುತ್ತಿದ್ದೇವೆ. ನಮ್ಮಲ್ಲೇ ಕೆಲವರಿಗೆ ಸೋಂಕು ಬಂದು ಆರೋಗ್ಯ ಹದಗೆಟ್ಟಿದೆ' ಎಂದು ನಂಜನಗೂಡು ಸರ್ಕಾರಿ ಆಸ್ಪತ್ರೆಯ ವೈದ್ಯೆ ಡಾ.ಸುಮಾ ಹೇಳಿದರೆ; 'ನಿರ್ವಹಣೆ ಕಷ್ಟಕರವಾಗಿದೆ. ಬೇರೆ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ರೋಗಿಗಳು ಬರುತ್ತಿದ್ದು, ಎಷ್ಟೇ ಮನವಿ ಮಾಡಿದರೂ ಅಂತರ ಕಾಯ್ದುಕೊಳ್ಳುತ್ತಿಲ್ಲ' ಎನ್ನುತ್ತಾರೆ ಹುಣಸೂರು ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಸರ್ವೇಶ್ ರಾಜೇ ಅರಸ್.

ತುರ್ತು ಚಿಕಿತ್ಸೆಗೆಂದು ಪಟ್ಟಣಕ್ಕೆ ಕರೆದೊಯ್ಯಲು ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವಾಹನ ವ್ಯವಸ್ಥೆ ಇಲ್ಲ. ಸೋಂಕಿತ ಗರ್ಭಿಣಿಯನ್ನು ಜಿಲ್ಲಾಸ್ಪತ್ರೆಗೆ ಕರೆದೊಯ್ಯಲು ವಾಹನ ಸೌಲಭ್ಯವಿಲ್ಲದೇ ಸಾಲಿಗ್ರಾಮ ಆಸ್ಪತ್ರೆ ಆವರಣದಲ್ಲಿ ಮೂರು ತಾಸು ಕಾಯಿಸಿದ್ದರು. ಸೋಂಕು ಹೆಚ್ಚುತ್ತಿದ್ದರೂ ವ್ಯವಸ್ಥೆ ಮಾತ್ರ ಸರಿ ಹೋಗಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಸಮಸ್ಯೆ ಬಿಗಡಾಯಿಸಲು ಇದೂ ಪ್ರಮುಖ ಕಾರಣ.

ಮೈಸೂರಿನ ತಾಲ್ಲೂಕಿನ ಕೂರ್ಗಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 200ಕ್ಕೂ ಅಧಿಕ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಅಧಿಕಾರಿಗಳು ಈಗ ನಿದ್ದೆಯಿಂದ ಎದ್ದು ನಿಯಂತ್ರಣಕ್ಕಾಗಿ ಈ ಗ್ರಾಮಕ್ಕೆ ಬೇಲಿ ಹಾಕಿದ್ದಾರೆ.

ಮೈಸೂರು ಜಿಲ್ಲೆಯ 266 ಗ್ರಾಮ ಪಂಚಾಯಿತಿಯ 1,560 ಹಳ್ಳಿಗಳ ಪೈಕಿ 1,217 ಹಳ್ಳಿಗಳಲ್ಲಿ ಸೋಂಕು ಹರಡಿದೆ. 'ಕೋವಿಡ್ ಮಿತ್ರ' ಸ್ಥಾಪಿಸಿ ಔಷಧಿ ವಿತರಿಸುತ್ತಿದ್ದು, ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ಪರೀಕ್ಷೆ ನಿಲ್ಲಿಸಲಾಗಿದೆ.

ದಾನಿಗಳ ಕೊಡುಗೆ:

ಗ್ರಾಮೀಣ ಪ್ರದೇಶದಲ್ಲಿ ಸಾವಿನ ಪ್ರಮಾಣ ಹೆಚ್ಚುತ್ತಿವೆಯಲ್ಲಾ ಎಂದು ವೈದ್ಯರನ್ನು ಕೇಳಿದರೆ, 'ಸೋಂಕಿತರು ತಡವಾಗಿ ಆಸ್ಪತ್ರೆಗೆ ಬರ್ತಾರೆ' ಎಂಬ ಸಮಜಾಯಿಷಿ ಮುಂದಿಡುತ್ತಾರೆ. ಸರ್ಕಾರ ಕಲ್ಪಿಸಿರುವ ಸೌಲಭ್ಯಕ್ಕಿಂತ ಶಾಸಕರು, ದಾನಿಗಳು ನೀಡಿರುವ ಸ್ವಂತ ಹಣದಲ್ಲಿ ಆಂಬುಲೆನ್ಸ್ ಸೇವೆ, ಔಷಧ ವಿತರಣೆ ಹೆಚ್ಚಾಗಿ ನಡೆಯುತ್ತಿದೆ.

ಗ್ರಾಮಗಳಲ್ಲಿ ಸೌಲಭ್ಯವಿಲ್ಲದೇ, ಸಮಸ್ಯೆ ಆಲಿಸುವವರೂ ಇಲ್ಲದೇ ಭಯಗೊಂಡ ಮೆಲ್ಲಹಳ್ಳಿಯ ದಂಪತಿ, ಅವರ ಮೂವರೂ ಹೆಣ್ಣು ಮಕ್ಕಳು ಹಾಗೂ ಪಿಲ್ಲಹಳ್ಳಿಯ ಅಪ್ಪ, ಮಕ್ಕಳು ಆರೈಕೆ ಕೇಂದ್ರ ಸೇರಿದ್ದಾರೆ. ಸೋಂಕು ತಂದೊಡ್ಡಿರುವ ನೋವಿನ ಜೊತೆಗೆ, ತಮ್ಮನ್ನು ಕೇಳುವವರೇ ಇಲ್ಲವಲ್ಲ ಎಂಬ ಅಸಹಾಯಕತೆ ಕಾಡುತ್ತಿದೆ.

ಮನೆ ಮಂದಿಯೆಲ್ಲ ಆರೈಕೆ ಕೇಂದ್ರಕ್ಕೆ ದಾಖಲಾಗಿರುವುದರಿಂದ ಹೊಲ–ಗದ್ದೆ, ಜಾನುವಾರುಗಳನ್ನು ನೋಡಿಕೊಳ್ಳುವವರು ಯಾರೂ ಇಲ್ಲವಲ್ಲ ಎಂಬ ಕೊರಗೂ ಇದೆ.

ಲಸಿಕೆಗೆ 'ನಾಳೆ ಬನ್ನಿ'

ಗ್ರಾಮದ ಜನರು ಲಸಿಕೆ ಪಡೆಯಲು ಪಟ್ಟಣಗಳಿಗೆ ಬರುತ್ತಿದ್ದಾರೆ. ಆದರೆ, ತಾಲ್ಲೂಕು ಆಸ್ಪತ್ರೆಗಳಲ್ಲಿ, 'ನಾಳೆ ಬನ್ನಿ' ಎಂಬ ಉತ್ತರ.

'ಲಸಿಕೆ ಹಾಕಿಸಿಕೊಳ್ಳುವಂತೆ ಪ್ರಚಾರ ಮಾಡಿ ಹೋದರು. ಅದಕ್ಕಾಗಿ, ಪಟ್ಟಣಕ್ಕೆ ಅಲೆದು ಸಾಕಾಯಿತು' ಎಂದು ಎಚ್.ಡಿ.ಕೋಟೆ ತಾಲ್ಲೂಕಿನ ಸೊಳ್ಳೇಪುರ ಗ್ರಾಮದ ರಾಮನಾಯಕ ಹೇಳುತ್ತಾರೆ.



ಹಗಲಿರುಳೂ ಕಾರ್ಯನಿರ್ವಹಿಸುತ್ತಿದ್ದು ಕಷ್ಟವಾಗುತ್ತಿದೆ. ಜ್ವರವಿದ್ದರೂ ಮಾತ್ರೆ ನುಂಗಿ ಕೆಲಸ ಮಾಡುತ್ತಿದ್ದೇವೆ. ದಯವಿಟ್ಟು ನರ್ಸ್‌ಗಳನ್ನು ನೇಮಿಸಿ
ಮಾಲಿನಿ
ನರ್ಸ್, ಹುಣಸೂರು, ಸರ್ಕಾರಿ ಆಸ್ಪತ್ರೆ



ವೈದ್ಯರು, ಸಿಬ್ಬಂದಿ ಕೊರತೆ ಇದೆ. ಕೆಲ ಸಿಬ್ಬಂದಿಗೆ ಸೋಂಕು ತಗುಲಿದ್ದು ಒತ್ತಡವಿದೆ. ಸೋಂಕಿತರು ತಡವಾಗಿ ಬರುತ್ತಿರುವುದರಿಂದ ಸಾವು ಹೆಚ್ಚುತ್ತಿದೆ
ಎನ್.ಭಾಸ್ಕರ್, ಎಚ್‌ಡಿ.ಕೋಟೆ ತಾಲ್ಲೂಕು ಆಸ್ಪತ್ರೆ, ಮುಖ್ಯ ಆಡಳಿತ ವೈದ್ಯಾಧಿಕಾರಿ



ಸಾವಿರಾರು ಮನೆಗಳು ಇದ್ದರೂ ಗ್ರಾಮದಲ್ಲಿ ಆಸ್ಪತ್ರೆ ಇಲ್ಲ. ಸೋಂಕಿನಿಂದ ಜನ ನಿತ್ಯ ಸಾಯುತ್ತಿದ್ದಾರೆ. ಸಮಸ್ಯೆ ಕೇಳೋರೇ ಇಲ್ಲ. ಈಗ ಸೀಲ್‌ಡೌನ್ ಮಾಡಿದ್ದಾರೆ
ಕರೀಗೌಡ, ಕೂರ್ಗಳ್ಳಿ, ಮೈಸೂರು ತಾಲ್ಲೂಕು

ಮೈಸೂರು ಜಿಲ್ಲಾ
ಕೋವಿಡ್ ಅಂಕಿ-ಅಂಶ

1,41,644 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
15,820 ▼	1,24,213 ▲	1,611 ▲

ದಿನದ ಏರಿಕೆ

ಹೊಸ ಪ್ರಕರಣ	1,559 ▼
ಗುಣಮುಖ	1,846 ▼
ಸಾವು	8 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಮೈಸೂರು ಜಿಲ್ಲೆಯ ಗ್ರಾಮಗಳ ಕೋವಿಡ್ ಪರಿಸ್ಥಿತಿ

ತಾಲ್ಲೂಕು	ಒಟ್ಟು ಗ್ರಾಮ	ಸೋಂಕಿತ ಗ್ರಾಮ
ಮೈಸೂರು	196	179
ಪಿರಿಯಾಪಟ್ಟಣ	219	184
ನಂಜನಗೂಡು	202	158
ತಿ.ನರಸೀಪುರ	171	164
ಹುಣಸೂರು	275	211
ಎಚ್‌.ಡಿ.ಕೋಟೆ	212	93
ಕೆ.ಆರ್.ನಗರ	177	155
ಸರಗೂರು	108	73
ಒಟ್ಟು	1,560	1,217

'ದವಾಖಾನಿಯೊಳಗ ಭೋಲೊ ನೋಡೂದಿಲ್ಲ...'

● ವೆಂಕಟೇಶ ಜಿ.ಎಚ್

ಬಾಗಲಕೋಟೆ: ದವಾಖಾನಿಗೆ ಹೋದರೆ ಖಲಾಸೇರಿ. ಅಲ್ಲಿ ಭೋಲೊ ನೋಡೋವಲ್ರು. ಹೊಳ್ಳಿ ಹೆಣಾನು ಬರಾಂಗಿಲ್ಲ. ಕಣ್ಣೆದುರೇ ನಡಕೊಂಡು ದವಾಖಾನಿಗೆ ಹೋದವ ಹೆಣ ಆಗ್ಯಾನ. ಲಕ್ಷಗಟ್ಟಲೇ ರೊಕ್ಕ ಹೋಗಿದ್ದೇ ಖರೆ. ಇಲ್ಲೇ ಮನೀಮುಂದ ನೀರು ಕುಡಿದು ಸಾಯ್ತೇವಿ ಅಂತಾರ ಹೊರತು ಯಾರೂ ದವಾಖಾನಿಗೆ ಹೋಗೋವಲ್ರು.

ಹೀಗೆಂದು ಹುನಗುಂದ ತಾಲ್ಲೂಕು ಕಡಿವಾಳ ಕಲ್ಲಾಪುರ-ಬಸವನಾಳ ರಸ್ತೆಯಲ್ಲಿ 'ಪ್ರಜಾವಾಣಿ'ಗೆ ಎದುರಾದ ಕುರಿಗಾಹಿ ಹುಲಿಗೆಪ್ಪ, ಸ್ಥಳೀಯರಾದ ಮುದುಕಪ್ಪ ಮೂಗನೂರ ಹೇಳಿದರು.

ಗ್ರಾಮೀಣ ಭಾಗದಲ್ಲಿ ಕೊರೊನಾ ಸೋಂಕಿನ ಪಥ ಅರಸುತ್ತಾ ಹೊರಟ ನಮಗೆ, ಗ್ರಾಮೀಣರಲ್ಲಿ ಆರೋಗ್ಯ ಸೇವೆಯ ಬಗ್ಗೆ ಮೂಡಿರುವ ತಿರಸ್ಕಾರ ಭಾವ ಬಸವನಾಳದ ಹುಲಿಗೆಪ್ಪ ಹಾಗೂ ಸುರಳಿಕಲ್‌ನ ಮುದುಕಪ್ಪ ಅವರ ಮಾತಿನಲ್ಲಿ ಧ್ವನಿಸಿತು.

ಗಂಜಿಹಾಳದ ಮುಖ್ಯ ರಸ್ತೆಯಲ್ಲಿ ಸಿಕ್ಕ ವೃದ್ಧ, ಈ ವಾರ ನಮ್ಮೂರಾಗ ಐದು ಮಂದಿ ಹೋದ್ರು ಎಂದು ಲೆಕ್ಕ ಒಪ್ಪಿಸಿದರು. ಪಕ್ಕದಲ್ಲಿಯೇ ಬಟ್ಟೆ ಅಂಗಡಿ, ಕಿರಾಣಿ ಅಂಗಡಿಯಲ್ಲಿ ಮುಂಜಾನೆ 10ರ ನಂತರವೂ ವಹಿವಾಟು ಜೋರಾಗಿತ್ತು. ಮಾಸ್ಕ್, ಸುರಕ್ಷಿತ ಅಂತರ ಯಾವುದೂ ಅಲ್ಲಿ ಕಾಣಲಿಲ್ಲ.

ಗ್ರಾಮ ಪಂಚಾಯ್ತಿ ಕಚೇರಿ ಭಣಗುಡುತ್ತಿತ್ತು. ಅಲ್ಲಿದ್ದ ಸಹಾಯಕಿ ಪಿಡಿಒ ಸಂಪರ್ಕ ಸಂಖ್ಯೆ ಕೊಟ್ಟರು. 'ಕೆಲಸದ ಮೇಲೆ ಹೊರಗಿದ್ದೇನೆ. ಪಂಚಾಯ್ತಿಗೆ ಬರುವುದಿಲ್ಲ ಎಂದ ಪಿಡಿಒ ಹುಲ್ಲಪ್ಪ ಆವಿನ, ಕೊರೊನಾಗೆ ಇಬ್ಬರು ಮಾತ್ರ ಸತ್ತಿದ್ದಾರೆ. ಉಳಿದವರು ಬೇರೆ ಕಾರಣಕ್ಕಿರಬಹುದು' ಎಂದರು.

'ಊರಿನವರು ಸಹಕರಿಸುತ್ತಿಲ್ಲ..'

ಕಂದಗಲ್, 13 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇರುವ ಊರು. ಸುತ್ತಲಿನ 18 ಹಳ್ಳಿಗಳಿಗೆ ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರವೇ ದಿಕ್ಕು. ಬಿಎಎಂಎಸ್ ವೈದ್ಯ ಡಾ.ಎಸ್.ಎಸ್.ಬಿಂಜವಾಡಗಿ ಅವರೇ ಚಿಕಿತ್ಸೆಯ ನೇತೃತ್ವ ವಹಿಸಿದ್ದಾರೆ. ಅಲ್ಲಿದ್ದ ಹಿರಿಯ ನರ್ಸ್, 'ಊರವರಿಂದ ಸಹಕಾರ ಸಿಗುತ್ತಿಲ್ರಿ' ಎಂದರು.

'ಕೊರೊನಾ ಟೆಸ್ಟ್ ಮಾಡಿಸಲು ಊರವರನ್ನು ಕರೆಯಲು ಹೋದರೆ ಆಶಾ ಕಾರ್ಯಕರ್ತೆಯರಿಗೆ ಬೈದು ಕಳುಹಿಸುತ್ತಿದ್ದಾರೆ. ಹೊರಗಿನಿಂದ ಊರಿಗೆ ಬಂದವರೂ ದಬಾಯಿಸುತ್ತಾರೆ' ಎಂದು ಅಲವತ್ತುಕೊಂಡರು.

'ನಿಮಗ ಪಗಾರ ಕೊಡ್ತಾರ, ನೀವು ಬರ್ತೀರಿ. ಊರಾಗೆಲ್ಲ ಅಡ್ಡಾಡಿ ನಮಗೂ ಕೊರೊನಾ ಹಚ್ಚುತೀರಿ. ನೀವು ಮನೆಗೆ ಬರಬೇಡಿ ಎಂದು ಅವಾಚ್ಯ ಪದಗಳಿಂದ ನಿಂದಿಸುತ್ತಾರೆ' ಎಂದು ನರ್ಸ್ ಪಕ್ಕದಲ್ಲಿಯೇ ನಿಂತಿದ್ದ ಆಶಾ ಕಾರ್ಯಕರ್ತೆ ಶಿವನಮ್ಮ ಛಬ್ಬಿ ದನಿಗೂಡಿಸಿದರು.

ಊರಿನಲ್ಲಿ ಈಗ ಕೊರೊನಾ ನಿಯಂತ್ರಣದಲ್ಲಿದೆ ಎಂದು ಹೇಳಿದ ವೈದ್ಯ ಡಾ.ಬಿಂಜವಾಡಗಿ, 'ಈವರೆಗೆ ಆಸ್ಪತ್ರೆಯಿಂದ ಮಾಡಿರುವ ಕೊರೊನಾ ಪರೀಕ್ಷೆಯ (ಆರ್‌ಟಿಪಿಸಿಆರ್) ಸಂಖ್ಯೆಯ ನಿಖರ ಮಾಹಿತಿ ಇಲ್ಲ. ಕೊರೊನಾ ಪರೀಕ್ಷೆಗೆ ತೆರಳಿರುವ ಸಿಬ್ಬಂದಿ ದಾಖಲೆ ಪುಸ್ತಕ ಒಯ್ದಿದ್ದಾರೆ' ಎಂದರು.

'ಆಯುರ್ವೇದ ವೈದ್ಯರು ಅಲೋಪತಿ ಔಷಧಿ ನೀಡುತ್ತಿದ್ದಾರೆ, ಚಿಕಿತ್ಸೆಯ ಬಗ್ಗೆ ನಂಬಿಕೆ ಹೇಗೆ ಬರಬೇಕು' ಎಂದು ಗ್ರಾಮ ಪಂಚಾಯ್ತಿ ಸದಸ್ಯ ಚಂದ್ರಶೇಖರಯ್ಯ ಪೂಜಾರಿ ಪ್ರಶ್ನಿಸಿದರು.

ಕಂದಗಲ್‌ನಿಂದ ಇಳಕಲ್‌ಗೆ ತೆರಳುವ ಹಾದಿಯಲ್ಲಿ ಹಿರೇಕೊಡಗಲಿ ಗ್ರಾಮದ ಆಸ್ಪತ್ರೆ ಕಟ್ಟಡಕ್ಕೆ ಬೀಗ ಹಾಕಲಾಗಿತ್ತು. 'ಇಲ್ಲಿ ಐದಾರು ವರ್ಷವಾಯಿತು ವೈದ್ಯರೇ ಇಲ್ಲ. ಇಲ್ಲಿದ್ದ ನರ್ಸ್ ಎರಡು ತಿಂಗಳ ಹಿಂದೆ ಹುಬ್ಬಳ್ಳಿಗೆ ವರ್ಗಾವಣೆಯಾಗಿದ್ದಾರೆ. ಸದ್ಯ ಆಶಾ ಕಾರ್ಯಕರ್ತೆಯರೇ ಮೇಲುಸ್ತುವಾರಿ ವಹಿಸಿದ್ದಾರೆ' ಎಂದು ಪಂಚಾಯ್ತಿ ಬಿಲ್ ಕಲೆಕ್ಟರ್ ಹುಲಿಗೆಪ್ಪ ಹೇಳಿದರು.

ಹಿರೇಕೊಡಗಲಿ ಶಾಶ್ವತ ಮಲೇರಿಯಾ ಬಾಧಿತ ಪ್ರದೇಶ. ಆದರೆ ಅಲ್ಲಿನ ಆಸ್ಪತ್ರೆಗೆ ಬೀಗ ಜಡಿಯಲಾಗಿತ್ತು. 'ಚಿಕಿತ್ಸೆಗೆ ಪಕ್ಕದ ಗುಡೂರಿನ ಆರ್‌ಎಂಪಿ ವೈದ್ಯರ ಬಳಿ ಹೋಗುತ್ತೇವೆ' ಎಂದು ಹಿರಿಯರಾದ ಸಂಗಯ್ಯ ವಿರಕ್ತಮಠ ಹೇಳಿದರು.

ಹುನಗುಂದ ತಾಲ್ಲೂಕಿನ ಬಿಸಿಲದಿನ್ನಿಯಲ್ಲಿ ಇರುವ ಉಪ ಆರೋಗ್ಯ ಕೇಂದ್ರ ಕಟ್ಟಡದಲ್ಲಿ ಮುಳ್ಳು-ಕಂಟಿ ಬೆಳೆದಿವೆ. 'ಆಸ್ಪತ್ರೆ ಕಟ್ಟಿ 15 ವರ್ಷಗಳಾಗಿವೆ. ಆರಂಭದಲ್ಲಿ ಮೂರು ವರ್ಷ ವೈದ್ಯರು ಬರುತ್ತಿದ್ದರು. ಕೂಡಲಸಂಗಮದಿಂದ ವಾರಕ್ಕೆರಡು ಬಾರಿ ಕಿರಿಯ ಆರೋಗ್ಯ ಸಹಾಯಕಿ ಬರುತ್ತಿದ್ದರು. ಎರಡು ವರ್ಷಗಳಿಂದ ಅವರೂ ಬರುತ್ತಿಲ್ಲ' ಎಂದು ವಳಕಲದಿನ್ನಿ ಗ್ರಾಮದ ಮಂಗಳಪ್ಪ ಬಡಬಟ್ಟಿ ಹೇಳಿದರು.

ಕೂಡಲಸಂಗಮ ಅಂತರಾಷ್ಟ್ರೀಯ ಪ್ರವಾಸಿ ಕೇಂದ್ರ ಹಾಗೂ ನಾರಾಯಣಪುರ ಜಲಾಶಯದ ಹಿನ್ನೀರಿನ ಮುಳುಗಡೆ ಪ್ರದೇಶ. ಅಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 2011ರಲ್ಲಿ ಸರ್ಕಾರ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಿದೆ. ನಿಯಮಾವಳಿಯಂತೆ ಆರು ಮಂದಿ ತಜ್ಞ ವೈದ್ಯರು ಇರಬೇಕು. ಒಬ್ಬ ತಜ್ಞ ವೈದ್ಯನೂ ನೇಮಕವಾಗಿಲ್ಲ. ಬಿಎಎಂಎಸ್ ವೈದ್ಯೆಯನ್ನು ನಿಯೋಜಿಸಲಾಗಿದೆ.

ಹುನಗುಂದ ಹಾಗೂ ಇಳಕಲ್ ತಾಲ್ಲೂಕುಗಳಲ್ಲಿ ಒಟ್ಟು 59 ಉಪ ಆರೋಗ್ಯ ಕೇಂದ್ರ, 13 ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಎರಡು ಸಮುದಾಯ ಆರೋಗ್ಯ ಕೇಂದ್ರಗಳಿವೆ. ಎರಡು ಕಡೆ ಮಾತ್ರ ಎಂಬಿಬಿಎಸ್ ಮುಗಿಸಿರುವ ವೈದ್ಯರಿದ್ದಾರೆ.


ಹುನಗುಂದ ತಾಲ್ಲೂಕಿನ ಬಿಸಿಲಿದಿನ್ನಿಯಲ್ಲಿ ಹಾಳು ಬಿದ್ದಿರುವ ಉಪ ಆರೋಗ್ಯ ಕೇಂದ್ರ

ಬಾಗಲಕೋಟೆ ಜಿಲ್ಲಾ
ಕೋವಿಡ್ ಅಂಕಿ-ಅಂಶ

32,770 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
2,251 ▼	30,242 ▲	277 ▲

ದಿನದ ಏರಿಕೆ

ಹೊಸ ಪ್ರಕರಣ	193 ▲
ಗುಣಮುಖ	971 ▲
ಸಾವು	02

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಊರಾಗ ಇದ್ದ ಆಸ್ಪತ್ರೆನ ಯಾರೂ ದಾದ್ (ಕಾಳಜಿ) ಮಾಡ್ಲಿಲ್ರಿ. ಹಿಂಗಾಗಿ ಹಾಳು ಬಿದ್ದಾದ. ಈಗ ಜಡ್ಡು ಬಂದರೆ ಕೂಡಲಸಂಗಮ ಇಲ್ಲವೇ ಬಾಗಲಕೋಟೆಗೆ ಹೋಗಬೇಕ್ರಿ.
ಮಂಗಳಪ್ಪ ಬಡಬಟ್ಟಿ,
ವಳಕಲದಿನ್ನಿ ಗ್ರಾಮಸ್ಥ

ನಮ್ಮದು ಉಪವಿಭಾಗಾಧಿಕಾರಿ ಗ್ರೇಡ್ ಹುದ್ದೆ. ಆದರೆ ಹಳ್ಳಿಗಳಲ್ಲಿ ಯಾರೋ ರಾಜಕೀಯ ಪುಡಾರಿ ಬಂದು 'ಡಾಕ್ಟರ್ ಎಲ್ಲಿದ್ದಾನೆ ಅವಾ, ಕರೀಲೆ ಅವನ್ನ' ಎಂದು ಏಕವಚನದಲ್ಲಿ ಮಾತಾಡುತ್ತಾನೆ. ಗೌರವ ಇಲ್ಲದ ಕಡೆ ಕೆಲಸ ಮಾಡಲು ಬಹುತೇಕ ವೈದ್ಯರು ಬಯಸೊಲ್ಲ ಗ್ರಾಮೀಣ ಪ್ರದೇಶಗಳಲ್ಲಿ ಎಂಬಿಬಿಎಸ್ ವೈದ್ಯರ ಕೊರತೆ ಬಗ್ಗೆ ತಾಲ್ಲೂಕು ವೈದ್ಯಾಧಿಕಾರಿಯೊಬ್ಬರ ಅಭಿಮತ

'ಮುನ್ನಾಭಾಯಿ'ಗಳದ್ದೇ ಹಾವಳಿ

ಕೊರೊನಾ ದುರಿತ ಕಾಲದಲ್ಲಿ ಜಿಲ್ಲೆಯಲ್ಲಿ ಗ್ರಾಮೀಣರಿಗೆ ನಕಲಿ ವೈದ್ಯರೇ ಆಸರೆ. ಇಳಕಲ್ ತಾಲ್ಲೂಕಿನ ಗಡಿಭಾಗದ ಇಸ್ಲಾಂಪುರ, ಅಮರವಾಡಗಿ, ಚಿನ್ನಾಪುರ ಗ್ರಾಮಸ್ಥರು ಚಿಕಿತ್ಸೆಗೆ ಪಕ್ಕದ ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ಹಲಕವಾಡಗಿಗೆ ಹೋಗುತ್ತಾರೆ. ರಾಯಚೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಆರು ವರ್ಷ ಕೆಲಸ ಮಾಡಿರುವ ಬಿಎ ಪದವೀಧರ ಕ್ಲಿನಿಕ್ ತೆರೆದಿದ್ದಾರೆ!

'ಜ್ವರ, ಶೀತ ಇದ್ದರೆ ವೈದ್ಯ ಪ್ಯಾರಾಸಿಟಮಾಲ್, ಆಂಟಿಬಯಾಟಿಕ್ ಹಾಗೂ ವಿಟಮಿನ್ ಮಾತ್ರೆ ನೀಡುತ್ತಾರೆ. ಅಗತ್ಯವಿದ್ದರೆ ಸಲೈನ್ ಹಚ್ಚುತ್ತಾರೆ. ಪರಿಸ್ಥಿತಿ ಗಂಭೀರವಾದರೆ ಬಾಗಲಕೋಟೆಗೆ ಕರೆದೊಯ್ಯಲು ಹೇಳುತ್ತಾರೆ. ಒಬ್ಬರಿಗೆ ದಿನಕ್ಕೆ ₹1000ದಿಂದ 1500ರವರೆಗೆ ಬಿಲ್ ಮಾಡುತ್ತಾರೆ' ಎಂದು ಇಸ್ಲಾಂಪುರದ ಜಬೀರ್ ಹೇಳುತ್ತಾರೆ.

ಬಾಗಲಕೋಟೆ ತಾಲ್ಲೂಕಿನ ಫಾರ್ಮಾಸಿಸ್ಟ್ ಒಬ್ಬರು ಕೂಡಲಸಂಗಮ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ವೈದ್ಯರಾಗಿ ಮನೆಗೆ ಬಂದು ಚಿಕಿತ್ಸೆ ಕೊಡುತ್ತಾರೆ. ಹೆಚ್ಚಿನವರು ಈ ನಕಲಿಗಳ ಬಗ್ಗೆ ಮೆಚ್ಚುಗೆ ಮಾತನ್ನೇ ಆಡುತ್ತಾರೆ.

ಸಕ್ರಿಯ ರಾಜಕಾರಣಕ್ಕೆ ಶಶಿಕಲಾ ಪ್ರವೇಶ?

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿವಂಗತ ಜೆ. ಜಯಲಲಿತಾ ಅವರ ದೀರ್ಘಕಾಲದ ಒಡನಾಡಿ ವಿ.ಕೆ ಶಶಿಕಲಾ ಅವರು ಸಕ್ರಿಯ ರಾಜಕಾರಣಕ್ಕೆ ಬರುವ ಅಭಿಲಾಷೆ ವ್ಯಕ್ತಪಡಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಕೆ ಪಳನಿಸ್ವಾಮಿ ಮತ್ತು ಪನ್ನೀರಸೆಲ್ವಂ ನಡುವಿನ ಬಣ ರಾಜಕೀಯದಿಂದ ಕಂಗೆಟ್ಟಿರುವ ಎಐಎಡಿಎಂಕೆ ಅನ್ನು ಸರಿ ದಾರಿಗೆ ತರುವ ಸಲುವಾಗಿ ಅವರು ಮರಳಿ ರಾಜಕೀಯ ಪ್ರವೇಶಿಸುವ ಇಚ್ಛೆ ವ್ಯಕ್ತಪಡಿಸಿದ್ದಾರೆ.

'ಪಳನಿಸ್ವಾಮಿ ಮತ್ತು ಪನ್ನೀರ್‌ಸೆಲ್ವಂ ನಡುವಿನ ಬಹಿರಂಗ ಕಿತ್ತಾಟದಿಂದ ನಾನು ಬೇಸರಗೊಂಡಿದ್ದೇನೆ. ಎಐಎಡಿಎಂಕೆಯನ್ನು ಸರಿದಾರಿಗೆ ತರಲು ರಾಜಕೀಯಕ್ಕೆ ಬರುತ್ತೇನೆ. ಕೋವಿಡ್ ಸಾಂಕ್ರಾಮಿಕ ಅಂತ್ಯವಾಗುತ್ತಲೇ ನಾನು ಬರುತ್ತೇನೆ,' ಎಂದು ಶಶಿಕಲಾ ಅವರು ತಮ್ಮ ಬೆಂಬಲಿಗರೊಂದಿಗೆ ಮಾತನಾಡಿರುವ ದೂರವಾಣಿ ಸಂಭಾಷಣೆಯ ಆಡಿಯೊ ಮಾಧ್ಯಮಗಳ ಮೂಲಕ ಬಹಿರಂಗವಾಗಿದೆ. ಬೆಂಬಲಿಗ ಲಾರೆನ್ಸ್ ಅವರೊಂದಿಗೆ ಶಶಿಕಲಾ ಮಾತನಾಡಿದ್ದಾರೆ.

'ಒಂದೊಳ್ಳೆ ನಿರ್ಧಾರವನ್ನು ನಾನು ಶೀಘ್ರದಲ್ಲೇ ಪ್ರಕಟಿಸುತ್ತೇನೆ. ನಾನು ಬರುವುದು ನಿಶ್ಚಿತ. ಅವರು ಬಹಿರಂಗವಾಗಿ ಕಿತ್ತಾಡುತ್ತಿದ್ದಾರೆ. ಇದು ನನಗೆ ನೋವುಂಟುಮಾಡಿದೆ. ಪಕ್ಷಕ್ಕಾಗಿ ನಾವು ತ್ಯಾಗ ಮಾಡಿದ್ದೇವೆ. ಆದರೆ, ಈಗ ಪಕ್ಷ ಹಾಳಾಗುತ್ತಿರುವುದನ್ನು ನೋಡಿಕೊಂಡು ಸುಮ್ಮನಿರಲಾಗುವುದಿಲ್ಲ,' ಎಂದು ತಂಜಾವೂರಿನ ಸುರೇಶ್ ಎಂಬುವರೊಂದಿಗೆ ಮಾತನಾಡಿರುವ ಮತ್ತೊಂದು ದೂರವಾಣಿ ಸಂಭಾಷಣೆಯೂ ಬಹಿರಂಗವಾಗಿದೆ.

ಸಂಕ್ಷಿಪ್ತ ಸುದ್ದಿ

ಚೋಕ್ಸಿ ಹಸ್ತಾಂತರ: ವಿಮಾನ ಮೂಲಕ ದಾಖಲೆ ರವಾನೆ

ನವದೆಹಲಿ (ಪಿಟಿಐ): ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ₹ 13,500 ಕೋಟಿ ವಂಚಿಸಿರುವ ಪ್ರಕರಣದಲ್ಲಿ ದೇಶಭ್ರಷ್ಟರಾಗಿರುವ ವಜ್ರದ ವ್ಯಾಪಾರಿ ಮೆಹುಲ್ ಚೋಕ್ಸಿಯ ಗಡಿಪಾರಿಗೆ ಸಂಬಂಧಪಟ್ಟ ಮಾಹಿತಿ ಮತ್ತು ದಾಖಲೆಗಳನ್ನು ಹೊತ್ತ ವಿಮಾನವನ್ನು ಡೊಮಿನಿಕಾಕ್ಕೆ ಭಾರತ ಕಳುಹಿಸಿದೆ.

ಕತಾರ್ ಏರ್‌ವೇಸ್‌ಗೆ ಸೇರಿದ ಈ ವಿಮಾನವು ಡೊಮಿನಿಕಾದ ಡಗ್ಲಾಸ್-ಚಾರ್ಲ್ಸ್ ವಿಮಾನ ನಿಲ್ದಾಣಕ್ಕೆ ಬಂದಿಳಿದಿದೆ ಎಂದು ಆ್ಯಂಟಿಗಾ–ಬಾರ್ಬುಡ ಪ್ರಧಾನಿ ಗಾಸ್ಟನ್ ಬ್ರೌನ್ ಭಾನುವಾರ ತಿಳಿಸಿದ್ದಾರೆ.

'ಭಾರತ ಸರ್ಕಾರ ಚೋಕ್ಸಿ ಗಡಿಪಾರಿಗೆ ಸಂಬಂಧಿಸಿದ ದಾಖಲೆಗಳನ್ನು ವಿಮಾನದ ಮೂಲಕ ಕಳುಹಿಸಿಕೊಟ್ಟಿದೆ' ಎಂದು ಅವರು ರೇಡಿಯೊ ಕಾರ್ಯಕ್ರಮದಲ್ಲಿ ತಿಳಿಸಿದ್ದಾರೆ. ಆದರೆ ಭಾರತದ ಅಧಿಕಾರಿಗಳು ಈ ಬಗ್ಗೆ ಯಾವುದೇ ಹೇಳಿಕೆ ನೀಡಿಲ್ಲ.

ಮುಂಗಾರು: ಕೇರಳಕ್ಕೆ ಜೂನ್ 3ರ ವೇಳೆಗೆ ಪ್ರವೇಶಿಸುವ ನಿರೀಕ್ಷೆ

ನವದೆಹಲಿ (ಪಿಟಿಐ): ಕೇರಳದಲ್ಲಿ ಈ ಬಾರಿ ಮುಂಗಾರು ಮಾರುತಗಳ ಪ್ರವೇಶ ಎರಡು ದಿನ ವಿಳಂಬವಾಗುವ ನಿರೀಕ್ಷೆಯಿದೆ. ಜೂನ್ 3ರ ವೇಳೆಗೆ ಮುಂಗಾರು ಕೇರಳವನ್ನು ಪ್ರವೇಶಿಸಬಹುದು ಎಂದು ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ತಿಳಿಸಿದೆ.

ಐಎಂಡಿಯ ಪ್ರಧಾನ ನಿರ್ದೇಶಕ ಎಂ.ಮೊಹಾಪಾತ್ರ ಅವರು, ಕರ್ನಾಟಕದ ಕರಾವಳಿ ಭಾಗದಲ್ಲಿ ಸದ್ಯ ಜೋರು ಗಾಳಿಯ ಚಲನೆ ಇದೆ. ಇದರಿಂದಾಗಿ ನೈರುತ್ಯ ಮಾರುತಗಳ ಪ್ರವೇಶ ವಿಳಂಬವಾಗುತ್ತಿದೆ ಎಂದು ವಿವರಿಸಿದ್ದಾರೆ. ಜೂನ್ 1ರಿಂದ ನೈರುತ್ಯ ಮಾರುತಗಳ ವೇಗ ತೀವ್ರಗೊಳ್ಳಬಹುದು. ಪರಿಣಾಮ ಕೇರಳದಲ್ಲಿ ಮಳೆಯಾಗಬಹುದು. ಈ ಕಾರಣದಿಂದ ಜೂನ್ 3ರ ವೇಳೆಗೆ ಮುಂಗಾರು ಕೇರಳವನ್ನು ಪ್ರವೇಶಿಸಬಹುದು ಎಂದು ಅಂದಾಜಿಸಲಾಗಿದೆ ಎಂದರು.

ಮಾಹಿತಿ ಅಳವಡಿಸಿದ ಫೇಸ್‌ಬುಕ್, ಗೂಗಲ್

ನವದೆಹಲಿ: ಫೇಸ್‌ಬುಕ್ ಹಾಗೂ ಗೂಗಲ್ ಕಂಪನಿಗಳು ಹೊಸ ಐಟಿ ನಿಯಮಗಳ ಅನುಸಾರ ಕುಂದುಕೊರತೆ ಅಧಿಕಾರಿಗಳನ್ನು ನೇಮಕ ಮಾಡಿರುವ ಕುರಿತ ವಿವರಗಳನ್ನು ತಮ್ಮ ವೆಬ್‌ಸೈಟ್‌ನಲ್ಲಿ ಹಂಚಿಕೊಂಡಿವೆ.

ಗೂಗಲ್ ಸಂಸ್ಥೆ ಜೋ ಗ್ರೇರ್ ಎಂಬುವವರನ್ನು ಕುಂದುಕೊರತೆ ಅಧಿಕಾರಿಯನ್ನಾಗಿ ನೇಮಕ ಮಾಡಿದೆ. ಅಮೆರಿಕದ ಮೌಂಟೇನ್ ವ್ಯೂನಲ್ಲಿರುವ ಅವರ ವಿಳಾಸವನ್ನು ಕಂಪನಿಯ 'ಕಾಂಟ್ಯಾಕ್ಟ್ ಅಸ್' ಪುಟದಲ್ಲಿ ಪ್ರಕಟಿಸಲಾಗಿದೆ. ಯೂಟ್ಯೂಬ್‌ಗೆ ಸಂಬಂಧಿಸಿದ ಕುಂದುಕೊರತೆ ಸಲ್ಲಿಸುವ ವಿಧಾನದ ವಿವರಗಳನ್ನು ಸಹ ನೀಡಲಾಗಿದೆ.

ವಾಟ್ಸ್‌ಆ್ಯಪ್ ಸಹ ಅನುಸರಣಾ ವರದಿಯನ್ನು ಅಪ್‌ಲೋಡ್ ಮಾಡಿದೆ. ಟ್ವಿಟರ್ ಮಾತ್ರ ಈ ಹೊಸ ನಿಯಮಗಳನ್ನು ಅನುಸರಣೆ ಮಾಡಬೇಕಿದೆ ಎಂದು ಐಟಿ ಸಚಿವಾಲಯ ತಿಳಿಸಿದೆ.

ಜಮ್ಮು–ಕಾಶ್ಮೀರದಲ್ಲಿ ಮತ್ತೆ ಯಥಾಸ್ಥಿತಿ ತನ್ನಿ: ಪಾಕಿಸ್ತಾನ

ಇಸ್ಲಾಮಾಬಾದ್(ಪಿಟಿಐ): ಜಮ್ಮು ಮತ್ತು ಕಾಶ್ಮೀರಕ್ಕೆ 2019ರ ಆಗಸ್ಟ್ 5ಕ್ಕೂ ಮೊದಲಿನ ಸ್ಥಾನಮಾನವನ್ನು ಮತ್ತೆ ನೀಡಿದರೆ ಭಾರತದ ಜತೆ ಮಾತುಕತೆ ನಡೆಸಲಾಗುವುದು ಎಂದು ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಹೇಳಿದ್ದಾರೆ.

'ಜಮ್ಮು ಮತ್ತು ಕಾಶ್ಮೀರ ಕುರಿತು ಭಾರತ ತನ್ನ ನಿರ್ಧಾರವನ್ನು ವಾಪಸ್ ಪಡೆಯದಿದ್ದರೆ ಮಾತುಕತೆಗೆ ಅರ್ಥವಿಲ್ಲ' ಎಂದು ಹೇಳಿದ್ದಾರೆ.

2019ರ ಆಗಸ್ಟ್ 5ರಂದು ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿ ಅಡಿಯಲ್ಲಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿದ್ದ ಕೇಂದ್ರ ಸರ್ಕಾರ, ರಾಜ್ಯವನ್ನು ಜಮ್ಮು-ಕಾಶ್ಮೀರ ಮತ್ತು ಲಡಾಖ್ ಎಂದು ಎರಡು ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶಗಳಾಗಿ ವಿಂಗಡನೆ ಮಾಡಲಾಗಿತ್ತು.

ಪ್ರೇಯಸಿ ಕ್ಯಾರಿ ಜತೆ ಬ್ರಿಟನ್ ಪ್ರಧಾನಿ ಜಾನ್ಸನ್ ವಿವಾಹ



ಲಂಡನ್(ಪಿಟಿಐ, ರಾಯಿಟರ್ಸ್): ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ತಮ್ಮ ಪ್ರೇಯಸಿ ಕ್ಯಾರಿ ಸೈಮಂಡ್ಸ್ ಅವರನ್ನು ಶನಿವಾರ ಲಂಡನ್‌ನ ರೋಮನ್ ಕ್ಯಾಥೋಲಿಕ್ ವೆಸ್ಟ್‌ಮಿನಿಸ್ಟರ್ ಕ್ಯಾಥಡ್ರಲ್ ಚರ್ಚ್‌ನಲ್ಲಿ ವಿವಾಹವಾಗಿದ್ದಾರೆ.

ಆಪ್ತ ಸ್ನೇಹಿತರು ಮತ್ತು ಕುಟುಂಬದ ಸದಸ್ಯರು ಮಾತ್ರ ಈ ಖಾಸಗಿ ವಿವಾಹ ಸಮಾರಂಭದಲ್ಲಿ ಭಾಗಿಯಾಗಿದ್ದರು.

ಮದುವೆ ಕಾರ್ಯಕ್ರಮದ ಬಗ್ಗೆ ಮುಂಚಿತವಾಗಿ ಘೋಷಿಸಿರಲಿಲ್ಲ. ಅತಿಥಿಗಳನ್ನು ಸಹ ಕೊನೆಯ ಕ್ಷಣದಲ್ಲಿ ಆಹ್ವಾನಿಸಲಾಯಿತು. ಜಾನ್ಸನ್ ಅವರ ಕಚೇರಿಯ ಹಿರಿಯ ಅಧಿಕಾರಿಗಳಿಗೂ ಮದುವೆಯ ಬಗ್ಗೆ ಮಾಹಿತಿ ಇರಲಿಲ್ಲ ಎಂದು ಹೇಳಲಾಗಿದೆ.

ಕೋವಿಡ್–19 ಕಾರಣಕ್ಕೆ ಬ್ರಿಟನ್‌ನಲ್ಲಿ ನಿರ್ಬಂಧಗಳನ್ನು ವಿಧಿಸಲಾಗಿದ್ದು, ಮದುವೆಯಲ್ಲಿ 30 ಜನರಿಗೆ ಮಾತ್ರ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

'ಪ್ರಧಾನಿ ಮತ್ತು ಸೈಮಂಡ್ಸ್ ಅವರು ಶನಿವಾರ ಮಧ್ಯಾಹ್ನ ನಡೆದ ಸಣ್ಣ ಸಮಾರಂಭದಲ್ಲಿ ವಿವಾಹವಾಗಿದ್ದಾರೆ' ಎಂದು ವೆಸ್ಟ್‌ಮಿನಿಸ್ಟರ್ ಕ್ಯಾಥಡ್ರಲ್ ವಕ್ತಾರರು ತಿಳಿಸಿದ್ದಾರೆ.

33 ವರ್ಷದ ಸೈಮಂಡ್ಸ್ ಅವರಿಗೆ ಇದು ಮೊದಲ ವಿವಾಹ. ಆದರೆ, 56 ವರ್ಷದ ಜಾನ್ಸನ್ ಅವರಿಗೆ ಇದು ಮೂರನೇ ವಿವಾಹ.

ಜಾನ್ಸನ್ ಮತ್ತು ಸೈಮಂಡ್ಸ್ ಅವರು 2019ರಿಂದ ಡೌನಿಂಗ್ ಸ್ಟ್ರೀಟ್‌ನಲ್ಲಿ ಸಹಜೀವನ ನಡೆಸುತ್ತಿದ್ದರು. ಕಳೆದ ವರ್ಷ ಫೆಬ್ರುವರಿಯಲ್ಲಿ ಅವರಿಬ್ಬರೂ ನಿಶ್ಚಿತಾರ್ಥದ ಕುರಿತು ಘೋಷಿಸಿದ್ದು, ಮಗುವಿನ ನಿರೀಕ್ಷೆಯಲ್ಲಿದ್ದೇವೆ ಎಂದು ಹೇಳಿದ್ದರು. ಅವರಿಗೆ ಏಪ್ರಿಲ್ 2020ರಲ್ಲಿ ಪುತ್ರ ವಿಲ್ಫ್ರೆಡ್ ಲಾರಿ ನಿಕೊಲಾಸ್ ಜಾನ್ಸನ್‌ನ ಜನನವಾಗಿತ್ತು.

ಭಿನ್ನಮತ ಇಲ್ಲ: ಮಿಥಾಲಿ ರಾಜ್

ನವದೆಹಲಿ (ಪಿಟಿಐ): ದೇಶಕ್ಕಾಗಿ ಆಡುವಾಗ ವೈಯಕ್ತಿಕ ಭಿನ್ನಾಭಿಪ್ರಾಯಗಳಿಗೆ ಮಹತ್ವವಿಲ್ಲ. ತಂಡದ ಗೆಲುವಿಗಾಗಿ ಮುನ್ನಡೆಯುತ್ತೇವೆ ಎಂದು ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಮಿಥಾಲಿ ರಾಜ್ ಹೇಳಿದ್ದಾರೆ.


ಮಿಥಾಲಿ ರಾಜ್

ಇದರೊಂದಿಗೆ ಮಹಿಳಾ ತಂಡಕ್ಕೆ ಈಚೆಗೆ ಆಯ್ಕೆಯಾದ ರಮೇಶ್ ಪೊವಾರ್ ಮತ್ತು ತಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ ಎಂಬುದನ್ನೂ ಸ್ಪಷ್ಟಪಡಿಸಿದ್ದಾರೆ. ಹೋದ ವರ್ಷ ಪೊವಾರ್ ತಂಡದ ಕೋಚ್ ಆಗಿದ್ದ ಸಂದರ್ಭದಲ್ಲಿ ಮಿಥಾಲಿ ಅವರೊಂದಿಗೆ ಭಿನ್ನಾಭಿಪ್ರಾಯ ತಲೆದೋರಿತ್ತು. ಅದರಿಂದಾಗಿ ರಮೇಶ್ ಕೋಚ್ ಸ್ಥಾನ ಕಳೆದುಕೊಂಡಿದ್ದರು.

'ಬಹಳ ವರ್ಷಗಳಿಂದ ತಂಡದಲ್ಲಿ ಆಡುತ್ತಿದ್ದೇನೆ. ಯಾವತ್ತೂ ನನ್ನ ಅಹಂಕಾರ ತೋರಿಸಿಲ್ಲ. ವೈಯಕ್ತಿಕ ಇಷ್ಟಾನಿಷ್ಟಗಳು ಏನೇ ಇದ್ದರೂ ತಂಡದ ಮೇಲೆ ಅದರ ಪರಿಣಾಮವಾಗಲು ಬಿಟ್ಟಿಲ್ಲ' ಎಂದು ಮಿಥಾಲಿ ರಾಜ್ ಹೇಳಿದ್ದಾರೆ.

ಫ್ರೆಂಚ್ ಓಪನ್: ಪ್ಯಾಬ್ಲೊ ಆಂಡೂಜಾರ್, ಕ್ವಿಟೋವಾ, ಫಾಗ್ನಿನಿಗೆ ಗೆಲುವು; ಕರ್ಬರ್‌ಗೆ ನಿರಾಸೆ

ಗೆದ್ದ ಒಸಾಕ; ಬಿದ್ದ ಥೀಮ್

ಪ್ಯಾರಿಸ್ (ರಾಯಿಟರ್ಸ್): ಎದುರಾಳಿಯನ್ನು ನೇರ ಸೆಟ್‌ಗಳಿಂದ ಮಣಿಸಿದ ಜಪಾನ್‌ನ ನವೊಮಿ ಒಸಾಕ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದಾರೆ.

ಭಾನುವಾರ ನಡೆದ ಹಣಾಹಣಿಯಲ್ಲಿ ಒಸಾಕ ರೊಮೇನಿಯಾದ ಪ್ಯಾಟ್ರಿಸಿಯಾ ಮರಿಯಾ ಟಿಗ್ ವಿರುದ್ಧ 6-4, 7-6(4)ರಲ್ಲಿ ಜಯ ಗಳಿಸಿದರು.

ಪುರುಷರ ವಿಭಾಗದಲ್ಲಿ ಎರಡು ಬಾರಿಯ ರನ್ನರ್ ಅಪ್ ಆಸ್ಟ್ರಿಯಾದ ಡೊಮಿಮಿಕ್ ಥೀಮ್ ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದರು. ಸ್ಪೇನ್‌ನ ಪ್ಯಾಬ್ಲೊ ಆಂಡೂಜಾರ್ 4-6, 5-7, 6-3, 6-4, 6-4ರಲ್ಲಿ ಥೀಮ್ ವಿರುದ್ಧ ಜಯ ಗಳಿಸಿದರು.

ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ 23 ವರ್ಷದ ಒಸಾಕ ಅವರು ಫಿಲಿಪ್ ಚಾಟ್ರಿಯರ್ ಕೋರ್ಟ್‌ನಲ್ಲಿ ಅಮೋಘ ಆಟದ ಮೂಲಕ ಮಿಂಚಿದರು. 63ನೇ ಕ್ರಮಾಂಕದ ಟಿಗ್ ವಿರುದ್ಧ ಮೊದಲ ಸೆಟ್‌ನಲ್ಲಿ 5-2ರ ಮುನ್ನಡೆ ಸಾಧಿಸಿದರು. ಕೊನೆಯಲ್ಲಿ ರೊಮೇನಿಯಾ ಆಟಗಾರ್ತಿ ತಿರುಗೇಟು ನೀಡಿದರೂ ಜಯ ಗಳಿಸಲಾಗಲಿಲ್ಲ.

ಎರಡನೇ ಸೆಟ್‌ನಲ್ಲಿ ಟಿಗ್ ಪ್ರಬಲ ಪೈಪೋಟಿ ನೀಡಿದರು. ಬ್ರೇಕ್ ಪಾಯಿಂಟ್ ಮತ್ತು ಮ್ಯಾಚ್ ಪಾಯಿಂಟ್ ಉಳಿಸಿಕೊಂಡ ಟಿಗ್ ಸೆಟ್ ಅನ್ನು ಟೈಬ್ರೇಕರ್‌ನತ್ತ ಕೊಂಡೊಯ್ದರು. ಆದರೆ ಕೊನೆಯಲ್ಲಿ ಒಸಾಕ ಗೆಲುವು ತಮ್ಮದಾಗಿಸಿಕೊಂಡರು. ಮತ್ತೊಂದು ಪಂದ್ಯದಲ್ಲಿ ರೊಮೇನಿಯಾದ ಅನಾ ಬೊಗ್ದಾನ್ 6-1, 6-3ರಲ್ಲಿ ಇಟಲಿಯ ಎಲಿಜಬೆತಾ ಕೊಸಿಯಾರೆಟೊ ವಿರುದ್ಧ ಜಯ ಗಳಿಸಿದರು.


ಚೆಂಡು ರಿಟರ್ನ್ ಮಾಡಲು ಮುಂದಾದ ನವೊಮಿ ಒಸಾಕ –ರಾಯಿಟರ್ಸ್ ಚಿತ್ರ


ಪ್ಯಾಬ್ಲೊ ಆಂಡೂಜಾರ್ –ಎಎಫ್‌ಪಿ ಚಿತ್ರ

ಏಂಜೆಲಿಕ್ ಕರ್ಬರ್‌ಗೆ ನಿರಾಸೆ: ಈ ಹಿಂದೆ ವಿಶ್ವ ಕ್ರಮಾಂಕದಲ್ಲಿ ಮೊದಲ ಸ್ಥಾನದಲ್ಲಿದ್ದ ಜರ್ಮನಿಯ ಏಂಜಲಿಕ್ ಕರ್ಬರ್ ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದರು. ಅರ್ಹತಾ ಸುತ್ತಿನಲ್ಲಿ ಆಡಿ ಬಂದಿದ್ದ ಉಕ್ರೇನ್‌ನ ಅನ್ನೆಲಿನಾ ಕಲಿನಿನಾ 6-2, 6-4ರಲ್ಲಿ ಕರ್ಬರ್ ವಿರುದ್ಧ ಜಯ ಗಳಿಸಿದರು. ಕರ್ಬರ್ ಮೂರು ಗ್ರ್ಯಾನ್‌ಸ್ಲಾಂ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದಿದ್ದಾರೆ. ಆದರೆ ಫ್ರೆಂಚ್ ಓಪನ್‌ನಲ್ಲಿ ಒಮ್ಮೆಯೂ ಕ್ವಾರ್ಟರ್ ಫೈನಲ್ ಪ್ರವೇಶಿಸುವುದಕ್ಕೂ ಸಾಧ್ಯವಾಗಲಿಲ್ಲ. ಈ ಹಿಂದೆ ಆರು ಬಾರಿ ಟೂರ್ನಿಯಲ್ಲಿ ಆಡಿದ್ದು ಐದು ಬಾರಿ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದಾರೆ.

ಇತರ ಫಲಿತಾಂಶಗಳು

ಫಾಬಿಯೊ ಫಾಗ್ನಿನಿಗೆ ಗ್ರೆಗರಿ ಬರರೆ ವಿರುದ್ಧ 6-4, 6-1, 6-4ರಲ್ಲಿ ಜಯ; ಬೌಟಿಸ್ಟಾ ಅಗುಟ್‌ಗೆ ವಿಲೇಲ ಮಾರ್ಟಿನೆಜ್ ಎದುರು 6-4, 6-4, 6-2ರಲ್ಲಿ ಗೆಲುವು; ಪೆಟ್ರಾ ಕ್ವಿಟೋವಾಗೆ ಗ್ರೀಟ್ ಮಿನೆನ್ ಎದುರು 6-7 (3/7), 7-6(7/5), 6-1ರಲ್ಲಿ ಜಯ. ಅರಿನಾ ಸಬಲೆಂಕಾಗೆ ಅನಾ ಕೊಂಚು ವಿರುದ್ಧ 6-4, 6-3ರಲ್ಲಿ ಎಲುವು; ಕೀ ನಿಶಿಕೋರಿಗೆ ಅಲೆಸಾಂಡ್ರೊ ವಿರುದ್ಧ 6-4, 6-7 (4/7), 6-3, 4-6, 6-4ರಲ್ಲಿ ಜಯ.

ಐಪಿಎಲ್–ಸಿಪಿಎಲ್: ಹೊಂದಾಣಿಕೆ ಕಸರತ್ತು

ನವದೆಹಲಿ (ಪಿಟಿಐ): ಸೆಪ್ಟೆಂಬರ್‌ನಲ್ಲಿ ನಡೆಸಲು ಉದ್ದೇಶಿಸಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ವೇಳಾಪಟ್ಟಿಗೆ ಅಡೆತಡೆಯಾಗದಂತೆ ಕೆರಿಬಿಯನ್ ಪ್ರೀಮಿಯರ್ ಲೀಗ್ (ಸಿಪಿಎಲ್) ವೇಳಾಪಟ್ಟಿ ರೂಪಿಸಲು ಕೋರಿ ಬಿಸಿಸಿಐ ವೆಸ್ಟ್ ಇಂಡೀಸ್ ಮಂಡಳಿಯೊಂದಿಗೆ ಮಾತುಕತೆ ನಡೆಸಿದೆ.

ಐಪಿಎಲ್ ಟೂರ್ನಿಯನ್ನು ಕೆಲವು ಆಟಗಾರರಿಗೆ ಕೋವಿಡ್ ಸೋಂಕು ತಗುಲಿದ್ದ ಕಾರಣಕ್ಕಾಗಿ ಅರ್ಧಕ್ಕೆ ಸ್ಥಗಿತಗೊಳಿಸಲಾಗಿತ್ತು. ಇನ್ನುಳಿದಿರುವ 31 ಪಂದ್ಯಗಳನ್ನು ಸೆಪ್ಟೆಂಬರ್‌ನಲ್ಲಿ ಯುಎಇಯಲ್ಲಿ ನಡೆಸಲು ಬಿಸಿಸಿಐ ನಿರ್ಧರಿಸಿದೆ.

ಸಿಪಿಎಲ್ ಆಗಸ್ಟ್ 28ರಿಂದ ಸೆಪ್ಟೆಂಬರ್ 19ರವರೆಗೆ ಆಯೋಜನೆಗೊಳ್ಳಲಿದೆ. ಅದರೆ ಐಪಿಎಲ್ ಟೂರ್ನಿಯನ್ನು ಸೆ. 18ರಿಂದ ಅ.10ರವರೆಗೆ ನಡೆಸುವ ಸಾಧ್ಯತೆ ಇದೆ.

ಆದ್ದರಿಂದ ಸಿಪಿಎಲ್‌ನಲ್ಲಿ ಆಡುವ ವಿಂಡೀಸ್ ಮತ್ತಿತರ ದೇಶಗಳ ಆಟಗಾರರು ಐಪಿಎಲ್‌ನಲ್ಲಿಯೂ ಭಾಗ ವಹಿಸಲು ಅನುವಾಗುವಂತೆ ವೇಳಾಪಟ್ಟಿಯನ್ನು ಮರುರಚಿಸಲು ಬಿಸಿಸಿಐ, ವಿಂಡೀಸ್ ಮಂಡಳಿಯನ್ನು ಕೋರಿದೆ. ಈ ವಿಷಯದಲ್ಲಿ ಒಮ್ಮತಕ್ಕೆ ಬರುವಲ್ಲಿ ಉಭಯ ಮಂಡಳಿಗಳಿಗೆ ಸಾಧ್ಯವಾಗಿಲ್ಲವೆನ್ನಲಾಗಿದೆ.

'ಸಿಪಿಎಲ್ ವೇಳಾಪಟ್ಟಿಯನ್ನು ಬದಲಾಯಿಸಿ, ಐಪಿಎಲ್ ಆರಂಭಕ್ಕೂ 10ದಿನಗಳ ಮುನ್ನ ಮುಗಿಯುವಂತೆ ರೂಪಿಸಿದರೆ ಅನುಕೂಲವಾಗುತ್ತದೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಹಿಂದೆ ಸರಿದ ಕಮಿನ್ಸ್

ಸಿಡ್ನಿ (ಪಿಟಿಐ): ಐಪಿಎಲ್ ಟೂರ್ನಿಯಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಪ್ಯಾಟ್ ಕಮಿನ್ಸ್ ಹಿಂದೆ ಸರಿಯಲಿದ್ದಾರೆ. ಯುಎಇಯಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಬಯೋಬಬಲ್ ವ್ಯವಸ್ಥೆ ಮಾನಸಿಕ ಒತ್ತಡವನ್ನು ಹೆಚ್ಚಿಸುವ ಕಾರಣ ಅವರು ಈ ನಿರ್ಧಾರ ಕೈಗೊಂಡಿದ್ದಾರೆನ್ನಲಾಗಿದೆ. ಇದೇ ಕಾರಣದಿಂದ ಆಸ್ಟ್ರೇಲಿಯಾದ ಉಳಿದ ಆಟಗಾರರು ಕೂಡ ಹಿಂದೆ ಸರಿಯುವ ಸಾಧ್ಯತೆ ಇದೆ. 'ಐಪಿಎಲ್‌ನಲ್ಲಿ ದುಬಾರಿ ಮೌಲ್ಯ ಗಳಿಸಿರುವ ಆಟಗಾರ ಕಮಿನ್ಸ್ ಟೂರ್ನಿಯ ಮುಂದುವರಿದ ಭಾಗದಲ್ಲಿ ಕಣಕ್ಕಿಳಿಯುವುದಿಲ್ಲವೆಂದು ಖಚಿತಪಡಿಸಿದ್ದಾರೆ' ಎಂದು ಸಿಡ್ನಿ ಮಾರ್ನಿಂಗ್ ಹೆರಾಲ್ಡ್ ವರದಿ ಮಾಡಿದೆ.

ಬೆಳ್ಳಿ ಪದಕಕ್ಕೆ ಸಮಾಧಾನಪಟ್ಟುಕೊಂಡ ಮೇರಿ ಕೋಮ್

ಬಾಕ್ಸಿಂಗ್: ಪೂಜಾಗೆ ಚಿನ್ನ

ದುಬೈ (ಪಿಟಿಐ): ಹಾಲಿ ಚಾಂಪಿಯನ್ ಪೂಜಾ ರಾಣಿ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 75 ಕೆಜಿ ವಿಭಾಗದಲ್ಲಿ ಭಾನುವಾರ ಚಿನ್ನ ಗೆದ್ದುಕೊಂಡರು. 51 ಕೆಜಿ ವಿಭಾಗದಲ್ಲಿ ಮೇರಿ ಕೋಮ್ ಬೆಳ್ಳಿಗೆ ಸಮಾಧಾನಪಟ್ಟುಕೊಂಡರು.

ಮೊದಲೆರಡು ಸುತ್ತುಗಳಲ್ಲಿ ಕ್ರಮವಾಗಿ ಬೈ ಮತ್ತು ವಾಕ್ ಓವರ್ ಲಭಿಸಿದ ಪೂಜಾ ಚಾಂಪಿಯನ್‌ಷಿಪ್‌ನಲ್ಲಿ ನೇರವಾಗಿ ಫೈನಲ್ ಪ್ರವೇಶಿಸಿದ್ದರು. ಪ್ರಶಸ್ತಿ ಸುತ್ತಿನ ಬೌಟ್‌ನಲ್ಲಿ ಅವರು ಉಜ್ಬೆಕಿಸ್ತಾನದ ಮಾಲೂದಾ ಮೌಲೊನೊವಾ ಎದುರು ಏಕಪಕ್ಷೀಯ ಜಯ ಸಾಧಿಸಿದರು.

ಆದರೆ ಆರು ಬಾರಿಯ ವಿಶ್ವ ಚಾಂಪಿಯನ್ ಮೇರಿ ಕೋಮ್ ಕಜಕಸ್ತಾನದ ನಜೀಮ್ ಕೈಜೈಬೇ ಅವರಿಗೆ 2–3ರಲ್ಲಿ ಮಣಿದರು.

64 ಕೆಜಿ ವಿಭಾಗದಲ್ಲಿ ಲಾಲ್‌ಬುವಾತ್ಸಾಹಿ ಮತ್ತು 81+ ಕೆಜಿ ವಿಭಾಗದಲ್ಲಿ ಅನುಪಮಾ ಕೂಡ ಬೆಳ್ಳಿ ಪದಕ ಗೆದ್ದುಕೊಂಡರು.

ಫೈನಲ್‌ನಲ್ಲಿ ಲಾಲ್‌ಬುವಾತ್ಸಾಹಿ 2–3ರಲ್ಲಿ ಕಜಕಸ್ತಾನದ ಮಿಲಾನಾ ಸಫ್ರೊನೊವಾ ಎದುರು ಸೋತರೆ ಅನುಪಮಾ ಮಾಜಿ ವಿಶ್ವ ಚಾಂಪಿಯನ್ ಕಜಕಸ್ತಾನದ ಲಜತ್ ಕುಂಗೆಬಯೆವಾಗೆ 2–3ರಲ್ಲಿ ಮಣಿದರು.


ಪೂಜಾ ರಾಣಿ ಗೆಲುವಿನ ಸಂಭ್ರಮ –ಪಿಟಿಐ ಚಿತ್ರ


ಫವಾದ್ ಮಿರ್ಜಾ –ಪ್ರಜಾವಾಣಿ ಚಿತ್ರ

ಒಲಿಂಪಿಕ್ಸ್‌ಗೆ ಫವಾದ್

ಬೆಂಗಳೂರು: ನಗರದ ಈಕ್ವೆಸ್ಟ್ರಿಯನ್ ಫವಾದ್ ಮಿರ್ಜಾ ಅವರು ಟೋಕಿಯೊ ಒಲಿಂಪಿಕ್ಸ್‌ಗೆ ಟಿಕೆಟ್ ಗಳಿಸಿದ್ದಾರೆ. ಪೋಲೆಂಡ್‌ನಲ್ಲಿ ಭಾನುವಾರ ನಡೆದ ಬಬರೊವ್ಕೊ ಈಕ್ವೆಸ್ಟ್ರಿಯನ್ ಉತ್ಸವದಲ್ಲಿ ಕನಿಷ್ಠ ಅರ್ಜತಾ ಪಾಯಿಂಟ್‌ಗಳನ್ನು ಪಡೆಯುವುದರೊಂದಿಗೆ ಈ ಸಾಧನೆ ಮಾಡಿದರು. 29 ವರ್ಷದ ಈ ಸವಾರ 20 ವರ್ಷಗಳ ಅವಧಿಯಲ್ಲಿ ವೈಯಕ್ತಿಕ ಕೋಟಾದಡಿ ಅರ್ಹತೆ ಪಡೆಯುವ ಮೊದಲ ಭಾರತೀಯ ಆಗಿದ್ದಾರೆ. ಏಷ್ಯನ್ ಗೇಮ್ಸ್‌ನಲ್ಲೂ ಅವರು ಪದಕ ಗಳಿಸಿದ್ದಾರೆ.

ಸುದ್ದಿ 2 ನಿಮಿಷ

ಅರ್ಜುನ್–ಅರವಿಂದ ಪ್ರವಾಸ ರದ್ದು

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ರೋಯಿಂಗ್ ಪಟುಗಳಾದ ಅರ್ಜುನ್ ಲಾಲ್ ಜತ್ ಮತ್ತು ಅರವಿಂದ ಸಿಂಗ್ ಐದು ವಾರಗಳ ಪೋರ್ಚುಗಲ್ ಪ್ರವಾಸವನ್ನು ರದ್ದುಮಾಡಿದ್ದಾರೆ. ಅಲ್ಲಿ ಅಭ್ಯಾಸ ಮಾಡಲು ಅವರು ನಿರ್ಧರಿಸಿದ್ದರು. ಆದರೆ ಎರಡು ವಾರ ಕಡ್ಡಾಯವಾಗಿ ಕ್ವಾರಂಟೈನ್‌ನಲ್ಲಿರಬೇಕಾದ ಕಾರಣ ತೀರ್ಮಾನ ಬದಲಿಸಿದ್ದಾರೆ.

ಪೋರ್ಚುಗಲ್‌ನ ಪೊಸಿಇಒ ಹೈ ಪರ್ಫಾರ್ಮೆನ್ಸ್ ಕೇಂದ್ರದಲ್ಲಿ ಅಭ್ಯಾಸ ಮಾಡಲು ಭಾರತ ಕ್ರೀಡಾ ಪ್ರಾಧಿಕಾರದ ಮಿಷನ್ ಒಲಿಂಪಿಕ್ ಸೆಲ್ (ಎಂಒಸಿ) ಕಳೆದ ವಾರ ಈ ಜೋಡಿಗೆ ₹ 21 ಲಕ್ಷ ಅನುದಾನ ಘೋಷಣೆ ಮಾಡಿತ್ತು.

'ಒಲಿಂಪಿಕ್ಸ್‌ಗೆ ಇನ್ನು ಎರಡು ತಿಂಗಳು ಕೂಡ ಬಾಕಿ ಇಲ್ಲ. ಇಂಥ ಸಂದರ್ಭದಲ್ಲಿ ಅಮೂಲ್ಯವಾದ ಎರಡು ವಾರಗಳನ್ನು ಕಳೆದುಕೊಳ್ಳಲು ಬಯಸುವುದಿಲ್ಲ. ಪ್ರವಾಸ ರದ್ದುಗೊಳಿಸಬೇಕಾಗಿ ಬಂದದ್ದಕ್ಕೆ ಬೇಸರವಿದೆ. ಆದರೆ ಏನು ಮಾಡಲೂ ಸಾಧ್ಯವಾಗದ ಪರಿಸ್ಥಿತಿ ಈಗ ಎದುರಾಗಿದೆ' ಎಂದು 25 ವರ್ಷದ ಅರ್ಜುನ್ ಲಾಲ್ ತಿಳಿಸಿದರು.

ಈ ತಿಂಗಳ ಆರಂಭದಲ್ಲಿ ಟೋಕಿಯೊದಲ್ಲಿ ನಡೆದ ಏಷ್ಯಾ ಒಷಿನಿಯಾ ಅರ್ಹತಾ ರೆಗಾಟದ ಲೈಟ್‌ವೇಟ್ ಡಬಲ್ ಸ್ಕಲ್ಸ್ ವಿಭಾಗದಲ್ಲಿ ಎರಡನೇ ಸ್ಥಾನ ಗಳಿಸುವುದರೊಂದಿಗೆ ಅವರು ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಂಡಿದ್ದರು. ಇಬ್ಬರೂ ಸದ್ಯ ಪುಣೆಯ ಸೇನೆಯ ಕ್ರೀಡಾ ಸಂಸ್ಥೆಯಲ್ಲಿ ಅಭ್ಯಾಸ ನಡೆಸುತ್ತಿದ್ದಾರೆ.

ಟಿಟಿ: ದಿಯಾ, ಸ್ವಸ್ತಿಕಾ ಜಯಭೇರಿ



ನವದೆಹಲಿ (ಪಿಟಿಐ): ಭಾರತದ ಯುವ ಆಟಗಾರ್ತಿಯರಾದ ದಿಯಾ ಚಿತಾಲೆ ಮತ್ತು ಸ್ವಸ್ತಿಕಾ ಘೋಷ್ ಜೋಡಿ ಟುನೀಷಿಯಾದಲ್ಲಿ ನಡೆಯುತ್ತಿರುವ ಡಬ್ಲ್ಯುಟಿಟಿ ಯೂತ್ ಸ್ಟಾರ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯ ಬಾಲಕಿಯರ ತಂಡ ವಿಭಾಗದ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದಾರೆ.

19 ವರ್ಷದೊಳಗಿನವರ ವಿಭಾಗದ ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲಿ ಇಬ್ಬರೂ ನಾಕ್ ಔಟ್ ಹಂತ ತಲುಪುವ ಮೊದಲೇ ಹೊರಬಿದ್ದಿದ್ದರು. ಆದರೆ ಮುಂಬೈ ಜೋಡಿ ಡಬಲ್ಸ್‌ನಲ್ಲಿ ಅಮೋಘ ಸಾಮರ್ಥ್ಯ ಮೆರೆದರು. ಬೆಲಾರಸ್‌ನ ದಾರಿಯಾ ವಾಸಿಲೆಂಕಾ (11-7, 11-7, 11-7), ಲಿಂಡಾ ಜೆಡೆರೊವಾ (11-4, 10-12, 11-1, 11-8) ಮತ್ತು ಅಲ್ಜೀರಿಯಾದ ನರಿಮೆನಿ ಹಿಂದ್ (11-3, 11-4, 11-7) ಅವರನ್ನು ದಿಯಾ ಮಣಿಸಿದರು. ಸ್ವಸ್ತಿಕಾ ಗ್ರೀಸ್‌ನ ಮಲಮಟೆನಿಯಾ (11-6, 11-6, 11-9) ಮತ್ತು ಪೋರ್ಚುಗೀಸ್‌ನ ಐನಿಸ್ ಮಟೊಸ್ (8-11, 11-6, 11-5, 8-11, 11-7) ಎದುರು ಜಯ ಗಳಿಸಿದರು.

ಮುಂದಿನ ಸುತ್ತಿನಲ್ಲಿ ಅವರು ಜೆಕ್ ಗಣರಾಜ್ಯದ ಲಿಂಡಾ ಜಡೆರೊವಾ ಮತ್ತು ಕ್ರೊವೇಷಿಯಾದ ಹನಾ ಹರೊಪೊವಿಚ್ ವಿರುದ್ಧ ಸೆಣಸುವರು.

15 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಪ್ರೇಯೇಶ್ ರಾಜ್ ಸುರೇಶ್ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಸೋತರು. 19 ವರ್ಷದೊಳಗಿನ ಬಾಲಕರ ಡಬಲ್ಸ್‌ನಲ್ಲಿ ಪಾಯಸ್ ಜೈನ್ ಮತ್ತು ದೀಪಿತ್ ಪಾಟೀಲ್ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಸೋತರು.

ಫುಟ್‌ಬಾಲ್ ಪಟು ಮುನಿಮಾರ ಇನ್ನಿಲ್ಲ



ಬೆಂಗಳೂರು: ರಾಜ್ಯ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಎನ್. ಮುನಿಮಾರ (73) ಮುನಿರೆಡ್ಡಿಪಾಳ್ಯದ ಸ್ವಗೃಹದಲ್ಲಿ ಹೃದಯಾಘಾತದಿಂದ ಭಾನುವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

ಸಂತೋಷ್ ಟ್ರೋಫಿ ಟೂರ್ನಿಯಲ್ಲಿ ಅವರು ಸತತ ಮೂರು ವರ್ಷ ರಾಜ್ಯ ತಂಡವನ್ನು ಪ್ರತಿನಿಧಿಸಿದ್ದರು. ಕೇರಳದಲ್ಲಿ 1973ರಲ್ಲಿ ನಡೆದ ಟೂರ್ನಿಯಲ್ಲಿ ಮೊದಲ ಬಾರಿ ಆಡಿದ್ದರು. ಮುಂದಿನ ವರ್ಷ ಪಂಜಾಬ್‌ನ ಜಲಂಧರ್‌ನಲ್ಲಿ ನಡೆದ ಟೂರ್ನಿಯಲ್ಲಿ ರಾಜ್ಯ ತಂಡ ಪಂಜಾಬ್ ವಿರುದ್ಧ ಸೆಮಿಫೈನಲ್‌ನಲ್ಲಿ ಸೋತಿತ್ತು. 1975ರಲ್ಲಿ ಕೇರಳದಲ್ಲಿ ನಡೆದ ಟೂರ್ನಿಯ ಫೈನಲ್‌ನಲ್ಲಿ ಬೆಂಗಾಲ್ ವಿರುದ್ಧ ಸೋತಿತ್ತು. 1972ರಲ್ಲಿ ಕೇರಳದಲ್ಲಿ ನಡೆದ ಪೆಂಟಾಗುಲರ್ ಟ್ರೋಫಿ ಟೂರ್ನಿಯಲ್ಲಿ ಮೈಸೂರು ರಾಜ್ಯವನ್ನು ಪ್ರತಿನಿಧಿಸಿದ್ದರು. ಅವರಿದ್ದ ತಂಡ ಚಾಂಪಿಯನ್ ಆಗಿತ್ತು. ಸಿಐಎಲ್ ಎಫ್‌ಸಿಯಲ್ಲೂ ಆಡಿದ್ದ ಅವರು ಆ ಕಾಲದ ಪ್ರಮುಖ ಹಾಫ್ ಬ್ಯಾಕ್ ಆಟಗಾರ ಆಗಿದ್ದರು. 1973ರಲ್ಲಿ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಸ್ಟಫಾರ್ಡ್ ಚಾಲೆಂಜ್ ಕಪ್ ಟೂರ್ನಿಯಲ್ಲಿ ಸಿಐಎಲ್ ತಂಡ ಪ್ರಶಸ್ತಿ ಗೆಲ್ಲುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

1982ರ ವರೆಗೆ ಡುರಾಂಡ್ ಕಪ್, ಡಿಸಿಎಂ ಟ್ರೋಫಿ, ರೋವರ್ಸ್ ಕಪ್, ಫೆಡರೇಷನ್ ಕಪ್, ದಯಾನಂದ ಬಂದೋಡ್ಕರ್ ಗೋಲ್ಡ್ ಕಪ್, ಟಿಎಫ್‌ಎ ಟೂರ್ನಿ, ರಾಕ್ ಫೋರ್ಟ್ ಟ್ರೋಫಿ, ಜಿ.ಡಿ.ನಾಯ್ಡು ಟ್ರೋಫಿ, ಜಾರ್ಜ್ ಹೂವರ್ ಕಪ್ ಮತ್ತಿತರ ಟೂರ್ನಿಗಳಲ್ಲಿ ಅವರು ಆಡಿದ್ದಾರೆ. ಸಾಮಾಜಿಕ ಕಾರ್ಯಗಳಲ್ಲೂ ತೊಡಗಿಸಿಕೊಂಡಿದ್ದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹545
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹547

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹245-346
ದ್ವಿತಳಿ (ಬಿ.ವಿ)
₹329-439

ಜೂನ್ 2ರಿಂದ 4ರವರೆಗೆ ಆರ್‌ಬಿಐನ ಹಣಕಾಸು ನೀತಿ ಸಮಿತಿ ಸಭೆ

ಹಣದುಬ್ಬರ: ಬಡ್ಡಿದರ ಯಥಾಸ್ಥಿತಿ ಸಾಧ್ಯತೆ



ಮುಂಬೈ (ಪಿಟಿಐ): ಹಣದುಬ್ಬರ ಏರಿಕೆ ಮತ್ತು ಕೋವಿಡ್ ಸಾಂಕ್ರಾಮಿಕದ ಎರಡನೇ ಅಲೆಯ ಕುರಿತು ಮೂಡಿರುವ ಅನಿಶ್ಚಿತತೆಯಿಂದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬಡ್ಡಿದರಗಳಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಆರ್‌ಬಿಐ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಜೂನ್ 2 ರಿಂದ 4ರವರೆಗೆ ಸಭೆ ನಡೆಸಲಿದ್ದು, ಜೂನ್ 4ರಂದು ಸಭೆಯ ನಿರ್ಧಾರಗಳನ್ನು ಪ್ರಕಟಿಸಲಿದೆ.

ಏಪ್ರಿಲ್‌ನಲ್ಲಿ ನಡೆದಿದ್ದ ಸಭೆಯಲ್ಲಿ ಆರ್‌ಬಿಐ ಬಡ್ಡಿದರಗಳಲ್ಲಿ ಯಾವುದೇ ಬದಲಾವಣೆ ಮಾಡಿರಲಿಲ್ಲ. ರೆಪೊ ದರವನ್ನು ಶೇ 4ರಲ್ಲಿಯೇ ಉಳಿಸಿಕೊಳ್ಳಲಾಗಿದೆ. ರಿವರ್ಸ್ ರೆಪೊ ದರ ಶೇ 3.35ರಷ್ಟಿದೆ. ಲಸಿಕೆ ನೀಡುವಿಕೆಯು ಸುಧಾರಿಸುವವರೆಗೆ 2021ರ ಬಹುಪಾಲು ಭಾಗಕ್ಕೆ ಆರ್‌ಬಿಐನ ವಿತ್ತೀಯ ನೀತಿಯು ಹೊಂದಾಣಿಕೆಯ ನಿಲುವನ್ನು ಕಾಯ್ದುಕೊಳ್ಳುವ ನಿರೀಕ್ಷೆ ಯನ್ನು ನಾವು ಮಾಡುತ್ತೇವೆ ಎಂದು ಐಸಿಆರ್‌ಎನ ಮುಖ್ಯ ಆರ್ಥಿಕ ತಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಗ್ರಾಹಕ ದರ ಸೂಚ್ಯಂಕ (ಸಿಪಿಐ) ಆಧರಿಸಿದ ಹಣದುಬ್ಬರವು 2020–21ರಲ್ಲಿ ಇದು ಶೇ 6.2ರಷ್ಟು ಇರುವುದು 2021–22ರಲ್ಲಿ ಶೇ 5.2ಕ್ಕೆ ತಗ್ಗುವ ಅಂದಾಜು ಇದೆ ಎಂದು ಅವರು ತಿಳಿಸಿದ್ದಾರೆ. ಚಿಲ್ಲರೆ ಹಣದುಬ್ಬರವು ಏಪ್ರಿಲ್‌ನಲ್ಲಿ ಶೇ 4.29ಕ್ಕೆ ಇಳಿಕೆ ಕಂಡಿದೆ. ತರಕಾರಿಗಳು ಮತ್ತು ಏಕದಳ ಧಾನ್ಯಗಳ ಬೆಲೆಯಲ್ಲಿ ಇಳಿಕೆ ಆಗಿರುವುದರಿಂದ ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ.

ಷೇರು ಹೂಡಿಕೆ ಯಶಸ್ಸಿಗೆ 4 ಸೂತ್ರಗಳು



ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಸಂಪತ್ತು ಗಳಿಕೆಯ ಹಾದಿಯಲ್ಲಿರುವ ಹೂಡಿಕೆ ಆಯ್ಕೆಗಳಲ್ಲಿ ಷೇರುಪೇಟೆ ಪ್ರಮುಖವಾದದ್ದು. ಷೇರು ಮಾರುಕಟ್ಟೆಯ ಇತಿಹಾಸವನ್ನು ತಿರುವಿ ನೋಡಿದಾಗ ದೀರ್ಘಾವಧಿಯಲ್ಲಿ ಷೇರು ಹೂಡಿಕೆ ಲಾಭ ತಂದುಕೊಟ್ಟಿರುವುದು ಸ್ಪಷ್ಟವಾಗಿ ತಿಳಿಯುತ್ತದೆ. ಮಾರ್ಚ್ 2020 ರಲ್ಲಿ 25,000 ಅಂಶಗಳಿಗೆ ಕುಸಿದಿದ್ದ ಸೆನ್ಸೆಕ್ಸ್ ಸೂಚ್ಯಂಕ ನಂತರದಲ್ಲಿ 51,000 ಅಂಶಗಳ ಗಡಿದಾಟಿ ಮುನ್ನುಗ್ಗುತ್ತಿರುವುದು ಎಲ್ಲರಿಗೂ ಗೊತ್ತಿದೆ. ಅಲ್ಪಾವಧಿಯಲ್ಲಿ ಕುಸಿತ ಕಾಣಬಹುದು, ಆದರೆ ದೀರ್ಘಾವಧಿಯಲ್ಲಿ ಷೇರುಪೇಟೆಯಲ್ಲಿ ಲಾಭಗಳಿಕೆಯ ಸಾಧ್ಯತೆ ಹೆಚ್ಚು ಎನ್ನುವುದು ಈ ಹಿಂದಿನ ಹಲವು ನಿದರ್ಶನಗಳಲ್ಲಿ ರುಜುವಾತಾಗಿದೆ. ಕೋವಿಡ್‌ನಂತಹ ಅನಿಶ್ಚಿತ ಸಂದರ್ಭದಲ್ಲಿ ಷೇರು ಮಾರುಕಟ್ಟೆ ಯಾವಾಗ ಕುಸಿಯಬಹುದು? ಎಷ್ಟರ ಮಟ್ಟಿಗೆ ಕುಸಿತ ಕಾಣಬಹುದು? ಷೇರುಗಳನ್ನು ಖರೀದಿಸಿ ಇಟ್ಟುಕೊಳ್ಳಬೇಕಾ ಇಲ್ಲಾ ಮಾರಾಟ ಮಾಡುವುದು ಒಳಿತಾ ಎಂಬಿತ್ಯಾದಿ ಪ್ರಶ್ನೆಗಳು ಹೂಡಿಕೆದಾರರ ಮನದಲ್ಲಿವೆ. ಈ ಪ್ರಶ್ನೆಗಳಿಗೆ ನಿಖರವಾಗಿ ಉತ್ತರಿಸಿ ಯಶಸ್ಸು ತಂದುಕೊಂಡುವ ಯಾವ ಸಿದ್ಧ ಸೂತ್ರವೂ ಲಭ್ಯವಿಲ್ಲ. ಆದರೆ ಷೇರು ಮಾರುಕಟ್ಟೆ ವಿಚಾರದಲ್ಲಿ ಸರ್ವಕಾಲಕ್ಕೂ ಸಲ್ಲುವ ಕೆಲ ಲೆಕ್ಕಾಚಾರಗಳಿವೆ. ಅವನ್ನು ಪಾಲಿಸಿದರೆ ಸಂಪತ್ತು ಸೃಷ್ಟಿಯ ಹಾದಿ ಸುಗಮವಾಗುತ್ತದೆ.

ಸೂಕ್ತ ಸಮಯಕ್ಕಾಗಿ ಕಾಯುತ್ತಾ ಕೂರಬೇಡಿ: ಷೇರು ಮಾರುಕಟ್ಟೆ ಹೂಡಿಕೆ ಆರಂಭಿಸಲು ಯಾವುದು ಸೂಕ್ತ ಸಮಯ ಎಂಬ ಪ್ರಶ್ನೆಯನ್ನು ಬಹುತೇಕರು ಕೇಳುತ್ತಾರೆ. ಷೇರು ಹೂಡಿಕೆಯನ್ನು ಕೂಡಲೇ ಆರಂಭಿಸುವುದು ಷೇರು ಹೂಡಿಕೆಗೆ ಸರಿಯಾದ ಸಮಯ. ಷೇರಿನ ಬೆಲೆ ಅತಿ ಕಡಿಮೆಯಾದಾಗ ನಾನು ಖರೀದಿ ಮಾಡುತ್ತೇನೆ ಮತ್ತು ಬೆಲೆ ಅತಿ ಹೆಚ್ಚಾದಾಗ ಮಾರಾಟ ಮಾಡುತ್ತೇನೆ ಎನ್ನುವ ಲೆಕ್ಕಾಚಾರ ವಾಸ್ತವದಲ್ಲಿ ಸಾಧ್ಯವಾಗುವುದಿಲ್ಲ. ವ್ಯವಸ್ಥಿತವಾಗಿ ಹೂಡಿಕೆ ಮಾಡುತ್ತಾ ಸಾಗಿದರೆ ಮಾರುಕಟ್ಟೆಯ ಏರಿಳಿತದ ಲಾಭ ನಿಮಗೆ ಸಿಗುತ್ತದೆ. ಊಹಾಪೋಹಗಳನ್ನು ಪಕ್ಕಕ್ಕಿಟ್ಟು, ಮಾರುಕಟ್ಟೆ ತಲ್ಲಣಗಳಿಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಮೂಲಭೂತವಾಗಿ ಭದ್ರ ಬುನಾದಿ ಇರುವ ಕಂಪನಿಗಳಲ್ಲಿ ಹೂಡಿಕೆ ಮಾಡಿದರೆ ದೀರ್ಘಾವಧಿಯಲ್ಲಿ ಸಂಪತ್ತು ಗಳಿಕೆ ಖಂಡಿತ ಸಾಧ್ಯ.

ಅರಿತು ಹೂಡಿಕೆ ಮಾಡಿ: ಯಾವುದೇ ಷೇರನ್ನು ಖರೀದಿಸುವ ಮೊದಲು ಆ ಕಂಪನಿಯ ಪೂರ್ವಾಪರ ಅರಿತುಕೊಳ್ಳಿ. ಕಂಪನಿಯ ಹಿನ್ನೆಲೆ ಏನು, ಆಡಳಿತ ಮಂಡಳಿಯಲ್ಲಿ ಯಾರಿದ್ದಾರೆ, ಈವರೆಗೆ ಕಂಪನಿ ಯಾವ ರೀತಿಯ ಆರ್ಥಿಕ ಪ್ರಗತಿ ಸಾಧಿಸಿದೆ, ಭವಿಷ್ಯದಲ್ಲಿ ಎಷ್ಟರ ಮಟ್ಟಿಗೆ ಬೆಳವಣಿಗೆ ಸಾಧಿಸಲು ಅವಕಾಶವಿದೆ. ಹೀಗೆ ಎಲ್ಲಾ ಆಯಾಮಗಳಲ್ಲೂ ಹೂಡಿಕೆ ಮಾಡಬೇಕೆಂದುಕೊಂಡಿರುವ ಕಂಪನಿಯ ಬಗ್ಗೆ ತಿಳಿದುಕೊಳ್ಳಿ. ಸಾಕಷ್ಟು ಅಧ್ಯಯನ ಮಾಡಿದ ಬಳಿಕವಷ್ಟೇ ಹೂಡಿಕೆ ತೀರ್ಮಾನ ಕೈಗೊಳ್ಳಿ. ಷೇರು ಮಾರುಕಟ್ಟೆ ಬಗ್ಗೆ ಗೊತ್ತಿಲ್ಲ ಅಂದ್ರೆ ಹೂಡಿಕೆ ಮಾಡಲೇಬೇಡಿ. ಷೇರು ಮಾರುಕಟ್ಟೆ ಬಗ್ಗೆ ಒಂದಿಷ್ಟು ಅಗತ್ಯ ವಿಚಾರಗಳನ್ನು ಅರಿತ ಮೇಲಷ್ಟೇ ಮುಂದುವರಿಯಿರಿ. ಯಾಕಂದ್ರೆ ಈ ಹೂಡಿಕೆಯಲ್ಲಿ ನಿಮ್ಮ ಬಂಡವಾಳದ ಮೊತ್ತಕ್ಕೂ ಖಾತರಿ ಇರುವುದಿಲ್ಲ.

ಹೂಡಿಕೆ ಮಾಡುವಾಗ ಭಾವನಾತ್ಮಕವಾಗಿ ಯೋಚಿಸಬೇಡಿ: ಷೇರು ಮಾರುಕಟ್ಟೆ ಹೂಡಿಕೆಯಲ್ಲಿ ಎಲ್ಲದಕ್ಕಿಂತಲೂ ಮುಖ್ಯವಾದ ವಿಚಾರ ನಿಮ್ಮ ಮೂಲ ಬಂಡವಾಳವನ್ನು ಉಳಿಸಿಕೊಳ್ಳುವುದು. ಷೇರು ಖರೀದಿಸುವವರಿಗೆ ಅತಿಯಾದ ಭಯ ಮತ್ತು ದುರಾಸೆ ಎರಡೂ ಅಪಾಯಕಾರಿ. ಅಳೆದು ತೂಗಿ, ಅಧ್ಯಯನ ಮಾಡಿ ಖರೀದಿಸಿದ ಷೇರುಗಳನ್ನು ದೀರ್ಘಾವಧಿಗೆ ಇಟ್ಟುಕೊಂಡರೆ ಲಾಭ ಗಳಿಕೆಯ ಹಾದಿ ಸುಗಮವಾಗುತ್ತದೆ. ಅಂದಾಜಿಗೆ ಗುಂಡು ಹಾರಿಸುವ ಲೆಕ್ಕಾಚಾರ ಇಲ್ಲಿ ಬೇಡವೇ ಬೇಡ.

ಎಷ್ಟು ರಿಸ್ಕ್ ತೆಗೆದುಕೊಳ್ಳಬಹುದು ನೀವೇ ನಿರ್ಧರಿಸಿ: ಆನೆಯ ಭಾರ ಆನೆಗೆ, ಇರುವೆಯ ಭಾರ ಇರುವೆಗೆ ಎನ್ನುವ ಮಾತನ್ನು ನೀವು ಕೇಳಿರಬೇಕಲ್ಲವೇ? ಹೌದು ನೀವು ಎಷ್ಟು ರಿಸ್ಕ್ ತೆಗೆದುಕೊಳ್ಳಬಹುದು, ಷೇರು ಮಾರುಕಟ್ಟೆಯಲ್ಲಿ ಎಷ್ಟು ಹಣ ತೊಡಗಿಸಬೇಕು ಎಂಬ ನಿರ್ಧಾರಗಳನ್ನು ನೀವೇ ಮಾಡಬೇಕು. ನಿಮ್ಮ ಒಟ್ಟು ಆದಾಯದಲ್ಲಿ ಎಷ್ಟು ಮೊತ್ತವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಬಹುದು ಎಂಬ ಲೆಕ್ಕಾಚಾರದ ಬಗ್ಗೆ ನಿಮಗೆ ಸ್ಪಷ್ಟತೆ ಇರಬೇಕು. ಯಾರೋ ಹೇಳಿದರು ಎನ್ನುವ ಕಾರಣಕ್ಕೆ ಅಳತೆ ಅಂದಾಜಿಲ್ಲದೆ ಎಲ್ಲಾ ಹಣವನ್ನು ಷೇರುಪೇಟೆಯಲ್ಲಿ ತೊಡಗಿಸಬಾರದು.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಸತತ 2ನೇ ವಾರ ಜಿಗಿದ ಷೇರುಪೇಟೆ



ಷೇರುಪೇಟೆ ಸೂಚ್ಯಂಕಗಳು ಸತತ ಎರಡನೆಯ ವಾರವೂ ಗಳಿಕೆ ಕಂಡಿವೆ. 51,422 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇಕಡ 2 ರಷ್ಟು ಗಳಿಕೆ ಕಂಡಿದೆ. 15,435 ಅಂಶಗಳಿಗೆ ಏರಿಕೆ ಕಂಡಿರುವ ನಿಫ್ಟಿ ಶೇ 1.72 ರಷ್ಟು ಜಿಗಿದಿದೆ. ನಿಫ್ಟಿ ಮಿಡ್ ಕ್ಯಾಪ್ ಸೂಚ್ಯಂಕ ಶೇ 1.5 ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 2 ರಷ್ಟು ಹೆಚ್ಚಳ ದಾಖಲಿಸಿವೆ. ಬಜೆಟ್ ನಂತರದಲ್ಲಿ ಕಂಡಿದ್ದ ದೊಡ್ಡ ಮಟ್ಟದ ಜಿಗಿತವನ್ನು ನಿಫ್ಟಿ ಮತ್ತೆ ತಲುಪಿರುವುದು ಮಾರುಕಟ್ಟೆಯಲ್ಲಿ ಉತ್ಸಾಹ ಹೆಚ್ಚಿಸಿದೆ. ಆದರೆ ಏರಿಳಿತದ ಸ್ಥಿತಿ ಇನ್ನೂ ಒಂದಷ್ಟು ಕಾಲ ಮುಂದುವರಿಯಲಿದೆ.

ಏಷ್ಯಾದ ಮಾರುಕಟ್ಟೆಗಳಲ್ಲಿ ಕಂಡು ಬಂದ ಸಕಾರಾತ್ಮಕತೆ, ಕೋವಿಡ್ ಪ್ರಕರಣಗಳ ಸಂಖ್ಯೆ 4 ಲಕ್ಷದ ಆಸುಪಾಸಿನಿಂದ 2 ಲಕ್ಷದ ಆಸುಪಾಸಿಗೆ ಇಳಿಕೆ, ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳಲ್ಲೂ ಉತ್ತಮ ಸಾಧನೆ ಸೇರಿ ಹಲವು ಅಂಶಗಳು ಕಳೆದ ವಾರದ ಜಿಗಿತಕ್ಕೆ ಅನುಕೂಲ ಮಾಡಿಕೊಟ್ಟಿವೆ. ವಲಯವಾರು ಪ್ರಗತಿಯಲ್ಲಿ ನಿಫ್ಟಿ ಬ್ಯಾಂಕ್ ಸೂಚ್ಯಂಕ ಶೇ 1.5 ರಷ್ಟು ಜಿಗಿದಿದೆ. ಮಾಧ್ಯಮ ವಲಯ, ಸರ್ಕಾರಿ ಸ್ವಾಮ್ಯದ ಬ್ಯಾಂಕ್, ಮಾಹಿತಿ ತಂತ್ರಜ್ಞಾನ ವಲಯ, ಉತ್ತಮ ಗಳಿಕೆ ಕಂಡಿವೆ, ಲೋಹ ವಲಯ ಶೇ 1 ರಷ್ಟು ತಗ್ಗಿದೆ.

ಮುನ್ನೋಟ: ಆರ್‌ಬಿಐ ಹಣಕಾಸು ನೀತಿ ಈ ವಾರ ಹೊರಬೀಳಲಿದೆ. ಜಿಡಿಪಿ ದತ್ತಾಂಶ, ಆಮದು ರಫ್ತು ಅಂಕಿ-ಅಂಶ, ಉತ್ಪಾದನೆ ಸ್ಥಿತಿಗತಿಯ ದತ್ತಾಂಶ ಸೇರಿ ಪ್ರಮುಖ ಮಾಹಿತಿಗಳು ಕೂಡ ಲಭಿಸಲಿವೆ. ತೈಲ ಉತ್ಪನ್ನ ರಾಷ್ಟಗಳ ಸಭೆಯಿಂದಾಗಿ (ಒಪೆಕ್) ತೈಲ ಬೆಲೆಯ ಮೇಲೆ ಯಾವ ರೀತಿಯ ಪರಿಣಾಮ ಉಂಟಾಗಲಿದೆ ಎನ್ನುವುದನ್ನು ಕಾದು ನೋಡಬೇಕಿದೆ. ಉಕ್ಕಿನ ಬೆಲೆಯನ್ನು ಜೂನ್‌ನಲ್ಲಿ ಕಂಪನಿಗಳು ಏರುವ ಸಂಭವವಿದ್ದು, ಅದು ಕೂಡ ಮಾರುಕಟ್ಟೆ ಮೇಲೆ ಪರಿಣಾಮ ಉಂಟುಮಾಡಲಿದೆ. ಇದಲ್ಲದೆ ಕೋವಿಡ್ ಪ್ರಕರಣಗಳ ಸ್ಥಿತಿಗತಿ, ಲಾಕ್‌ಡೌನ್ ವಿಸ್ತರಣೆ ಅಥವಾ ಹಿಂಪಡೆಯುವುದು, ಕೇಂದ್ರ ಸರ್ಕಾರದಿಂದ ಆರ್ಥಿಕ ಪ್ಯಾಕೇಜ್ ನಿರೀಕ್ಷೆ ಸೇರಿ ಹಲವು ವಿದ್ಯಮಾನಗಳು ಮಾರುಕಟ್ಟೆಯ ದಿಕ್ಕು ನಿರ್ಧರಿಸಲಿವೆ. ಈ ವಾರ ಐಟಿಸಿ, ಅರಬಿಂದೋ ಫಾರ್ಮಾ, ಮದರ್ ಸನ್ ಸುಮಿ ಸಿಸ್ಟಮ್ಸ್, ಮುತ್ತೂಟ್ ಫೈನಾನ್ಸ್, ಪಿವಿಆರ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ನಿಫ್ಟಿಯಲ್ಲಿ ಏರಿಕೆ–ಇಳಿಕೆ (%)	
ಗ್ರಾಸಿಮ್	3.38 ▲
ಇಂಡಿಯನ್ ಆಯಿಲ್ ಕಾರ್ಪೊರೇಷನ್	5.32 ▲
ಎಸ್‌ಬಿಐ	5.18 ▲
ವಿಪ್ರೊ	4.89 ▲
ಟೆಕ್ ಮಹಿಂದ್ರ	4.67 ▲
ಎನ್‌ಟಿಪಿಸಿ	3.46 ▼
ಸನ್ ಫಾರ್ಮಾ	2.57 ▼
ಹಿಂದುಸ್ಥಾನ್ ಯುನಿಲಿವರ್	1.44 ▼
ಏರ್‌ಟೆಲ್	1.21 ▼
ಜೆಎಸ್‌ಡಬ್ಲ್ಯು ಸ್ಟೀಲ್	1.20 ▼